ಪ್ರೊ. ಸಾ.ಕೃ.ರಾ. - ಸಮಗ್ರ ಸಾಹಿತ್ಯ - ೭

ಬೋಧಿಯ ಬೆಳಕಿನಲ್ಲಿ

ಬುದ್ಧನ ಬಾಳು - ಬೆಳಕು

ವಿದ್ಯಾಲಂಕಾರ

ಪ್ರೊ. ಸಾ. ಕೃ. ರಾಮಚಂದ್ರ ರಾವ್

ಸುರಮಾ ಪ್ರಕಾಶನ

ಬೆಂಗಳೂರು-11

ಬೋಧಿಯ ಬೆಳಕಿನಲ್ಲಿ

ಬುದ್ಧನ ಬಾಳು - ಬೆಳಕು

ಲೇಖಕರು

ವಿದ್ಯಾಲಂಕಾರ

ಪ್ರೊ. ಎಸ್. ಕೆ. ರಾಮಚಂದ್ರರಾವ್

ಸುರಮಾ ಪ್ರಕಾಶನ :

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ

ಬೆಂಗಳೂರು - 560 011

Bodhiya Belakinalli - Buddhana Balu-Belaku:
written by *Prof. S.K. Ramachandra Rao,*
Published by Dr. S. R. Sudarshan for
Surama Prakashana, the publication wing of
Prof. S.K. Ramachandra Rao Memorial Trust
(R.), 305, 6th Cross, 1st Block, Jayanagar,
Bangalore-560 011. Ph.: 080-26563957
Pages : xvi + 199 = 215

© The Prof. S.K. Ramachandra Rao Memorial Trust (R)

First Edition : 1960

Second Enlarged Edition : 2009

Price : Rs. 100=00

Composed at :
Sree Lakshmi Enterprises,
#1052, 50 Ft. Rd., 1st Stage,
Kumaraswamy L/o, Bangalore-78.
Ph.: 64555684

Printed at :
Vagartha

ISBN : 978-81-906740-6-5

Illustrations by the author.

ಅನುಕ್ರಮಣಿಕೆ

ಲೇಖಕರ ಪರಿಚಯ v

ಲೇಖಕರ ಕಲಾಕೃತಿಗಳು vii

ಮುನ್ನುಡಿ xiii

ಮೊದಲ ಮಾತು xv

- ಆನಂದನ ಕಥೆ ೧
- ತೌರೂರಿನಲ್ಲಿ ತಥಾಗತ ೧೯
- ಹಠಮಾರಿ ದೇವಲ ೩೬
- ದೇವದತ್ತನ ಕಥೆ ೪೧
- ಪಟಾಚಾರಾ ೫೪
- ಸಾವಿಲ್ಲದ ಮನೆ ಎಲ್ಲಿ? ೬೨
- ರೇವತ ಭಿಕ್ಷುವಾದದ್ದು ೬೮
- ಶಾರಿಪುತ್ರ - ಮೌದ್ಗಲ್ಯಾಯನರ ಕಥೆ ೭೧
- ಧರ್ಮಧರನ ಭಾರತಯಾತ್ರೆ ೮೯
- ವೈಶಾಖೀ ಸ್ಮರಣೆ ೧೨೨
- ಬೌದ್ಧ ಸಂಗೀತಿಗಳು ೧೩೫
- ಸಿಂಗಾಲ ಸೂತ್ರ ೧೪೫
- ಮರಣಾನುಸ್ಮೃತಿ ೧೬೧
- ಬುದ್ಧನ ನೆರಳಿನಲ್ಲಿ ನಡೆದವರು ೧೭೦
- ಬದುಕು ಬುದ್ಧ ಕಂಡಂತೆ ೧೭೮
- ಆಲೋಕನಾಮೃತ ೧೮೯

ಲೇಖಕರ ಪರಿಚಯ



ಪ್ರೊ. ಸಾ. ಕೃ. ರಾಮಚಂದ್ರರಾಯರು (೧೯೨೫-೨೦೦೬) ಈ ತಲೆಮಾರಿನ ವಿಖ್ಯಾತ ವಿದ್ವಾಂಸರು, ಚಿಂತಕರು, ಸಂಗೀತಜ್ಞರು, ಕಲಾಕಾರರು, ಪ್ರಬಂಧಕಾರರು, ಉತ್ತಮ ವಾಗ್ಮಿಗಳಾಗಿದ್ದರು.

ಅವರು ಬಾಲ್ಯ ವಿದ್ಯಾಭ್ಯಾಸವನ್ನು ಅವರ ತೀರ್ಥರೂಪರವರಿಂದಲೇ ಪಡೆದು, ನಂಜನಗೂಡಿನ ಪಾಠಶಾಲೆಯಲ್ಲಿ ಸಂಸ್ಕೃತಾಧ್ಯಯನ ಮಾಡಿ, ಮೈಸೂರಿನಲ್ಲಿ ಮಹಾವಿದ್ವಾನ್ ಪಾಲಕ್ಕಾಡು ನಾರಾಯಣ ಶಾಸ್ತ್ರಿಗಳಲ್ಲಿ ಸಭಾಷ್ಯ ಪ್ರಸ್ಥಾನತ್ರಯಗಳನ್ನು ಅಭ್ಯಾಸ ಮಾಡಿದ್ದರು. ಅನಂತರ ಮನಃಶಾಸ್ತ್ರ

ದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ವೃತ್ತಿ ಪ್ರಾರಂಭಿಸಿದ್ದರು. ಅನಂತರ NIMHANSನಲ್ಲಿ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಹಲವು ಕಾಲ ಇದ್ದರು.

ಅವರು ಭಾರತೀಯ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಸಂಗೀತ ಮತ್ತು ಕಲೆಗಳ ಅಧ್ಯಯನ ಮಾಡಿ ಸಿಂಹಳದ ನಾರದ ಮಹಾಥೇರರ ಬಳಿ ಪಾಳಿ ಮತ್ತು ತ್ರಿಪಿಟಿಕಗಳನ್ನು ವಿಜಯಸೂರಿ ಗಣಿಯವರಲ್ಲಿ ಅರ್ಧಮಾಗಧೀ ಪ್ರಾಕೃತವನ್ನೂ ಮತ್ತು ಸ್ವಪರಿಶ್ರಮದಿಂದ ಟಿಬೆಟ್ ಭಾಷೆಯನ್ನು ಕಲಿತರು. ರಾಯರು ಕೆಲಕಾಲ ಅಮೆರಿಕೆಯ ಪೆಸಿಫಿಕ್ ವಿಶ್ವವಿದ್ಯಾಲಯದ ಭಾರತೀಯ ಸಂಸ್ಕೃತಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು.

ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದು, ಅನೇಕ ಅಕಾಡೆಮಿ ಮತ್ತು ವಿದ್ವತ್ ಸಂಸ್ಥೆಗಳ, ಆಗಮ ಮಹಾಮಂಡಳಿ ಮತ್ತು ಇತರ ಸಂಸ್ಥೆಗಳ ಪದಾಧಿಕಾರಿಗಳಾಗಿದ್ದರು.

ರಾಯರು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ನೂರೈವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದರು. ಅವರ 'ಮೂರ್ತಿಶಿಲ್ಪ-ನೆಲೆ-ಹಿನ್ನೆಲೆ' ಮತ್ತು 'ತಿರುಪತಿ ತಿಮ್ಮಪ್ಪ' ಎಂಬ ಪುಸ್ತಕಗಳು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದವು.

ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ಸಂಗೀತ ಕಲಾರತ್ನ, ವಾಚಸ್ಪತಿ ಮೊದಲಾದ ಬಿರುದುಗಳಿಗೆ ಭಾಜಿಯಾಗಿದ್ದರು. ವೇದ ಸಮ್ಮಾನ ಪ್ರಶಸ್ತಿಗೂ ಪಾತ್ರರಾಗಿದ್ದರು. ಅವರು ಸಾಂಪ್ರದಾಯಿಕ ವ್ಯಾಖ್ಯಾನರೀತ್ಯಾ ಋಗ್ವೇದ ದರ್ಶನವೆಂಬ ಬೃಹತ್ ಯೋಜನೆಯೊಂದನ್ನು ಕೈಗೊಂಡು, ಹದಿನೇಳು ಸಂಪುಟಗಳನ್ನು ರಚಿಸಿದ್ದರು.



ಸಿದ್ಧಾರ್ಥನ ಜನನ

ಗುರು ದರ್ಶನ

ಕಪಿಲ ವಸ್ತುವಿನಲ್ಲಿ ತಥಾಗತ

ಪ್ರಥಮ ಧರ್ಮೋಪದೇಶ



ಸಾರಿ ಪುತ್ರನ ಪರಿವರ್ತನೆ

ಮುನ್ನುಡಿ

ಪ್ರೊ. ಸಾ. ಕೃ. ರಾಮಚಂದ್ರರಾಯರು ೧೯೫೦ರ ದಶಕದಲ್ಲಿ ಬುದ್ಧನ ಜೀವನದ ಕೆಲವು ಪ್ರಸಂಗಗಳನ್ನು ಮತ್ತು ಬೌದ್ಧಧರ್ಮದ ಸಾರಾಂಶಗಳನ್ನು ಕುರಿತು 'ಜೀವನ' ಮೊದಲಾದ ಪತ್ರಿಕೆಗಳಿಗೆ ಲೇಖನಗಳನ್ನು ಬರೆದಿದ್ದರು. ಹಲವಾರು ಲೇಖನಗಳ ಸಂಕಲನವನ್ನು 'ಕಾವ್ಯಾಲಯ'ದವರು 'ಬೋಧಿಯ ಬೆಳಕಿನಲ್ಲಿ' ಎಂಬ ಶೀರ್ಷಿಕೆಯಲ್ಲಿ ೧೯೬೦ರಲ್ಲಿ ಪ್ರಕಟಿಸಿದರು. 'ಜೀವನ'ದಲ್ಲಿ ಪ್ರಕಟವಾದ ಒಂದು ಕಥೆ 'ತೌರೂರಿನಲ್ಲಿ ತಥಾಗತ' ಬೋಧಿಯ ಬೆಳಕಿನಲ್ಲಿ ಪುಸ್ತಕದ ಮೊದಲ ಆವೃತ್ತಿಯಲ್ಲಿ ಮುದ್ರಿತವಾಗಿರಲಿಲ್ಲ. ಆ ಪುಸ್ತಕ ಈಗ ಉಪಲಬ್ಧವಿಲ್ಲದ ಕಾರಣ, ನಾವು ಬೌದ್ಧಧರ್ಮಕ್ಕೆ ಸಂಬಂಧಪಟ್ಟ ಕೆಲವು ಲೇಖನಗಳನ್ನು ಸೇರಿಸಿ ಒಂದು ವಿಸ್ತೃತ ಆವೃತ್ತಿಯನ್ನು ಪ್ರಕಟಿಸುತ್ತಿದ್ದೇವೆ. ಲೇಖಕರು ರಚಿಸಿದ ಕೆಲವು ಕಲಾಕೃತಿಗಳನ್ನು ಸೇರಿಸಿದ್ದೇವೆ.

ನಮ್ಮ ಸ್ಮಾರಕ ನಿಧಿ ಸ್ಥಾಪನೆಯಾದ ಹೊಸದರಲ್ಲಿ ಪ್ರೊ. ರಾಮಚಂದ್ರರಾಯರ ಮಿತ್ರರಾದ ಶ್ರೀ ಎಂ. ವಿ. ವೆಂಕಟೇಶ ಮೂರ್ತಿಗಳು 'ಜೀವನ' ಪತ್ರಿಕೆಯಲ್ಲಿ ಪ್ರಕಟವಾದ ಬೌದ್ಧಕಥೆಗಳ ವಿವರಗಳನ್ನು ನನಗೆ ತಿಳಿಸಿದರು. 'ಜೀವನ'ವು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು ನಡೆಸುತ್ತಿದ್ದ ಮಾಸ ಪತ್ರಿಕೆಯಾದ್ದರಿಂದ, ನಾನು ಆ ವಿವರಗಳನ್ನು ಮಾಸ್ತಿ ಅಧ್ಯಯನ ಪೀಠದ ಶ್ರೀಮತಿ ವಸಂತಶ್ರೀ ಅವರಿಗೆ ಕೊಟ್ಟು, ಆ ಕಥೆಗಳ ಪ್ರತಿ ದೊರೆಯುತ್ತದೆಯೇ ಎಂದು ವಿಚಾರಿಸಿದೆ. ಅವರು ಒಂದು ವಾರದೊಳಗೆ ಎಲ್ಲ ಲೇಖನಗಳ ಪ್ರತಿಯನ್ನು ಕೊಡುವುದಲ್ಲದೆ, ಅದರ ಮುದ್ರಣಕ್ಕೆ ಸಹಾಯವಾಗುವ ಹಣವನ್ನೂ ನೀಡಿದರು ! ಇವರಿಬ್ಬರ ಸಹಾಯವಿಲ್ಲದಿದ್ದರೆ ಈ ಪುಸ್ತಕ ಹೊರಬರು

ತ್ತಿರಲಿಲ್ಲ; ಇವರಿಗೆ ನಾನು ಮತ್ತು ನಮ್ಮ ಸ್ಮಾರಕ ನಿಧಿಯು ಚಿರಋಣಿಗಳಾಗಿದ್ದೇವೆ.

ಸುಧಾ ಮಾಸಪತ್ರಿಕೆಯಲ್ಲಿ ಪ್ರಕಟವಾದ ಇನ್ನೆರಡು ಲೇಖನಗಳನ್ನು ಕೊಟ್ಟ ಶ್ರೀ ಸೂರ್ಯಪ್ರಕಾಶ್ ಪಂಡಿತರಿಗೆ ಕೃತಜ್ಞತೆಗಳು.

ಈ ಪುಸ್ತಕದ ಅಕ್ಷರ ಜೋಡಣೆಯನ್ನು ಮಾಡಿದ ಶ್ರೀಮತಿ ವಸಂತಲಕ್ಷ್ಮೀ ಅವರಿಗೆ, ಮತ್ತು ಅಂದವಾಗಿ ಮುದ್ರಿಸಿದ ವಾಗರ್ಥ ಪ್ರಿನ್ಟರ್ಸ್ ಅವರಿಗೆ ವಂದನೆಗಳನ್ನು ಅರ್ಪಿಸುತ್ತೇವೆ.

ಡಾ|| ಸಾ. ರಾ. ಸುದರ್ಶನ

ಬುದ್ಧ ಪೂರ್ಣಿಮೆ
ವಿರೋಧಿ ಸಂವತ್ಸರ
೯-೫-೨೦೦೯

ಮೊದಲ ಮಾತು

ಹತ್ತಾರು ವರ್ಷಗಳ ಹಿಂದೆ ಬುದ್ಧನ ಧರ್ಮದೇಶನದಲ್ಲಿ ಯಥಾಶಕ್ತಿ ವ್ಯವಸಾಯ ಮಾಡುತ್ತಿದ್ದಾಗ ಈ ಪುಸ್ತಕದಲ್ಲಿ ಈಗ ಸೇರಿರುವ ಲೇಖನಗಳು ಸಿದ್ಧವಾದುವು. ಹಳೆಯ ಪಾಳಿ ಗ್ರಂಥಗಳಿಂದ ಮುಖ್ಯ ವಿವರಗಳನ್ನು ಸಂಗ್ರಹಿಸಿ ಅವುಗಳ ಆಧಾರದ ಮೇಲೆ ಕಲ್ಪನೆಯ ಬಳ್ಳಿ ಯನ್ನು ಉಚಿತವಾಗಿ ಹಬ್ಬಿಸಿ ನಿಲ್ಲಿಸಿದ್ದೇನೆ. ಇತಿಹಾಸಕ್ಕೆ ಅಪಚಾರವಾಗ ಬಾರದೆಂಬ ಆಗ್ರಹವೂ ಇತ್ತು ; ಕಾವ್ಯದಂತೆ ರಸವತ್ತಾಗಿರಬೇಕೆಂಬ ಬಯಕೆಯೂ ಇತ್ತು. ಇವೆರಡೂ ಎಷ್ಟರಮಟ್ಟಿಗೆ ಸಫಲವಾಗಿವೆಯೋ ತಿಳಿಯದು. ಆದರೆ ಹಿರಿಯರಾದ ಮಾಸ್ತಿಯವರು ಈ ಲೇಖನ ಮಾಲೆಯಲ್ಲಿ ಹಲವನ್ನು ತಮ್ಮ 'ಜೀವನ' ಪತ್ರಿಕೆಯಲ್ಲಿ ಪ್ರಕಾಶನಕ್ಕೆ ಸ್ವೀಕರಿಸಿದರು. ಅದರಿಂದ ನನಗೊದಗಿದ ಸಮಾಧಾನ, ಸಂತೋಷ, ಉತ್ತೇಜನಗಳು ನನ್ನ ನೆನಪಿನಲ್ಲಿ ಇನ್ನೂ ಉಳಿದಿದೆ. ಅವರ ಆಶೀರ್ವಾದವೇ ನನ್ನನ್ನು ಇನ್ನೂ ಸಾರಸ್ವತ ಪಥದಲ್ಲಿ ನಡೆಸುತ್ತಿದೆಯೆಂದು ನನ್ನ ವಿಶ್ವಾಸ.

ಬೌದ್ಧ ಸಾಹಿತ್ಯದ ಕನ್ನಡಸ್ರೋತದಲ್ಲಿ ನನಗೆ ಪೂರ್ವಸೂರಿಗಳಾದ ಶ್ರೀ ಜಿ. ಪಿ. ರಾಜರತ್ನಂ ಅವರು ನನ್ನ ಬರೆವಣಿಗೆಗಳನ್ನು ತಿದ್ದಿ, ಒಪ್ಪಿ ವಿಮರ್ಶಿಸಿ, ವಿವರಿಸಿ ನನ್ನನ್ನು ಹುರಿದುಂಬಿಸಿದ್ದಾರೆ. ನಾನು ಅವರನ್ನು ಸಂಧಿಸಿದಾಗಲೆಲ್ಲ ನನಗೆ ಒಂದಲ್ಲ ಒಂದು ಬಗೆಯ ಸ್ಫೂರ್ತಿಯನ್ನು ಕೊಡುತ್ತ ನನ್ನನ್ನು ಕಾರ್ಯೋನ್ಮುಖನನ್ನಾಗಿ ಮಾಡಿದ್ದಾರೆ. ಅವರ ಆಶೀರ್ವಾದವೂ ನನ್ನ ಬಲ.

ಸಿಂಹಳ ದ್ವೀಪದ ವಜಿರಾರಾಮದ ಹಿರಿಯ ಭಿಕ್ಷುವಾದ ಭದ್ರಾಂತ ನಾರದ ಮಹಾಸ್ಥವಿರರು ನನ್ನ ವಿದ್ಯಾಗುರುಗಳು ; ಅವರ ಪದತಲದಲ್ಲಿ ಕುಳಿತು ನಾನು ಪಾಳಿಸೂತ್ರಗಳನ್ನು ಕಲಿತಿದ್ದೇನೆ. ಅವರ ನಿಷ್ಕಳಂಕವಾದ ಜೀವನ, ಮಧುರವಾದ ಮನೋಧರ್ಮ, ಉದಾರವಾದ ಹೃದಯ, ನಿಷ್ಠೆ ತುಂಬಿದ ನಡೆ — ಇವು ನನ್ನ ಬಾಳುವೆಯನ್ನು ಹದಮಾಡಿವೆಯೆಂದು ನನ್ನ ಎಣಿಕೆ. ಅವರ ಅನುಕಂಪದ ಭಾಗ್ಯ ನನ್ನ ಪಾಲಿಗೆ ಬಂದಿರುವುದು ನನ್ನ ಪುರಾಕೃತ ಪುಣ್ಯದ ಫಲ ಇದ್ದೀತು. ಈ ಲೇಖನಮಾಲೆಯಲ್ಲಿ ಅವರ ಸ್ಫೂರ್ತಿ ಬಹುವಾಗಿ ಅಡಕವಾಗಿದೆ ; ಮಾತಿನಿಂದ ಅವರ ಉಪಕಾರ ಸ್ಮರಣೆ ಮಾಡಲು ಸಾಧ್ಯವಿಲ್ಲ. ಇವರಲ್ಲದೆ, ನನಗೆ ಗುರುಪ್ರಾಯರಾದ ಸೋಮಸ್ಥವಿರ, ಕ್ಷೇಮೇಂದ್ರಸ್ಥವಿರ, ಜ್ಞಾನಪೂರ್ಣಕಸ್ಥವಿರ ಇವರಿಂದಲೂ ಬೌದ್ಧಶಿಕ್ಷೆಯಲ್ಲಿ ಬಹುವಾಗಿ ಉಪಕೃತನಾಗಿದ್ದೇನೆ.

ಪ್ರಮಾದವಶದಿಂದ ಕೆಲವು ಪಾರಿಭಾಷಿಕ ಪದಗಳಲ್ಲಿ ಮುದ್ರಣ ಸ್ಖಾಲಿತ್ಯ ಒದಗಿದೆ. ನಿದರ್ಶನಕ್ಕೆ 'ಅನಗಾರಿಕರು' ಎಂಬುದಕ್ಕೆ 'ಅನಾಗರಿಕರು' (ಪು. ೪), 'ನಿರ್ಗ್ರಂಥಕರು' ಎಂಬುದಕ್ಕೆ 'ನಿರ್ಗುಂಥಕರು' (ಪು. ೧೬), 'ತೀರ್ಥಕರು' ಎಂಬುದಕ್ಕೆ 'ತೀರ್ಥಿಕರು' (ಪು. ೨೩) ಸಹೃದಯರಾದ ವಾಚಕರು ಇದನ್ನು ಸಹಿಸಿಕೊಳ್ಳಬೇಕು.

ನನ್ನ ಉದ್ಯಮದಲ್ಲಿ ಆಸಕ್ತಿ ವಹಿಸಿ ಒಳ್ಳೆಯ ಮಾತನ್ನಾಡಿದ ಗೆಳೆಯರು ಹಲವರು ; ಅವರೆಲ್ಲರ ಸರಸವಾದ ಅನುರಾಗವನ್ನು ಇಲ್ಲಿ ಸ್ಮರಿಸುತ್ತೇನೆ. ಚೆಲ್ಲಿ ಹೋದ ನನ್ನ ಬರಹಗಳನ್ನೆಲ್ಲ ಒಂದೆಡೆ ಆಯ್ದು ಸುಂದರವಾದ ಸಂಪುಟದಲ್ಲಿ ಸೇರಿಸಿ ನಿಮ್ಮ ಮುಂದಿಟ್ಟ ಕಾವ್ಯಾಲಯ ಪ್ರಕಾಶನದ ಒಡೆಯ ಚಿದಂಬರಂ ಅವರ ಅವ್ಯಾಜವಾದ ಉಪಕಾರವನ್ನು ಮಾತಿನಿಂದ ಮುಗಿಸಲು ಹೇಗೆ ಸಾಧ್ಯ ?

೧೯೬೦

ಎಸ್. ಕೆ. ರಾಮಚಂದ್ರ ರಾವ್

ಆನಂದನ ಕಥೆ *

ಆ ಸಂಜೆ ಮಳೆ ಸುರಿಯುತ್ತಿತ್ತು. ಕೌಶಾಂಬಿಯಲ್ಲಿ ವರ್ಷಾವಾಸಕ್ಕೆಂದು ಸೇರಿದ ಕೆಲ ಭಿಕ್ಷುಗಳು ಒಂದು ದೊಡ್ಡ ಮರದಡಿಯಲ್ಲಿ ನಿಂತು, ತೊಯ್ದ ತಮ್ಮ ಚೀವರಗಳನ್ನು ಹಿಂಡಿಕೊಳ್ಳುತ್ತಿದ್ದರು. ಆಗ ಅವರಲ್ಲಿ ಒಬ್ಬ ಭಿಕ್ಷು ಹಿರಿಯನಾದ ಅನುರುದ್ಧನನ್ನು ಕುರಿತು ''ಭಂತೇ ಅನುರುದ್ಧ, ನಮ್ಮ ಸ್ವಾಮಿಯಾದ ಸಂಬುದ್ಧನಿಗೆ ಪ್ರೀತಿಯ ಶಿಷ್ಯನೆನಿಸಿದ ಸ್ಥವಿರ ಆನಂದನ ಪರಿಚಯ ನಿನಗುಂಟಷ್ಟೆ ?'' ಎಂದು ಕೇಳಿದ. ಅದಕ್ಕೆ ನಗುತ್ತ ಅನಿರುದ್ಧ ''ಚೆನ್ನಾಗಿ ಹೇಳಿದೆ, ಆನಂದನ ಪರಿಚಯ ನನಗಿಲ್ಲವೆ ? ಒಟ್ಟಿಗೆ ಚಿಕ್ಕಂದಿನಿಂದ ಬೆಳೆದವರು, ಒಟ್ಟಿಗೆ ಸಂಘ ಸೇರಿದವರು, ಗುರು ಇರುವಷ್ಟು ದಿನವೂ ಎಡಬಿಡದೆ ಸೇವೆ ಮಾಡಿದವರು ನಾವಿಬ್ಬರು ; ಆನಂದನನ್ನು ನಾನು ಕಾಣೆನೆ ?'' ಎಂದ. ಆ ಭಿಕ್ಷು ''ಸರಿ, ಭಂತೇ, ಅಂದಮೇಲೆ ಆನಂದನ ವಿಚಾರ ನಮಗೆ ಸ್ವಲ್ಪ ಹೇಳಬಾರದೇಕೆ ?'' ಎಂದು ಕೇಳಿದ. ಅನುರುದ್ಧ ''ಕೇಳುವವರ ಕುತೂಹಲ ಇದ್ದರೆ ಹೇಳುವವನ ಆಸೆ ಇಲ್ಲವೆ ? ಮಳೆಯಂತೂ ಈಗಲೇ ನಿಲ್ಲುವಂತಿಲ್ಲ, ಇಲ್ಲೇ ಕೂಡೋಣ, ಆನಂದನ ವಿಚಾರ ಹೇಳುವದೆಂದರೆ ನನಗೆ ತುಂಬ ಪ್ರೀತಿ'' ಎಂದಾಗ ಭಿಕ್ಷುಗಳೆಲ್ಲ ಅಲ್ಲೇ ಚೀವರ ಮಡಿಸಿ ಹಾಸಿ ಕೂತರು. ಅನುರುದ್ಧ ಕಥೆ ಹೇಳಲು ತೊಡಗಿದ.

---

* ಜೀವನ, ಸಂಪುಟ ೧೧, ಸಂಚಿಕೆ ೧೧ ; ಪುಟ ೪೧೧

'ನಮ್ಮ ಸ್ವಾಮಿಯಾದ ಸಂಬುದ್ಧನ ತಂದೆ ಕಪಿಲ ವಸ್ತುವಿನ ದೊರೆ ಶುದ್ಧೋದನನೆಂದು ನಿಮಗೆ ಗೊತ್ತಷ್ಟೆ. ಆ ಶುದ್ಧೋದನನಿಗೆ ಮೂವರು ಸಹೋದರರು ; ಶುಕ್ಲೋದನ, ಅಮೃತೋದನ, ದ್ರೋಣೋದನ ಎಂದು. ಶುದ್ಧೋದನನಿಗೆ, ನಿಮಗೆ ಗೊತ್ತಿದ್ದಂತೆ, ಇಬ್ಬರು ಮಕ್ಕಳು — ಮಾಯಾದೇವಿಯಲ್ಲಿ ನಮ್ಮ ಸ್ವಾಮಿ, ಪ್ರಜಾಪತೀ ಗೌತಮಿಯಲ್ಲಿ ಆಯುಷ್ಮಂತನಾದ ನಂದ ; ಶುಕ್ಲೋದನನಿಗೆ ನಮ್ಮಣ್ಣನಾದ ಮಹಾನಾಮ ಮತ್ತು ನಾನು ಇಬ್ಬರು ಮಕ್ಕಳು ; ಅಮೃತೋದನನಿಗೆ ಆನಂದ ಮಗ ; ದ್ರೋಣೋದನನ ಮಗನೇ ಭಲ್ಲಿಕ. ನಮ್ಮ ಚಿಕ್ಕಮ್ಮ ಅಮೃತಾದೇವಿಯ (ಸುಪ್ರಬುದ್ಧನ ಹೆಂಡತಿ) ಮಗ ದೇವದತ್ತ, ಮಗಳು ಯಶೋಧರೆ. ಕಪಿಲ ವಸ್ತುವಿನಲ್ಲಿದ್ದ ಶುದ್ಧೋದನನ ಕಡೆಯವರನ್ನು ಶಾಕ್ಯರೆನ್ನುತ್ತಾರೆ ; ಕುಸೀನಾರಾ, ಪಾವಾ ಕಡೆಯಲ್ಲಿದ್ದ ನಮ್ಮನ್ನೆಲ್ಲ ಮಲ್ಲರೆನ್ನುತ್ತಾರೆ. ವಂಶವೃಕ್ಷವೇನೋ ಒಂದೇ ; ಬೇರೆಬೇರೆ ಕವಲುಗಳಷ್ಟೆ. ಶುದ್ಧೋದನನ ಕಡೆಯವರು ಗೌತಮ ಗೋತ್ರದವರು ; ನಮ್ಮದು ವಸಿಷ್ಠಗೋತ್ರ. ನಾವೆಲ್ಲ ಕ್ಷತ್ರಿಯರು.

ಆನಂದ ನನ್ನ ಓರಗೆಯವನೇ.* ದೇವದಹದ ದೊರೆ ಸುಪ್ರಬುದ್ಧ ತನ್ನ ಮಗಳು ಯಶೋಧರೆಯ ಸ್ವಯಂವರ ಏರ್ಪಡಿಸಿದ್ದಾಗ ನಾನೂ ಆನಂದನೂ ಅಲ್ಲಿದ್ದೆವು ; ಸಿದ್ಧಾರ್ಥನ ಪರಾಕ್ರಮವನ್ನು ಕಣ್ಣಾರೆ ನೋಡಿದೆವು. ಸಿದ್ಧಾರ್ಥ— ಯಶೋಧರೆಯರ ವಿವಾಹದಲ್ಲೂ ಇದ್ದೆವು.

* ಈ ವಿಷಯದಲ್ಲಿ ಭಿನ್ನಾಭಿಪ್ರಾಯ ಇದೆ. ಒಂದು ಮತದ ಪ್ರಕಾರ ಬುದ್ಧ ಹುಟ್ಟಿದಂದೇ ಆನಂದ ಹುಟ್ಟಿದ್ದು ; ಬುದ್ಧ ತೀರಿಹೋದಮೇಲೆ ೪೦ ವರ್ಷ ಜೀವಿಸಿದ್ದ, ಅಂದರೆ ಆನಂದ ಸಾಯುವಾಗ ಅವನಿಗೆ ೧೨೦ ವರ್ಷ. ಇನ್ನೊಂದು ಮತದ ಪ್ರಕಾರ ರಾಹುಲ ಹುಟ್ಟಿದ ದಿನ ಬುದ್ಧ ಹುಟ್ಟಿದ್ದು; ಅವನು ಬುದ್ಧನ 'ಆಪ್ತಸೇವಕ'ನಾದಾಗ ಅವನಿಗೆ ೧೬ ವರ್ಷ. ಮತ್ತೊಂದು ಮತದ ಪ್ರಕಾರ ಅವನು ಭಿಕ್ಷುವಾದಾಗ ಅವನಿಗೆ ೨೦ ವರ್ಷ ಪ್ರಾಯ ; ಅವನು ಗತಿಸಿದಾಗ ೮೫ ವರ್ಷ. ಈ ಕಡೆಯ ಅಭಿಪ್ರಾಯ ಸಾಧುವಾದುದೆಂದು ಕಾಣುತ್ತದೆ ; ಆದರೆ ಅದರ ನಿಷ್ಕರ್ಷೆ ವಿದ್ವಾಂಸರ ಪಾಲಿಗೆ ಬಿಟ್ಟಿದ್ದು.

ಸಿದ್ಧಾರ್ಥ ಅಂದು ವೈಶಾಖ ಹುಣ್ಣಿಮೆಯ ನಡುರಾತ್ರಿ ಮನೆಬಿಟ್ಟು 'ಮಹಾಭಿನಿಷ್ಕ್ರಮಣ' ಮಾಡಿದಾಗ ನಮ್ಮ ಜನದಲ್ಲೆಲ್ಲ ಅದೇನು ಗೊಂದಲ ! ಊರಾಚೆ ಸಿದ್ಧಾರ್ಥನನ್ನು ಬಿಟ್ಟು ಹಿಂದಕ್ಕೆ ಬಂದ ಚನ್ನನ ಸುತ್ತ ಒಂದು ಹಿಂಡು ಜನ ! ಸಾವಿರ ಪ್ರಶ್ನೆಗಳು, ಸಿದ್ಧಾರ್ಥ ಏನಂದ ? ಎತ್ತ ಕಡೆ ಹೋದ ? ಒಂಟಿಯಾಗಿ ಹೋದನೆ ? ಆತ್ಮಹತ್ಯೆಮಾಡಿಕೊಳ್ಳುವುದಿಲ್ಲ ವೆಂದು ನಿಜವಾಗಿ ಹೇಳಿದನೆ ? ಮತ್ತೇನು ಹೇಳಿದ ? ಈ ಐಶ್ವರ್ಯ-ಸಂಪತ್ತು ಏಕೆ ಬೇಡವಾಯಿತಂತೆ ? ಇತ್ಯಾದಿ ಇತ್ಯಾದಿ ; ಚನ್ನನೋ ಅಳುವುದರಲ್ಲೇ ಎಲ್ಲ ಮುಗಿಸಿದ ! ಅಂದು ಆನಂದ ನಾನು ಇಬ್ಬರೂ ಈ ವಿಚಾರ ಬಹು ಹೊತ್ತು ಮಾತಾಡುತ್ತಿದ್ದೆವು ; ಆನಂದನಿಗೆ ಬಹಳ ಕುತೂಹಲ ಸಿದ್ಧಾರ್ಥನ ಭವಿಷ್ಯದಲ್ಲಿ.

ಆನಂದ ಶ್ರೀಮಂತಿಕೆಯ ಮಡಿಲಲ್ಲೇ ಹುಟ್ಟಿ ಬೆಳೆದಿದ್ದರೂ ವಿಷಯ ಲೋಲುಪನಾಗಿರಲಿಲ್ಲ ; ಮೊದಲಿಂದ ಸಿದ್ಧಾರ್ಥನ ವಿಷಯದಲ್ಲಿ ಗೌರವ ಬುದ್ಧಿ ಇತ್ತು. ಅವನು ಮಗುವಾಗಿದ್ದಾಗ ಜ್ಯೋತಿಷ್ಕರು ಹೇಳಿದ್ದರಂತೆ — ಇವನು ಮನೆಯಿಂದ ಮನೆಯಿಲ್ಲದಿರುವಿಕೆಗೆ ಹಾದು ಬುದ್ಧನ ಪರಿಚಾರಕನಾಗುತ್ತಾನೆ — ಎಂದು ; ಅಮೃತೋದನನಿಗೆ ಗಾಬರಿ. ತನ್ನ ಅಣ್ಣನ ಮಗ ಸಿದ್ಧಾರ್ಥ ಸಂನ್ಯಾಸಿಯಾದನೆಂದು ಕೇಳಿದಮೇಲಂತೂ ಅವನ ಗಾಬರಿ ವಿಪರೀತವಾಯಿತು. ಬುದ್ಧನನ್ನು ನೋಡಿದರೆ ಎಲ್ಲಿ ಪ್ರಮಾದವಾದೀತೋ ಎಂದು ಆನಂದ— ಬುದ್ಧರ ಸಮಾಗಮ ಆಗದಂತೆ ನೋಡಿಕೊಳ್ಳುವುದೇ ಅವನ ಚಿಂತೆಯಾಯಿತು. ಸಿದ್ಧಾರ್ಥ ಬುದ್ಧನಾಗಿ ಏಳೆಂಟು ವರ್ಷಗಳಾದ ಮೇಲೆ ಕಪಿಲವಸ್ತುವಿಗೆ ಬಂದಿದ್ದನಲ್ಲಾ, ಆಗ ಅಮೃತೋದನ ಆನಂದನನ್ನು ವೈಶಾಲಿಗೆ ಕಳುಹಿಸಿದ ; ಬುದ್ಧ ವೈಶಾಲಿಗೆ ಬಂದಾಗ ಆನಂದ ಕಪಿಲವಸ್ತುವಿಗೆ ಬಂದ. ಆದರೆ ಅನುಪಿಯಾದಲ್ಲಿ ಈ ಸಮಾಗಮ ನಡೆದೇ ನಡೆಯಿತು. ಆ ಕಾಲದಲ್ಲಿ ನಮ್ಮ ರಾಜ್ಯದ, ನಮ್ಮ

ವಂಶದ ಅನೇಕ ಯುವಕರು ಭಿಕ್ಷುಗಳಾಗಿಬಿಟ್ಟರು. ಮಗಧದ ಜನರೆಲ್ಲ ಅನ್ನುತ್ತಿದ್ದರು — ''ಈ ಶ್ರಮಣಗೌತಮ ಬಂದು ನಮ್ಮ ಮನೆಗಳನ್ನು ಹಾಳುಮಾಡುತ್ತಿದ್ದಾನೆ, ಸಂಸಾರಗಳನ್ನು ಮುರಿಯುತ್ತಿದ್ದಾನೆ, ಹೆಣ್ಣುಮಕ್ಕಳಿಗೆ ವೈಧವ್ಯ ತರುತ್ತಿದ್ದಾನೆ, ಮಕ್ಕಳು-ಮರಿ ಆಗದಂತೆ ಮಾಡುತ್ತಿದ್ದಾನೆ'' ಎಂದು ! ಅದೇನು ! ತಂಡ ತಂಡವಾಗಿ ಜನ ಸಂಘ ಸೇರುತ್ತಿದ್ದರು. ಸಂಬುದ್ಧನಿಗೆ ನಮ್ಮ ದೇಶದಲ್ಲಾದ ವಿಜಯ ನನಗೆ ಇನ್ನೂ ಚೆನ್ನಾಗಿ ನೆನಪಿದೆ. ಕಪಿಲವಸ್ತುವಿನಲ್ಲಿ ಆಯುಷ್ಮಂತನಾದ ರಾಹುಲ, ಮಲತಮ್ಮನಾದ ನಂದ ಇಬ್ಬರೂ ಸಂಘ ಸೇರಿದರು. ಅಲ್ಲಿಂದ ಅನುಪಿಯಕ್ಕೆ ನಮ್ಮ ಸ್ವಾಮಿ ಬಂದಾಗ, ನಮ್ಮಣ್ಣ ಮಹಾನಾಮ ನನ್ನನ್ನು ಕರೆದು ''ನೋಡು ಅನುರುದ್ಧ ನಮ್ಮ ಜನರೆಲ್ಲ ಸಂಸಾರ ಒಂದಕ್ಕೆ ಒಬ್ಬನೋ ಎನ್ನುವಂತೆ ಸಂಘಕ್ಕೆ ಸೇರಿ ಸಿದ್ಧಾರ್ಥನನ್ನು ಅನುಸರಿಸುತ್ತಿದ್ದಾರೆ ; ನಮ್ಮ ಮನೆಯೊಂದರಲ್ಲೇ ಈ ದಾನ ಮಾಡದಿರುವುದು. ಅದು ಕಾರಣ, ಇಲ್ಲ ನಾನು ಶ್ರಮಣನಾಗುತ್ತೇನೆ, ನೀನು ಸಂಸಾರ ನೋಡಿಕೊಂಡಿರು, ಇಲ್ಲ ನೀನು ಶ್ರಮಣನಾಗು, ನಾನು ಸಂಸಾರ ನೋಡಿಕೊಂಡಿರುತ್ತೇನೆ'' ಎಂದ. ನಾನೇ ಶ್ರಮಣನಾಗುತ್ತೇನೆಂದೆ. ಈ ಸುದ್ದಿ ನನ್ನ ಸಂಗಾತಿಗಳು ಹಾಗೂ ನೆಂಟರಾದ ಆನಂದ, ಭದ್ರಕ, ದೇವದತ್ತ ಮುಂತಾದವರ ಕಿವಿಗೆ ಬಿದ್ದು ಅವರೂ ಶ್ರಮಣರಾಗುತ್ತೇವೆಂದರು. ನಾವು ನಾಲ್ಕೈದು ಜನ — ಆನಂದನೂ ಸೇರಿ — ನಮ್ಮ ಕ್ಷೌರಿಕನಾದ ಉಪಾಲಿಯನ್ನು ಮಾತ್ರ ಕರೆದುಕೊಂಡು ಬುದ್ಧ ತಂಗಿದ್ದ ಆಮ್ರವನದ ಕಡೆಗೆ ಹೊರಟೆವು. ವನದ ಬಾಗಿಲಲ್ಲಿ ನಮ್ಮ ಆಭರಣ, ವಸ್ತ್ರಗಳನ್ನೆಲ್ಲ ಉಪಾಲಿಯ ಕೈಗೆ ಕೊಟ್ಟು ಹಿಂದಿರುಗೆಂದೆವು. ಅವನು ಮೊದಲು ಒಪ್ಪಿ ಹಿಂದೆ ಹೋದವನು, ಸ್ವಲ್ಪ ಹೊತ್ತಿನಲ್ಲೇ ತಿರುಗಿ ನಮ್ಮಲ್ಲಿಗೆ ಬಂದು ನಾನೂ ಸಂಘ ಸೇರುತ್ತೇನೆಂದ. ಸರಿ, ಅವನನ್ನೂ ಕೂಡಿಕೊಂಡು ಭಗವಂತನಾದ ಬುದ್ಧನ ಬಳಿಗೆ ಬಂದು ನಮ್ಮ ಇಷ್ಟವನ್ನು ಹೇಳಿಕೊಂಡೆವು ; ಒಪ್ಪಿಗೆಯೂ ದೊರೆಯಿತು. ಆದರೆ ಯಾರು ಮೊದಲು ಭಿಕ್ಷುವಾಗಬೇಕೆಂಬ

ಪ್ರಶ್ನೆ ಬರಲಾಗಿ, ಉಪಾಲಿಯೇ ಆಗಲೆಂದೆವು ; ಏಕೆಂದರೆ, ನಾವೆಲ್ಲ ಶ್ರೀಮಂತರು, ಆ ಜಂಭ ಸಾಮಾನ್ಯವಾಗಿ ಹೋಗುತ್ತದೆಯೆ ? ಉಪಾಲಿ ಭಿಕ್ಷುವಾಗಿ ನಾವಿನ್ನೂ ಸಂಸಾರಸ್ಥರೇ ಆಗಿದ್ದಾಗ ಅವನಿಗೆ ನಮಸ್ಕಾರ ಮಾಡಿ ಸತ್ಕರಿಸುವ ಅವಕಾಶ ಬರುವುದಲ್ಲವೆ. ಆದರಿಂದ ನಮ್ಮ ಮದ ಸ್ವಲ್ಪ ಇಳಿಯಬಹುದಲ್ಲ ? ಹಾಗೆಯೆ, ಉಪಾಲಿ ಭಿಕ್ಷುವಾದಾಗ ನಾವು ಅವನ ಕಾಲುಮುಟ್ಟಿ ಪ್ರಮಾಣ ಮಾಡಿದೆವು ; ತುಸು ಹೊತ್ತಿನ ನಂತರ ನಾವೆಲ್ಲ 'ಮನೆಯಿಲ್ಲದವರು' (ಅನಗಾರಿಕರು) ಆದೆವು. ಜಾತಿಯ ಅಭಿಮಾನ, ವಂಶದ ಅಭಿಮಾನ, ಮನೆಯ ಅಭಿಮಾನ, ಶ್ರೀಮಂತಿಕೆಯ ಅಭಿಮಾನ ಎಲ್ಲವನ್ನೂ ಬದಿಗಿಟ್ಟು, ತಲೆಗೂದಲು, ಮುಖದ ಕೂದಲುಗಳನ್ನು ತೆಗೆಸಿ, ಚೀವರಗಳನ್ನುಟ್ಟು ಭಿಕ್ಷುಗಳಾದೆವು. ಅಲ್ಲಿಂದ ಮುಂದೆ ನಮ್ಮ ಸ್ವಾಮಿ ರಾಜಗೃಹಕ್ಕೆ ಹೋಗಿ ಅಲ್ಲಿಯ ವೇಣುವನದಲ್ಲಿ ತಂಗಿದ್ದಾಗ ನಮ್ಮೆಲ್ಲರಿಗೂ ಶೀಲದಲ್ಲಿ ವಿನಯದಲ್ಲಿ ಶಿಕ್ಷೆ ನಡೆಯಿತು.

ಮತ್ತೊಂದು ವಿಷಯ ನೆನಪಿಗೆ ಬರುತ್ತದೆ. ಅದು ಚೇತವನದಲ್ಲಿ ನಡೆದ ಸುದ್ದಿ. ಆನಂದ ಭಿಕ್ಷುವಾಗುವ ಮುನ್ನ ಅವನಿಗೆ ಆಗತಾನೆ ಮದುವೆ ಆಗಿತ್ತು ; ಅವನ ವಧು ಜನಪದಕಲ್ಯಾಣಿ ಎಂಬುವಳು. ಅವಳಿಗೆ ಆನಂದ ಭಾಷೆ ಕೊಟ್ಟಿದ್ದನಂತೆ, ''ಬೇಗ ಹಿಂದಕ್ಕೆ ಬರುತ್ತೇನೆ''ಂದು. ಇದು ಆನಂದನನ್ನು ಪೀಡಿಸುತ್ತಿತ್ತು. ಮನುಷ್ಯನ ಮನಸ್ಸು ಏನು ಸ್ಥಿರ ? ಅದೂ ಪರಿವ್ರಜ್ಯದ ತೀರ ಹಚ್ಚ-ಹೊಸದರಲ್ಲಿ ? ಆನಂದ ಒಂದು ದಿನ ನನ್ನ ಮುಂದೆ ಹೇಳಿಯೂ ಹೇಳಿದ — ''ಅನುರುದ್ಧ, ಮನೆಗೆ ಹಿಂದಿರುಗುತ್ತೇನೆ''— ಎಂದು. ಇದು ನಮ್ಮ ಸ್ವಾಮಿಯ ಕಿವಿಗೂ ಸಾಗಿತು. ಆಗ ನಮ್ಮ ಸ್ವಾಮಿ ಆನಂದನನ್ನು ಕರೆಸಿ ಬಹು ಹೊತ್ತು ಏಕಾಂತದಲ್ಲಿ ಮಾತನಾಡುತ್ತಿದ್ದ. ಅದರ ವಿಷಯ ನನಗೆ ತಿಳಿಯದು. ಅಲ್ಲಿಂದಾಚೆಯೇನೋ, ಮನೆಗೆ ಹೋಗುವ ಚಿಂತೆ ಆನಂದನಿಗಿರಲಿಲ್ಲ. ಒಂದು ದಿನ ಭಗವಂತನಾದ ಬುದ್ಧ

ನಮ್ಮ ಮುಂದೆ ಹೇಳಿದ — ''ಮೊದಲು ಆನಂದನ ಮನಸ್ಸು ಸರಿಯಾದ ಚಾವಣಿಯಿಲ್ಲದ ಮನೆಯಂತಿತ್ತು ; ಮೋಹದ ಮಳೆ ನೀರೆಲ್ಲ ಒಳಗೆ ಇಳಿಯುತ್ತಿತ್ತು. ಆದರೆ ಈಗ ಛಾವಣಿಯನ್ನು ಭದ್ರಮಾಡಿ ಕೊಂಡಿದ್ದಾನೆ ; ಮಳೆನೀರೆಲ್ಲ ಮೇಲೆಯೇ ಬಿದ್ದು ಹಾಗೆಯೇ ಹರಿದು ಹೋಗುತ್ತದೆ, ಒಳಗೆ ಇಳಿಯುವುದಿಲ್ಲ''— ಎಂದು.

ಆನಂದ ತುಂಬ ಓದಿದವನಲ್ಲ, ಅಥವಾ ಅತಿಯಾಗಿ ಮಹಾಕಾಶ್ಯಪನಂತೆ ತಪಸ್ಸು-ವ್ರತ-ನೇಮಗಳನ್ನು ಮಾಡಿ ದೇಹ ಬಳಲಿಸಿಕೊಂಡವನೂ ಅಲ್ಲ. ಮೊದಮೊದಲು ಭಗವಂತನಿಗೂ ಉಳಿದ ಭಿಕ್ಷುಗಳಿಗೂ ನಡೆಯುತ್ತಿದ್ದ ಚರ್ಚೆಗಳಲ್ಲಿ ಅವನು ಬಾಯಿ ಹಾಕಿದ್ದೇ ಇಲ್ಲ, ಅವನಿಗೆ ಭಗವಂತನ ಧರ್ಮದಲ್ಲಿ ಎಳ್ಳಷ್ಟೂ ಸಂಶಯ ಇದ್ದಂತೆ ತೋರಲಿಲ್ಲ. ಆದರೆ ನನ್ನ ಬುದ್ಧಿ ಸ್ವಲ್ಪ ತರ್ಕ, ಜಿಜ್ಞಾಸೆ, ಮೀಮಾಂಸೆಯ ಕಡೆ. ಮೊದಲು ಧರ್ಮ ನನ್ನ ಮನಸ್ಸಿಗೆ ಸಮಾಧಾನ ತರಲಿ, ಆಮೇಲೆ ಹೃದಯದಲ್ಲಿ ಶ್ರದ್ಧೆ ಏಳುತ್ತದೆ ಎನ್ನುತ್ತಿದ್ದೆ. ಆನಂದನದಾದರೆ ಮೊದಲಿಂದ ಕಡೆಯವರೆಗೂ ಶ್ರದ್ಧೆ. ಶ್ರದ್ಧೆ ತುಂಬ ಮುಖ್ಯ, ಭಿಕ್ಷುಗಳೆ, ನಮ್ಮ ಸ್ವಾಮಿಯೇ ಅನ್ನುತ್ತಿದ್ದುದು ನಿಮಗೆ ನೆನಪಿಲ್ಲವೆ— ''ಸದ್ಧಯಾ ತರತೀ ಓಘಂ'' ಎಂದು ? ಆನಂದನದು ಇಂಥ ಮನೋವೃತ್ತಿ ; ಜಿಜ್ಞಾಸೆಗಿಂತ ಶೀಲವೇ ಮುಖ್ಯ, ''ಜಗತ್ತು ಉಂಟು, ಜೀವ ಇಲ್ಲ, ಇದೆ'' ಎಂಬ ತರ್ಕಗಳಿಂದ ಏನಾಗಬೇಕು ? ನಮ್ಮ ಸ್ವಾಮಿ ಮಾಲುಂಕ್ಯಪುತ್ತನಿಗೆ ಹೇಳಲಿಲ್ಲವೆ— ''ಜಗತ್ತು ಇದೆ, ಇಲ್ಲ ಎಂಬುದು ನಿರರ್ಥಕ ; ಅದಕ್ಕೂ ನಿರ್ವಾಣಕ್ಕೂ ಏನೂ ಸಂಬಂಧ ಇಲ್ಲ, ನಾನು ಹೇಳುವುದಿಷ್ಟು, ದುಃಖ, ಅದು ಆಗುವುದು, ಅದನ್ನು ನಿಲ್ಲಿಸುವುದು, ಅದಕ್ಕೆ ದಾರಿ ; ಇದರಿಂದ ರಾಗ ಇಂಗುತ್ತದೆ, ಶಾಂತಿ ಬರುತ್ತದೆ, ಪ್ರಜ್ಞೆ ಉಂಟಾಗುತ್ತದೆ, ನಿರ್ವಾಣ ಕಾಣುತ್ತದೆ. ಬೇರೆ ಶುಷ್ಕವಾದದಿಂದ ಏನು ಪ್ರಯೋಜನ ?'' ಇದೇ

ಮನೋಭಾವ ಆನಂದನದು. ಆನಂದನ ಬುದ್ಧಿ ಪಕ್ವವಾಗಿರಲಿಲ್ಲವೆಂದೇ ಅನ್ನೋಣ, ಆದರೆ ಅವನ ಹೃದಯ ? ಚಿನ್ನದಂಥ ಹೃದಯ. ಅದರಲ್ಲಿ ನೈಷ್ಠುರ್ಯ, ಕಾಠಿಣ್ಯದ ಗಂಧ ಕೂಡ ಇಲ್ಲ ; ಯಾರಿಗಾದರೂ ಅಯ್ಯೋ ಅಂದು ಆದರ ಮಾಡಲು ಎಂದೂ ಸಿದ್ಧವಾಗಿರುತ್ತಿತ್ತು. ಅಂಥ ಹೆಂಗರುಳು ನಮ್ಮಲ್ಲಿ ಯಾರಿಗೂ ಇರಲಿಲ್ಲ. ಅದಕ್ಕೆ ಒಂದು ನಿದರ್ಶನ. ಭಗವಂತನಾದ ಬುದ್ಧನ ತಂದೆ ಶುದ್ಧೋದನ ತೀರಿಹೋದಮೇಲೆ ಅವನ ಹೆಂಡತಿ (ಬುದ್ಧನ ಮಲತಾಯಿ) ಮಹಾ ಪ್ರಜಾಪತೀ ಗೌತಮಿೀ ಮತ್ತಿತರ ರಾಜಸ್ತ್ರೀಯರು ಸಂಘಕ್ಕೆ ಸೇರಬಯಸಿದರು ; ಆದರೆ ಭಗವಂತನಿಗೆ ಸ್ತ್ರೀಯೆಂದರೆ ಸ್ವಲ್ಪ ಅಷ್ಟಷ್ಟೆ ಅವರಿಗೆ ಧೈರ್ಯ ಸಾಲದು ; ಅಷ್ಟಲ್ಲದೆ ಅವರು ಹತ್ತಿರ ಇದ್ದರೆ ಭಿಕ್ಷುಗಳ ಮನಸ್ಸೂ ಮಾರುಹೋಗಬಹುದು, ಯಾರು ಬಲ್ಲರು ? ಖಂಡಿತ ಕೂಡದು ಎಂದ. ಆದರೆ ಸ್ತ್ರೀಯರು ಹಠ ಹಿಡಿದರು ; ಮಹಾ ಪ್ರಜಾಪತೀ ಗೌತಮಿಯನ್ನು ಮುಂದೆ ಮಾಡಿಕೊಂಡು ಕಪಿಲವಸ್ತುವಿನಿಂದ ಊರಾಚೆ ಹನ್ನೆರಡು ಯೋಜನ ದೂರ ಇರುವ ಬುದ್ಧನ ಆಶ್ರಮಕ್ಕೆ ನಡೆದುಕೊಂಡು ಬಂದು, ಬಾಗಿಲಲ್ಲಿ ಕೂತಿದ್ದ ಆನಂದನ ಬಳಿ ಬಂದರು. ದೂರದಿಂದ ನಡೆದು ಬಂದು ಮೈಕೈಯೆಲ್ಲ ಧೂಳಿನಿಂದ ತುಂಬಿದೆ ; ಅರಮನೆಯ ಸ್ತ್ರೀಯರು ಕಲ್ಲುದಾರಿಯಲ್ಲಿ ನಡೆಯುವುದೆಂದರೆ ? ಕಾಲಿನಿಂದ ರಕ್ತ ಸುರಿಯುತ್ತಿದೆ. ಆನಂದ ಈ ಸ್ಥಿತಿ ನೋಡಿ ಕಂಗಾಲಾದ. ''ಏನು ವಿಷಯ, ತಾಯಿಯಿರಾ ?'' ಎಂದು ಪ್ರಶ್ನಿಸಿದ ; ಗೌತಮಿ ತಾವು ಸಂಘಕ್ಕೆ ಸೇರಲು ಬುದ್ಧನನ್ನು ಮೂರು ಬಾರಿ ಬೇಡಿಕೊಂಡದ್ದು, ಬುದ್ಧ ಬೇಡವೇ ಬೇಡವೆಂದದ್ದು, ಈಗ ಸೇರಿಯೇ ಸೇರುತ್ತೇವೆಂದು ನಿರ್ಧರಿಸಿ ಬಂದಿರುವುದನ್ನೂ ಹೇಳಿ ಅಳಲು ಮೊದಲುಮಾಡಿದಳು. ಆನಂದನ ಕಣ್ಣುಗಳೂ ಒದ್ದೆಯಾದವು. ''ನೀವು ಇಲ್ಲೇ ಇರಿ'' ಎಂದು ಹೇಳಿ ಒಳಗೆ ಹೋಗಿ ಭಗವಂತನನ್ನು ಕೇಳಿದ — ''ಭಂತೇ, ಬುದ್ಧರು ಭೂಮಿಯಲ್ಲಿ ಹುಟ್ಟುವುದು ಗಂಡಸಿಗೆ ಮಾತ್ರವೆ?''

ಎಂದು. ಸ್ವಾಮಿಯೆಂದ, ''ಇಲ್ಲ, ಆನಂದ.'' ಮತ್ತೆ ಆನಂದ, ''ಭಂತೆ, ಸ್ತ್ರೀಯರಿಗೆ ಶ್ರಾಮಣ್ಯಫಲ ದೊರಕಲು ಸಾಧ್ಯವಿಲ್ಲವೆ ?'' ಎಂದು ಕೇಳಿದ. ''ಸಾಧ್ಯವಿಲ್ಲವೆಂದವರಾರು, ಆನಂದ ?''ಎಂದು ನಮ್ಮ ಸ್ವಾಮಿ ಉತ್ತರವಿತ್ತ, ಮತ್ತೆ ''ಸ್ತ್ರೀಯರು ಸಂಘಕ್ಕೆ ಸೇರಲು ಅಡ್ಡಿಯೇನು ? ಅವರು ಭಿಕ್ಷುಣಿಯರಾಗಿ ಭಗವಂತನ ಬಳಿ ಪವಿತ್ರವಾದ ಜೀವನ ನಡಸಲು ಅವಕಾಶವಿರಬಾರದೇಕೆ ?'' ಎಂದ. ಭಗವಂತ ಆನಂದನ ಹೃದಯಕ್ಕೆ ಮನ್ನಣೆ ಕೊಟ್ಟು ಸ್ತ್ರೀಯರನ್ನು ಸಂಘಕ್ಕೆ ಸೇರಿಸಲು ಒಪ್ಪಿದ ; ಆದರೆ ಶೀಲ ತಪ್ಪದಿರಲೆಂದು ಕೆಲವು ನಿಯಮ*ಗಳನ್ನು ವಿಧಿಸಿದ. ಅದೆಲ್ಲ ನಿಮಗೆ ತಿಳಿದೇ ಇದೆ. ಇಂಥ ಪ್ರಸಂಗಗಳು ನೂರಾರು. ಭಗವಂತನ 'ಕರುಣಾಶೀತಲ ಹೃದಯ'ದ ಬಹು ಭಾಗ ಆನಂದನ ಸಹವಾಸದ ಫಲವೆಂದೇ ನನ್ನ ಎಣಿಕೆ.

ಆದರೆ ಆನಂದ ದುರ್ಬಲ, ಅವನ ಹೃದಯದಲ್ಲಿ ಸ್ಥೈರ್ಯ ಇದ್ದಿಲ್ಲ, ಎಂದು ತಿಳಿಯಬೇಡಿ. ಅವನ ಅಂತಃಕರಣ ಹೂವಿನಂತೆ ಮೃದುವಾಗಿದ್ದರೂ, ಶೀಲ ವಜ್ರದಂತೆ ಕಠಿಣ. ಅವನಿಗೆ ಭೂತದಯೆ ಇತ್ತಷ್ಟೆ ವಿನಾ, ಚಾಂಚಲ್ಯ ಇರಲಿಲ್ಲ. ನೀರಿನಲ್ಲಿ ಹುಟ್ಟಿ ನೀರಿನಲ್ಲೆ ಬೆಳೆದು ಅಲ್ಲೇ ಇರುವ ಕಮಲದಂತೆಯೇ ಇಷ್ಟೆಲ್ಲ ಅಂತಃಕರಣ, ಪ್ರೀತಿ, ಕಾರುಣ್ಯದಿಂದ

* ಎಂಟು ನಿಯಮಗಳು : ೧. ಭಿಕ್ಷುಣಿಯ ಸ್ವಭಾವ ಚೆನ್ನಾಗಿ ತಿಳಿಯುವುದು ; ೨. ಭಿಕ್ಷುಗಳ ಬಳಿಯೇ ಭಿಕ್ಷುಣಿ ಇದ್ದರೆ, ಎರಡು ವಾರಗಳಿಗೊಮ್ಮೆ ವಿನಯ ಬೋಧಿಸುವುದು ; ೩. ಭಿಕ್ಷುಗಳಿಲ್ಲದ ಕಡೆ ಭಿಕ್ಷುಣಿಯರು ವರ್ಷಾವಾಸ ಮಾಡದಿರುವುದು ; ೪. ಹೀಗೆ ವರ್ಷಾವಾಸ ಮಾಡುವಾಗ ಭಿಕ್ಷುಗಳ ಸ್ಥಳಕ್ಕಿಂತ ಬಹು ದೂರ ಇರುವುದು. ೫. ಮಾತಿನಿಂದಾಗಲೀ, ಕೆಲಸದಿಂದಾಗಲೀ ಭಿಕ್ಷುವಿನ ಶೀಲಕ್ಕೆ ಭಂಗ ತರದಿರುವುದು. ೬. ಕ್ರೋಧ, ನಿಂದೆ, ಇತರ ಪಾಪಗಳನ್ನು ಬಿಡುವುದು. ೭. ಪ್ರತಿ ಎರಡು ವಾರಕ್ಕೊಮ್ಮೆ ತನ್ನ ತಪ್ಪುಗಳನ್ನು ಭಿಕ್ಷುಗಳ ಮುಂದೆ ಒಪ್ಪಿಕೊಳ್ಳುವುದು. ೮. ಭಿಕ್ಷುಣಿ ಹಿರಿಯಳಾದರೂ ಭಿಕ್ಷುವಿಗೆ ಗುರುವಿಗೆ ಸಲ್ಲುವಷ್ಟು ಮರ್ಯಾದೆ ಮಾಡುವುದು.

ಆನಂದನ ಶೀಲ ಕಲುಷಿತವಾಗಿದ್ದಿಲ್ಲ. ಈ ವಿಷಯದಲ್ಲಿ ಒಂದು ಸಂಗತಿ ನೆನಪಿಗೆ ಬರುತ್ತದೆ. ಶ್ರಾವಸ್ತಿಯಲ್ಲೊಮ್ಮೆ ಆನಂದ ಉರಿಯುವ ಬೇಸಗೆಯ ಮಧ್ಯಾಹ್ನದಂದು ತನ್ನ ಭಿಕ್ಷಾ ವೃತ್ತಿ ಮುಗಿಸಿಕೊಂಡು ಆರಾಮಕ್ಕೆ ಹಿಂದಿರುಗುತ್ತಿದ್ದ. ಬಿಸಿಲು ಜೋರಾಗಿದ್ದು ಆನಂದನಿಗೆ ನೀರಡಿಕೆ ಹೆಚ್ಚಾಯಿತು. ಬರುಬರುತ್ತಾ ದಾರಿಯಲ್ಲಿ ಬಾವಿಯೊಂದರ ಬಳಿ ಒಬ್ಬ ಹೆಂಗಸು ನೀರು ಸೇದುತ್ತಿದ್ದುದನ್ನು ಕಂಡು, ಅವಳ ಬಳಿ ಹೋಗಿ, ''ತಾಯಿ, ಬಾಯೊಣಗಿದೆ, ನೀರು ಕೊಡುವೆಯಾ ?'' ಎಂದು ಕೇಳಿದ. ಆ ಹೆಂಗಸು ತಟ್ಟನೆ ದೂರ ಸರಿದು, ''ಗುರುಗಳೇ, ನಾನು ಬೀದಿ ಕಸ ಗುಡಿಸುವ ಜಾತಿಯವಳು ; ತಮ್ಮಂಥ ಉತ್ತಮರಿಗೆ ನೀರು ಕೊಡುವ ಪುಣ್ಯ ನನಗಿಲ್ಲ. ನಾನು ಮುಟ್ಟಿದ ನೀರು ತಮ್ಮನ್ನು ಸೋಕಲುಂಟೆ ?'' ಎಂದಳು. ಅದಕ್ಕೆ ಆನಂದನೆಂದ— ''ತಾಯಿ, ನನಗೆ ಬೇಕಾದುದು ನೀರು, ನಿನ್ನ ಜಾತಿಯಗೊಡವೆ ನನಗೇಕೆ ?'' ಮರುಮಾತಾಡದೆ ಆ ಮತಂಗ ಕನ್ಯೆ — ಪ್ರಕೃತಿಯೆಂದವಳ ಹೆಸರು — ತನ್ನ ಕೊಡದಿಂದ ಆನಂದನ ಬೊಗಸೆಗೆ ನೀರು ಸುರಿದಳು ; ಆನಂದ ನೀರು ಸಾಕಾದಷ್ಟು ಕುಡಿದು ''ಬರುತ್ತೇನೆ, ತಾಯಿ'' ಎಂದು ತನ್ನ ದಾರಿ ಹಿಡಿದು ಹೊರಟ. ಆದರೆ ಆ ಪ್ರಕೃತಿಗೆ ಕಾಮ ಉಕ್ಕಿ, ಆನಂದನ ವರ್ತನೆಯನ್ನು ಅಪಾರ್ಥ ಮಾಡಿಕೊಂಡು ಅವನನ್ನು ಹಿಂಬಾಲಿಸಿ ಪ್ರಣಯವನ್ನು ಬೇಡಿದಳು. ಆನಂದ ನಕ್ಕು ''ನೀನು ತಿಳಿಯದವಳು, ಹಿಂದಕ್ಕೆ ಹೋಗು ತಾಯಿ ; ಮನೆಯಿಂದ ಮನೆಯಿಲ್ಲದಿರುವಿಕೆಗೆ (ಆಗಾರಸ್ಮಾ ಅನಾಗಾರಿಯಂ) ಸಾರಿರುವ ನನ್ನಲ್ಲಿ ಪ್ರಣಯವೆಂದರೇನು ? ಹುಚ್ಚಿ'' ಎಂದು ಹೇಳಿ ಮುಂದೆ ಹೊರಟ. ಪ್ರಕೃತಿ ಬಿಡಲಿಲ್ಲ ; ಅವನನ್ನು ಇನ್ನೂ ಹಿಂಬಾಲಿಸುತ್ತ ಬುದ್ಧ ಭಗವಂತ ತಂಗಿದ್ದ ಆರಮದ ಬಾಗಿಲಿಗೆ ಬಂದಳು. ಆನಂದ ಅರ್ಹತನ ಮುಂದೆ ನಡೆದ ಸಂಗತಿಯನ್ನು ತಿಳಿಸಿದ. ಅರ್ಹತನಾದ ಬುದ್ಧ ಪ್ರಕೃತಿಯನ್ನು ಕರೆದು ''ಬಾ, ತಂಗಿ, ಏನು ಬಂದಿರುವೆ ?'' ಎಂದು ಕೇಳಲಾಗಿ ಅವಳು ''ಈ ಭಿಕ್ಷು

ನನ್ನಲ್ಲಿ ಪ್ರೀತಿ ತೋರಿಸಿದ್ದಾನೆ. ನಾನೂ ಅವನನ್ನು ಪ್ರೀತಿಸುತ್ತೇನೆ. ಅವನಿರುವೆಡೆ ನಾನೂ ಇದ್ದು ಅವನ ಸೇವೆ ಮಾಡಿಕೊಂಡಿರಲು ಅವಕಾಶ ಕೊಡುವಿರಾ ?'' ಎಂದಳು. ಅದಕ್ಕೆ ಭಗವಂತನಾದವನು ''ತಂಗಿ, ನಿನ್ನ ಮನಸ್ಸು ಸಮಾಧಾನದಲ್ಲಿಲ್ಲ, ನಿನ್ನ ಭಾವನೆಗಳು ನಿನಗೇ ಅರ್ಥವಾಗಿಲ್ಲ, ನೀನು ಪ್ರೀತಿಸುತ್ತಿರುವುದು ಈ ಭಿಕ್ಷು ಆನಂದನನ್ನಲ್ಲ, ಆದರೆ ಅವನು ನಿನ್ನಲ್ಲಿ ತೋರಿಸಿದ ಪ್ರೀತಿಯನ್ನು. ಆ ಪ್ರೀತಿಯನ್ನು ನಿನ್ನದು ಮಾಡಿಕೋ, ತಂಗಿ, ಎಲ್ಲರಲ್ಲೂ ಅದೇ ಪ್ರೀತಿ ತೋರಿಸು. ನಿನ್ನ ಜಾತಿ ನಿಕೃಷ್ಟವಾದದ್ದು ನಿಜ, ಆದರೆ ನೀನು ಹೀಗೆ ಮಾಡಿದರೆ ನಿನ್ನಿಂದ ಬ್ರಾಹ್ಮಣರು ಕೂಡ ಪಾಠ ಕಲಿಯುತ್ತಾರೆ'' ಎಂದನು. ಇದೀಗ ಸ್ಥವಿರ ಆನಂದನ ಅಂತಃಕರಣದ ಗುಟ್ಟು ; ಅವನ ಪ್ರೀತಿ ಕಾರುಣ್ಯಗಳು 'ಸಾಗರಾಂತರ ಮೇಖಲ'. ಅವು ವಿಶಾಲ ಹೃದಯದ ಆಳದಿಂದ ಎದ್ದವು ; ಅಲ್ಲಿ ದೌರ್ಬಲ್ಯದ ಚಿಹ್ನೆಯಿಲ್ಲ.

ಆನಂದ ಭಗವಂತನಾದ ಬುದ್ಧನ ಪರಿಚಾರಕನಾದದ್ದು ಹೇಗೆಂದು ಹೇಳುತ್ತೇನೆ, ಕೇಳಿ. ಅರ್ಹತನ ಮೈಯಲ್ಲಿ ಬಲ ಇರುವವರೆಗೆ ತನ್ನ ಕೆಲಸಗಳೆಲ್ಲವನ್ನೂ ತಾನೇ ನೋಡಿಕೊಳ್ಳುತ್ತಿದ್ದ ; ಸಮಯ ಬಂದಂತೆಲ್ಲ ಯಾವನೊಬ್ಬ ಶಿಷ್ಯ ಅವನ ಭಿಕ್ಷಾಪಾತ್ರೆ ತರುವುದು, ಕಾಲು ತೊಳೆಯಲು ನೀರು ಕೊಡುವುದು ಮುಂತಾದ ಸಣ್ಣ ಪುಟ್ಟ ಕೆಲಸಗಳನ್ನು ಮಾಡುತ್ತಿದ್ದ. ಇಂಥ ಶಿಷ್ಯನೇ ಇಂಥ ಕೆಲಸ ಮಾಡುವುದು ಎಂಬ ನೇಮ ಏನಿರಲಿಲ್ಲ. ಆದರೆ, ದೇಹ, ನೋಡಿ, ವಯೋಧರ್ಮಿ ಶಕ್ತಿ ಎಂದೂ ಒಂದೇ ಸಮನಾಗಿರುತ್ತದೆಯೆ ? ಅರ್ಹತ ಮುದುಕನಾಗುತ್ತ ಬಂದಾಗ, ಭಿಕ್ಷುಗಳ ಎಡ್ಡಾದಿಡ್ಡಿ ಕೆಲಸಗಳಿಂದ ಅನನುಕೂಲವೇ ಹೆಚ್ಚಾಯಿತು. ಬುದ್ಧನಾದವನ ಮನಸ್ಸು ತಿಳಿದು ಕೆಲಸಮಾಡುವ ಯೋಗ್ಯತೆ ಎಲ್ಲರಿಗೂ ಉಂಟೆ ? ಒಮ್ಮೆ ಏನಾಯಿತೆಂದರೆ, ನಮ್ಮ ಜತೆಯವನು ಶ್ರೋಣಕ ಗೊತ್ತಲ್ಲ ನಿಮಗೆ, ಅವನು ಭಗವಂತನ ಭಿಕ್ಷಾಪಾತ್ರೆ, ಒಗೆದ ಬಟ್ಟೆ ತರುತ್ತಾ ಬೀದಿಯಲ್ಲಿ

ಬೀಳಿಸಿಬಿಟ್ಟ ; ಬೇರೆ ಯಾವುದೋ ಕೆಲಸದ ಅವಸರ ಅವನಿಗೆ. ಇನ್ನೊಮ್ಮೆ ಭದ್ರನೆಂಬ ಭಿಕ್ಷು ಭಗವಂತನ ಜತೆಯಲ್ಲಿ ಹೋಗುತ್ತಿದ್ದಾಗ, ಭಗವಂತ ಉತ್ತರಕ್ಕೆ ತಿರುಗಿದರೆ, ದಕ್ಷಿಣಕ್ಕೆ ಹೋಗೋಣವೆಂದ ; ತನ್ನ ಕೆಲಸದ ಅಗತ್ಯ ಅವನಿಗೆ. ಹೀಗೆಲ್ಲ ಆಗಿ ಭಗವಂತನಿಗೆ ತನ್ನ ಮನಸ್ಸಿಗೆ ಸಮಾಧಾನ ವಾಗುವಂತೆ ಕೆಲಸ ಮಾಡಲು ಆತಂಕಗಳು ಆಗಾಗ ಆಗುತ್ತಿದ್ದವು. ಒಮ್ಮೆ ನಾವೆಲ್ಲ ನೆರದಿದ್ದಾಗ ಭಗವಂತನೆಂದ — "ಭಿಕ್ಷುಗಳೆ, ನಾನೀಗ ಮುದುಕನಾಗುತ್ತಿದ್ದೇನೆ ; ದೇಹದಲ್ಲಿ ಬಲ ಕುಂದುತ್ತಿದೆ. ನನ್ನ ಕೆಲಸಗಳನ್ನು ನಾನೇ ನೋಡಿಕೊಳ್ಳಲು ದುಸ್ತರವಾಗುತ್ತಿದೆ. ಎಲ್ಲ ಭಿಕ್ಷುಗಳ ಮನಸ್ಸೂ ನನ್ನ ಮನಸ್ಸೂ ಒಂದೇ ಆಗಿರುತ್ತದೆಂದು ಯಾರು ಬಲ್ಲರು ? ಅದು ಕಾರಣ ನನ್ನ ಕೆಲಸಗಳನ್ನು ನನಗೆ ತೃಪ್ತಿಯಾಗುವಂತೆ ಮಾಡಬಲ್ಲ ಒಬ್ಬ ಭಿಕ್ಷುವನ್ನು ಹೇಳಿ ; ಅವನಿಗೆ ನನ್ನ ಪರಿಚಾರಿಕೆ ಮಾತ್ರ ಕಾರ್ಯವಾಗಿರಲಿ" ಎಂದ. ಅದು ಎಂಬತ್ತು ಜನ ಭಿಕ್ಷುಗಳು ಸೇರಿದ್ದ ಸಭೆ. ಬುದ್ಧನ ಪರಿಚಾರಿಕೆ ಮಾಡಲು ಯಾರು ಬಲ್ಲರು ? ಎಲ್ಲರೂ ನಾನು ತಾನೆಂದು ಮುಂದೆ ಬಂದರು. ಬಹುಶ್ರುತನಾದ, ಮೇಧಾವಿಯಾದ, ನಿಷ್ಠನಾದ ಮಹಾಕಾಶ್ಯಪ ಮುಂದೆ ಬಂದ ; ಸಂಬುದ್ಧ ಅವನು ಬೇಡವೆಂದಾಗ, ಮಹಾತ್ಮರಾದ ಶಾರಿಪುತ್ರ-ಮೌದ್ಗಲ್ಯಾಯನರು "ನಾವಿಬ್ಬರೂ ಇರುತ್ತೇವೆ" ಎಂದರು ; ಅವರನ್ನೂ ಬೇಡವೆಂದ. ಹೀಗೆ ಇನ್ನೂ ಅನೇಕ ಹೆಸರಾಂತ ಭಿಕ್ಷುಗಳೆಲ್ಲ ತಾವು ತಾವೆಂದು ಬೇಡಿಕೊಂಡರು. ಆ ಗುಂಪಿನಲ್ಲಿ ಮಾತನಾಡದೆ ಸುಮ್ಮನಿದ್ದವ ನೆಂದರೆ ಆನಂದನೊಬ್ಬ, ಅದು ಅರ್ಹತನ ದೃಷ್ಟಿಗೆ ಬೀಳದಿರಲಿಲ್ಲ. ಅರ್ಹತ ನಕ್ಕು "ಆನಂದನೇಕೆ ಮೌನ ?" ಎಂದಾಗ ಆನಂದ ಎದ್ದು "ಯಾರು ಪರಿಚಾರಿಕೆ ಮಾಡಲು ಯೋಗ್ಯರೆಂಬುದು ತಮಗೆ ತಿಳಿಯದೆ, ಭೊ ? ತಮಗೆ ಹೇಳುವ ಶಕ್ತಿ ಬೇರೆ ಯಾರಿಗಿದೆ ?" ಎಂದು ಉತ್ತರಕೊಟ್ಟ. ಅವನ ಮನಸ್ಸಿನಲ್ಲಿ "ಸಂಬುದ್ಧ ತಾನೇ ತಿಳಿದು ನನ್ನನ್ನು ನೇಮಿಸಿಕೊಂಡರೆ ಎಷ್ಟು ಚೆನ್ನು" ಎನಿಸುತ್ತಿತ್ತು. ಕಡೆಗೆ ಅರ್ಹತ "ಆನಂದನಿಗೆ ಬೇರೆಯವರು ಹೇಳ

ಕೆಲಸವಿಲ್ಲ ; ತನಗೆ ತೋರಿದರೆ ಅವನೇ ನನ್ನ ಪರಿಚಾರಕನಾಗಿರುತ್ತಾನೆ'' ಎಂದ. ಆನಂದನಿಗೆ ಪ್ರಿಯವಾದುದೂ ಅದೇ. ಆದರೂ ಮನಸ್ಸು ಸ್ವಲ್ಪ ಹಿಂದೆಗೆಯುತ್ತಿತ್ತು — ಲೋಕಪೂಜ್ಯನಾದ ಬುದ್ಧನ ಪರಿಚಾರಿಕೆ ಮಾಡುವುದು ಸಾಮಾನ್ಯವೆ ? ಆ ಯೋಗ್ಯತೆ ತನಗೆಲ್ಲಿ? ಇತರ ಭಿಕ್ಷುಗಳು ಏನಂದಾರು ? ಈ ಯೋಚನೆಗಳೆಲ್ಲ ಅವನ ತಲೆಗೆ ಬಂದು ''ಭದಂತನಾದ ಅರ್ಹತನು ಕೇಳಬೇಕು, ನಾನು ಕೇಳುವ ಕೆಲವು ನಿಬಂಧನೆಗಳನ್ನು ಒಪ್ಪಿದರೆ ಮಾತ್ರ ಪರಿಚಾರಕನಾಗಿದ್ದೇನು, ಇಲ್ಲವಾದರೆ ಇಲ್ಲ'' ಎಂದು ಹೇಳಿಯೇ ಬಿಟ್ಟ. ಭಗವಂತ ನಗುತ್ತ ''ಏನದು, ಆನಂದ ?'' ಎನ್ನಲಾಗಿ, ''ಭಂತೇ, ನಾಲ್ಕು ಜನರ ಬಾಯ ಹಿಡಿಯುವುದು ಕಷ್ಟ ; ನನ್ನ ಸ್ವಾರ್ಥ ಪ್ರಯೋಜನಕ್ಕಾಗಿ ಭಗವಂತನ ಪರಿಚಾರಕನಾದನೆಂದು ಜನ ಅಂದಾರು- ಅದು ನಿಮಿತ್ತ ನನಗೆ ಕೆಲವು ವಿಷಯಗಳನ್ನು ನಿಷೇಧಿಸಬೇಕು, ಕೆಲವು ವಿಷಯಗಳನ್ನು ಅನುಗ್ರಹಿಸಬೇಕು. ಯಾರಾದರೂ ಭಿಕ್ಷೆಗೆಂದು ಭಗವಂತನನ್ನು ಆಹ್ವಾನಿಸಿದಾಗ ಭಗವಂತನ ಪರಿಚಾರಕನೆಂದು ನನ್ನನ್ನೂ ಆ ಆಮಂತ್ರಣದಲ್ಲಿ ಸೇರಿಸಬಾರದು. ಭಗವಂತನಿಗೆ ವಸ್ತ್ರದಾನ, ಒಳ್ಳೆಯ ವಾಹನ, ವಸತಿಗಳನ್ನು ಕಲ್ಪಿಸಿದಾಗ ನನಗೆ ಅವುಗಳಲ್ಲಿ ಯಾವ ಭಾಗವೂ ಇರಬಾರದು. ಭಗವಂತನಿಗೆ ದೊರೆಯುವ ಸೌಕರ್ಯ-ಸನ್ಮಾನಗಳೆಲ್ಲ ತನಗೂ ದೊರೆಯಲೆಂದು ತಮ್ಮ ಸೇವೆ ಮಾಡುತ್ತೇನೆಂದು ಜನ ಅನ್ನದಿರಲಿ. ಆದರೆ ನನ್ನ ಮೂಲಕ ಏನಾದರೂ ಆಮಂತ್ರಣ ಬಂದರೆ ಅದನ್ನು ತಾವು ನಿರಾಕರಿಸಬಾರದು ; ತಮ್ಮ ದರ್ಶನಕ್ಕೆಂದು ನಾನು ಯಾರನ್ನಾದರೂ ಕರೆತಂದರೆ ಅದನ್ನು ನಿರಾಕರಿಸಬಾರದು ; ತಮ್ಮನ್ನು ಯಾವಾಗೆಂದರೆ ಆಗ ಭೇಟಿ ಮಾಡುವ ಸ್ವಾತಂತ್ರ್ಯ ನನಗಿರಬೇಕು. ಮತ್ತೆ ನಾನು ಕೇಳಿದಾಗಲೆಲ್ಲ ಧರ್ಮವನ್ನು ಬೋಧಿಸಬೇಕು — ಭಗವಂತನ ಪರಿಚಾರಕನಾಗಿದ್ದವನು ಅಜ್ಞ, ಮೂಢ ಎಂದು ಜನ ಅಂದಾರು'' ಎಂದ. ಭಗವಂತ ಎಲ್ಲಕ್ಕೂ ಹೂಗುಟ್ಟಿದ ಮೇಲೆ ಆನಂದನ ಪರಿಚಾರಿಕೆ ಶುರುವಾಯಿತು.

ಪರಿಚಾರಿಕೆಯೆಂದರೆ ಭಗವಂತನಿಗೆ ನೀರು ತಂದುಕೊಡುವುದು, ಹುಲ್ಲುಕಡ್ಡಿ ತಂದುಕೊಡುವುದು, ಅವನ ಕಾಲು ತೊಳೆಯುವುದು, ಅವನ ಪಾತ್ರೆ, ಚೀವರಗಳನ್ನು ಒಯ್ಯುವುದು, ಹೊರಗೆ ಹೊರಟಾಗ ಜೊತೆಯಲ್ಲಿರುವುದು, ಅವನ ಕೋಣೆ ಗುಡಿಸುವುದು, ಅವನ ದೌವಾರಿಕನಂತೆ ವರ್ತಿಸುವುದು— ಇಷ್ಟು ಕೆಲಸ. ಆಗ ಭಗವಂತನಿಗೆ ಐವತ್ತಾರು ವರ್ಷ ವಯಸ್ಸು. ಅಲ್ಲಿಂದ ಮುಂದೆ ಎಂಭತ್ತನೆಯ ವರ್ಷದಲ್ಲಿ ಭಗವಂತ ಪರಿನಿರ್ವಾಣ ಹೊಂದುವವರೆಗೆ ಆನಂದನ ಸೇವೆ ಅಖಂಡವಾಗಿ ನಡೆಯಿತು.

ಆನಂದನ ಹಿರಿಮೆಯನ್ನು ತೋರಿಸುವ ಸಣ್ಣಪುಟ್ಟ ಪ್ರಸಂಗಗಳು ಎಷ್ಟೋ ನಡೆದವು ; ಅದನ್ನೆಲ್ಲ ಹೇಳುತ್ತಾ ಹೋದರೆ ಮೂರು ದಿನ ಹಿಡಿದೀತು. ಆದರೆ ನನಗಿನ್ನೂ ಚೆನ್ನಾಗಿ ನೆನಪಿರುವ ಪ್ರಸಂಗವೆಂದರೆ ನಮ್ಮ ಸ್ವಾಮಿ ಪರಿನಿರ್ವಾಣ ಪಡೆದ ಸಮಯದ್ದು. ಆನಂದನೇ ಸಂತತವಾಗಿ ಭಗವಂತನ ಜೊತೆಯಲ್ಲಿದ್ದವನು ಎಂದೆನಲ್ಲ, ಭಗವಂತ ಪಾವಾದಲ್ಲಿದ್ದ (ಅಪಾಪಪುರೀ) ಚುಂದನೆಂಬ ಅಕ್ಕಸಾಲೆಯ ಮನೆಯ ಭಿಕ್ಷೆಯಲ್ಲಿ 'ಸೂಕರ ಮದ್ದವ' ತಿಂದುದೇ ನೆವವಾಗಿ ದೇಹಸ್ಥಿತಿ ತುಂಬ ಕೆಟ್ಟು ನಿರ್ಬಲನಾದ. ''ಬೇಗ ಕುಶೀನಗರಕ್ಕೆ ಹೋಗಿ ಸೇರುವ, ಬಾ ಆನಂದ'' ಎಂದು ಹೊರಟ ; ದಾರಿಯಲ್ಲಿ ಬಹಳ ಆಯಾಸವಾಗಿ ಆನಂದನಿಗೆ ನೀರು ತರಲು ಹೇಳಿದ. ಆನಂದ ಚೀವರವನ್ನು ಮಡಿಸಿ ಭಗವಂತನನ್ನು ಕೂಡಿಸಿ ಹತ್ತಿರದಲ್ಲೇ ಇದ್ದ ನದಿಯಿಂದ ನೀರು ತರಲು ಹೊರಟ. ಐನೂರು ಬಂಡಿಗಳು ಆ ನದಿಯನ್ನು ಆಗತಾನೆ ದಾಟಿದ್ದರಿಂದ ನೀರು ತುಂಬ ಕೆಸರಾಗಿತ್ತು ; ಅದು ಕಾರಣ ಆ ನೀರಿನಿಂದ ಕಾಲು ತೊಳೆದು ಬಾಯಿ ಮುಕ್ಕಳಿಸಿ ಭಗವಂತ ಆನಂದ ಇಬ್ಬರೂ ಸ್ವಲ್ಪ ದೂರದಲ್ಲಿದ್ದ ಹಿರಣ್ಯಾವತೀ ನದಿಯನ್ನು ಮುಟ್ಟಿದರು. ಅಲ್ಲಿ ಇಬ್ಬರೂ ಸ್ನಾನಮಾಡಿ ಕುಶೀನಗರಕ್ಕೆ

ಹೊರಟರು. ಮಾರ್ಗಮಧ್ಯದಲ್ಲಿ ಭಗವಂತನಿಗೆ ಬಲು ಬಳಲಿಕೆಯಾಗಿ ಮುಂದೆ ಹೋಗಲಾರದಾದಾಗ ಆನಂದ ಜೋಡಿಸಾಲ ವೃಕ್ಷಗಳ ನಡುವೆ ಉತ್ತರಕ್ಕೆ ತಲೆಮಾಡಿ ಭಗವಂತನಿಗೆ ಹಾಸಿಗೆ ಹಾಸಿದ ; ಭಗವಂತ ಅದರ ಮೇಲೆ ಮಲಗಿ ''ಆನಂದ, ನನ್ನ ಅವಸಾನ ಹತ್ತಿರವೇ ಬಂದಿದೆ'' ಎಂದು ಹೇಳಿ ಚಿತ್ತ ಸ್ಥೈರ್ಯ, ಶೀಲ, ಧರ್ಮ, ವಿನಯಗಳ ವಿಚಾರ ಆನಂದನೊಂದಿಗೆ ಸ್ವಲ್ಪ ಮಾತನಾಡಿದ. ಆನಂದ ಭಗವಂತನ ಮರಣಶಯ್ಯೆಯ ಬಳಿ ನಿಂತು ''ಅರ್ಹತನು ತೀರಿ ಹೋಗುವನೇ, ಸುಗತ ಗತಿಸಿ ಹೋಗುವನೇ, ಜಗತ್ತಿನ ಕಣ್ಣು ಇಂಗಿಹೋಗುವುದೇ'' ಎಂದು ಚಿಂತಿಸುತ್ತಾ ದುಃಖ ಉಕ್ಕಿ ಬಂದು ಅಲ್ಲಿ ನಿಲ್ಲಲಾರದೆ, ದೂರ ಹೋಗಿ ಅತಿಯಾಗಿ ಅಳುತ್ತ ನಿಂತಿದ್ದ. ''ಭಗವಂತ ಇಷ್ಟು ಬೇಗ ಹೋಗಿ ಬಿಡುವನೇ ! ನಾನಿನ್ನೂ ಅರ್ಹತತ್ವ ಮುಟ್ಟಿಯೇ ಇಲ್ಲವಲ್ಲ ! ನಾನಿನ್ನೂ ಕಲಿಯುವುದರಲ್ಲೇ ಇದ್ದೇನೆಯಲ್ಲ ! ನನ್ನಲ್ಲಿ ದಯೆಮಾಡಿದ ಭಗವಂತ ಇನ್ನು ಇರನೆ !'' ಎಂದು ಕಂಗಾಲಾಗಿದ್ದ. ಅಷ್ಟರಲ್ಲಿ ಭಗವಂತನಾದ ಬುದ್ಧ ಕಣ್ಣು ತೆಗೆದು ಆನಂದ ಹತ್ತಿರ ಇಲ್ಲದುದನ್ನು ಕಂಡು, ನಮ್ಮ ಕಡೆ ತಿರುಗಿ ''ಆನಂದನೆಲ್ಲಿ, ಭಿಕ್ಷುಗಳೆ ?'' ಎಂದು ಕೇಳಿದ. ನಮ್ಮಲ್ಲಿ ಒಬ್ಬ ಹೋಗಿ ಆನಂದನನ್ನು ಕರೆತಂದ. ಆನಂದ ಬಂದು ''ಲೋಕ ಕಗ್ಗತ್ತಲೆಯಲ್ಲಿ ಮುಳುಗಿದ್ದಾಗ ತಥಾಗತ ದೀಪದಂತೆ ಬಂದ, ಆ ದೀಪ ಇಷ್ಟು ಬೇಗ ನಂದಿಹೋಗುವುದೆ'' ಎಂದು ಗದ್ಗದ ಸ್ವರದಿಂದ, ಆರ್ತನಾಗಿ ನುಡಿದ. ಆಗ ಅರ್ಹತ ''ಅಳಬೇಡ ಆನಂದ. ಬಹುಕಾಲ ಪ್ರೀತಿ ಯಿಂದ ಭಕ್ತಿಯಿಂದ ನಿಯಮದಿಂದ ನನ್ನಲ್ಲಿ ವರ್ತಿಸಿರುವೆ ; ನಿನ್ನ ಒಳ್ಳೆಯತನಕ್ಕೆ ಮಿತಿಯಿಲ್ಲ, ಆನಂದ. ನಮಗೆ ಪ್ರಿಯವಾದುದೆಲ್ಲ ಎಂದಾದರೊಂದು ದಿನ ಹೋಗಲೇ ಬೇಕಷ್ಟೆ ? ಹುಟ್ಟಿದ ಮೇಲೆ ಸಾವು ಸಿದ್ಧವಲ್ಲವೆ ? ಎಲ್ಲ ವಸ್ತುಗಳ ಸ್ವಭಾವವೇ ಅದು, ಆನಂದ. ಧೈರ್ಯ ತಂದುಕೋ, ಆನಂದ, ನಿನ್ನ

ಶೀಲವನ್ನು ಜಾಗರೂಕನಾಗಿ ಕಾಪಾಡಿಕೋ,'' ಎಂದು ಸಮಾಧಾನ ಮಾಡಿದ. ಸ್ವಲ್ಪ ಹೊತ್ತಿನ ಮೇಲೆ ಸುಭದ್ರನೆಂಬುವನ ಜೊತೆ ಧರ್ಮದ ವಿಷಯ ಮಾತಾಡುತ್ತಿದ್ದು, ನೆರದವರಿಗೆಲ್ಲ ಧರ್ಮದ ವಿಚಾರ ಹೇಳಿ ಲೋಕಪೂಜ್ಯನಾದವನು, ತಥಾಗತನಾದವನು, ಪುರುಷದಮ್ಯಸಾರಥಿ ಯಾದವನು, ದೇವ ಮನುಷ್ಯರಿಗೆ ಶಾಸ್ತಾರನಾದವನು, ವಿದ್ಯಾಚರಣ ಸಂಪನ್ನನಾದವನು, ಧರ್ಮಸ್ವಾಮಿಯಾದವನು, ಗುಣಸಾಗರನಾದವನು, ಅರ್ಹತನಾದವನು, ಸಮ್ಯಕ್ಸಂಬುದ್ಧನಾದವನು ಪರಿನಿರ್ವಾಣ ಪಡೆದು ಇಲ್ಲವಾದ. ಎಲ್ಲ ಭಿಕ್ಷುಗಳೂ ದಿಕ್ಕೆಟ್ಟು ಕಂಗಾಲಾಗಿದ್ದರೂ, ಆನಂದನಂತೂ.... ಓ, ಅಂಥ ದಾರುಣವಾದ ದೃಶ್ಯ ನಾನು ನೋಡಿಯೇ ಇಲ್ಲ!

ಶವಸಂಸ್ಕಾರಗಳಿಗೆ ಏಳು ದಿನ ಹಿಡಿಯಿತು ; ಆಮೇಲೆ ಏಳು ದಿನ ಅವಶೇಷಗಳಿಗೆ ಸನ್ಮಾನ ಮಾಡುವುದರಲ್ಲಿ ಕಳೆಯಿತು. ಆಗ ಬುದ್ಧ ವಚನವನ್ನೆಲ್ಲ ಸಂಗ್ರಹಿಸಿ ಧರ್ಮಕ್ಕೆ ಒಂದು ರೂಪ ಕೊಡಲು ಪ್ರಯತ್ನ ನಡೆಯಿತು. ಆ ವರ್ಷಾಕಾಲವನ್ನು ರಾಜಗೃಹದಲ್ಲಿ ಕಳೆಯುವಾಗ ವಿದ್ಯಾಚರಣಸಂಪನ್ನರಾದ ಆಸ್ರವಗಳನ್ನು ದಾಟಿದ ಐನೂರು ಭಿಕ್ಷುಗಳನ್ನು ಆರಿಸಿ ಅವರೆಲ್ಲ ಮಹಾಕಾಶ್ಯಪನ ನೇತೃತ್ವದಲ್ಲಿ ಸಭೆ ಸೇರಿ ಧರ್ಮವನ್ನು ನಿರ್ಣಯಮಾಡುವುದೆಂದು ತೀರ್ಮಾನಿಸಿದರು. ಐನೂರು ಅರ್ಹತರಲ್ಲಿ ಒಬ್ಬ ಕಮ್ಮಿಯಿದ್ದ — ಆನಂದ ; ಏಕೆಂದರೆ ಆನಂದ ಇನ್ನೂ ಅರ್ಹತತ್ವ ಮುಟ್ಟಿರಲಿಲ್ಲ, ಆಗ ಕೆಲವು ಭಿಕ್ಷುಗಳು ಅವನ ಬಳಿ ಬಂದು "ಸ್ಥವಿರ ಆನಂದ, ಭಗವಂತನ ಮಾತುಗಳನ್ನು ಹೆಚ್ಚು ಕೇಳಿರುವುದೆಂದರೆ ನೀನೇ, ಅಲ್ಲದೆ ಭಗವಂತನ ನೆಚ್ಚಿನ ಶಿಷ್ಯ ನೀನು. ನೀನಿಲ್ಲದೆ ಧರ್ಮಸಂಗತಿ ನಡೆಯುವುದು ಹೇಗೆ ? ಎಲ್ಲ ಅರ್ಹತರು ಸೇರಿರುವ ಅಲ್ಲಿ ಅರ್ಹತನಲ್ಲದ ನೀನಿರುವುದು ಏನು ಚೆನ್ನು? ಬೇಗ ಪ್ರಯತ್ನಪಟ್ಟು ಅರ್ಹತನಾಗು, ಸ್ಥವಿರ ಆನಂದ ! ಸಭೆ ನಾಳೆ ಸೇರುವದಿದೆ'' ಎಂದರು. ಆನಂದನಿಗೆ ಈ ಮಾತು

ಕೇಳಿ ಅತಿದುಃಖವಾಯಿತು; ಏಕೆಂದರೆ ಅವನಿನ್ನೂ ಸಾಮಾನ್ಯ ಮನುಷ್ಯನಂತೆಯೇ ಇದ್ದ. ಆಗ ನಾನು ಅವನಿಗೆ ಸಮಾಧಾನಹೇಳಿ, ಅವನು ಅರ್ಹತತ್ವ ಪಡೆಯಬೇಕೆಂದು ಆಗ್ರಹಪೂರ್ವಕವಾಗಿ ಕೇಳಿಕೊಂಡೆ. ಅಲ್ಲಿಂದ ಆನಂದ ವೈಶಾಲಿಗೆ ಹೊರಟು ಅಲ್ಲಿ ಒಂದು ಮರದಡಿಯಲ್ಲಿ ಕೂತು, ನಿರ್ವಾಣದ ಕಡೆ ದೃಷ್ಟಿ ತಿರುಗಿಸಿ, ಧ್ಯಾನದಲ್ಲಿ ಮಗ್ನನಾದ. ಅವನ ಮನಸ್ಸು ರಾತ್ರಿ ಆರಂಭವಾಗುವ ವೇಳೆಗೆ ಪರಿಶುದ್ಧವಾಗಿತ್ತು, ಆಗ ವಿಹಾರದ ಬಾಗಿಲಲ್ಲಿ ಕಾಲು ತೊಳೆದುಕೊಂಡು ಒಳಗೇ ಹೋಗಿ, ಮಲಗಲು ಹವಣಿಸುತ್ತಿದ್ದಾಗ ತಟ್ಟನೆ ಪ್ರಜ್ಞೆ ಕಾಣಿಸಿತು, ಜಗತ್ತಿನ ನಿಜಸ್ಥಿತಿಯ ಅರಿವಾಯಿತು ; ಇನ್ನೇನು ಮಲಗಲು ತಲೆಯನ್ನು ಭೂಮಿಗೆ ಮುಟ್ಟಿಸಬೇಕು, ಓ, ಅವನ ಚಿತ್ತ ಪೂರ್ತಿ ವಿಮುಕ್ತವಾಗಿ, ಎಲ್ಲ ಆಸ್ರವಗಳೂ ಮರೆಯಾಗಿ, ಬೋಧಿಯ ಶಾಂತಿ ಲಬ್ಧವಾಗಿ ಅರ್ಹತನಾದ ; ಆಗ ಸರಿ ರಾತ್ರಿಯ ಸಮಯ.

ಮಾರನೆಯ ದಿನ ರಾಜಗೃಹದ ನ್ಯಗ್ರೋಧವನದಲ್ಲಿ ಸಭೆ ಸೇರಿತ್ತು; ಮಹಾಕಾಶ್ಯಪನೇ ಸ್ಥವಿರಾಸನದಲ್ಲಿ ಕೂತಿದ್ದ. ಆನಂದ ಧರ್ಮಾಸನದಲ್ಲಿ ಕೂತು "ಭಗವಂತ ಈ ಮಾತನ್ನು, ಇಲ್ಲಿ, ಈ ಸಮಯದಲ್ಲಿ ಹೇಳಿದ" ಎಂದು ಎಲ್ಲಾ ಸೂತ್ರಾಂಶಗಳನ್ನೂ ಪಠಿಸುತ್ತ ಬಂದ. ಉಳಿದ ಭಿಕ್ಷುಗಳಲ್ಲಿ ಆ ಸೂತ್ರಾಂಶಗಳನ್ನು ಕೇಳಿದ್ದವರು "ಹೌದು, ಈ ಸೂತ್ರಾಂಶವನ್ನು ನಾನೂ ಕೇಳಿದ್ದೇನೆ, ಆಗ ಹೀಗೆ ನಡೆಯಿತು" ಎಂದು ಅವುಗಳನ್ನು ಅನುಮೋದಿಸುತ್ತಿದ್ದರು. ಧರ್ಮದ ವಿಚಾರವಾಗಿ ಬುದ್ಧವಚನವನ್ನು ಸಂಗ್ರಹಿಸುವುದಕ್ಕೆ ಆನಂದ, ವಿನಯದ ವಿಚಾರ ಉಪಾಲಿ ನೇಮಿತರಾಗಿದ್ದರು. ಇದೇ ಪದ್ಧತಿಯಲ್ಲಿ— ಮಹಾಕಾಶ್ಯಪ ಪ್ರಶ್ನೆ ಕೇಳುವುದು ("ಈ ಮಾತನ್ನು ಭಗವಂತ ಎಲ್ಲಿ, ಯಾವಾಗ, ಏತಕ್ಕೆ ಹೇಳಿದ?") ; ಅದಕ್ಕೆ ಧರ್ಮಾಸನದಲ್ಲಿ ಕೂತ ಉಪಾಲಿಯೋ ಆನಂದನೋ ಉತ್ತರರೂಪವಾಗಿ, ಸೂತ್ರವನ್ನು

ಪಠಿಸುವುದು, ಉಳಿದ ಭಿಕ್ಷುಗಳು ಅದನ್ನು ಅನುಮೋದಿಸಿ ಆ ಸೂತ್ರವನ್ನು ಗಟ್ಟಿಯಾಗಿ ಹೇಳುವುದು — ಏಳು ವಾರ ನಡೆದು ಬುದ್ಧಶಾಸನವನ್ನು ಸ್ಥಿರಪಡಿಸಿದೆವು.

ಈ ಸಭೆ ಮುಗಿದ ಕೆಲಕಾಲದ ಮೇಲೆ ಮಹಾಕಾಶ್ಯಪ ತೀರಿ ಹೋದ ; ವಯಸ್ಸಿನಲ್ಲಿ, ಜ್ಞಾನದಲ್ಲಿ, ಶೀಲದಲ್ಲಿ, ವೃದ್ಧನಾದ ಅವನೇ ಭಗವಂತನಾದ ಮೇಲೆ ಆಚಾರ್ಯನೆಂದು ಹೆಸರಾಂತವಾದವನು. ತಾನು ಪರಿನಿರ್ವಾಣ ಪಡೆಯುವ ಮುನ್ನ ಆನಂದನನ್ನು ಕರೆದು ಅವನಿಗೆ ಸಂಘಾಧಿಪತ್ಯ ಕೊಟ್ಟು ರಾಜಗೃಹದ ಕುಕ್ಕುಟಪಾದ ಬೆಟ್ಟವನ್ನೇರಿ ಅಲ್ಲಿ ಧ್ಯಾನದಲ್ಲಿ ಕೂತು ಪರಿನಿರ್ವಾಣ ಪಡೆದ. ಸ್ಥವಿರ ಆನಂದ ರಾಜ ಅಜಾತಶತ್ರುವಿನೊಂದಿಗೆ ಕಾಶ್ಯಪನ ನಿರ್ವಾಣಭೂಮಿಗೆ ಹೋಗಿ ಅಂತ್ಯಕ್ರಿಯೆಗಳನ್ನು ಮಾಡಿ, ಅಲ್ಲಿ ಒಂದು ಚೈತ್ಯ ಕಟ್ಟಿಸಿದ.

ಆಮೇಲೆ ಆನಂದ ಸುಮಾರು ನಲವತ್ತು ವರ್ಷಗಳವರೆಗೆ ಧರ್ಮದ ದೀಪವನ್ನು ಹಿಡಿದು ಬುದ್ಧಶಾಸನವನ್ನು ಸ್ಥಿರಪಡಿಸಿ, ವೈಶಾಲಿಗೂ ವೃಜಿದೇಶಕ್ಕೂ ನಡುವೆ ಗಂಗಾ ನದಿಯಲ್ಲಿ ನಿಂತು ಪರಿನಿರ್ವಾಣ ಪಡೆದ. ಸ್ಥವಿರನ ದೇಹದ ಅವಶೇಷವನ್ನು ಎರಡು ಪಾಲು ಮಾಡಿ, ಒಂದು ಪಾಲನ್ನು ಲಿಚ್ಛಾವಿಗಳು ಕೊಂಡೊಯ್ದು ಪಾಟಲಿಪುತ್ರದಲ್ಲಿ ಚೈತ್ಯಕಟ್ಟಿಸಿದರು. ವೈಶಾಲಿಯ ಜನರೆಲ್ಲ ಅಂದರು— ''ಸ್ಥವಿರ ಆನಂದ ಮನುಷ್ಯಕೋಟಿಗೆ ಒಂದು ದೀಪ, ಎಲ್ಲರನ್ನೂ ಪ್ರೀತಿಸಿದವನು ಅವನು, ಜ್ಞಾನದ ರತ್ನದಿಂದ ತನ್ನ ದೇಹವೆಂಬ ಬೆಟ್ಟವನ್ನು ಮರೆಯಿಸಿದ್ದನು, ಸ್ಥವಿರ ಆನಂದ ನಿಜವಾಗಿ ಪರಾಕ್ರಮಿ.'' ಭಗವಂತನ ಪರಿನಿರ್ವಾಣದಷ್ಟೆ ಸ್ಥವಿರ ಆನಂದನ ಪರಿನಿರ್ವಾಣ ಜನಗಳಿಗೆ ದುಃಖಕರವಾಗಿತ್ತು, ಭಗವಂತನನ್ನು ಎಲ್ಲರೂ ಭಕ್ತಿಯಿಂದ ಸನ್ಮಾನಿಸುತ್ತಿದ್ದರೆ, ಸ್ಥವಿರ ಆನಂದನನ್ನು ಪ್ರೀತಿಯಿಂದ ಸನ್ಮಾನಿಸುತ್ತಿದ್ದರು. ಭಗವಂತ ಎಂದಂತೆ ''ಹೂವಿನ ರಾಶಿ ಒಂದರಿಂದ

ವಿವಿಧ ಮಾಲೆ ಮಾಡಲಾಗದೆ ? ಅಂತೆಯೇ ಹುಟ್ಟಿದ ಮನುಷ್ಯನಿಂದ ಆಗಬಹುದಾದ ಕುಶಲಗಳು ವಿವಿಧ!''

ಎಂದು ಆಯುಷ್ಮಂತನಾದ ಅನುರುದ್ಧ ಹೇಳಿ ಮುಗಿಸಿದಾಗ ಭಿಕ್ಷುಗಳು ''ಸಾಧು, ಸಾಧು, ಸ್ಥವಿರ ಅನುರುದ್ಧ ಈ ಸಂಜೆಯಲ್ಲಿ ಎಷ್ಟೋ ಕುಶಲಮೂಲಗಳು ಪಕ್ವವಾದವು'' ಎಂದರು.

◈ ◈ ◈

ತೌರೂರಿನಲ್ಲಿ ತಥಾಗತ *

ಕಪಿಲವಸ್ತುವಿನಲ್ಲೆಲ್ಲ ಅಂದು ಸಡಗರವೇ ಸಡಗರ. ಎಲ್ಲ ಬೀದಿಗಳಲ್ಲಿ ಎಳೆಯ ಮಾವಿನೆಲೆಗಳ ತೂಗು ಗೊಂಚಲಿನ ತೋರಣ, ಬಣ್ಣ ಬಣ್ಣದ ಗಂಧ ಪರಿಮಳದ ಹೂಮಾಲೆಗಳಿಂದ ಬಗ್ಗಿದ ಮಂಟಪಗಳ ಶೃಂಗಾರ, ನಗುಮೊಗದ ಜನರು ಒಗೆದು ಮಡಿಮಾಡಿದ ವಸ್ತ್ರಗಳನ್ನುಟ್ಟು ಗುಂಪುಗುಂಪಾಗಿ ಸೇರಿ ಅಭಿರಾಮವಾಗಿ ಸಂಭಾಷಿಸುತ್ತ ಏನನ್ನೋ ಉತ್ಸುಕತೆಯಿಂದ ಇದಿರು ನೋಡುತ್ತಿರುವ ರಮ್ಯದೃಶ್ಯ — ಅಂದಿನ ಬೆಳಗು ಯಾವುದೋ ಮಹತ್ವದ ಉತ್ಸವದ ಆಗಮನಕ್ಕೆ ಅಣಿ ಮಾಡುತ್ತಿದ್ದಂತಿತ್ತು. ಊರಬಾಗಿಲಲ್ಲಿ ನಗರಾಭಿಮಾನಿ ದೇವತೆಯ ಆವಾಸದ ಮುಂದೆ ಚೆಲುವು ರೂಪವೆತ್ತ ಮಂಟಪದಲ್ಲಿ ಊರಿನ ಪ್ರಮುಖ ಪ್ರಜೆಗಳು, ರಾಜಾಮಾತ್ಯ ವರ್ಗದವರು, ನಗರಚಾರ ಪರಿವರ್ಗ ದವರು, ಪುರೋಹಿತರು, ಹಿರಿಯರು ಕಲೆತು ಯಾರ ಬರವನ್ನೋ ನೋಡುತ್ತ ಉದ್ವಿಗ್ನರಾಗಿ ನಿಂತಿದ್ದರು. ಮುಂದೆ ಬರಲಿರುವ ಮಂಗಳದ ಮಂದಹಾಸ ಅವರ ಮುಖದಲ್ಲಿ ಮೂಡಿತ್ತು. ಅಲ್ಲಲ್ಲಿ ಸುಳಿಯುತ್ತಿದ್ದ ಚಂಚಲ ಹರಿಣಗಳು ಕೂಡ ಭಯಬಿಟ್ಟು ಪಾರ್ಥಿವ ಪ್ರತಿಮೆಗಳಂತೆ ನೆಲ ಹಿಡಿದು ನಿಂತಿದ್ದುವು ; ಗಗನಚಾರಿಗಳಾದ ವಿಹಂಗಮಗಳು ಕೆಳಗಿಳಿದು ಈ

---

* ಜೀವನ, ಸಂಪುಟ ೧೨, ಸಂಚಿಕೆ ೭

ಅಪೂರ್ವಸ್ವಾಗತದಲ್ಲಿ ಭಾಗಿಗಳಾಗಿದ್ದವು. ಮಂಟಪದಲ್ಲಿ ಉದ್ಬುದ್ಧವಾಗಿದ್ದ ಕುಸುಮಗಳೂ ಅತಿಥಿಯ ಆಗಮನದ ದಾರಿಯೆಡೆಗೆ ಮುಖಮಾಡಿ ಜೋತುಬಿದ್ದಿದ್ದವು. ಸ್ಥಾವರಜಂಗಮಗಳೆರಡೂ ಹರ್ಷದ ಉದಯದಲ್ಲಿ ಎಚ್ಚೆತ್ತು ಸದ್ಯದಲ್ಲೇ ಉತ್ಪನ್ನವಾಗುವ ಕುಶಲದಲ್ಲಿ ಲೀನವಾಗಿದ್ದವು. ಊರೊಳಗೆ ಅನಾಸಕ್ತರಾಗಿದ್ದವರೊಬ್ಬರಿರಲಿಲ್ಲ ; ಹೆಳವರು, ರೋಗಿಗಳು, ವೃದ್ಧರು ಕೂಡ ಪರತಂತ್ರರಾಗಿ ಬೀದಿಯ ಅಂಚಿನಲ್ಲಿ ಬೇರುಬಿಟ್ಟು ನಿಂತಿದ್ದರು. ಮಕ್ಕಳು ನಗುತ್ತ ಹಾರುತ್ತ ಆನಂದದ ಉದ್ರೇಕದಲ್ಲಿ ಮೈಮರೆತು ಸಂಭ್ರಮದಲ್ಲಿದ್ದರು. ಶಾಕ್ಯರಾಜನಾದ ಶುದ್ಧೋದನನ ಪ್ರಾಸಾದವಂತೂ ಸ್ವರ್ಗ ಧರೆಗಿಳಿದಂತಿತ್ತು ; ಅದರ ವೈಭವ ವರ್ಣನೆ ಮಿತಿ ಮೀರಿದ್ದು. ಸ್ತ್ರೀಪುರುಷ ಬಾಲಕರ ನಿರಂತರ ಓಡಾಟ, ಸಂಭ್ರಮಗಳ ಗೊಂದಲ ಬಿಟ್ಟು ದೊರೆ ತನ್ನ ಅಂತಃಪುರದ ಎತ್ತರದ ಶಿಖರ ಏರಿ ಅಂಜಲಿಬದ್ಧನಾಗಿ, ಮುಪ್ಪಿನಿಂದ ಬಳಲಿದ ಕಣ್ಣು ಓಡುವಷ್ಟು ದೂರವೂ ದೃಷ್ಟಿಸಿ, ತದೇಕ ಚಿತ್ತನಾಗಿ ಆಪ್ತಮಂತ್ರಿಮಂಡಲದ ಮಧ್ಯೆ ನಿಂತಿದ್ದಾನೆ. ದೇಹ ಅಲ್ಲಿದ್ದರೂ ದೊರೆಯ ಮನಸ್ಸು ಎಲ್ಲಿಯೋ ಯಾತ್ರೆಗಾಗಿ ದೂರ ಹೋಗಿದೆಯೆಂದೂ ಸ್ಫುಟವಾಗಿ ಕಾಣುತ್ತಿತ್ತು. ಯಾವ ಅಪೂರ್ವವಾದ ಉತ್ಸವಕ್ಕೆ ಈ ನಿರೀಕ್ಷಣೆ ?

ಜಗಚ್ಚಕ್ಷುವಾದ ಸೂರ್ಯ ಅರುಣನನ್ನು ಅನುಸರಿಸಿ ದೃಷ್ಟಿಗೆ ಬೀಳುವ ಸಮಯದಲ್ಲಿ ಊರಬಾಗಿಲ ಮುಂದೆ ನೆರದ ಮಂದಿ ಒಮ್ಮೆಲೆ 'ಹೋ' ಎಂದರು ; ಶಂಖ, ಮೃದಂಗ, ಭೇರಿ, ಕೊಂಬು ಇವುಗಳ ಮಂಗಳಸ್ವನ ಮುಗಿಲು ಮುಟ್ಟಿತು. ಇದು ಕೇಳಿ ಊರಜನರೆಲ್ಲ ಹರ್ಷದಿಂದ ಪುಲಕಿತರಾಗಿ, ರೋಮಾಂಚನದಿಂದ ಮುಗ್ಧರಾಗಿ, ಇರುಳೆಲ್ಲ ತವಕದಿಂದ ಕಾದಿದ್ದರ ಫಲ ಇದೀಗ ಹಸ್ತಗತವಾದಂತೆ ಹಿಗ್ಗಿದರು. ಜನದ ಗುಂಪಿನ ಗಿಜಿಗಿಜಿ ಕಪಿಲವಸ್ತುವಿನ ಸೀಮೆ ದಾಟಿ ದಿಕ್ಕುಗಳನ್ನು ಸೇರಿತು ;

ಪ್ರಾಸಾದದ ಮೇಲಿದ್ದ ದೊರೆಯ ಹೃದಯವನ್ನು ಮಿಡಿಯಿತು. ಜರೆಯಿಂದ ಜರ್ಜರಿತವಾದ ಕತ್ತು ಹೋಗುವಷ್ಟು ದೂರ ಮುಂದೆಮಾಡಿ, ದೊರೆ ಗೋಪನ ಶಲಾಕೆಗಳಿಂದ ಬಗ್ಗಿ, ನೋಡಿ ನೋಡಿ ಬಳಲಿದ ಕಣ್ಣುಗಳನ್ನು ಕೈಗಳಿಂದ ಹಿರಿದುಮಾಡಿ ನೋಡಿದ. ದೂರದಲ್ಲಿ, ಊರಿಗೆ ಸುಮಾರು ಮೂರು ನಾಲ್ಕು ಗಾವುದ ದೂರದಲ್ಲಿ ಒಂದು ಪರಿವ್ರಾಜಕರ ಗುಂಪು ಬರುತ್ತಿರುವುದು ಕಂಡಿತು. ದೊರೆ ಪಕ್ಕದಲ್ಲಿದ್ದ ಸುಮಂತ್ರನಾದ ವಜ್ರಸೇನನ ಭುಜಮುಟ್ಟಿ "ಏ ವಜ್ರಸೇನ, ಅದು ಯಾವ ಪರಿವ್ರಾಜಕರ ಗುಂಪು, ಹೇಳಬಲ್ಲೆಯಾ ? ವೈರಾಟೀ ಪುತ್ರನಾದ ಸಂಜಯನದೇ ? ಅಥವಾ ಕೇಶ ಕಂಬಳಿಯ ಅಜಿತನದೇ ? ಇಲ್ಲವೇ ನಿರ್ಗ್ರಂಥನಾದ ಜ್ಞಾತೃಪುತ್ರನದೇ ?.... ವಜ್ರಸೇನ, ಯಾವ ಗುಂಪದು ಹೇಳು. ನೀನು ಯೌವನವಂತ, ನಿನ್ನ ಕಣ್ಣು ಚೆನ್ನಾಗಿರಬೇಕು, ನೋಡು" ಎಂದನು. ಸುಮಂತ್ರನಾದ ವಜ್ರಸೇನ ಎವೆಯಿಕ್ಕದೆ ದೃಷ್ಟಿಸಿ ನೋಡಿ, "ಮಹಾರಾಜ, ಯಾವುದೋ ಆಜೀವಕರ ಸಂಘ ಇದ್ದಂತಿದೆ.... ಸುಮಾರು ಇಪ್ಪತ್ತು ಮೂವತ್ತು ಜನ ಇದ್ದಾರೆ.... ಕಾಷಾಯ ವಸ್ತ್ರ..... ಮುಂದೆ ಆಯುಷ್ಮಂತನಾದ ಶಾರಿಪುತ್ರ ಬರುತ್ತಿದ್ದಂತಿದೆ..... ಅಂದಮೇಲೆ ಸಂಜಯನ ಗಣವೇ ಇರಬೇಕು..... ಮಹಾರಾಜ, ಮಹಾರಾಜ, ಕುಶಲ ! ಓ ಓ ಅದು ನಮ್ಮ ಸರ್ವಾರ್ಥ ಸಿದ್ಧಭದ್ರನ ಸಂಘವೇ !" ಎಂದು ಕೈ ಕೈ ತಟ್ಟಿ ಆನಂದದಿಂದ ಮೈಮರೆತು ಕೂಗಿದ. ಅದನ್ನು ಕೇಳಿ ದೊರೆ ವಿಸ್ಮಿತನಾದ, ಮನಸ್ಸು ಅತಿ ಲಘುವಾಗಿ ಭ್ರಮಿಸಹತ್ತಿತು, ಮೈ ಜುಂ ಎಂದಿತು. ಸಂತೋಷದ ಭಾರದಿಂದ ಧ್ವನಿ ಅಡಗಿ ಸ್ತಬ್ಧನಾದ. ಸ್ವಲ್ಪ ಹೊತ್ತಾದಮೇಲೆ ಚೇತರಿಸಿಕೊಂಡು ಕಿರುದನಿ ಯಲ್ಲಿ, ನಂಬಿದರೂ ನಂಬದವನಂತೆ, "ವಜ್ರಸೇನ, ಪರಿಹಾಸ್ಯಮಾಡು ತ್ತಿಲ್ಲವಷ್ಟೆ ?....... ಅದು ನಮ್ಮ ಆಯುಷ್ಮಂತನಾದ ಸರ್ವಾರ್ಥಸಿದ್ಧ ನೆಂಬುದು ನಿಜವೆ ?" ಎಂದನು. ವಜ್ರಸೇನ ಚಾಚಿದ ಕೊರಳು ಕೊಂಕಿಸದೆ, ಅಲ್ಲಿ ನೆಟ್ಟ ದೃಷ್ಟಿ ತೆಗೆಯದೆ, "ಮಹಾರಾಜ, ಮಹತ್ವದ

ಮುಂದೆ ನಿಂತು ಪರಿಹಾಸ್ಯ ಮಾಡುವ ಕೆಚ್ಚೆದೆ ಯಾರಿಗುಂಟು ? ಅದೋ ಊರಬಾಗಿಲು ಬಂದು ಮುಟ್ಟಿದರು ! ಇನ್ನೇನು ಅರೆನಿಮಿಷದಲ್ಲಿ ಕಪಿಲ ವಸ್ತುವಿನ ಭಾಗ್ಯಲಕ್ಷ್ಮಿ ಹರ್ಷದಿಂದ ಉಬ್ಬಿಯಾಳು !.... ಧನ್ಯ ಸಿಂಹರವ ಮಾಣವಕ! ಲೋಕಪೂಜ್ಯ ನಾದವನನ್ನು ಮೊದಲು ಮುಟ್ಟಿ ಮಾತನಾಡಿಸಿದ ನೀನೇ ಧನ್ಯ !...." ಎಂದಾಗ ದೊರೆ ಅತಿಯಾದ ಆನಂದದಿಂದ ನಡುಗುತ್ತ ಸುಮಂತ್ರನ ಭುಜದ ಮೇಲೆ ಕೈಯೂರಿ ನಿಂತು, "ಮಗು ವಜ್ರಸೇನ, ನಮ್ಮ ಸರ್ವಾರ್ಥಸಿದ್ಧ ಬಂದನೇ ? ನಿಜವಾಗಿ ಬಂದನೇ ? ನೀನು ನೋಡಿದೆಯೊ ? ನನಗೆ ಕಾಣಿಸನಲ್ಲಾ, ವಜ್ರಸೇನ ! ನಾನು ಅಂಥ ಪಾಪಿಯೆ ? ಇಲ್ಲಿಗೇ ಬರುವನಷ್ಟೆ? ವಜ್ರಸೇನ, ಪರಿವ್ರಾಜಕರು ರಾಜರನ್ನು ನೋಡಿ ಮಾತಾಡುವರು ತಾನೆ ?" ಎಂದನು. ಸುರನದಿಯಾದ ಗಂಗೆ ತನ್ನ ವ್ರತವನ್ನು ಒಪ್ಪಿಕೊಂಡು ಧರೆಗಿಳಿದು ಬಂದಾಗ ಭಗೀರಥನೂ ಇಷ್ಟು ಆನಂದ ವಿಶಿಷ್ಟನಾಗಿರಲಿಕ್ಕಿಲ್ಲ.

ಇತ್ತ ಊರಬಾಗಿಲ ಬಳಿ ನಿಂತಿದ್ದ ಮಂದಿಗೆ ಜೀವನದ ಭಾಗ್ಯವೆಲ್ಲ ಒಮ್ಮೆಲೆ ಫಲಿಸಿ ಬಂದಷ್ಟು ತೃಪ್ತಿ. ಹನ್ನೆರಡು ವರ್ಷದ ಮೇಲೆ ವೀರಗಲಿಗಳಾದ ಶಾಕ್ಯವಂಶದ ಮುದ್ದು ಮಗ, ಜನರೆಲ್ಲರ ಪ್ರೀತಿಯ ಪುತ್ಥಳಿ, ಮತ್ತೆ ತೌರೂರಿಗೆ ಬರುವುದೆಂದರೆ ಏನು ಸಂಭ್ರಮ ತಾನೆ ಹೆಚ್ಚು? ನಡು ಹರೆಯದಲ್ಲಿ ಜೀವನದ ಸುಖಸಂಪತ್ತೆಲ್ಲ ಪಾಲಿಗೆ ಬಂದಿದ್ದಾಗ, ದೊಡ್ಡ ರಾಜ್ಯದ ಒಡೆತನ ಸನ್ನಿಹಿತವಾಗಿದ್ದಾಗ, ಸುಂದರಿಯಾದ ಮಾನಿನಿಯಾದ ಗುಣವತಿಯಾದ ಯಶೋಧರೆ ಮುದ್ದಿನ ಮಡದಿಯಾಗಿದ್ದಾಗ, ಜನ್ಮ ಜನ್ಮದ ಪುಣ್ಯರಾಶಿಯ ಫಲವೆಂಬಂತೆ ಶಿಶು ರಾಹುಲಭದ್ರ ಜನಿಸಿದ್ದಾಗ, ಜೀವನದಲ್ಲಿ ಬೇಸರ ಬಂದು, ಜನದ ದುಃಖಕ್ಕೆ ಮರುಗಿ ಮನೆಬಿಟ್ಟು ಆಷಾಢದ ಹುಣ್ಣಿಮೆಯ ನಡುರಾತ್ರಿ ಹೊರಹೊರಟ ಸಿದ್ಧಾರ್ಥ-ಸರ್ವಾರ್ಥಸಿದ್ಧ - ಇಂದು ಲೋಕಜ್ಯೇಷ್ಠನಾಗಿ, ಅರ್ಹತನಾಗಿ, ತಥಾಗತನಾಗಿ, ಸಮ್ಯಕ್ಸಂಬುದ್ಧನಾಗಿ ಬರುವನೆಂದರೆ ಯಾವ ಉತ್ಸವ ತಾನೆ

ಅದನ್ನು ಮೀರಿಸೀತು ? ಅಂದು ಸಿದ್ಧಾರ್ಥ ಮನೆಬಿಟ್ಟು ಹೊರಟು ಹೋದಂದು ದುಃಖಾಶ್ರುವಿನ ನದಿಯನ್ನೇ ಹರಿಸಿದ ಜನ ಇಂದು ಅದೇ ಸಿದ್ಧಾರ್ಥ ಜಿನನಾಗಿ ಬಂದನೆಂದರೆ ಜನದ ಆನಂದಾಶ್ರು ಅನಮಾ ನದಿಯನ್ನೇ ನಾಚಿಸಿತೆಂದರೆ ಏನಾಶ್ಚರ್ಯ ? ಆದರೆ ಇಂದು ಸಿದ್ಧಾರ್ಥ ಹಿಂದಿನ ಸಿದ್ಧಾರ್ಥ ಅಲ್ಲ ; ಆ ಪರಿವರ್ತನೆ ಜನಕ್ಕೆ ಸುಲಭವಾಗಿ ಅರ್ಥವಾಗಲಿಲ್ಲ. ಅಂದು ರಾಜಪುತ್ರನಾಗಿ ಚೀನಾಂಬರಗಳನ್ನು ತೊಟ್ಟು ರತ್ನಹಾರ ಭೂಷಿತನಾಗಿ, ಮರಕತಗಳ ಉಷ್ಣೀಷದಿಂದ ಪರಿಶೋಭಿತವಾದ ಶಿರೋಭಾರದಿಂದ, ನಗುನಗುತ್ತ ಸರಸ ಸಲ್ಲಾಪ ಮಾಡುತ್ತ, ವೈಭವ-ಮಾಧುರ್ಯಗಳ ಸಂಗಮ ಸ್ಥಾನವೆಂಬಂತೆ ಬೆಳಗುತ್ತಿದ್ದ ಸಿದ್ಧಾರ್ಥ ಈಗ ಸಾಮಾನ್ಯವಾಗಿ ಶ್ರವಣನಾಗಿ, ಮುಂಡನಾಗಿ, ಕಾಷಾಯ ತೊಟ್ಟು ಪರಿವ್ರಾಜಕನಾಗಿ ನಿಂತನೆಂದರೆ ಜನ ಬೆಚ್ಚಿದರು; ತಮ್ಮ ರಾಜ್ಯದ ಕೀರ್ತಿಯ ವೈಜಯಂತಿಯೆಂದು ಮುದ್ದಿಸಬೇಕೋ, ತಪಸ್ವಿಯೆಂದು ಗೌರವಿಸಬೇಕೋ ತಿಳಿಯದಾಯಿತು. ಎಲ್ಲರೂ ನೋಡುತ್ತ ನೋಡುತ್ತ ಗೊಂಬೆಗಳಂತೆ ನಿಂತುಬಿಟ್ಟರು. ಜಗತ್ತಿನ ಹಿಂದೆ ನಿಂತು ಜೀವನವನ್ನು ಆಡಿಸಿ ತೋರಿಸಿ ಅಡಗಿಸುವ ವಿಧಿಯೇ ಮುಂದೆ ನಿಂತು ನೋಡುತ್ತಿರುವಾಗ ಮುಗ್ಧರಾಗುವಂತೆ ಜನ ಆದರು. ಆದರೆ ಮುವ್ವತ್ತು ವರ್ಷ ಇನ್ನೂ ಮುಟ್ಟದ, ವೇದಪಾರಗನಾದ, ನೈಷ್ಠಿಕ ಬ್ರಹ್ಮಚರ್ಯದಲ್ಲಿ ಯೋದ್ಧನಾದ ಸಿಂಹರವ ಮಾಣವಕನೆಂಬ ಬ್ರಾಹ್ಮಣ ಮುಂದೆ ಬಂದು ಶ್ರಮಣನಾದ ಗೌತಮನ ಕಾಲುಮುಟ್ಟಿ ಪ್ರಣಾಮಮಾಡಿ, ''ಪೂಜ್ಯನಾದವನು ಅನುಗ್ರಹಿಸಬೇಕು, ನಮ್ಮ ಅಭ್ಯರ್ಥತೆಯನ್ನು ಮನ್ನಿಸಿ ನಗರ ಪ್ರವೇಶಮಾಡಬೇಕು'' ಎಂದು ಸನಮ್ರನಾಗಿ ನುಡಿದ. ಆಗ ಸಂಬುದ್ಧನಾದ ಸಿದ್ಧಾರ್ಥ ಶಾಂತವಾಗಿ ಔದಾರ್ಯದ ಮಂದಹಾಸ ಮೂಡಿದ ಮುಖದಿಂದ ಎಲ್ಲರ ಭೀತಿಯನ್ನೂ ಇಂಗಿಸುತ್ತಾ ''ಸಿಂಹರವ, ನಾನು ನಿನ್ನನ್ನು ಕಡೆಯ ಸಾರಿ ಕಂಡಂದು ಬೀದಿಯಲ್ಲಿ ಆಡುತ್ತಿದ್ದ

ಹುಡುಗನಾಗಿದ್ದೆಯಲ್ಲವೆ ? ಸತ್ಕುಲ ಪ್ರಸೂತನಾಗಿ ವಿನಯ ಸಂಪನ್ನನಾದ ನೀನು ಈಗ ಪಂಡಿತನಾಗಿ ಪೂಜ್ಯನಾಗಿರುವುದು ಆಶ್ಚರ್ಯವಲ್ಲದಿದ್ದರೂ, ನನಗೆ ಸತ್ಕಾರಯೋಗ್ಯನೆನಿ ಸುತ್ತಿಯೆ, ಸಾಧು, ಸಾಧು.... ನಮ್ಮ ನಗರ ಹೇಗಿದೆ? ಪ್ರಜೆಗಳ ಸಂಪದಭ್ಯುದಯ ಯಥಾಪೂರ್ವವಾಗಿದೆಯಷ್ಟೆ?.... ವಿಶ್ವಭದ್ರ, ಗುಣಪೂರ್ಣ, ವಿನೀತಭದ್ರ, ಗುರುಮುಖ— ಓ ಎಲ್ಲ ಬಂದಿದ್ದಾರೆ, ನೀವೆಲ್ಲ ಕುಶಲಿಗಳು ತಾನೆ ?.... ಊರ ಒಳಗೆ ಹೋಗುವಾ, ಶಾರಿಪುತ್ರ, ಮೌದ್ಗಲ್ಯಾಯನ, ಬನ್ನಿ'' ಎಂದು ಮಂಗಳವಾದ ದನಿಯಲ್ಲಿ ಅಂದಾಗ ಎಲ್ಲರೂ ಬೆಚ್ಚಿ ಸಂಬುದ್ಧನನ್ನು ಮುಂದೆ ಮಾಡಿಕೊಂಡು ನಗರಾಭಿಮುಖರಾದರು.

ಊರ ಜನರೆಲ್ಲ ಬೆಚ್ಚಿದರು ; ತಮ್ಮನ್ನು ತಾವು ನಂಬಲಾರರಾದರು. ತಾವು ರಾತ್ರಿಯೆಲ್ಲ ಕಾತರರಾಗಿ ಎದಿರು ನೋಡುತ್ತಿದ್ದ ರಾಜಪುತ್ರ ಸಿದ್ಧಾರ್ಥ ಸಾಮಾನ್ಯ ಶ್ರಮಣನಾಗಿ ಬಂದಿದ್ದಾನೆ— ರೂಪದಲ್ಲಿ ಅರಸುತನದ ಕಳೆಯಿಲ್ಲ, ದೇಹದಲ್ಲಿ ಭೋಗದ ಚಿಹ್ನೆಯಿಲ್ಲ, ನೋಟದಲ್ಲಿ ಜನ ಮೆಚ್ಚಿ ಕೊಳ್ಳುವ ಶ್ರೀಮಂತಿಗೆಯ ಹೆಮ್ಮೆಯಿಲ್ಲ. ಆದರೆ ಆ ದಿವ್ಯವಾದ ತೇಜಸ್ಸು, ಭವವನ್ನು ದಾಟಿ ಬುದ್ಧನಾದವನ ವರ್ಚಸ್ಸು 'ಸಬ್ಬಂ ವಿತಥಂ ಇದಂ' ಎಂದು ಅರಿತವನ ಸಮಾಧಾನ, ಮೇಲೆ ಕೆಳಗಿನ ಎಲ್ಲ ಬಂಧನಗಳನ್ನೂ ಮುರಿದು ಮುಕ್ತನಾದವನ ಶಾಂತಿ - ಇವು ಜನ ಕಾಣದೆ ಇರಲಿಲ್ಲ. ಊರ ಬೀದಿಯಲ್ಲಿ ನಡೆಯುತ್ತ ಬರುತ್ತ ಭಗವಂತನಾದ ಶಾಕ್ಯಮುನಿ ಜನರನ್ನೆಲ್ಲ ನೋಡುತ್ತ, ಮುಗುಳ್ನಗೆ ಬೀರುತ್ತ, ಔದಾರ್ಯದ ಮುದ್ರೆಯಿಂದ ಗಂಭೀರ ನಾಗಿ ಮುಂದೆ ಸಾಗುತ್ತಿದ್ದ. ಎರಡೂ ಪಕ್ಕಗಳಲ್ಲಿ ಕಿಕ್ಕಿರಿದು ನಿಂತಿದ್ದ ಜನ ಚಿತ್ರದಲ್ಲಿಟ್ಟ ರೇಖೆಗಳಂತೆ, ಜಡರಾಗಿ ನೆಲದಲ್ಲಿ ಬೇರುಬಿಟ್ಟವರಂತೆ ನಿಂತರು.

ಭಗವಂತನಾದವನು ಕಪಿಲವಸ್ತುವಿನ ಪಾರ್ಶ್ವದಲ್ಲಿದ್ದ ನ್ಯಗ್ರೋಧಾರಾಮವನ್ನು ತನ್ನ ಗಣವರ್ಗದವರೊಂದಿಗೆ ಪ್ರವೇಶಮಾಡಿ,

ಅಲ್ಲಿ ತುಸುಹೊತ್ತು ವಿಶ್ರಮಿಸಿಕೊಂಡ ಮೇಲೆ, ಸ್ನಾನಮಾಡಿ, ಒಗೆದ ವಸ್ತ್ರವನ್ನುಟ್ಟು, ಕೈಯಲ್ಲಿ ಪಾತ್ರೆ ಹಿಡಿದು ಭಿಕ್ಷೆಗೆಂದು ಕಪಿಲವಸ್ತುವಿನ ಬೀದಿಗಳಲ್ಲಿ ಹೊರಟ. ಜನ ಮತ್ತೊಮ್ಮೆ ಬೆಚ್ಚಿದರು. ಶಾಕ್ಯರ ಮನೆತನ ಸಿರಿಗೆ ತೌರೂರು ; ಅವರ ಮಾನ, ವೀರ್ಯ, ಸಾಹಸಗಳು ಎಲ್ಲರ ಮನೆಮಾತು. ಇಂಥ ವಂಶದಲ್ಲಿ ಹುಟ್ಟಿ , ರಾಜ್ಯದ ಸಾರ್ವಭೌಮನಾಗಲಿದ್ದ ರಾಜಪುತ್ರ ಸಿದ್ಧಾರ್ಥ ತನ್ನ ಪ್ರಜೆಗಳ ಮನೆಬಾಗಿಲಿಗೆ ಬಂದು ಸಾಮಾನ್ಯ ಭಿಕ್ಷುವಾಗಿ ಭಿಕ್ಷೆ ಬೇಡುವುದೆಂದರೆ ಜನ ಸಹಿಸಲಿಲ್ಲ. ತಮ್ಮ ಒಡೆಯನಿಗೇ ಭಿಕ್ಷಾದಾನ ಮಾಡುವ ಸಾಹಸ ಯಾರು ಮಾಡಿಯಾರು ? ತಮ್ಮ ರಾಜಭಕ್ತಿ ಪರೀಕ್ಷಿಸಲು ವಿಧಿ ಹೂಡಿರುವ ಕುತಂತ್ರ ಇದಿರಲಾರದೆ ? ಭಕ್ತಿಯಿಂದ ಭಿಕ್ಷೆ ಹಾಕಿದರೆ ಅದು ಅಪರಾಧವಾಗಲಾರದೆ ? ಕೋಪದ ಕಾರಣವಾಗದೆ ? ಅಥವಾ ಭಿಕ್ಷೆ ಹಾಕದಿದ್ದರೆ ಒಳಿತೆ ? ಅದರಿಂದ ಇಹದಲ್ಲಿ ಪರದಲ್ಲಿ ಅನರ್ಥ ವಾಗಲಾರದೆ ? ದೊರೆಮಗನಿಗೆ ಯಾರು ಎಂದು ಭಿಕ್ಷೆ ನೀಡಿದ್ದರು ? ಅದು ಜಗತ್ತಿನಲ್ಲಿ ಎಂದೂ ನಡೆಯದ ಪ್ರಸಂಗ. ಏನು ಮಾಡಿದರೆ ಏನೋ, ಯಾವುದು ಮಾಡುವುದು. ಯಾವುದು ಬಿಡುವುದು, ಎಂಥ ಧರ್ಮ ಸಂಕಟ, ಎಂದು ಜನ ಗುಜುಗುಜು ಗುಟ್ಟುತ್ತಿದ್ದರು. ಅಂತೂ ಸಿದ್ಧಾರ್ಥನಿಗೆ ಭಿಕ್ಷೆ ಹಾಕುವ ಧೈರ್ಯ ಯಾರೂ ಮಾಡಲಿಲ್ಲ.

ಮೌನವಾಗಿ, ನೆಲದ ಕಡೆ ದೃಷ್ಟಿಯಿಟ್ಟು ಸಂಬುದ್ಧ ತನ್ನ ಶಿಷ್ಯರಾದ ಶಾರಿಪುತ್ರ - ಮೌದ್ಗಲ್ಯಾಯನ, ಕೌಂಡಿನ್ಯ, ಯಶೋಭದ್ರರೊಂದಿಗೆ ಭಿಕ್ಷೆ ಬೇಡುತ್ತ ಊರ ಅರಮನೆಯ ತಲೆಬಾಗಿಲಿಗೂ ಬಂದ. ಮಗನನ್ನು ಮರಳಿ ನೋಡುವ ತೀವ್ರವಾದ ಆಸೆ ರಾಜ ಶುದ್ಧೋದನನ್ನು ಮಾಳಿಗೆಯ ಮೇಲೇ ನಿಲ್ಲಿಸಿತ್ತು. "ವಜ್ರಸೇನ, ಭದ್ರಕನಾದ ಸರ್ವಾರ್ಥಸಿದ್ಧ ಈಗ ಹೇಗಿದ್ದಾನೆ ? ಮುಂಚಿನಂತೆ ವಜ್ರಹಾರಗಳುಂಟು ತಾನೆ ? ಚೀನಾಂಬರ ಉಡುತ್ತಾನಷ್ಟೆ? ಉಷ್ಣೀಷದ ಮುತ್ತುಗಳು ಕಾಂತಿಮಯವಾಗಿವೆಯಲ್ಲ ? ನಡೆದು

ಬರುವನೆನ್ನುತ್ತೀಯೆ, ವಜ್ರಸೇನ, ಪಾದರಕ್ಷೆಗಳು ಉತ್ತಮ ವಾಗಿವೆಯಷ್ಟೆ? ಹೇಳು, ವಜ್ರಸೇನ, ಹೇಳು'' ಎಂದು ಬಾರಿಬಾರಿಗೆ ಕೇಳುತ್ತಿದ್ದನು. ಸಂಬುದ್ಧ ಸಂನ್ಯಾಸಿಯಾಗಿರುವ ಸಂಗತಿ ಅವನಿಗೆ ತಿಳಿದಿದ್ದರೂ, ಅವನಲ್ಲಿ ಶ್ರೀಮಂತಿಗೆಯ ಚಿಹ್ನೆ ಒಂದೂ ಇಲ್ಲವೆಂದು ತಿಳಿದಿದ್ದರೂ, ವೃದ್ಧನಾದ ದೊರೆ ಮೋಹದಿಂದ ಮೈಮರೆತು 'ರಾಜಪುತ್ರ ಸಿದ್ಧಾರ್ಥ'ನನ್ನು ಕಂಡೇನೆ ಎಂದು ನಿರೀಕ್ಷಿಸುತ್ತಿದ್ದ. ಇದೀಗ ಸಂಬುದ್ಧ ಅರಮನೆಯ ಮಹಾದ್ವಾರದ ಮುಂದೆ ಬಂದು ನಿಂತಾಗ, ವಜ್ರಸೇನ, ''ಮಹಾರಾಜ, ಇಂದು ಸಿದ್ಧಾರ್ಥ ಪರಿವ್ರಾಜಕ, ಅವನು ಕೆಳಗಿದ್ದಾಗ ನಾವು ಮೇಲಿರುವುದು ಸಂಪ್ರದಾಯ ಅಲ್ಲ, ಕೆಳಗಿಳಿದು ಸತ್ಕರಿಸುವಾ'' ಎಂದಾಗ ರಾಜ ಶುದ್ಧೋದನ ''ನಿಜ, ವಜ್ರಸೇನ, ನಿಜ, ಕೆಳಗಿಳಿಯುವ, ಹತ್ತಿರದ ನೋಟ ಎಂದೂ ಸೊಗಸು .... ವಜ್ರಸೇನ, ನಾನು ವೃದ್ಧ, ಅವನು ಬಾಲ ; ಆದರೆ ನಾನು ಗೃಹಸ್ಥ, ಅವನು ಪರಿವ್ರಾಜಕ ; ನಾನೇ ಅವನಿಗೆ ಅಭಿವಾದನೆ ಮಾಡಬೇಕಲ್ಲವೆ?'' ಎಂದು ಪ್ರಶ್ನಿಸಿದ. ವಜ್ರಸೇನ ಹೂಗುಟ್ಟಿದಾಗ ಇಬ್ಬರೂ ವಂಧಿ ಮಾಗಧ ಪರಿಜನರನ್ನು ಹಿಂದೆ ಮಾಡಿಕೊಂಡು ಕೆಳಗಿಳಿದು ಪ್ರಾಸಾದದ ಸಿಂಹದ್ವಾರದ ಬಳಿ ಬಂದು ನಿಂತರು. ರಾಜ ಶುದ್ಧೋದನ ತನ್ನ ಮುದ್ದಿನ ಮಗನನ್ನು ನೋಡಿ ಹನ್ನೆರಡು ವರ್ಷಗಳು ಸಾಗಿದ್ದವು ; ಅನುದಿನ ಅವನ ಗೀಳು ತಲೆಗೆ ಹಿಡಿದಿತ್ತು. ತನ್ನ ವಂಶದ ಸೌಭಾಗ್ಯ ಏಕತ್ರಸ್ಥಿತವಾಗಿ ಬಂದಿದೆಯೆಂದು ನೆನೆದಿದ್ದ ಸಿದ್ಧಾರ್ಥ ಹೀಗೆ ದರಿದ್ರನಂತೆ ಬಂದು ನಿಂತು ಬೇಡುತ್ತಿರುವುದನ್ನು ನೋಡಿ ದೊರೆ ಕಕ್ಕಾವಿಕ್ಕಿಯಾದ. ನೋಡಿಯೇನೆ, ನೋಡಿಯೇನೆ ಎಂದು ತವಕಪಡುತ್ತ ಕಂಗಾಲಾಗಿದ್ದ ಹೃದಯ ಈಗ ನೋಡಿ ನಡುಗಿತು. ಶುದ್ಧೋದನ ಸಿದ್ಧಾರ್ಥನ ತಂದೆಯಾದರೂ ಹಿರಿದಾದ ವಂಶದಲ್ಲಿ ಬಂದು, ದೊಡ್ಡ ರಾಜ್ಯದ ಅಧಿಪತಿಯಾಗಿ, ಅತಿ ಸಾಹಸಿಯೆಂದು ಹೆಸರಾಂತ ಕ್ಷತ್ರಿಯ. ತನ್ನ ಮಗ— ಒಬ್ಬನೇ ಮಗ — ಹೀಗೆ 'ಭ್ರಷ್ಟ'ನಾಗಿರುವುದು ನೋಡಿ ಶಾಕ್ಯವಂಶದವರಿಗೆ ನೈಜವಾದ ಗರ್ವ

ಕ್ರುದ್ಧವಾಯಿತು. ಮಗನೆಂಬ ಮೋಹ ಶಾಕ್ಯನೆಂಬ ಗರ್ವದ ಮುಂದೆ ಕರಗಿ ನೀರಾಯಿತು. ರಾಜ ವೃದ್ಧನಾದರೂ ಆವೇಶದ ಭರದಲ್ಲಿ ದಡದಡನೆ ಮೆಟ್ಟಿಲಿಳಿದು ಬಂದು ಮಗನ ಮುಂದೆ ನಿಂತು ಹಲ್ಲು ಕಡಿಯುತ್ತ— "ಸಿದ್ಧಾರ್ಥ, ಹೀಗೇಕೆ ನಮ್ಮ ವಂಶವನ್ನು ನಾಚಿಕೆಗೇಡು ಮಾಡುವೆ ? ನಿನಗೆ, ನಿನ್ನ ಕಡೆಯವರಿಗೆಲ್ಲ ಅನ್ನಹಾಕುವ ಶಕ್ತಿ ನನಗಿಲ್ಲವೆ ? ನಮ್ಮ ವಂಶದಲ್ಲಿ ಹೀಗೆ ಯಾರು ಭಿಕ್ಷೆ ಬೇಡಿದ್ದರು, ಸಿದ್ಧಾರ್ಥ?" ಎಂದು ಕೇಳಿದ. ಆದಕ್ಕೆ ಶಾಂತನಾಗಿ ಭಗವಂತ, "ನನ್ನ ವಂಶದಲ್ಲಿ ಎಲ್ಲರೂ ಹೀಗೆಯೇ ಭಿಕ್ಷೆ ಬೇಡಿದ್ದರು, ಮಹಾರಾಜ. ನಮ್ಮಲ್ಲಿ ಇದೇ ಸಂಪ್ರದಾಯ" ಎಂದಾಗ ದೊರೆಯ ಕೋಪ ಇನ್ನೂ ಹೆಚ್ಚಿ, "ನಮ್ಮ ವಂಶ ಶಾಕ್ಯರದೆಂಬುದನ್ನು ಮರೆತೆಯಾ, ಸಿದ್ಧಾರ್ಥ ?" ಎಂದು ಗರ್ಜಿಸಿದ. ಸಂಬುದ್ಧನಾದರೋ ಅದೇ ಶಾಂತವಾದ ಧೋರಣೆಯಲ್ಲಿ "ನನಗೆಲ್ಲಿಯ ವಂಶ, ಮಹಾರಾಜ ? ಮನೆಯಿಂದ ಹೊರಗಾಗಿ ಮನೆಯಿಲ್ಲದವನಾಗಿರುವೆನಲ್ಲವೆ ?" ಎಂದು ಉತ್ತರಕೊಟ್ಟ. ಶುದ್ಧೋದನ-ಸಂಬುದ್ಧರ ಸಂವಾದದ ನಡುವೆ ಬಾಯಿ ಹಾಕುವ ಧೈರ್ಯ ಯಾರಿಗುಂಟು ? ಆದರೂ ಎದೆಹಿಡಿದು ಸುಮಂತ್ರನಾದ ವಜ್ರಸೇನ ದೊರೆಗೆ ಸುಮ್ಮನಿರೆಂದು ನಮ್ರನಾಗಿ ಸನ್ನೆಯಿಂದ ತಿಳಿಸಿ ತಾನು ಸಂಬುದ್ಧನ ಕಾಲಿಗೆ ತಲೆಮುಟ್ಟಿಸಿ ಪ್ರಣಾಮ ಮಾಡಿದನು. ಇದು ನೋಡಿ ವೃದ್ಧನಾದ ರಾಜ ವಿಕ್ಷುಬ್ಧವಾದ ತನ್ನ ಮನಸ್ಸನ್ನು ಬಿಗಿಹಿಡಿದು ತಾನೂ ಭಗವಂತನಿಗೆ ಪ್ರಣಾಮಮಾಡಿ, "ಅರ್ಹತ, ನಿಮ್ಮ ಭೈಕ್ಷಕಾಲ ನನ್ನ ಮನೆಯಲ್ಲೇ ನಡೆಯಲಿ" ಎಂದಾಗ ಬುದ್ಧ ಮೌನಮುದ್ರೆಯಿಂದ ಅಂಗೀಕರಿಸಿದ. ರಾಜ ಬುದ್ಧನಿಗೆ ದಾರಿತೋರಿಸುತ್ತ ಪ್ರಾಸಾದದ ಒಳಗೆ ಕರೆತಂದ.

ಅಂದು ಅರಮನೆಯಲ್ಲಿ ಸಂಭ್ರಮ ಸಿದ್ಧಾರ್ಥ-ಯಶೋಧರೆಯರ ಮದುವೆ ಕಾಲದಲ್ಲಿ ನಡೆದ ಸಂಭ್ರಮವನ್ನು ನೆನಪಿಗೆ ತರುತ್ತಿತ್ತು. ಎಲ್ಲರಿಗೂ ಏನೋ ಉತ್ಸಾಹ ; ಅಡುಗೆಯವರು, ಪರಿಚಾರಕರು, ದಾಸೀ ಜನದವರು,

ಊಳಿಗದವರು, ಎಲ್ಲರೂ ಅತಿದೀರ್ಘಕಾಲ ಕಳೆದು ಬಂದ ಸಿದ್ಧಾರ್ಥಭದ್ರನ ಸೇವೆ ಮಾಡಲು ಉತ್ಸುಕರಾಗಿದ್ದರು. ಅವನು ಲೋಕವಿದನುತ್ತರನಾದ, ಪುರುಷ ದಮ್ಯಸಾರಥಿಯಾದ, ದೇವಮನುಷ್ಯರಿಗೆ ಶಾಸ್ತನಾದ, ಧರ್ಮಸ್ವಾಮಿಯಾದ, ಅರ್ಹತನಾದ ಸಮ್ಯಕ್ಸಂಬುದ್ಧನೆಂದಲ್ಲ ; ತಮ್ಮ ಒಡೆಯ ಸಿದ್ಧಾರ್ಥನ ಮುದ್ದಿನ ಮಗನೆಂದು. ತನ್ನ ಸೋದರಿ ಮಹಾಮಾಯೆ ಬಾಣಂತಿತನದಲ್ಲಿ ತೀರಿಹೋದಂದಿನಿಂದ ಸಿದ್ಧಾರ್ಥನನ್ನು ಎತ್ತಿ ಆಡಿಸಿದ ಮಹಾ ಪ್ರಜಾಪತೀ ಗೌತಮೀಗಂತೂ ಅತಿ ಸಡಗರ ; ಮಾತೃವಾತ್ಸಲ್ಯವಷ್ಟೇ ಅಲ್ಲ, ಸಿದ್ಧಾರ್ಥ ಗುಣಸಾಗರನೆಂದು ಅವಳಿಗೆ ತಿಳಿದಿದ್ದಂತೆ ಬೇರೆ ಯಾರಿಗೂ ತಿಳಿದಿರಲಿಲ್ಲ. ದೊರೆಗೆ ಮಾತ್ರ ಮನಸ್ಸು ದುಗುಡದಲ್ಲೇ ಇತ್ತು. ಮೊದಲಿಂದ ಸಾಂಸಾರಿಕ ಜೀವನದ ಮಧ್ಯದಲ್ಲೇ ಬೆಳೆದು ವೃದ್ಧನಾದ ಶುದ್ಧೋದನನಿಗೆ ಪರಿವ್ರಾಜಕರ ಜೀವನದ ಅರಿವೇ ಇರಲಿಲ್ಲ. 'ಜಗತ್ತಿನಲ್ಲಿ ಸುಖ ಇಲ್ಲದಿರುವುದು ಹೀನಪುಣ್ಯರಿಗೆ ಮಾತ್ರ ; ಅವರಿಗೆ ದಾರಿದ್ರ್ಯ-ದುಃಖಗಳು ಸ್ವಾಭಾವಸಿದ್ಧ. ಬೇಕೆಂದು ತಾವಾಗಿ ಯಾರೂ ಅವನ್ನು ಬಯಸುವುದಿಲ್ಲ' ಎಂಬುದು ಅವನ ಸಿದ್ಧಾಂತವಾಗಿ ತನ್ನ ಮಗ ಸಿದ್ಧಾರ್ಥ ಇದ್ದ ಸುಖಸಂಪತ್ತನ್ನೆಲ್ಲ ಬಿಟ್ಟು ಹೀಗೇಕೆ ದರಿದ್ರ ನಾಗಿದ್ದಾನೆಂದು ಅವನಿಗೆ ಅರ್ಥವಾಗಿರಲಿಲ್ಲ. ಅಂದು ಕಾಲಜ್ಞನಾದ ಅಸಿತ 'ಮುಂದೆ ಈ ಶಿಶು ಚಕ್ರವರ್ತಿಯಾಗುತ್ತಾನೆ' ಎಂದು ಹೇಳಿರಲಿಲ್ಲವೆ ? ಆ ಭವಿಷ್ಯವಾಣಿ ಅವನ ಹೃದಯದಲ್ಲಿ ಮಧುರಮನೋರಥಗಳ ಪರಂಪರೆ ಯನ್ನೇ ಎಬ್ಬಿಸಿತ್ತು ; ಮಹಾಭಿನಿಷ್ಕ್ರಮಣದ ದಿವಸದವರೆಗೆ ತಾನು ದೊಡ್ಡ ಚಕ್ರವರ್ತಿಯ ತಂದೆಯೆಂದೇ ಮನಸ್ಸಿನಲ್ಲಿ ಖಚಿತ ಮಾಡಿಕೊಂಡಿದ್ದ. ಅಂದಿನಿಂದ ಭಗ್ನಮನೋರಥನಾಗಿದ್ದ ರಾಜನಿಗೆ ಇಂದು ತನ್ನ ಕಾರಣದಿಂದಾದ ಸಿದ್ಧಾರ್ಥ ಇಕ್ಷ್ವಾಕುವಿನಿಂದ ಆರಬ್ಧವಾದ ಈ ಶಾಕ್ಯ ವಂಶದಲ್ಲಿ ಹುಟ್ಟಿ, ವೀರನಾದ ಶ್ರೀಮಂತನಾದ ಶುದ್ಧೋದನನ ಮಗನಾಗಿ ಹೀಗೆ ಬಡ ಬೈರಾಗಿಯಂತೆ ಅರೆ ಬರಿಮೈ ಆಗಿ ಭಿಕ್ಷಾಪಾತ್ರೆ ಹಿಡಿದು

ನಿಂತಿರುವುದು ಅವನ ಮನಸ್ಸಿನಲ್ಲಿ ಕುದಿಯುತ್ತಿತ್ತು. ಆದರೂ ಅನಿವಾರ್ಯವಾದ ಸ್ಥಿತಿಗೆ ಒಡಂಬಟ್ಟು ಮಗನೆಂಬ ಮೋಹವನ್ನು ಮುಂದೆ ಮಾಡಿಕೊಂಡು ಆತಿಥ್ಯದ ಉತ್ಸವದಲ್ಲಿ ಭಾಗಿಯಾದ.

ಸಿದ್ಧಾರ್ಥನ ವಧುವಾದ ಯಶೋಧರೆಯ ಮನಸ್ಸಿನ ಆಳ ಅರಿತವರೊಬ್ಬರಿರಲಿಲ್ಲ. ಅವಳು ತನ್ನ ಕೋಣೆ ಬಿಟ್ಟು ಕದಲಲಿಲ್ಲ.

ನಡುಹಗಲಿನ ಸುಮಾರಿಗೆ ಭೋಜನ ಮುಗಿದು, ಬಂದ ಮಂದಿಯೆಲ್ಲ ಆ ಮಾತು ಈ ಮಾತು ಆಡುತ್ತ ಕೂತಿದ್ದರು. ಶಾಕ್ಯವಂಶದ ಬಂಧುಗಳೆಲ್ಲ ಒಬ್ಬೊಬ್ಬರಾಗಿ ಮುಂದೆ ಬಂದು ತಥಾಗತನಿಗೆ ತಲೆಬಾಗಿ ನಿಲ್ಲುತ್ತಿದ್ದರು ; ತಥಾಗತ ಮುಗುಳ್ನಗೆ ನಗುತ್ತಾ ಕುಶಲ ಪ್ರಶ್ನೆ ಮಾಡಿ ಅವರಲ್ಲಿ ಸಂತೋಷ ಮೂಡಿಸುತ್ತಿದ್ದ. ಸಂಬುದ್ಧನೊಂದಿಗೆ ಮಾತನಾಡು ವುದೇ ದೊಡ್ಡ ಯೋಗ ; ಅದರಿಂದಲೇ ಎಷ್ಟೋ ಕುಶಲ ಮೂಲಗಳು ಉತ್ಪನ್ನವಾಗುತ್ತಿದ್ದವು. ಅವನ ಪಾರ್ಶ್ವದಲ್ಲೇ ಮಂಡಿಸಿದ್ದ ರಾಜ ಶುದ್ಧೋಧನನಿಗೂ ಸಹವಾಸದ ಫಲ ಎಂಬಂತೆ ಕ್ರಮಕ್ರಮವಾಗಿ ಭಗವಂತನಲ್ಲಿ ಭಕ್ತಿ ಬುದ್ಧಿ ಬೆಳೆಯಿತು, ಶಾಕ್ಯನೆಂಬ ಗರ್ವ ಮರೆಯಾಗಿ ವಿನಯ ಮೂಡಿತು. ಎದ್ದು ಮನಸಾರೆ ಪ್ರಣಾಮ ಮಾಡಿದ. ಮೇರುಪರ್ವತದ ಗರ್ವ ಹಿಮಾಲಯದ ಮುಂದೆ ಮುರಿಯಿತು.

ಭಗವಂತ ಬರುವ ಮುನ್ನ ದೊರೆ ತನ್ನ ಸೊಸೆ ಯಶೋಧರೆಯ ಅಂತಃಪುರಕ್ಕೆ ಹೋಗಿದ್ದ. ಯಶೋಧರೆ ತನ್ನ ಮಾವನನ್ನು ಆದರದಿಂದ ಕರೆದು, ಆಸನ ತೋರಿಸಿ ಬಂದ ಕಾರಣ ಕೇಳಿದಳು. ಶುದ್ಧೋಧನ, ''ಮಗಳೆ, ಇಂದು ನಮ್ಮ ಸಿದ್ಧಾರ್ಥಭದ್ರ ಇಲ್ಲಿಗೆ ಬರುವವನಿದ್ದಾನೆ, ನಿನಗೆ ತಿಳಿದಿದೆ ತಾನೆ ?'' ಎಂದು ಕೇಳಿದ. 'ಹೂಂ' ಎಂದಷ್ಟು ಅಂದ ಯಶೋಧರೆಯ ಮುಖದಲ್ಲಿ ಒಂದು ರೇಖೆ ಕೂಡ ಬದಲಾಗಲಿಲ್ಲ ; ಯಾವ ವಿಕಾರವೂ ಅಲ್ಲಿರಲಿಲ್ಲ, ಅನಾಸಕ್ತಿ ಎದ್ದು ಕಾಣುತ್ತಿತ್ತು, ಸಿದ್ಧಾರ್ಥನ

ಗೀಳು ಅವಳಲ್ಲಿ ಅಳಿಸಿಹೋಗಿದೆಯೆಂದು ಸ್ಪಷ್ಟವಾಗುತ್ತಿತ್ತು. ಅವಳ ಉತ್ಸಾಹದ ಮರುತ್ತರ ನಿರೀಕ್ಷಿಸುತ್ತಿದ್ದ ದೊರೆಗೆ ಈ ಶೂನ್ಯದ ಅನುಭವ ಅತಿವೇದನೆಯನ್ನು ತಂದಿತು. ನಿರಾಶನಾಗಿ ಶುದ್ಧೋದನ ಅವಳ ಮುಖವನ್ನು ಆಳವಾಗಿ ನೋಡುತ್ತ "ಏನು ಮಗಳೆ, ನೀನೂ ಬಂದು ಸತ್ಕರಿಸುವೆಯಷ್ಟೆ ?" ಎಂದನು. ಅದೇ ಪ್ರಶಾಂತವಾದ ಭಂಗಿಯಲ್ಲಿ ಯಶೋಧರೆ "ಇಲ್ಲ, ತಂದೆ" ಅಂದಷ್ಟು ಅಂದಳು. ಶುದ್ಧೋದನ ಈ ಉತ್ತರ ಬಂದೀತೆಂದು ಎಂದೂ ನಿರೀಕ್ಷಿಸಿರಲಿಲ್ಲ. ಸಿದ್ಧಾರ್ಥ ಮನೆ ಬಿಟ್ಟು ಹೊರಟುಹೋದಂದಿನಿಂದ ವೃದ್ಧನಾದ ದೊರೆಗೆ ಯಶೋಧರೆಯೇ ಸಿದ್ಧಾರ್ಥನಾಗಿದ್ದಳು ; ಇಬ್ಬರು ಸಮ ದುಃಖಿಗಳಾಗಿ, ತನ್ನ ದುಃಖ ನೋಡಿ ಎಲ್ಲಿ ಯಶೋಧರೆ ದುಃಖಿಸುವಳೋ ಎಂದು ದೊರೆ, ತಾನು ದುಃಖಿಸಿದರೆ ದೊರೆ ಏನು ದುಃಖಿಸುವನೋ ಎಂದು ಯಶೋಧರೆ, ಹೀಗೆ ಪರಸ್ಪರ ಸಾಂತ್ವನದಲ್ಲಿ ನಿರತರಾಗಿದ್ದರು. ದೊರೆಗ ಯಶೋಧರೆಯಲ್ಲಿ ಪುತ್ರವಾತ್ಸಲ್ಯ ಬೆಳೆದಿದ್ದಂತೆಯೇ ಆಕೆಗೆ ದೊರೆಯಲ್ಲಿ ಗಾಢವಾದ ಭಕ್ತಿ ಭಾವನೆ ಬೆಳೆದಿತ್ತು. ಹೀಗಿದ್ದರೂ ಈಗ ಯಶೋಧರೆ ಆಡಿದ ಮಾತು ಕೇಳಿ ದೊರೆ ಚಕಿತನಾದ ; ಅವಳ ಭಾವ ಅವನಿಗೆ ಅರ್ಥವಾಗಲಿಲ್ಲ. ಮಗನನ್ನು ನೋಡುವ ಆಸೆ ತನ್ನಲ್ಲಿ ಇಷ್ಟು ಹಿರಿದಾಗಿದ್ದಾಗ, ಗಂಡನನ್ನು ನೋಡುವ ಆಸೆ ತನ್ನ ಸೊಸೆಯಲ್ಲಿ ಇರಬಾರದೆ ? ಯಶೋಧರೆ ಸಾಮಾನ್ಯ ವಧುವಲ್ಲವೆಂದು ಅವನಿಗೆ ತಿಳಿಯದು. "ಮಗಳೇ, ಏನು ನಿನ್ನ ಮಾತು ? ಹಾಸ್ಯಕ್ಕೆ ಹೇಳುವೆಯಾ ? ಇಲ್ಲ, ಸಿದ್ಧಾರ್ಥನ ಮೇಲೆ ಕೋಪವೇ ? ಸಿದ್ಧಾರ್ಥ ಇಂದು ದಿವ್ಯವಾದ ಪಥದಲ್ಲಿ ಸಾಗುತ್ತಿದ್ದಾನೆ, ಲೋಕಪೂಜ್ಯನಾಗಿದ್ದಾನೆ. ನೀನು ಬರದಿದ್ದರೆ ಜನ ತಾನೆ ಏನಂದಾರು ?" ಎಂದು ದೊರೆ ಆರ್ದ್ರನೇತ್ರನಾಗಿ ನುಡಿದ. "ಅಪ್ಪ, ನಿನ್ನಲ್ಲಿ ನನಗೆ ಭಕ್ತಿ ಇದೆ. ಈವರೆಗೆ ನಿನ್ನ ಮಾತನ್ನು ಎಂದಾದರೂ ಅತಿಕ್ರಮಿಸಿ ನಡೆದುದುಂಟೆ ? ನಾನು ಎಂದೂ ನಡೆಯಲ್ಲಾಗಲಿ, ನುಡಿಯಲ್ಲಾಗಲಿ, ಮನದಲ್ಲಿಯಾಗಲಿ ನಿನ್ನಲ್ಲಿ

ಅಪಚಾರವೆಣಿಸಿಲ್ಲ. ಆದರೆ ಇಂದು ನೀನು ಮನ್ನಿಸಬೇಕು. ನಾನು ಬರಲಾರೆ, ಖಂಡಿತ ಬರಲಾರೆ'' ಎಂದು ಮುಖ ತಿರುಗಿಸಿಕೊಂಡು ''ನನ್ನಲ್ಲಿ ಸಿದ್ಧಾರ್ಥಭದ್ರನಿಗೆ ವಿಶ್ವಾಸ ಇದ್ದರೆ ಅವನೇ ಇಲ್ಲಿಗೆ ಬರುವ'' ಎಂದಳು. ದೊರೆಗೆ ಅರ್ಥವಾಗದೆ, ಮನಸ್ಸಿನಲ್ಲೆದ್ದ ಆವೇಗದ ಊರ್ಮಿ ಮಾಲೆಗಳನ್ನು ನಿಲ್ಲಿಸಲಾರದೆ, ತಲೆಯಾಡಿಸುತ್ತಾ ತುಸು ಹೊತ್ತು ನಿಂತಿದ್ದು ''ಬರುವೆನಮ್ಮಾ ಯಶೋಧರೆ'' ಎಂದು ಹೇಳಿ ಖಿನ್ನ ಮನಸ್ಸಿನಿಂದ ಹೊರ ಹೊರಟ.

ಈಗ ಕಪಿಲವಸ್ತುವಿನ ಜನರೆಲ್ಲ ಬಂದು ತನ್ನನ್ನು ಕಂಡು ಹೋಗುತ್ತಿದ್ದರೂ ಯಶೋಧರೆ ಒಬ್ಬಳು ಬರದಿದ್ದುದು ಸಂಬುದ್ಧನಿಗೆ ತಿಳಿಯದಿರಲಿಲ್ಲ. ಶುದ್ಧೋಧನನ ಕಡೆ ತಿರುಗಿ, ''ಮಹಾರಾಜ, ಯಶೋಧರೆಯೆಲ್ಲಿ ?'' ಎಂದು ಕೇಳಿದ. ರಾಜನಿಗೆ ಮೈ ಬೆವತು ಬಾಯಿಂದ ಮಾತೇ ಹೊರಡಲಿಲ್ಲ : ಯಶೋಧರೆಯ ಅಪರಾಧವನ್ನು ಭಗವಂತನ ಮುಂದೆ ಹೇಳುವುದೆ ? ಭಗವಂತ ಶಪಿಸನೆ ? ಉಪಚಾರದ ಮಾತಾಡಿ ಅದನ್ನು ಮರೆಸಲೆ ? ಶುದ್ಧೋಧನನಿಗೆ ಏನೂ ಹೊಳೆಯಲಿಲ್ಲ. ಮತ್ತೆ ಭಗವಂತ ''ಯಶೋಧರೆ ಸ್ವಸ್ಥವಾಗಿದ್ದಾಳೆ, ತಾನೆ ?'' ಎಂದು ಕೇಳಿದಾಗ ದೊರೆ ಉಪಾಯಗಾಣದೆ ನಡೆದುದನ್ನೆಲ್ಲ ಧೈರ್ಯಮಾಡಿ ಹೇಳಿಬಿಟ್ಟ. ಅದು ಕೇಳಿ ಸಂಬುದ್ಧ ''ಹೌದು, ನಾನೇ ಹೋಗಿ ನೋಡುವುದು ಉಚಿತ, ಬನ್ನಿ'' ಎಂದು ತನ್ನ ಶಿಷ್ಯರಾದ ಶಾರಿಪುತ್ರ—ಮೌದ್ಗಲ್ಯಾಯನರ ಜತೆಯಲ್ಲಿ ಎದ್ದ ; ದೊರೆ ದಾರಿ ತೋರಿಸುತ್ತ ಮುಂದೆ ನಡೆದ. ಅಂತಃಪುರದ ಹತ್ತಿರ ಬರುತ್ತಿದ್ದಾಗ ಸಂಬುದ್ಧ ಶಾರಿಪುತ್ರನ ಕಡೆ ತಿರುಗಿ, ''ಶಾರಿಪುತ್ರ, ಯಶೋಧರೆ ಅರಿಯದ ಹುಡುಗಿ ; ಪರಿವ್ರಾಜಕನಿಗೆ ಉಪಚಾರ ಮಾಡುವ ರೀತಿ ಅವಳಿಗೆ ತಿಳಿದಿರಲಿಕ್ಕಿಲ್ಲ. ನನ್ನನ್ನು ಕಂಡೊಡನೆ ಅವಳ ದುಃಖ ಉಕ್ಕಿ ಬಂದು ಉನ್ಮತ್ತಳಂತೆ ವರ್ತಿಸಬಹುದು ; ನೀವು

ಆದರ ವಿಚಾರ ತಲೆಗೆ ಹಚ್ಚಿಕೊಳ್ಳಬೇಕಾಗಿಲ್ಲ'' ಎಂದು ಹೇಳಿದ. ಕಾಮದ ಬೀಜ ಎಲ್ಲ ಸುಟ್ಟು ಬೂದಿಯಾಗಿ, ಆಸ್ರವಗಳಿಂದ ಮುಕ್ತನಾಗಿ ಜಿನನಾದವನಿಗೆ ಯಾತರ ಭಯ ? ಯಶೋಧರೆಯು ಕೋಣೆಯ ಬಾಗಿಲು ದಾಟುವುದೇ ತಡ, ಯಶೋಧರೆ ಉನ್ಮತ್ತಳಂತೆ ಎದ್ದು ಓಡಿ ಬಂದು ಮಂಡಿಯೂರಿ ನಿಂತು ಸಿದ್ಧಾರ್ಥನಾಗಿದ್ದವನ ಕಾಲುಗಳನ್ನು ಎದೆಗಪ್ಪಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು. ರಾಜ ಶುದ್ಧೋಧನನಿಗೆ ಈ ದೃಶ್ಯ ಸಹಿಸಲಶಕ್ಯವಾಗಿ ಕಣ್ಣಿಗೆ ಸೆರಗು ಬಡಿದು ಕಂಬನಿ ಸುರಿಸುತ್ತ ನಿಂತ ; ಸಂಸಾರದಲ್ಲೇ ಆಯುಸ್ಸು ಸವೆಸಿದ ಜೀವ ಅದು. ಭಿಕ್ಷುಗಳಾದ ಶಾರಿಪುತ್ರ—ಮೌದ್ಗಲ್ಯಾಯನರಿಗೆ ಇದು ಅತಿ ಸೋಜಿಗವೆನಿಸಿತು ; ಚಿಕ್ಕಂದಿನಲ್ಲೇ ಮನೆಯಿಂದ ಹೊರಗಾಗಿ ಸಂನ್ಯಾಸಿಗಳಾದ ಅವರಿಗೆ ಸಾಂಸಾರಿಕ ಜೀವನದ ರೀತಿಗಳ ಅರಿವೇ ಇರಲಿಲ್ಲ ; ಮುಗ್ಧರಾಗಿ ಶಿಲಾಮೂರ್ತಿಗಳಂತೆ ನಿಂತರು. ಭಗವಂತನಾದ ಬುದ್ಧ ಯಶೋಧರೆಯ ಕೈಹಿಡಿದು ಎತ್ತಿದ. ಸ್ವಲ್ಪ ಹೊತ್ತು ಎಲ್ಲರೂ ಮೌನ. ಇಂಥ ಅನುಭವ ಯಾರಿಗೂ ಎಂದೂ ಆಗಿರಲಿಲ್ಲ. ಪರಿಸ್ಥಿತಿಯ ತೀಕ್ಷ್ಣತೆ ತುಸು ಅಡಗಿದ ಮೇಲೆ ರಾಜ ''ಅರ್ಹತ, ಯಶೋಧರೆಯ ಗುಣ ಏನೆಂದು ಹೇಳಲಿ ? ಅವಳ ಮನೋದಾರ್ಢ್ಯ ಹೇಗೆ ಬಣ್ಣಿಸಲಿ ? ನೀನು ಉರುವಿಲ್ವದಲ್ಲಿ ತಪಶ್ಚರ್ಯೆ ಮಾಡುತ್ತಿದ್ದ ಸಮಯದಲ್ಲಿ ನಿನ್ನ ವಿಚಾರ ನಾವು ಆಗಾಗ ಕೇಳುತ್ತಿದ್ದೆವು. ಒಮ್ಮೆ ಯಾರೋ ಬಂದು, ಸಿದ್ಧಾರ್ಥ ಈಗ ಕಾಷಾಯವಸ್ತ್ರ ಮಾತ್ರ ಉಡುತ್ತಾನೆ. ಚೀನಾಂಬರ-ಆಭರಣಗಳೊಂದೂ ಇಲ್ಲ' ಎಂದು ಹೇಳಿದಾಗ ಯಶೋಧರೆ ತಾನೂ ತನ್ನ ರತ್ನಹಾರ ಮುಂತಾದುವನ್ನು ತೆಗೆದಿಟ್ಟು ಕಾಷಾಯವನ್ನೇ ಉಡತೊಡಗಿದಳು. ನೀನು ಮಂಚ, ಸುಪ್ಪತ್ತಿಗೆಗಳನ್ನೆಲ್ಲ ಬಿಟ್ಟು ಬರಿ ನೆಲದ ಮೇಲೆ ಮಲಗುತ್ತೀ ಎಂದು ತಿಳಿದಾಗ ತಾನೂ ಹಾಗೆಯೇ ಮಾಡತೊಡಗಿದಳು. ನೀನು ಒಪ್ಪತ್ತು ಮಾತ್ರ ಉಣುತ್ತೀ ಎಂದು ಕೇಳಿದಂದಿನಿಂದ ತಾನೂ ಒಪ್ಪತ್ತೇ ಉಣುತ್ತಿದ್ದಾಳೆ. ಹೀಗೆ

ನಿನ್ನ ಅನುವರ್ತಿನಿಯಾಗಿದ್ದಾಳೆ, ಅರ್ಹತ. ನಿಜವಾಗಿ ಇಂಥ ಸ್ತ್ರೀರತ್ನವನ್ನು ನಾನೆಲ್ಲೂ ನೋಡಿಲ್ಲ. ಅವಳ ಶ್ರದ್ಧೆ, ಸಾಹಸ, ವಿರಕ್ತಿ ಅಜೇಯವಾಗಿದೆ'' ಎಂದು ಪ್ರಶಂಸೆಯ ಮಾತುಗಳನ್ನಾಡಿದ. ಸಂಬುದ್ಧನಾದ ಗೌತಮ ನಸುನಗುತ್ತ ''ಮಹಾರಾಜ, ಯಶೋಧರೆ ಇಂಥ ಸ್ತ್ರೀಯೆಂದು ನನಗೆ ಮೊದಲಿಂದ ಗೊತ್ತು'' ಎಂದು ಹೇಳಿ ಯಶೋಧರೆಯ ಕಡೆಗೆ ತಿರುಗಿ, ''ಯಶೋದರೆ, ನಿನ್ನನ್ನು ಬಿಟ್ಟು ಮನೆಯಿಂದ ಹೊರಟಂದು ನಾನು ನಿನಗೆ ಹೇಳಿ ಹೊರಡಲಿಲ್ಲ ; ಅಂದು ನನ್ನ ಮನಸ್ಸು ವಿಕ್ಷುಬ್ಧವಾಗಿತ್ತು, ಭ್ರಮಿಸುತ್ತಿತ್ತು, ನಾನು ಏನು ಮಾಡುತ್ತಿರುವೆನೆಂಬ ಅರಿವು ನನಗೇ ಇರಲಿಲ್ಲ. ಮನೆಯಲ್ಲಿರುವುದು ಬ್ರಹ್ಮಚರ್ಯಕ್ಕೆ ತೊಡಕು, ಮನೆಯಿಲ್ಲದಿರುವುದು ಸ್ವಾತಂತ್ರ್ಯ ಎಂದು ನನಗೆ ಅನಿಸಿ ಅತಿಯಾದ ಸಂವೇಗ ಉಂಟಾಯಿತು ; ಈ ದುಃಖಗ್ರಸ್ತರಾದ ಜೀವಿಗಳನ್ನು ನೋಡಿ ನನಗೆ ಭಯ ಆಯಿತು.* ಆಮೇಲೆ ಬಹುಕಾಲ ನಿನ್ನ ಯೋಚನೆ ಬಿಡಲಾಗಲಿಲ್ಲ, ಯಶೋಧರೆ, 'ಇಂಥ ಗುಣವತಿಯಾದ ಯಶೋಧರೆಯನ್ನು ಬಿಟ್ಟು ನಾನು ಏನನ್ನು ತಾನೆ ಮಾಡುವೆ ?' ಎಂದು ನನಗೆ ಅನಿಸುತ್ತಿತ್ತು. ನಿನ್ನಲ್ಲಿ ನಾನು ಎಂದೂ ದೋಷ ಎಣಿಸಿಲ್ಲ, ಯಶೋಧರೆ ; ನಿಜವಾಗಿ ಹೇಳುತ್ತೇನೆ, ನಿನ್ನ ಸಹಾನುಭೂತಿ ಇರದಿದ್ದರೆ ನನಗೆ ಸಂಬೋಧಿ ಲಭಿಸುತ್ತಿತ್ತೊ ಇಲ್ಲವೊ ಅರಿಯೆ. ನಿನ್ನಿಂದ ಶ್ರದ್ಧೆಯ ಪಾಠ ಕಲಿತಿದ್ದೇನೆ ; ವ್ರತದ ಹಿರಿಮೆ ಅರಿತಿದ್ದೇನೆ, ನಿಷ್ಕಾಮ ಕರ್ಮದ ಗುಟ್ಟು ತಿಳಿದಿದ್ದೇನೆ. ಒಂದು ದೃಷ್ಟಿಯಿಂದ ನೀನೇ ನನ್ನ ಗುರು. ಆದರೆ ನಿನ್ನಿಂದ ಕಂಡ ದಾರಿ ತುಳಿದು ನಾನು ನೀನು ಕಾಣದುದನ್ನು ಕಂಡಿದ್ದೇನೆ. ಇಗೋ, ನಾನು ಕಂಡದುದನ್ನು ನಿನಗೆ ಹೇಳುತ್ತೇನೆ. ಅಂದುರಾತ್ರಿ ನಿನ್ನ ಮಗ್ಗುಲಲ್ಲಿ ಮಲಗಿದ್ದವನು ಎದ್ದು

---

* ಸುತ್ತನಿಪಾತದಲ್ಲಿ 'ಅತ್ತದಂಡಸುತ್ತ' (೪-೧೫) ಹಾಗೂ 'ಪಬ್ಬಜಾ ಸುತ್ತ' (೩-೨) ನೋಡಿರಿ.

ಹೊರಟಂದಿನಿಂದ ದೇಹದ ಸುಖವೆಂಬುದನ್ನೇ ನಾನರಿಯೆ. ಅತಿ ನಿಷ್ಠುರವಾದ ತಪಶ್ಚರ್ಯೆಗಳನ್ನು ಮಾಡಿ ದೇಹ ಒಣಗಿ ಕಡ್ಡಿಯಾಯಿತು, ಯಶೋಧರೆ. ಪಡಬಾರದ ಕಷ್ಟಪಟ್ಟರೂ ಜೀವಕ್ಕೆ ಬೇಕಾದ ತಂಪು ಸಿಗಲಿಲ್ಲ, ಹೃದಯದ ಬೆಂಕಿ ಆರಲಿಲ್ಲ. ಬೇಸತ್ತು ಒಂದು ದಿನ ಗಯಾದ ಬಳಿ ಮರವೊಂದರ ಬುಡದಲ್ಲಿ ಕೂತು, 'ಇಲ್ಲೇ ನನ್ನ ರಕ್ತವೆಲ್ಲ ಇಂಗಿ, ಚರ್ಮ ಒಣಗಿ, ಮೂಳೆ ಮುರಿದು ಪುಡಿಪುಡಿಯಾಗಿ ಬಿದ್ದರೂ ಸರಿ, ನನಗೆ ಇನ್ನೂ ಸಿಗದಿರುವುದು ಸಿಕ್ಕಲ್ಲದೆ ಇಲ್ಲಿಂದ ಏಳೆ' ಎಂದೇ ನಿಶ್ಚಯಿಸಿದೆ. ಹಾಗೆ ಅಲ್ಲಿ ಎಷ್ಟು ದಿನ ಕಳೆದನೋ ನನಗೆ ತಿಳಿಯದು. ಆದರೊಂದು ದಿನ ಇದ್ದಕ್ಕಿದ್ದಂತೆ 'ಅದು' ಕಾಣಿಸಿಕೊಂಡಿತು. ಹೃದಯದ ಬೇಗೆಯೆಲ್ಲ ಒಮ್ಮೆಲೆ ಆರಿ, ಸಂಶಯ ಭಯ ತವಕ ಎಲ್ಲವೂ ಅಳಿದು, ಮನಸ್ಸು ಪರಿಶುದ್ಧವಾಗಿ, ನನ್ನ ಇಡಿಯ ಜೀವನದಲ್ಲಿ ಹಿಂದೆಂದೂ ಕಾಣದಂಥ ಶಾಂತಿಯ ಬೆಳಕು ಕಾಣಿಸಿಕೊಂಡಿತು. ನನಗೆ ಆಗ ಆದ ಆನಂದ ಅನಿರ್ವಚನೀಯ, ಯಶೋಧರೆ, ನನ್ನ ನಾವೆಯಲ್ಲಿ ನಾನು ಈ ಸಂಸಾರದ ಮಹಾ ಸಮುದ್ರವನ್ನು ಹಾದು ದೂರ ತೀರವನ್ನು ಸೇರಿದ್ದೆ. ಹಾವು ಜೀರ್ಣವಾದ ಚರ್ಮವನ್ನು ಹರಿದು ಹೊರಗೆ ಬರುವಂತೆ ನಾನು ಈ ಭೂಮಿಯ ಜೀವನವನ್ನು ಹರಿದು ಹೊರಗೆ ಬಂದಿದ್ದೆ, ಮೇಲೆ ಕೆಳಗೆ ಒಂದು ಕಟ್ಟೂ ನನಗೆ ಕಾಣಲಿಲ್ಲ. ಪ್ರಮತ್ತ ಬಂಧುವಾದ, ಪಾಪಿಯಾದ ಮಾರನನ್ನು ಗೆದ್ದು ಜಿನನಾದೆ. ತಿಳಿಯಬೇಕಾದುದನ್ನು ತಿಳಿದು, ಭಾವಿಸಬೇಕಾದುದನ್ನು ಭಾವಿಸಿ, ಬಿಡಬೇಕಾಗಿದ್ದುದನ್ನು ಬಿಟ್ಟು ಬುದ್ಧನಾದೆ. ಬ್ರಹ್ಮಚರ್ಯವನ್ನು ಕಳೆದು ಬ್ರಹ್ಮಭೂತನಾದೆ. ಬುಡಕಿತ್ತ ತಾಳೆಯ ಮರದಂತೆ ನನಗೆ ಪುನರುತ್ಪತ್ತಿ ಇಲ್ಲ. ರಾಗ-ಮೋಹ-ದ್ವೇಷಗಳನ್ನು ಕಿತ್ತೊಗೆದು ಸಂಸಾರದ ಗೋಜನ್ನು ಬಿಡಿಸಿದ್ದೇನೆ. ತೃಷ್ಣೆಯೆಂಬ ಮಂಗವೇ ಈ ಜಗತ್ತಿನ ದುಃಖಾದಿ ಅನರ್ಥ ಪರಂಪರೆಗಳಿಗೆಲ್ಲ ಮೂಲಹೇತು ; ಇದರ ದೆಸೆಯಿಂದ ಚಿತ್ತ ವಿಲಿವಿಲಿ ಒದ್ದಾಡುತ್ತಿರುತ್ತದೆ. ಈ ತೃಷ್ಣೆ ಕ್ಷಯವಾದಂದು ಮನಸ್ಸಿಗೆ ಶಾಂತಿ

ಸಿಗುತ್ತದೆ, ನಿರ್ವಾಣ ಲಭಿಸುತ್ತದೆ. ದುಃಖ ಹೇಗೆ ಆಗುತ್ತದೆಂಬುದನ್ನು ಕಂಡೆ, ಯಶೋಧರೆ, ಆ ದುಃಖದ ನಿರೋಧ ಸಾಧ್ಯವೆಂದು ಅರಿತೆ, ಹಾಗೂ ಆ ನಿರೋಧದ ದಾರಿಯನ್ನೂ ಕಂಡುಹಿಡಿದೆ. ಈ ದಾರಿಯಲ್ಲಿ ನಡೆದು ಸಂಸಾರದ ಕತ್ತಲೆ ದಾಟಿ ನಿರ್ವಾಣದ ದೀಪ ನಂಬಿದ್ದೇನೆ, ಯಶೋಧರೆ. ಈ ಜಗತ್ತಿನ ಯಾವ ದೋಷಗಳೂ ಮುಟ್ಟದಂತೆ ನನಗೆ ನಾನೇ ಒಂದು ದ್ವೀಪವನ್ನು ಮಾಡಿಕೊಂಡಿದ್ದೇನೆ. ಹೀಗೆ, ಯಶೋಧರೆ, ನಿನ್ನ ಭುಜಗಳಿಂದ ಬದ್ಧನಾಗಿದ್ದ ನಾನು ಈಗ ಪ್ರಪಂಚದ ಎಲ್ಲ ಬಂಧನಗಳಿಂದ ಮುಕ್ತನಾಗಿರುವುದು ನಿನಗೆ ಸಮಾಧಾನ ವಲ್ಲವೆ ?'' ಎಂದು ಹೇಳಿ ಯಶೋಧರೆಯ ಮುಖ ನೋಡಿದ. ತನ್ನ ಮಾತು ಬಾಲೆ ಯಾದ ಯಶೋಧರೆಗೆ ಅರ್ಥವಾದೀತೆಂದು ತಥಾಗತ ನೆನೆದಿರಲಿಲ್ಲ ; ಆದರೆ ಶ್ರದ್ಧೆಯ ಬೀಜ ಬೆಳೆಯತೊಡಗಿದೆಯೆಂಬ ಅರಿವಾಯಿತು. ರಾಜ ಶುದ್ಧೋದನ ಈ ವೇಳೆಗಾಗಲೇ ಪರಮಾರ್ಥದ ದಾರಿಯಲ್ಲಿ ಮುಂದೆ ಹೋಗಿದ್ದ. ಭಿಕ್ಷುಗಳಾದ ಶಾರಿಪುತ್ರ-ಮೌದ್ಗಲ್ಯಾಯನರ ಸಂಸ್ಕೃತಿ ದೃಢ ವಾಯಿತು. ಮತ್ತೆ ಸ್ವಲ್ಪ ಹೊತ್ತು ಎಲ್ಲರೂ ಮೌನ. ಅರ್ಹತನಾದ ಬುದ್ಧ ''ನಾನು ಹೋಗಿಬರುವೆ, ಯಶೋಧರೆ'' ಎಂದು ಹೇಳಿ ಹೊರಡಲನು ವಾದಾಗ ಯಶೋಧರೆ, ''ಸಂಬುದ್ಧನಲ್ಲಿ, ಅವನ ಧರ್ಮದಲ್ಲಿ ಶರಣು ಹೊಕ್ಕಿದ್ದೇನೆ. ಸಂಸಾರ ಹೇಯವಾದದ್ದೆಂದು ತಿಳಿದು ನಿರ್ವಾಣದ ಕಡೆ ಮುಖ ಮಾಡಿದ್ದೇನೆ. ಭಗವಂತನ ಆಶೀರ್ವಾದದ ಬಲದಿಂದ ನನ್ನ ಸಾಧನೆ ಫಲಿಸಲಿ'' ಎಂದು ಅಂಜಲಿಬದ್ಧಳಾಗಿ ಕೆಳನೆಟ್ಟ ದೃಷ್ಟಿಯಲ್ಲಿ ಅಂದಳು. ಸಂಬುದ್ಧನಾದ ಗೌತಮನ ಮುಖದಲ್ಲಿ ಗಂಭೀರವಾದ ಮಂದಹಾಸ ಮೂಡಿ ಮರೆಯಾಯಿತು.

◈ ◈ ◈

ಹಠಮಾರಿ ದೇವಲ *

ಒಮ್ಮೆ ಹಿಮಾಲಯದ ಒಬ್ಬ ಸನ್ಯಾಸಿ ದೇವಲ ಎನ್ನುವನು ವರ್ಷಾವಾಸ (ಮಳೆಗಾಲ)ವನ್ನು ಕಾಶಿಯಲ್ಲಿ ಕಳೆಯೋಣವೆಂದು ಹಿಮಾಲಯವನ್ನು ಬಿಟ್ಟು ಕಾಶೀ ಪಟ್ಟಣವನ್ನು ಸೇರಿದ. ಜಾಗ ಹೊಸದು ; ಎಲ್ಲಿ ಇಳಿಯಬೇಕೆಂದು ತೋರದೆ ಊರಬಾಗಲಲ್ಲಿ ಆಡುತ್ತಿದ್ದ ಇಬ್ಬರು ಹುಡುಗರನ್ನು ಕರೆದು ''ಅಪ್ಪಾ, ಸಾಧುಗಳು ಬಂದರೆ ಈ ಊರಲ್ಲಿ ಸಾಧಾರಣ ಎಲ್ಲಿ ತಂಗುವರು ?'' ಎಂದು ಕೇಳಿದನು. ''ಸ್ವಾಮೀ, ಇಲ್ಲಿಯೇ ಭಗ್ಗವ ಎಂಬ ಮಡಕೆ ಮಾಡುವವನಿದ್ದಾನೆ ; ಅವನ ಬಳಿ ತಂಗುತ್ತಾರೆ'' ಎಂದು ಅವರು ಹೇಳಲಾಗಿ ದೇವಲ ಆ ಭಗ್ಗವನ ಮನೆಗೆ ಹೋಗಿ, ''ಭಗ್ಗವ, ನಿನ್ನ ಮನೆಯಲ್ಲಿ ಒಂದು ರಾತ್ರಿ ಕಳೆಯಲು ಸ್ಥಳ ಕೊಡುವೆಯಾ ?'' ಎಂದು ಕೇಳಿದನು. ಅದಕ್ಕವನು, ''ದಯಮಾಡಬೇಕು, ಗುರುಗಳೇ, ಆಗೋ ಆ ಹಜಾರದಲ್ಲಿ ಏನೂ ಕೆಲಸ ಇಲ್ಲ, ಅಲ್ಲಿ ತಾವು ಅವಶ್ಯ ತಂಗಬಹುದು'' ಎಂದನು.

ದೇವಲ ಅಂತೆಯೇ ಆ ಹಜಾರಕ್ಕೆ ಹೋಗಿ ತನ್ನ ಕೃಷ್ಣಾಜಿನ ಹಾಸಿ ಕುಳಿತು ವಿಶ್ರಮಿಸಿಕೊಳ್ಳುತ್ತಿರುವಲ್ಲಿ, ನಾರದ ಎಂಬ ಮತ್ತೊಬ್ಬ ಸನ್ಯಾಸಿ ಹಿಮಾಲಯದಿಂದಲೇ ಬಂದವನು ಆ ಭಗ್ಗವನ ಮನೆಗೇ ಬಂದು ಆ ರಾತ್ರಿ ತಂಗಲು ಜಾಗ ಕೇಳಿದ. ಭಗ್ಗವ ತನ್ನ ಮನಸ್ಸಿನಲ್ಲಿ 'ಈಗಾಗಲೇ ಇಲ್ಲಿ ಒಬ್ಬ

---

* ಜೀವನ, ಸಂಪುಟ ೧೩, ಸಂಚಿಕೆ ೩ ; ಪುಟ ೮೨

ಸಾಧುಗಳು ಇದ್ದಾರೆ ; ಅವರು ಈ ಸಾಧುಗಳ ಜತೆ ಒಟ್ಟಿಗೆ ತಂಗಲು ಒಪ್ಪಿಯಾರೋ, ಇಲ್ಲವೋ, ನನ್ನ ಮೇಲೆ ಕಡೆಗೆ ಒಂದು ದೂರು ಬರಬಾರದು' ಎಂದು ಯೋಚಿಸಿ, ''ನೋಡಿ ಗುರುಗಳೇ, ಆ ಹಜಾರದಲ್ಲಿ ಒಬ್ಬ ಸಾಧುಗಳು ಈಗಾಗಲೇ ಇಳಿದಿದ್ದಾರೆ ; ಅವರು ತಾವೂ ಇರುವುದಕ್ಕೆ ಒಪ್ಪಿದರೆ ನನ್ನ ಅಡ್ಡಿಯೇನೂ ಇಲ್ಲ'' ಎಂದನು. ನಾರದ ಆದರಂತೆ ದೇವಲನ ಬಳಿ ಬಂದು ತಂಗಲು ಒಪ್ಪಿಗೆ ಕೇಳಲಾಗಿ ದೇವಲ ''ಈ ಹಜಾರ ದೊಡ್ಡದು, ಜಾಗ ಬೇಕಾದ ಹಾಗಿದೆ ; ಒಂದು ಕಡೆ ನಾನು ಮಲಗುತ್ತೇನೆ, ಒಂದು ಕಡೆ ನೀವು ಮಲಗಿ, ಬನ್ನಿ'' ಎಂದು ಒಪ್ಪಿದನು. ನಾರದ ಒಳಗೆ ಹೋಗಿ ತನ್ನ ಕೃಷ್ಣಾಜಿನ ಹಾಸಿ ಕೂತು ಇಬ್ಬರೂ ಪರಸ್ಪರ ಪರಿಚಯ ಮಾಡಿಕೊಂಡು ಮಾತನಾಡುತ್ತ ಮಲಗಿದರು.

ಮಲಗುವಾಗ ದೀಪ ಆರಿಸುವ ಮುನ್ನ ನಾರದ ಸನ್ಯಾಸಿ ದೇವಲ ಮಲಗಿದ್ದ ಸ್ಥಲವನ್ನು ಚೆನ್ನಾಗಿ ಗುರುತಿಟ್ಟುಕೊಂಡು ತಾನು ಮಲಗಿ ನಿದ್ರಾವಶನಾದ. ಆದರೆ ದೇವಲ ತುಸು ಹೊತ್ತಾದ ಮೇಲೆ ತನ್ನ ಜಾಗದಿಂದ ಎದ್ದು ಬಾಗಿಲಿಗೆ ಅಡ್ಡಲಾಗಿ ಸರಿಯಾಗಿ ಮಲಗಿದ. ರಾತ್ರಿ ಒಂದು ಹೊತ್ತಿನಲ್ಲಿ ನಾರದ ಎದ್ದು ಹೊರಗೆ ಹೋಗಬೇಕಾದಾಗ ಬಾಗಿಲಿಗೆ ಅಡ್ಡ ಮಲಗಿದ್ದ ದೇವಲನನ್ನು ಎಡವಬೇಕಾಯಿತು. ದೇವಲ ತಟ್ಟನೆ ''ಯಾರದು ನನ್ನ ತಲೆಗೆ ಕಾಲು ತಾಕಿಸುವವರು ?'' ಎಂದು ಸಿಟ್ಟಿಗೆದ್ದು ಕೇಳಿದ. ನಾರದ, ''ಕ್ಷಮಿಸಬೇಕು ಸ್ವಾಮಿ, ಕತ್ತಲಲ್ಲಿ ಕಾಣದೆ ತಮ್ಮನ್ನು ಎಡವಿದೆ'' ಎಂದು ವಿನಯದಿಂದ ಕೇಳಲು ''ಛಿ ! ಸುಳ್ಳು, ಸಾಧು, ಹಿಮಾಲಯದಿಂದ ಬಂದು ನನ್ನ ತಲೆಯನ್ನು ಒದೆಯಬೇಕೆ ?'' ಎಂದು ಅಳಲು ಶುರು ಮೊದಲು ಮಾಡಿದ ದೇವಲ.

ನಾರದ ಮನಸ್ಸು ಚಿಕ್ಕದುಮಾಡಿಕೊಂಡು ಹೋಗುವಾಗ ದೇವಲನ ತಲೆಯಿದ್ದ ಜಾಗ ಗುರುತಿಟ್ಟುಕೊಂಡು ''ಒಳಗೆ ಬರುವಾಗ ಜಾಗರೂಕನಾಗಿ

ಬರಬೇಕು'' ಎಂದುಕೊಂಡ. ಆದರೆ ಅವನು ಹೊರಗೆ ಹೋಗಿದ್ದಾಗ ದೇವಲ ಎದ್ದು ಮುಂಚೆ ಕಾಲಿದ್ದ ಜಾಗದಲ್ಲಿ ಈಗ ತಲೆಯಿಟ್ಟುಕೊಂಡು ತಿರುಗಿ ಮಲಗಿಕೊಂಡ. ನಾರದ ಒಳಗೆ ಬರುವಾಗ ''ಈ ಕಡೆ ಸನ್ಯಾಸಿಯ ತಲೆಯಿದೆ. ನಾನು ಅವನ ಕಾಲ ಕಡೆಯಿಂದ ದಾಟಿ ಒಳಗೆ ಹೋಗುತ್ತೇನೆ'' ಎಂದುಕೊಂಡು ಒಳಗೆ ಕಾಲಿಟ್ಟರೆ ಅವನ ಕಾಲು ದೇವಲನ ತಲೆಗೇ ಮತ್ತೆ ಬಡಿಯಿತು. ''ಯಾರದು ?'' ಎಂದ ದೇವಲ. ''ನಾನು ಸ್ವಾಮಿ, ಕಾಣಲಿಲ್ಲ, ಅಪರಾಧವಾಯಿತು, ಮನ್ನಿಸಿರಿ'' ಎಂದು ನಾರದ ಪ್ರಾರ್ಥಿಸಲು ದೇವಲ, ''ಕಪಟ ! ಬೇಕೆಂದು ನನಗೆ ಅಪಚಾರ ಮಾಡುತ್ತೀಯಾ ? ಇಗೋ ನಿನ್ನನ್ನು ಶಪಿಸುತ್ತೇನೆ'' ಎಂದು ಹಲ್ಲು ಹಲ್ಲು ಕಡಿಯುತ್ತಾ ಹೇಳಿದ. ''ಇಲ್ಲ, ಸ್ವಾಮಿ, ಮನ್ನಿಸಿರಿ, ನಾನು ತಿಳಿಯದೆ ಮಾಡಿದೆ'' ಎಂದು ಎಷ್ಟೆಷ್ಟು ಹೇಳಿದರೂ ಕೇಳದೆ ದೇವಲ, ''ನಾಳೆ ಬೆಳಕು ಹರಿಯುತ್ತಿದ್ದಂತೆ ನಿನ್ನ ತಲೆ ಸಿಡಿದು ಎಂಟು ಹೋಳಾಗಲಿ'' ಎಂದು ಶಪಿಸಿದ. ತಕ್ಷಣ ನಾರದ ಸನ್ಯಾಸಿ ''ಸ್ವಾಮಿ, ನಿಷ್ಕಾರಣವಾಗಿ ನನ್ನ ಮೇಲೆ ಸಿಟ್ಟು ಮಾಡುತ್ತಿದ್ದೀರಿ. ತಪ್ಪು ಮಾಡಿದವರ ತಲೆ ಸಿಡಿದು ಎಂಟು ಹೋಳಾಗಲಿ'' ಎಂದು ತಾನೂ ಶಪಿಸಿದ.

ತುಸು ಹೊತ್ತಿನಲ್ಲೆ ನಾರದಗನಿಸಿತು — ''ನನ್ನ ಶಾಪ ಎಂದೂ ಸುಳ್ಳಾಗದು. ತಪ್ಪು ಮಾಡಿದವನು ಈ ಸನ್ಯಾಸಿ ; ಇವನ ತಲೆ ಖಂಡಿತ ಸಿಡಿದು ಎಂಟು ಹೋಳಾಗುತ್ತದೆ. ಪಾಪ ! ಅನ್ಯಾಯವಾಗುವುದಲ್ಲಾ !'' ಎಂದು ಮರುಕಪಟ್ಟು ತನ್ನ ತಪಃಶಕ್ತಿಯ ಬಲದಿಂದ ಸೂರ್ಯನ ಸಂಚಾರವನ್ನು ತಡೆದು ಬೆಳಕು ಹರಿಯದಂತ ಮಾಡಿದ.

ಹೀಗೆ ರಾತ್ರಿಯೇ ಅತಿ ದೀರ್ಘವಾಗಿ ಸೂರ್ಯ ಬರದಾದಾಗ ಊರಿನ ಜನಗಳೆಲ್ಲ ದೊರೆಯ ಮುಂದೆ ಬಂದು ''ಮಹಾಸ್ವಾಮಿ, ತಾವು ರಾಜರು, ಪ್ರತ್ಯಕ್ಷ ದೇವತೆ. ದಯಮಾಡಿ ಸೂರ್ಯ ಬರುವಂತೆ ಮಾಡಿ''

ಎಂದು ಮೊರೆಹೊಕ್ಕರು. ಆಗ ರಾಜ ತನ್ನನ್ನು ತಾನು ಕೂಲಂಕಷವಾಗಿ ಪರೀಕ್ಷಿಸಿಕೊಂಡು 'ನಾನೇನೂ ಅಧರ್ಮ ಮಾಡಿದಂತಿಲ್ಲವಲ್ಲಾ, ಈ ಪ್ರಕೃತಿವೈಚಿತ್ರ್ಯಕ್ಕೆ ಏನು ಕಾರಣ ?' ಎಂದು ಕೊಂಡು ಎಲ್ಲೋ ಸಾಧುಗಳು ಜಗಳ ಮಾಡಿರಬೇಕು ಎಂದು ಸಂಶಯಪಟ್ಟು ''ಈ ನಮ್ಮ ಪಟ್ಟಣದಲ್ಲಿ ಸಾಧುಗಳು ಯಾರಾದರೂ ಇದ್ದಾರೆಯೇ ?'' ಎಂದು ತನ್ನ ಜನರನ್ನು ಕೇಳಿದನು. ''ಇದ್ದಾರೆ, ಮಹಾಸ್ವಾಮಿ, ನಿನ್ನೆ ತಾನೆ ಹಿಮಾಲಯದ ಕಡೆಯಿಂದ ಇಬ್ಬರು ಬಂದು ಇಂಥ ಕಡೆ ತಂಗಿದ್ದಾರೆ'' ಎಂದು ಜನ ಹೇಳಲಾಗಿ ದೊರೆ ಆ ನಾರದ-ದೇವಲರನ್ನು ಕರೆಸಿ, ಅವರಿಗೆ ಅಭಿವಾದನೆ ಮಾಡಿ, ಒಂದು ಪಕ್ಕಕ್ಕೆ ಸರಿದು ''ಈ ಪ್ರಕೃತಿವೈಚಿತ್ರ್ಯಕ್ಕೆ ಕಾರಣ ಏನಿರಬಹುದೆಂ''ದು ಪ್ರಶ್ನಿಸಿದ. ನಾರದಸನ್ಯಾಸಿ ನಡೆದ ಸಂಗತಿಯನ್ನೆಲ್ಲ ಹೇಳಿ, ''ನನ್ನ ದೋಷ ಏನಿಲ್ಲ, ಈ ನಮ್ಮ ಸಾಧುವಿಗೆ ಹಾನಿ ಆಗದಿರಲೆಂದು ಹೀಗೆ ಮಾಡಿದ್ದೇನೆ. ಈಗಲೂ ಈ ಸಾಧು ತನ್ನ ತಪ್ಪೊಪ್ಪಿಕೊಂಡದ್ದೇ ಆದಲ್ಲಿ ಈ ಹಾನಿಯಿಂದ ತಪ್ಪಿಸಿಕೊಳ್ಳಲು ಸಾಧ್ಯ'' ಎಂದನು. ಆಗ ದೊರೆ ದೇವಲನ ಬಳಿ ಸರಿದು, ''ಸ್ವಾಮಿ, ತಾವು ತಪ್ಪೊಪ್ಪಿಕೊಂಡು, ನಮ್ಮ ಊರಿಗೆ ಸೂರ್ಯನ ಉದಯವಾಗುವಂತೆ ಮಾಡಿ ''ಉಪಕಾರ ಮಾಡಿ'' ಎಂದು ಎಷ್ಟುವಿಧವಾಗಿ ಬೇಡಿಕೊಂಡರೂ ದೇವಲ ಒಪ್ಪಲಿಲ್ಲ, ಇಲ್ಲದಿದ್ದರೆ ನಿಮ್ಮ ತಲೆ ಸಿಡಿದು ಎಂಟು ಹೋಳಾಗುತ್ತದೆ ಎಂದರೂ ''ಆಗಲಿ, ಚಿಂತೆಯಿಲ್ಲ, ಆದರೆ ಈ ಸಾಧುವಿಗೆ ತಲೆಬಾಗುವುದಿಲ್ಲ'' ಎಂದು ಹಠ ಹಿಡಿದ. ಆಗ ಇವನ ಹಠ ನೋಡಿ ದೊರೆ ಉಪಾಯಗಾಣದೆ ಅವನ ಕೈಕಾಲು ಕಟ್ಟಿಸಿ ಎಳೆದುಕೊಂಡುಬಂದು ಅವನ ತಲೆಯನ್ನು ನಾರದನ ಕಾಲಿಗೆ ಮುಟ್ಟಿಸಿ ಬಲಾತ್ಕಾರವಾಗಿ ಪ್ರಣಾಮ ಮಾಡಿಸಿದ. ನಾರದ ''ಏಳು, ಸಾಧು, ನಿನ್ನ ದೋಷ ಮನ್ನಿಸಿದ್ದೇನೆ'' ಎಂದು ಹೇಳಿ ದೊರೆಯ ಕಡೆಗೆ ತಿರುಗಿ ''ಮಹಾರಾಜ, ಈ ಸಾಧು ತನ್ನ ಮನಸಾರೆ ಕ್ಷಮಾಪಣೆ ಕೇಳಿಲ್ಲವಾದ್ದ ರಿಂದ ಇವನನ್ನು ಒಂದು ಕೊಳಕ್ಕೆ ಕರೆದುಕೊಂಡು ಹೋಗಿ, ಇವನ

ಜಟೆಯ ಮೇಲೆ ಮಣ್ಣಿನ ಹೆಂಟೆಯೊಂದನ್ನಿಟ್ಟು, ಕತ್ತಿನವರೆಗೆ ನೀರಿನಲ್ಲಿ ನಿಲ್ಲಿಸಿರಿ,'' ಎಂದು ಹೇಳಲಾಗಿ ತನ್ನ ಕಡೆಯವರಿಂದ ದೊರೆ ಹಾಗೆಯೇ ಮಾಡಿಸಿದ. ಅಲ್ಲಿಗೆ ಎಲ್ಲರೂ ಬಂದರು. ನಾರದಸನ್ಯಾಸಿ ದೇವಲಸನ್ಯಾಸಿಯನ್ನು ನೋಡಿ ''ಅಯ್ಯಾ ಸಾಧು, ನನ್ನ ಶಕ್ತಿಯಿಂದ ಈ ಸೂರ್ಯನ ಬಂಧನವನ್ನು ತೆಗೆದು ಬೆಳಕು ಹರಿಸುತ್ತೇನೆ. ಆ ಸಮಯದಲ್ಲಿ ತಕ್ಷಣ ನೀರಿನಲ್ಲಿ ಮುಳುಗು ; ಆಮೇಲೆ ಬೇರೆ ಎಲ್ಲಿಯಾದರೂ ಎದ್ದು ನಿನ್ನ ಮನಸ್ಸು ಬಂದ ಕಡೆ ಹೋಗು'' ಎಂದನು. ಅದರಂತೆಯೇ ಸೂರ್ಯರಶ್ಮಿ ಆ ಮಣ್ಣಿನ ಹೆಂಟೆಗೆ ತಾಕಿದೊಡನೆಯೇ ಅದು ಸಿಡಿದು ಎಂಟು ಹೋಳಾಯಿತು. ದೇವಲ ತಕ್ಷಣ ಮುಳುಗಿ ಬೇರೊಂದೆಡೆ ಎದ್ದು ಓಡಿ ಹೊರಟು ಹೋದ.

◈ ◈ ◈

ದೇವದತ್ತನ ಕಥೆ *

ಸ್ಥವಿರಭದ್ರಕ ಅನುರುದ್ಧನನ್ನು ನೋಡಿ, ''ಆಯುಷ್ಮಂತ, ನೀನು ಕಥೆ ಹೇಳುವುದರಲ್ಲಿ ಚತುರ. ಭಗವಂತನಿಗೆ ಅಪಚಾರಮಾಡಿದ ಭಿಕ್ಷು ದೇವದತ್ತನ ಕಥೆಯನ್ನು ಇಂದು ಹೇಳಬಾರದೇಕೆ ?'' ಎಂದ. ಅದಕ್ಕೆ ಅಲ್ಲಿ ನೆರೆದ ಎಂಟು ಹತ್ತು ಭಿಕ್ಷುಗಳು— ''ಹೌದು ಆಯುಷ್ಮಂತ, ಭದ್ರಕನ ಮಾತಿಗೆ ನಮ್ಮೆಲ್ಲರ ಸಮ್ಮತಿ ಇದೆ'' ಎನ್ನಲಾಗಿ ಭಿಕ್ಷು ಅನುರುದ್ಧ ''ಆಗಲಿ'' ಎಂದು ಕಥೆ ಹೇಳಲನುವಾದ.

''ದೇವದತ್ತ ದೇವದಹದ ದೊರೆ ; ಸುಪ್ರಬುದ್ಧನ ಮಗ ; ಮುಂದೆ ಬುದ್ಧನಾಗಿ ನಮ್ಮ ಸ್ವಾಮಿಯಾದ ಸಿದ್ಧಾರ್ಥನ ವಧು ಯಶೋಧರೆಯ ಅಣ್ಣ, ನಮ್ಮ ರಕ್ತಬಂಧುವೇ. ಭಗವಂತ ರಾಜ ಶುದ್ಧೋದನನ ಕರೆ ಮನ್ನಿಸಿ ಕಪಿಲವಸ್ತುವಿಗೆ ಬಂದಿದ್ದಾಗ ನಾವೆಲ್ಲ ಭಿಕ್ಷುಗಳಾದೆವಲ್ಲ, ಅದೇ ಸಮಯದಲ್ಲೇ ದೇವದತ್ತನೂ ಭಿಕ್ಷುವಾದದ್ದು. ಅದಕ್ಕೆ ಮುಂಚಿನ ಅವನ ವಿಚಾರ ನನಗೆ ತಿಳಿಯದು ; ಒಳ್ಳೆಯದು ಅವನ ಜಾತಕದಲ್ಲಿ ಎಂದೂ ಬರೆದಿರಲಿಕ್ಕಿಲ್ಲ. ಅವನು ಸಂಘ ಸೇರಿದ್ದು ಬಲವಂತದ ಮಾಘಸ್ನಾನ. ಶಾಕ್ಯಮುನಿ ಕಪಿಲವಸ್ತುವಿಗೆ ಬಂದು ಅಲ್ಲಿ ನ್ಯಗ್ರೋಧಾರಾಮದಲ್ಲಿದ್ದಾಗ ಶಾಕ್ಯರೆಲ್ಲ ಮನೆಗೊಬ್ಬನಂತೆ ಸಂಘಕ್ಕೆ ಸೇರುವುದೆಂದು ನಿರ್ಧರಿಸಿದರು ; ಆಗ ಇಷ್ಟವಿದ್ದವರು, ಇಲ್ಲದಿದ್ದವರು ಎಲ್ಲರೂ ಸೇರುವ ಸ್ಥಿತಿ ಬಂತು ;

---

* ಜೀವನ, ಸಂಪುಟ ೧೩, ಸಂಚಿಕೆ ೯, ಪುಟ ೩೭೧

ಇವರಲ್ಲಿ ಸುಮಾರು ಐನೂರು ಜನ ಇಷ್ಟವಿಲ್ಲದೆ ಉಪಚಾರಕ್ಕೆ ಭಿಕ್ಷು ಗಳಾದವರು. ದೇವದತ್ತ ಈ ಗುಂಪಿನಲ್ಲಿ ಮಾನ್ಯ. ಧರ್ಮಕ್ಕಾಗಲೀ, ಬುದ್ಧ ನಿಗಾಗಲೀ ಮನಸೋತು ಮನೆಯಿಂದ ಹೊರಬಂದ ಗಂಡು ಇದಲ್ಲ ; ಶಾಕ್ಯರ ನಿರ್ಧಾರದ ದುರ್ದೈವದ ಫಲ. ಈ ನಿಜಾರ್ಥ ಬಯಲಾಗಲು ಬಹಳ ಕಾಲವೇನು ಬೇಕಾಗಲಿಲ್ಲ. ನಮ್ಮ ಐಶ್ವರ್ಯದ, ಜಾತಿಯ, ರಕ್ತದ ಮದ ಹಿಂಗಲು, ನಾವು ಮುಂಚೆ ನಮ್ಮ ಕ್ಷೌರದವನಾಗಿದ್ದ ಉಪಾಲಿಗೆ ಪ್ರವ್ರಜ್ಯಮಾಡಿಸಿ ಅವರಿಗೆ ಅಭಿವಾದನ ಮಾಡುವುದೆಂದು ನಿಶ್ಚಯಿಸಿದ್ದೆವು. ನಾವೆಲ್ಲ ಹಾಗೆಯೇ ಪ್ರವ್ರಾಜ್ಯದಲ್ಲಿ ನಮಗೆಲ್ಲರಿಗೆ ಜ್ಯೇಷ್ಠನಾದ ಉಪಾಲಿಗೆ ಅಭಿವಾದನ ಮಾಡಿದೆವು ; ಮಾಡದಿದ್ದವನೆಂದರೆ ದೇವದತ್ತನೊಬ್ಬ "ಉಪಾಲಿ ಭಿಕ್ಷುವಾದರೆ ಅವನಿಗೆ ಬಂದ ಹಿರಿಮೆಯೇನು ? ಕ್ಷೌರದವನು ಕ್ಷೌರದವನೇ, ಅವನ ವೃತ್ತಿಗೆ ಇನ್ನು ನಿವೃತ್ತಿ ಇರಬಹುದು ಅಷ್ಟೆ, ಆದರಿಂದ ಅವನಿಗೆ ನಾನು ಮರ್ಯಾದೆ ಮಾಡುವ ಪ್ರಸಂಗ ಏನು ?" ಎಂದವನ ವಾದ. ಇದನ್ನು ನೋಡಿ ಭಗವಂತ ನಕ್ಕು "ಸೌಮ್ಯ ದೇವದತ್ತ ನಿನಗಿಂತ ಮುಂಚೆ ಪ್ರವಜ್ಯ ಮಾಡಿ ಉಪಾಲಿ ಹಿರಿಯನಾಗಿದ್ದಾನೆ. ಸಂಘ ಸೇರಿ ಸಂನ್ಯಾಸಿಯಾದಮೇಲೆ ಅವನು ಕ್ಷೌರದವನೂ ಅಲ್ಲ, ನೀನು ರಾಜಕುಮಾರನೂ ಅಲ್ಲ. ಶ್ರಮಣರಲ್ಲಿ ಈ ಅಭಿಮಾನ ಸಲ್ಲದು. ಶ್ರಮಣರ ಆಯುಸ್ಸಿನ ಗಣತಿ ಅವರು ಪ್ರವ್ರಜಿತರಾದ ಘಳಿಗೆಯಿಂದ ; ಈ ದೃಷ್ಟಿ ಯಿಂದ ಉಪಾಲಿ ಹಿರಿಯವನು ; ಅವನಿಗೆ ನೀನು ಅಭಿವಾದನ ಮಾಡಬೇಕೆಂಬುದು ಸಂಪ್ರದಾಯತಾನೆ ?" ಎಂದ. ದೇವದತ್ತ ಕೇಳಲಿಲ್ಲ.

ನಿಜದಲ್ಲಿ ಜಗತ್ತು ಬೇಸರವಾಗಿ, ಭಗವಂತನ ಆದೇಶದಿಂದ ಹೃದಯ ತೆರೆದು ಸಂಘ ಸೇರಿದವನಲ್ಲ ದೇವದತ್ತ. ಸಂಘ ಸೇರಿದಮೇಲೂ ಅವನು ಸಾಮಾನ್ಯ ಜನರಂತೆಯೇ ವರ್ತಿಸುತ್ತಿದ್ದ. ಅವನ ಅಭಿಮಾನ, ಮದ ಆರಿರಲಿಲ್ಲ ; ಅವನ ಚೇತನ ಅಭಾವಿತ ; ಅವನಲ್ಲಿ ಕಾಮದ ಬೆಂಕಿ

ಎಂದಿನಂತೆಯೇ ಉರಿಯುತ್ತಿತ್ತು. ನಾವೆಲ್ಲ ಭಗವಂತನೊಂದಿಗೆ ಶ್ರಾವಸ್ತಿಯಲ್ಲಿದ್ದಾಗ ಒಂದು ಗುಲ್ಲು ಎದ್ದಿತ್ತು. ಇದ್ದಕ್ಕಿದ್ದಂತೆ ಒಮ್ಮೆ ದೇವದತ್ತ ಕಾಣದಾದ ; ವಿಚಾರಿಸುವಲ್ಲಿ ಅವನು ಕಪಿಲವಸ್ತುವಿಗೆ ಹಿಂದಿರುಗಿದ್ದನೆಂದು ಗೊತ್ತಾಯಿತು. ಜನ ಹೀಗೆ ಹೇಳುತ್ತಿದ್ದರು — ಅದರ ನಿಜವೆಷ್ಟೋ, ನಾನು ಕಾಣೆ ; ನಾನು ಕೇಳಿದ್ದಿಷ್ಟು — ದೇವದತ್ತ ನಮ್ಮ ಸ್ವಾಮಿ ಮುಂಚೆ ಸಿದ್ಧಾರ್ಥನಾಗಿದ್ದಾಗ ಇದ್ದ ರಾಣೀವಾಸಕ್ಕೆ ನುಗ್ಗಿ ಅಲ್ಲಿ ಗೋಪಾ ಎಂಬ ಸ್ತ್ರೀಯನ್ನು ಕದಿಯಲು ಪ್ರಯತ್ನಪಟ್ಟನೆಂದೂ, ಆಕೆ ಪ್ರಣಯದ ವ್ಯಾಜದಿಂದ ಅವನ ಕೈ ಹಿಸುಕಿದಳೆಂದೂ, ಅದರ ಫಲವಾಗಿ ಅವನ ಕೈಗಳಿಂದ ರಕ್ತ ಸುರಿಯಿತೆಂದೂ, ನಂತರ ಆಕೆ ದೇವದತ್ತನನ್ನು ಎತ್ತಿ ಪ್ರಾಸಾದದಿಂದ ಹೊರಗೆ ಎಸೆದು ಬಿಟ್ಟಳೆಂದೂ ಕಿಂವದಂತಿ ಹರಡಿತ್ತು.

ನಾವೆಲ್ಲ ಶೀಲಗಳನ್ನು ಅಭ್ಯಾಸ ಮಾಡುತ್ತಿದ್ದಾಗ, ದೇವದತ್ತ ಯಕ್ಷಿಣಿ-ಇಂದ್ರಜಾಲಗಳನ್ನು ಕಲಿಯುವ ಉತ್ಸಾಹದಲ್ಲಿದ್ದ. ಅವನು ಹೋಗಿ ಅಜ್ಞಾತ ಕೌಂಡನ್ಯ, ಸ್ಥವಿರ ಅಶ್ವಜಿತ ಮುಂತಾದವರನ್ನೆಲ್ಲ ಕೇಳಿಕೊಂಡನಂತೆ, ನನಗೆ ಮಾಯಾವಿದ್ಯೆ ಕಲಿಸಿರಿ, ಎಂದು. ಅವರೆಲ್ಲ "ಆಯುಷ್ಮಂತ, ಯಕ್ಷಿಣಿ, ಮಾಯೆ ಇವುಗಳಿಂದ ಲೌಕಿಕವಾದ ಪ್ರಯೋಜನವಷ್ಟೆ ; ಅನುತ್ತರವಾದ ನಿರ್ವಾಣ ಸಾಧಿಸಲು, ಈ ಭವಚಕ್ರ ದಾಟಲು ಶೀಲವನ್ನು ದೃಢವಾಗಿ ನೆಡಬೇಕು. ಅದನ್ನು ಪಡೆಯುವ ಹಟ ಹಿಡಿ. ಈ ಯಕ್ಷಿಣಿ ಮುಂತಾದುವು ಬೇಡ" ಎಂದರಂತೆ. ಇಷ್ಟಕ್ಕೆ ಒಪ್ಪುವವನೇ ನಮ್ಮ ದೇವದತ್ತ? ಇಂದ್ರಜಾಲದಲ್ಲಿ ಬಹು ಗಟ್ಟಿಗನೆಂದು ಹೆಸರಾದ ದಶಬಲ ಕಾಶ್ಯಪನ ಬಳಿ ಬಂದು, "ಇಂದ್ರಜಾಲದಲ್ಲಿ ನಿನಗೆ ಸಮಯಾರು, ಸ್ಥವಿರ ಕಾಶ್ಯಪ, ಅಂದಮೇಲೆ ನಿನಗೆ ಮಿಗಿಲಾರು ? ಮೇಲಾಗಿ ನೀನು ಕಪಟವಿಲ್ಲದವನು, ತಿಳಿದುದನ್ನು ಹೇಳಲು ಹಿಂಜರಿಯೆ. ನನಗೆ ಇಂದ್ರಜಾಲ ವಿದ್ಯೆಯಲ್ಲಿ ಪ್ರವೇಶ ಮಾಡಿಸುವೆಯಷ್ಟೆ" ಎಂದು ಮುಖಸ್ತುತಿ ಮಾಡಿ ಅವನಿಂದ ಆ ವಿದ್ಯೆ ತನ್ನದು ಮಾಡಿಕೊಂಡನಂತೆ ; ವಶೀಕರಣದಲ್ಲೂ ಸಮರ್ಥನಾದ.

ಈ ತನ್ನ ಸಾಮರ್ಥ್ಯದ ಮದ ತಲೆಗೆ ಹತ್ತಿ ಭಗವಂತನಾದ ಬುದ್ಧನನ್ನು ಕೂಡ ಕಡೆಗಣ್ಣಿನಿಂದ ನೋಡಹತ್ತಿದ. ಒಮ್ಮೆ ಭಗವಂತನ ಬಳಿ ಸಾರಿ, ''ಶ್ರಮಣನಾದ ಗೌತಮನು ಕೇಳಲಿ. ನಿನ್ನ ವಯಸ್ಸು ಹೆಚ್ಚುತ್ತಿದ್ದೆ, ಬರು ಬರುತ್ತ ಮುದುಕನಾಗಿ, ಅದೃಢನಾಗುತ್ತಿದ್ದೀಯೆ. ಸಂಘವನ್ನು ನೋಡಿಕೊಳ್ಳುವುದು ಕಷ್ಟವಾದ ಕೆಲಸ. ಆ ಕೆಲಸ ನನ್ನ ಪಾಲಿಗೆ ಬಿಡು, ನಿನಗೂ ವಿಶ್ರಾಂತಿ ಸಿಕ್ಕಂತಾಗುತ್ತದೆ'' ಎಂದು ಹೇಳಿಯೇ ಹೇಳಿದನು. ಆದಕ್ಕೆ ನಮ್ಮ ಸ್ವಾಮಿಗೆ ಹಿಡಿಸಲಾರದಷ್ಟು ನಗು ಬಂದು, ''ಅಯ್ಯೊ, ಹುಚ್ಚ ಶೀಲದಲ್ಲಿ, ವ್ರತದಲ್ಲಿ, ನಿಷ್ಠೆಯಲ್ಲಿ ವಿದ್ಯೆಯಲ್ಲಿ ಶ್ರೇಷ್ಠನೆನಿಸಿದ ಶಾರಿಪುತ್ರ ಮೌದ್ಗಲ್ಯಾಯನರಿಗೇ ಈ ಕೆಲಸವನ್ನು ನಾನು ಒಪ್ಪಿಸದಿರುವಲ್ಲಿ ನಿನ್ನಂಥವನಿಗೆ ಎಂದಾದರೂ ಒಪ್ಪಿಸಿಯೇನೇ ?'' ಎಂದುತ್ತರವಿತ್ತ. ದೇವದತ್ತನಿಗೆ ಅಸಾಧ್ಯ ಸಿಟ್ಟು ಬಂದು ಹಲ್ಲುಕಡಿಯುತ್ತ ಮೂರು ಬಾರಿ ತಲೆ ಅಲ್ಲಾಡಿಸಿ, ''ಇರಲಿ, ಗೌತಮ, ಸಮಯ ಬಂದಾಗ ನೋಡುವೆ'' ಎಂದು ಹೇಳಿ ಹೊರಟು ಹೋದ.

ಹೋದವನೇ ಮಗಧದ ದೊರೆ ಬಿಂಬಿಸಾರನ ಮಗ ಅಜಾತಶತ್ರುವಿನ ಸ್ನೇಹ ಬೆಳೆಸಿದ ; ಅವನು ಕಲಿತ ವಶೀಕರಣ ವಿದ್ಯೆ ಇಲ್ಲಿ ಸಫಲವಾಯಿತು. ಭಿಕ್ಷುವಿಗೆ ದೊರೆಮಗನ ಸ್ನೇಹವೆಂದರೆ ಯಾವ ಸಂಪತ್ತಿಗೆ ಕೊರತೆ ? ಊಟ, ಉಪಚಾರ ಎಲ್ಲ ನಿರಾತಂಕವಾಗಿ ನಡೆಯುತ್ತಿತ್ತು. ತನ್ನ ಪಾಡಿಗೆ ತಾನು ಸುಖವಾಗಿದ್ದನೇ, ಪಾಪಿ ! ರಾಜ ಬಿಂಬಿಸಾರನ ಮೇಲೆ ಅವನ ಮಗನನ್ನೇ ಎತ್ತಿಕಟ್ಟಿ ರಾಜ್ಯದಲ್ಲಿ ಸುಲಿಗೆ-ದರೋಡೆಗಳನ್ನು ಅಜಾತಶತ್ರುವಿನ ಸಹ ಮಾಡಲು ಆರಂಭಿಸಿದ. ಜನ ದೊರೆಗೆ ದೂರುಕೊಟ್ಟಾಗ ದೊರೆ ''ಅಧಿಕಾರ ಲಾಲಸೆಯಿಂದ ಅಜಾತಶತ್ರು ಹೀಗೆ ಮಾಡುತ್ತಿದ್ದಾನೆ'' ಎಂದು ಬಗೆದು ರಾಜಗೃಹವನ್ನು ಮಾತ್ರ ತಾನಿಟ್ಟು ಕೊಂಡು ಉಳಿದ ಮಗಧ ರಾಜ್ಯವನ್ನೆಲ್ಲ ಅಜಾತಶತ್ರುವಿಗೇ ಬಿಟ್ಟುಕೊಟ್ಟ.

ದುರಾತ್ಮರಿಗೆ ಎಲ್ಲಿಯ ಸಮಾಧಾನ ? ಕಡೆಗೆ ದೊರೆ ಭಂಡಾರವನ್ನು ಮಾತ್ರ ತನ್ನ ಅಧೀನದಲ್ಲಿಟ್ಟುಕೊಂಡು, ರಾಜಗೃಹವನ್ನೂ ಮಗನ ಪಾಲಿಗೆ ಬಿಟ್ಟ. ಆಗ ಭಿಕ್ಷು ದೇವದತ್ತ ''ಅಜಾತಶತ್ರು, ಕೋಶವಲ್ಲದ ದೊರೆ ಎಂಥ ದೊರೆ ? ರಾಜ್ಯ ಪಾಲನೆಗೆ ಅತಿ ಅವಶ್ಯಕವೆಂದರೆ ಧನ : ಅದಿಲ್ಲದೆ ಈ ದೊಡ್ಡ ರಾಜ್ಯದಿಂಡೇನು ಫಲ ?'' ಎಂದು ಚುಚ್ಚಿ ಕೊಟ್ಟು ಅವನ ತಂದೆಯ ಮೇಲೆ ತಿರುಗಿ ಬೀಳುವಂತೆ ಮಾಡಿದ. ವೃದ್ಧನಾದ, ಸಾಧುವಾದ ಮಹಾರಾಜನಿಗೆ ಮಗನ ಇಂಥ ನಡತೆಯಿಂದ ಅತಿಯಾದ ವೇದನೆಯಾಯಿತು. ''ಅಪ್ಪಾ ಅಜಾತಶತ್ರು, ಇಂದಿದ್ದು ನಾಳೆ ನಡೆಯುವ ನಾನು ಕೋಶ ಕಟ್ಟಿಕೊಂಡು ಏನು ಮಾಡಲಿ ? ನಿನ್ನದೇ ಅದು ; ಅವಶ್ಯವಾಗಿ ತೆಗೆದುಕೋ. ಆದರೆ ಒಂದು ಮಾತು, ಆ ದುರಾಚಾರಿಯಾದ ದೇವದತ್ತನನ್ನು ಮಟ್ಟಿಗೆ ಹತ್ತಿರ ಸೇರಿಸಬೇಡ ; ನಮ್ಮ ವಂಶವನ್ನು ಸುಟ್ಟು ಬೂದಿ ಮಾಡುವ ಕಾಡಕಿಚ್ಚು ಅದು'' ಎಂದ. ನೆಚ್ಚಿನ ಗೆಳೆಯನನ್ನು ಹೀಗೆ ದೂಷಿಸಿದರೆ ಸುಮ್ಮನಿರಲು ಸಾಧ್ಯವೇ ! ಅಜಾತಶತ್ರು ತಂದೆಯನ್ನು ಅರಮನೆಯ ಒಂದು ಕತ್ತಲೆಕೋಣೆ ಯಲ್ಲಿ ಕೂಡಿ, ಅನ್ನಾಹಾರಗಳನ್ನು ಕೊಡದೆ ಬುದ್ಧಿ ಕಲಿಸುವ ಪ್ರಯತ್ನ ಮಾಡಿದ. ಕೆಲವು ದಿನ ತನ್ನ ತಾಯಿ ವೈದೇಹೀ (ವಾಸವೀ) ಒಬ್ಬಳು ಮಾತ್ರ ಹೋಗಿ ತನ್ನ ಪತಿಯನ್ನು ನೋಡಿ ಬರುವ ಅವಕಾಶ ಕೊಟ್ಟಿದ್ದ ; ಅವಳು ಗುಪ್ತವಾಗಿ ಅವನಿಗೆ ಅನ್ನ - ನೀರು ಕೊಡುತ್ತಿರುವಳೆಂಬುದು ತಿಳಿದೊಡನೆ ಅವಳನ್ನೂ ನಿರ್ಬಂಧಿಸಿದ. ಬಿಂಬಿಸಾರನ ಕಾರಾಗೃಹದ ಒಂದು ಸಣ್ಣ ಕಂಡಿಯಿಂದ, ಗೃಧ್ರಕೂಟಪರ್ವತದ ಮೇಲೆ ನಮ್ಮ ಸ್ವಾಮಿ ಓಡಿಯಾಡು ವುದು ಕಾಣುತ್ತಿತ್ತು. ಅನ್ನ ನೀರಿಲ್ಲದೆ ಒಣಗಿ, ಮನೋವೇದನೆಯಿಂದ ಬಾಡಿದ್ದ ವೃದ್ಧ ಬಿಂಬಿಸಾರನಿಗೆ ಈ ದೃಶ್ಯದಿಂದ ಆಗುತ್ತಿದ್ದ ಸಾಂತ್ವನ, ಸಮಾಧಾನ ಅಷ್ಟಿಷ್ಟಲ್ಲ ; ಎಡಬಿಡದೆ ಆ ಕಂಡಿಗೆ ಕಣ್ಣು ಸೇರಿಸಿ ಭಗವಂತನ ಓಡಾಟ ನೋಡುತ್ತ ನಿಂತಿದ್ದ ; ಇದೇ ಅವನ ಜೀವನದ ಆಧಾರವಾಗಿತ್ತು. ಇದು ಹೇಗೋ ಅಜಾತಶತ್ರುವಿನ ಕಿವಿಗೆ ಬಿದ್ದು, ತಕ್ಷಣ ಆ ಕಂಡಿಯನ್ನು

ಮುಚ್ಚಿಸಿ ತಂದೆಯ ಕಾಲಿಗೆ ಸಂಕೋಲೆ ಬಿಗಿದು ಭದ್ರಮಾಡಿದ, ಸುಕುಮಾರ! ಮಗಧದ ಚಕ್ರವರ್ತಿಗೆ ಎಂಥ ದುರ್ದೆಶೆ?

ಈ ಮಧ್ಯೆ ಅಜಾತಶತ್ರುವಿನ ಮಗ ಉದಾಯಿ ಭದ್ರನಿಗೆ ಕೈಬೆರಳ ಮೇಲೆ ಒಂದು ಹುಣ್ಣು ಎದ್ದು ಅತಿನೋವು ಕೊಡುತ್ತಿತ್ತು; ಅದನ್ನು ತಡೆಯ ಲಾರದೆ ಮಗು ಒಂದು ಸಲ ಕಿಟ್ಟೆಂದು ಕಿರಿಚಿಕೊಂಡಿತು. ಅಜಾತಶತ್ರು ಮಗುವನ್ನು ಎತ್ತಿಕೊಂಡು ಸಮಾಧಾನ ಪಡಿಸುತ್ತಾ, ಆ ಹುಣ್ಣನ್ನು ಬಾಯಿ ಯಿಂದ ಕಚ್ಚಿ ಕೀವು ಹೊರಗೆ ಬರುವಂತೆ ಮಾಡಿ, ನೋವನ್ನು ಆರಿಸಿದ. ಇದನ್ನೆಲ್ಲ ನೋಡುತ್ತಿದ್ದ ಅವನ ತಾಯಿ — ಬಿಂಬಿಸಾರನ ರಾಣಿ — ವಾಸವೀದೇವಿ, "ಅಜಾತಶತ್ರು, ಹಿಂದೊಂದು ಸಲ ನೀನು ಹುಡುಗನಾಗಿ ದ್ದಾಗ ಹೀಗೆಯೇ ಹುಣ್ಣಾಗಿ ಇದೇ ರೀತಿ ಮಾಡಿದರು ನಿಮ್ಮ ತಂದೆ !" ಎಂದಳು. ಇದ್ದಕ್ಕಿದಂತೆ ಅಜಾತಶತ್ರುವಿಗೆ ತನ್ನ ಪಾಪದ ಅರಿವಾಯಿತು ; ತನ್ನ ಕ್ರೌರ್ಯ, ನೈಷ್ಠುರ್ಯಗಳ ಭಾರ ದುರ್ಭರವಾಯಿತು ; ತಂದೆಯ ಮೇಲಿನ ಪ್ರೀತಿ ಇದ್ದಕ್ಕಿದ್ದಂತೆ ಉಕ್ಕಿತು. "ನಮ್ಮ ತಂದೆ ಇನ್ನೂ ಜೀವದಿಂದ ಇರುವುದಾದರೆ ! ಜೀವಿಸಿದ್ದಾನೆಂದು ಯಾರಾದರೂ ಬಂದು ಹೇಳಿದರೆ ಅವನಿಗೆ ಈ ರಾಜ್ಯ ಎಲ್ಲ ಕೊಟ್ಟೇನು !" ಎಂದು ಗದ್ಗದನಾಗಿ ಸಾರಿದ. ಸರಿ, ಈ ಮಾರ್ಪಾಟು ಶುಭವೆಂದು ನೆರೆದವರೆಲ್ಲ ಹರ್ಷಿಸಿ, ಗುಂಪಾಗಿ ಬಿಂಬಿಸಾರನ ಕೋಣೆಯ ಬಳಿಗೆ ಓಡಿದರು ; ಬಂಧನ ಬಿಡಿಸಿ ವೃದ್ಧನಾದ ರಾಜನನ್ನು ನೋಡಿ ಸಂತೋಷಪಡುವ ಹಿರಿಯಾಸೆ ಅವರಿಗೆಲ್ಲ. ಆದರೆ ಈ ಗದ್ದಲ ನೋಡಿ ಬಿಂಬಿಸಾರಿನಿಗನಿಸಿತು — "ಇಷ್ಟು ಕಷ್ಟ ಸಾಲದೆ ! ಮತ್ತೆ ಏನೋ ವೇದನೆ ತರುವ ಸನ್ನಾಹದಂತಿದೆ !"- ಎಂದು ಹೆದರಿ, ನಿಟ್ಟುಸಿರುಬಿಟ್ಟು ಪ್ರಾಣಬಿಟ್ಟ. ಹೀಗೆ ಲೋಕ ವಿಶ್ರುತನಾದ, ಮಗಧದ ರಾಜವಂಶಕ್ಕೆ ಶಿರಃಪ್ರಾಯನಾದ, ಸತ್ಪುರುಷನಾದ ಬಿಂಬಿಸಾರನ ಜೀವಿತ ಮುಗಿಯಿತು ! ಆಮೇಲೆ, ಪಿತೃಹತ್ಯೆಯಿಂದ ಪರಿತಪ್ತನಾಗಿ ಅಜಾತಶತ್ರು

ಭಗವಂತನನ್ನು ಒಂದು ಬೆಳದಿಂಗಳ ರಾತ್ರಿಯಲ್ಲಿ ನೋಡಿ, ಮಾತನಾಡಿ, ಸನ್ಮಾನಿಸಿದ ವಿಚಾರ ನಿಮಗೆ ತಿಳಿದೇ ಇದೆ.

ಅಲ್ಲಿಂದಾಚೆ ಅಜಾತಶತ್ರು ತಾನು ಬುದ್ಧನ, ಧರ್ಮದ ಅಥವಾ ಸಂಘದ ಶರಣುಹೋಗಿದ್ದೇನೆಂದು ಹೇಳದಿದ್ದರೂ, ದೇವದತ್ತನನ್ನು ಮಾತ್ರ ದೂರ ಮಾಡಿದ. ಭಗವಂತನನ್ನು ಅಜಾತಶತ್ರು ರಾಜಗೃಹದ ಬಳಿ ವೈದ್ಯ ಜೀವಕನ ಆಮ್ರವನದಲ್ಲಿ ದರ್ಶನಮಾಡಿದ ತರುಣದಲ್ಲಿ ದೇವದತ್ತ ಅಜಾತಶತ್ರುವನ್ನು ಕಾಣಲೆಂದು ಅರಮನೆಗೆ ಹೋಗಿದ್ದನಂತೆ ; ಆದರೆ ಅಜಾತಶತ್ರು ನೋಡಲೊಲ್ಲೆನೆಂದ. ನಿರಾಶನಾಗಿ ದೇವದತ್ತ ಹಿಂದಿರುಗುತ್ತಿರುವಲ್ಲಿ ನಮ್ಮ ಸಂಘದ ಭಿಕ್ಷುಣಿ ಉತ್ಪಲವರ್ಣೆ ಭಿಕ್ಷೆಗೆಂದು ಅಜಾತಶತ್ರುವಿನ ಅರಮನೆಗೆ ಹೋದಳು ; ಅಜಾತಶತ್ರು ಅವಳನ್ನು ಆದರಿಸಿ, ಅನ್ನವಿತ್ತು ನಮಸ್ಕರಿಸಿ, ಕಳುಹಿಸಿದ ದೃಶ್ಯ ದೇವದತ್ತನಿಗೆ ಸಹಿಸಲಾರದಾಯಿತು. ಅವಳು ಹಿಂದಕ್ಕೆ ಬರುವಾಗ, ದೇವದತ್ತ ಅವಳನ್ನು ಬೈಯ್ದು "ನಿನ್ನಂಥವರಿಂದಲೇ ನನ್ನ ಅವಸ್ಥೆ ಹೀಗಾದದ್ದು" ಎಂದು ಹೇಳಿ, ಶಪಿಸಿದ. ಅದಕ್ಕೆ ಭಿಕ್ಷುಣಿ ಉತ್ಪಲವರ್ಣೆ "ತಪ್ಪಿಲ್ಲದವರನ್ನು ದೂಷಿಸಲೇಕೆ, ಆಯುಷ್ಮಂತ ? ಭಗವಂತನ ಶಿಷ್ಯನಾದ ನೀನು ಹೀಗೆ ಮಾಡುವುದು ಏನು ಚೆನ್ನು ?" ಎಂದಳು. ಆಗ ದೇವದತ್ತನಿಗೆ ಕೋಪದ ಮಿತಿ ಮೀರಿ, ಮುಷ್ಟಿಯಿಂದ ಬಲವಾಗಿ ಅವಳ ತಲೆಯ ಮೇಲೆ ಹೊಡೆದ. ಭಿಕ್ಷುಣಿ ಉತ್ಪವರ್ಣೆ ಅಲ್ಲಿಯೇ ತೀರಿಹೋದಳು !

ಭಗವಂತನ ಮೇಲೆ ದೇವದತ್ತನಿಗೆ ಅಸೂಯೆ, ದ್ವೇಷ ಏಕೆ ಎನ್ನುವಿರೋ ? ಅದು, ಮೊದಲನೆಯದಾಗಿ, ದೇವದತ್ತನ ಸ್ವಭಾವ. ಎರಡನೆಯದು, ಮೊದಲಿಂದ ಭಗವಂತ - ದೇವದತ್ತ ಒಂದು ಹಾದಿ ತುಳಿದವರಲ್ಲ, ಎಳೆತನದಲ್ಲಿ ಇಬ್ಬರೂ ಜತೆಗಾರರು. ಒಮ್ಮೆ ಮುಂದೆ ಭಗವಂತನಾದ ಸಿದ್ಧಾರ್ಥ ರೋಹಿಣೀ ನದಿಯ ಕಡೆ ಹೋಗುತ್ತಿದ್ದಾಗ,

ಹಂಸಗಳ ಹಿಂಡೊಂದು ಮೇಲೆ ಹಾರಿಹೋಗುತ್ತಲಿತ್ತಂತೆ. ಆಗ ದೇವದತ್ತ ಎತ್ತಲಿಂದಲೋ ಒಂದು ಬಾಣಬಿಟ್ಟು ಒಂದು ಹಂಸವನ್ನು ಹೊಡೆದು ಕೆಳಗುರುಳಿಸಿದ. ಇದನ್ನು ನೋಡಿ ನಮ್ಮ ಸ್ವಾಮಿಗೆ ತಾರುಣ್ಯ ಉಕ್ಕಿ ಬಂದು, ಓಡಿ ಹೋಗಿ ಆ ಹಂಸವನ್ನು ಎತ್ತಿಕೊಂಡು, ನೀರು ಕುಡಿಸಿ, ಗಾಯಕ್ಕೆ ಮದ್ದು ಮಾಡಿ ಉಪಚರಿಸಿದ. ಅಷ್ಟರಲ್ಲಿ ದೇವದತ್ತ ಬಂದು, ''ಸಿದ್ಧಾರ್ಥ, ನನ್ನ ಬಾಣದಿಂದ ಹಂಸ ಕೆಳಗೆ ಬಿತ್ತು ; ಅದು ನನಗೆ ಸೇರಬೇಕು, ಕೊಡು'' ಎಂದ. ಅದಕ್ಕೆ ನಮ್ಮ ಸ್ವಾಮಿ, ''ದೇವದತ್ತ ಹೊಡೆದವನು ನೀನು, ನಿಜ ; ಆದರೆ ಅದರ ಪ್ರಾಣ ಉಳಿಸಿದವನು ನಾನು. ನನಗೆ ತಾನೆ ಸೇರಬೇಕು ?'' ಎಂದು ಹೇಳಿ, ಕೊಡುವುದಿಲ್ಲವೆಂದು ಹಠಹಿಡಿದ. ಬಹುಶಃ ಮುಂದಿನ ದ್ವೇಷಕ್ಕೆ ಇದು ಅಂಕುರಾರ್ಪಣ ಇರಬೇಕು. ಮುಂದೆ ಯೌವನದಲ್ಲೂ ಭಗವಂತನ ಮೇಲೆ ಅಲ್ಲಸಲ್ಲದ ಅಪವಾದಗಳನ್ನು ಎಬ್ಬಿಸಿ ದೇವದತ್ತ ''ಸಿದ್ಧಾರ್ಥ ರಾಜಪುತ್ರನಾಗಲು ಯೋಗ್ಯನಲ್ಲ ; ಅವನಿಗೆ ಧನುರ್ವಿದ್ಯೆ ಬಾರದು, ಅಶ್ವಾರೋಹಣದಲ್ಲಿ ಪರಿಶ್ರಮವಿಲ್ಲ, ರಾಜಕಾರಣದಲ್ಲಿ ಆಸಕ್ತಿ ಇಲ್ಲ, ಅಂತಃಪುರದಲ್ಲಿ ನೇರಿ ಹೆಂಗಳೆಯರೊಂದಿಗೆ ಚೆಲ್ಲಾಟವಾಡುವುದೆಂದರೆ ಅವನಿಗೆ ಪ್ರೀತಿ,'' ಎಂದೆಲ್ಲ ಅವನು ಪ್ರಚಾರಮಾಡಿದ. ಇದು ದೊರೆ ಶುದ್ಧೋದನನ ಕಿವಿಮುಟ್ಟಿ ಅವನು ತನ್ನ ಮಗನೊಂದಿಗೆ ಇದನ್ನು ಪ್ರಸ್ತಾಪ ಮಾಡಿದಾಗ ನಮ್ಮ ಸ್ವಾಮಿ, ''ಈ ವಿಚಾರದಲ್ಲಿ ಒಂದು ಸ್ಪರ್ಧೆ ಏರ್ಪಡಿಸಬಾರದೇಕೆ ? ಯಾರ ಸಾಮರ್ಥ್ಯ ಎಷ್ಟೆಂಬ ಪರೀಕ್ಷೆ ಆಗುತ್ತದೆ '' ಎಂದು ಹೇಳಿದ. ಅಂತೆಯೆ ಒಂದು ಸ್ಪರ್ಧೆ ಏರ್ಪಟ್ಟಾಗ ಸಿದ್ಧಾರ್ಥ ನಿಜವಾಗಿ ಪರಾಕ್ರಮಿ, ಚತುರ, ಸಮರ್ಥ ಎಂದು ಸಿದ್ಧವಾಯಿತು ; ದೇವದತ್ತನ ಮುಖ ಚಿಕ್ಕದಾಯಿತು.

ನಮ್ಮ ಸ್ವಾಮಿ ಮೊದಲಿಂದ ಗುಣಾಢ್ಯ, ನಮ್ರ, ಬುದ್ಧಿಶಾಲಿ ; ಜನರಿಗೆಲ್ಲ ಅಚ್ಚುಮೆಚ್ಚಿನವನು. ಇದು ದೇವದತ್ತನಿಗೆ ಹಿಡಿಸದು. ಸಿದ್ಧಾರ್ಥ

ಬುದ್ಧನಾದ ಮೇಲೆ ಅವನ ಪ್ರಶಸ್ತಿ ಮೂಲೆ ಮೂಲೆಯಲ್ಲಿ ಪಸರಿಸುತ್ತಿದ್ದಾಗ ದೇವದತ್ತನ ವೈರವೂ ವರ್ಧಿಸುತ್ತಿತ್ತು. ನಮ್ಮ ಸಂಘವನ್ನು ಮುರಿಯಲೆಂದೇ ಸಂಘ ಸೇರಿದನೋ ಅನಿಸುತ್ತಿತ್ತು ; ಆಯುಷ್ಮಂತನಾದ ಆನಂದನಿಗೆ ದುರ್ಬೋಧೆ ಮಾಡಿ ಅವನಿಗೆ ಭಗವಂತನಲ್ಲಿದ್ದ ಶ್ರದ್ಧೆಯನ್ನು ಮುರಿಯಲು ದೇವದತ್ತ ಇನ್ನಿಲ್ಲದಂತೆ ಪ್ರಯತ್ನ ಪಟ್ಟ ; ಆದರೆ ನಮ್ಮ ಆನಂದನ ಶೀಲ ದೃಢವಾಗಿತ್ತು. ಆಯುಷ್ಮಂತರಾದ ಶಾರಿಪುತ್ರ— ಮೌದ್ಗಲ್ಯಾಯನರನ್ನೂ ಇದೇ ರೀತಿ ಶ್ರದ್ಧೆಗೆಡಿಸುವ ಪ್ರಯತ್ನ ಮಾಡಿ ವಿಫಲನಾದ. ಕಡೆಗೆ ಅರ್ಹತನಾದವನು ರಾಜಗೃಹದ ವೇಣುವನದಲ್ಲಿ ತಂಗಿದ್ದಾಗ ಒಂದು ಸಲ ಅವನ ಬಳಿಗೆ ಬಂದು "ತಥಾಗತ, ನೀನು ನಿಯಮಿಸಿರುವ ವಿಧಿಗಳೆಲ್ಲ ಬಹಳ ಲಘು. ದೇಹ ತುಂಬ ಹೇಯವಾದದ್ದು ; ಇದನ್ನು ದಮನ ಮಾಡುವ ಶೀಲಗಳು, ವಿಧಿಗಳು ಉಗ್ರವಾಗಿರಬೇಕು" ಎಂದ ದೇವದತ್ತ. ಅದನ್ನು ಕೇಳಿ ಭಗವಂತ, "ದೇಹ ಹೇಯವಾದುದು ನಿಜ, ದೇವದತ್ತ ಆದರೆ ಅದರಲ್ಲಿಯೇ ಪರಮಾರ್ಥವನ್ನು ಸಾಧಿಸಬೇಕಲ್ಲವೆ ? ಸತ್ಯದ ಅರಿವು ಅದರಲ್ಲಿ ಆಗಬೇಕೆಂದರೆ ಅತಿ ಭೋಗವೂ ಕೂಡದು, ಅತಿ ದಮನವೂ ಕೂಡದು. ನಾನು ಎಂದೂ ಮಧ್ಯಮಮಾರ್ಗವನ್ನು ಹೇಳುವೆನು, ದೇವದತ್ತ" ಎನ್ನಲು ಅವನೀತನಾದ, ಅಭಾವಿತಚಿತ್ತನಾದ ದೇವದತ್ತ ಭಗವಂತನನ್ನು ಮನಸ್ವೀ ನಿಂದಿಸುತ "ಈ ಶಾಕ್ಯಶ್ರಮಣರು ಸುಖಕ್ಕೆ ಒಲಿದವರು, ಅವರಿಗೆ ನಿಷ್ಠೆ ಹಿಡಿಸದು, ಅವರಿಗೆ ಏಕಾಂತವು ಹಿತ, ಅವರಿಂದ ಜನರಿಗೆ ಆಗುವ ಪ್ರಯೋಜನ ಏನೂ ಇಲ್ಲ, ಸ್ವಾರ್ಥ ಪರರು, ದೇಹವನ್ನು ಬೆಳೆಸಲು ನಾಚಿಕೆಯಿಲ್ಲದವರು" ಎಂದೆಲ್ಲ ಹೇಳುತ್ತ ತನ್ನ ಜತೆಗಾರರಾದ ಸುಮಾರು ಐನೂರು ಭಿಕ್ಷುಗಳನ್ನು ಕೂಡಿಕೊಂಡು ಸಂಘ ಬಿಟ್ಟು ಹೊರಟುಹೋದನು.

ಅನಂತರ ಅವನೇ ಒಂದು ಬೇರೆ ವಿಹಾರ ಕಟ್ಟಿಸಿಕೊಂಡು, ಅಲ್ಲಿ ತನ್ನದೇ ಒಂದು ಸಂಘ ಸೇರಿಸಿ, ನಮ್ಮ ಭಗವಂತನಂತೆಯೇ ತಾನೂ ಇರುತ್ತೇನೆಂದುಕೊಂಡು ಸ್ವಲ್ಪ ದಿನ ಇದ್ದ. ಮೊದಮೊದಲು ಸ್ವಲ್ಪ

ಮರ್ಯಾದೆಯೂ ಲಬ್ಧವಾಯಿತು ; ಜನ ಅವನ ವಾಕ್ಚಾತುರ್ಯಕ್ಕೆ ಮರುಳಾಗಿ ಸೇರುತ್ತಿದ್ದರು. ಒಮ್ಮೆ ಅವನು ಉಪದೇಶ ಮಾಡುತ್ತಿದ್ದ ವೇಳೆಯಲ್ಲಿ ಆಯುಷ್ಮಂತನಾದ ಶಾರಿಪುತ್ರನು ಅಲ್ಲಿಗೆ ಹೋಗಿದ್ದ ; ಅವನನ್ನು ನೋಡಿ ದೇವದತ್ತ ಈ ಶಾರಿಪುತ್ರನೂ ಭಗವಂತನೊಂದಿಗೆ ಜಗಳವಾಡಿಕೊಂಡು ತನ್ನ ಬಳಿ ಬಂದಿದ್ದಾನೆಂದು ಒಗೆದು, ''ಶಾರಿಪುತ್ರ, ನನಗೆ ಆಯಾಸವಾಗಿದೆ, ತುಸು ಹೊತ್ತು ವಿಶ್ರಮಿಸಿಕೊಳ್ಳುತ್ತೇನೆ. ನನ್ನ ಬದಲಿಗೆ ನೀನು ಉಪದೇಶ ಮಾಡುವಿಯಾ ?'' ಎಂದ. ಶಾರಿಪುತ್ರ ಆಗಲೆಂದು ವೇದಿಕೆ ಹತ್ತಿ ನಿಂತ, ದೇವದತ್ತ ಮಲಗಿ ನಿದ್ದೆ ಮಾಡಹತ್ತಿದ. ದೇವದತ್ತ ಎಚ್ಚೆತ್ತು ನೋಡುತ್ತಾನೆ, ಬಟ್ಟಬಯಲು ! ಶಾರಿಪುತ್ರನ ಉಪದೇಶ ಕೇಳಿ ತನ್ನ ಕಡೆಯವರೆಲ್ಲ ಭಗವಂತನ ಸಂಘಕ್ಕೇ ಮತ್ತೆ ಶರಣು ಹೋಗಿದ್ದಾರೆ !

ದೇವದತ್ತನ ವೈರ ಉರಿಯಹತ್ತಿತು. ಭಗವಂತನನ್ನು ಕೊಂದ ಹೊರತು ತನಗೆ ಶಾಂತಿ ಇಲ್ಲವೆಂದು ನಿರ್ಧರಿಸಿಕೊಂಡು, ದಕ್ಷಿಣದಿಂದ ಜಾಣರಾದ ಕೆಲವು ಯಾಂತ್ರಿಕರನ್ನು ಕರೆಸಿ, ಅವರಿಂದ ಒಂದು ದೊಡ್ಡ ಯಂತ್ರ ತಯಾರಿಸಿದ ; ಅದರಿಂದ ದೊಡ್ಡ ದೊಡ್ಡ ಬಂಡೆಗಳನ್ನು ಅನಾಯಾಸವಾಗಿ ದೂರ ಎಸೆಯಬಹುದು ; ಇದನ್ನು ಭಗವಂತನ ವಾಸಗೃಹಕ್ಕೆ ಅನತಿದೂರದಲ್ಲೇ ನಿಲ್ಲಿಸಿ ಅಲ್ಲಿಂದ ದೊಡ್ಡ ಬಂಡೆಯೊಂದನ್ನು ಭಗವಂತನ ಮೇಲೆ ಎಸೆಯಲು ಕೆಲವು ಆಳುಗಳನ್ನು ನೇಮಿಸಿದ. ಅವರು ಯಂತ್ರ ಹತ್ತಿ ತಮ್ಮ ಕೆಲಸ ಇನ್ನೇನು ಸಾಧಿಸಬೇಕು, ಎನ್ನುವಲ್ಲಿ ಭಗವಂತನನ್ನು ಒಮ್ಮೆ ದೃಷ್ಟಿಸಿ ನೋಡಿದರು ; ಕರುಣೆ, ಪ್ರೀತಿ, ಉಪೇಕ್ಷೆಗಳ ಮೂರ್ತಿಯಾದ ಭಗವಂತನ ಶಾಂತಮುದ್ರೆ ಅವರನ್ನು ಸೆಳೆಯಿತು ; ಯಂತ್ರದಿಂದ ಇಳಿದು ಅವರು ಭಗವಂತನ ಬಳಿ ಬಂದು ನಮಸ್ಕರಿಸಿ ಉಪಾಸಕರಾಗಿಬಿಟ್ಟರು. ಇದನ್ನೆಲ್ಲ ಗೃಧ್ರಕೂಟಪರ್ವತದಿಂದ ನೋಡುತ್ತಿದ್ದ

ದೇವದತ್ತ ಬಹಳ ಸಿಟ್ಟುಗೊಂಡು ತಾನೇ ಆ ಕೆಲಸ ಮಾಡುವೆನೆಂದು ಬಂದು ಯಂತ್ರ ಹತ್ತಿ ಬಂಡೆಯೊಂದನ್ನು ಭಗವಂತನ ಕಡೆಗೆ ಎಸೆದ. ಅದೃಷ್ಟವಶಾತ್ ಅದು ಗುರಿ ತಪ್ಪಿ ಭಗವಂತನ ಕಾಲಿಗೆ ಮಾತ್ರ ತಾಕಿತು. ಅದೇ ಒಂದು ದೊಡ್ಡ ವ್ರಣವಾಗಿ, ವೈದ್ಯ ಜೀವಕ ಮೂರು ದಿನಗಳು ಉಪಚಾರ ಮಾಡಬೇಕಾಯಿತು.

ದೇವದತ್ತ ಇನ್ನೂ ನಿರಾಶನಾಗಲಿಲ್ಲ. ದೊರೆಯ ಗಜಶಾಲೆಯಲ್ಲಿ 'ರತ್ನಪಾಲ' ('ಮಾಲಾಗಿರಿ') ಎಂಬ ತುಂಟ ಆನೆಯೊಂದಿತ್ತು ; ಅದಕ್ಕೆ ಎಷ್ಟೋ ಪ್ರಾಣಗಳು ಆಹುತಿ ಆಗಿದ್ದವು. ಒಂದು ದಿನ ರಾಜಗೃಹದ ಶ್ರೇಷ್ಠಿಯೊಬ್ಬನು ಭಗವಂತನನ್ನು ಭಿಕ್ಷೆಗೆ ಆಹ್ವಾನಿಸಿದ್ದಾಗ, ದೇವದತ್ತ ಗಜಶಾಲೆಯ ದೌವಾರಿಕರಿಗೆ ದುಡ್ಡು ತಿನ್ನಿಸಿ, ಭಗವಂತ ಬರುವ ಹಾದಿಯಲ್ಲಿ ಆನೆಯನ್ನು ಲಂಗುಲಗಾಮಿಲ್ಲದೆ ಬಿಡುವ ಸಂಚುಮಾಡಿದ. 'ರತ್ನಪಾಲ'ನೆಂಬ ಹೆಸರೇ ರಾಜಗೃಹದ ಜನರಿಗೆ ಭಯಂಕರ ; ಎಷ್ಟು ಹಿಡಿತದಲ್ಲಿದ್ದರೂ ಅದು ಆದಷ್ಟು ಹಾವಳಿ ಮಾಡದೆ ಇರುತ್ತಿರಲಿಲ್ಲ. ಆ ದಿನ ಭಗವಂತ ಶ್ರೇಷ್ಠಿಯ ಮನೆಗೆ ಭಿಕ್ಷೆಗಾಗಿ ಬೀದಿಯಲ್ಲಿ ಬರುತ್ತಿದ್ದ ; ಹಿಂದೆ ನಮ್ಮ ಭಿಕ್ಷು ಸಂಘ ; ಬೀದಿಯ ಅಂಚುಗಳೆರಡರಲ್ಲೂ ಸಾಲುಸಾಲು ಜನ ಭಗವಂತನ ದರ್ಶನಕ್ಕೆಂದು. ಆಗ ಈ 'ರತ್ನಪಾಲ' ಹುಚ್ಚು ಹುಚ್ಚಾಗಿ ಧ್ವಂಸಮಾಡುತ್ತ ಆವೇಶಬಂದ ಭೂತದಂತೆ ನುಗ್ಗಿ ಬರುತ್ತಿತ್ತು. ನೆರೆದ ಜನರೆಲ್ಲ ದಿಕ್ಕು ಕೆಟ್ಟು ಚಲ್ಲಾಪಿಲ್ಲಿಯಾಗಿ, ವಿಕಟವಾಗಿ ಕೂಗುತ್ತ ಓಡಿದರು. ಭಗವಂತನ ಹಿಂದೆ ಬರುತ್ತಿದ್ದ ನಾವೆಲ್ಲರೂ ದಿಕ್ಕಾಪಾಲಾಗಿ ಓಡಿದೆವು ; ಆಯುಷ್ಮಂತನಾದ ಆನಂದ ಒಬ್ಬ ಮಾತ್ರ ಭಗವಂತನ ಪಕ್ಕಬಿಟ್ಟು ಸರಿಯಲಿಲ್ಲ. ಅವನ ಶ್ರದ್ಧೆ ಸ್ಥೈರ್ಯ ನಮಗೆಲ್ಲಿ? ಅದು ನಿಜವಾಗಿ ನಮಗೆಲ್ಲ ನಾಚಿಕೆಗೇಡಿನ ಪ್ರಸಂಗ. ಆದಿಯಲ್ಲಿ, ಮಧ್ಯದಲ್ಲಿ, ಅಂತ್ಯದಲ್ಲಿ ಕಲ್ಯಾಣವಾದ, ಲೋಕೋತ್ತರವಾದ ಧರ್ಮವನ್ನು ತಥಾಗತನಾದ ಬುದ್ಧನಿಂದಲೇ ಕೇಳಿದ್ದರೂ ಜೀವದಮೇಲಿನ

ಆಸೆ, ಅಭಿಮಾನ ನಮ್ಮನ್ನು ಬಿಟ್ಟಿರಲಿಲ್ಲ ; ಪ್ರವ್ರಜ್ಯದ ವೇಷ ಧರಿಸಿದ್ದರೂ ಸಾಮಾನ್ಯ ಜನರಿಗಿಂತ ನಾವು ಏನೂ ಉತ್ತಮರಾಗಿರಲಿಲ್ಲ. ಈ ದೃಷ್ಟಿಯಿಂದ ಆನಂದ ನಮಗೆಲ್ಲರಿಗೂ ಶ್ರೇಷ್ಠ ; ಅವನು ಭಗವಂತನ ಪ್ರೀತಿಯ ಶಿಷ್ಯನೆನಿಸಿದ್ದು ಏನಾಶ್ಚರ್ಯ ?

ಅದಿರಲಿ, ಆ ಆನೆ ಹುಚ್ಚುಹುಚ್ಚಾಗಿ, ಭಯಾನಕವಾಗಿ ಕೂಗುತ್ತ ಬರುತ್ತಿರುವಲ್ಲಿ ಭಗವಂತ ಎಳ್ಳಷ್ಟೂ ಭಯಪಡದೆ ಆನೆಯ ಕಡೆಗೇ ಹೋಗುತ್ತಿದ್ದ. ಏನು ಸೋಜಿಗ ! ಭಿಕ್ಷುಗಳೇ, ಅಂದಾದದ್ದು ಇನ್ನೂ ನನ್ನ ನೆನಪಿನಲ್ಲಿ ಹೊಸದಾಗಿಯೇ ಇದೆ. ಆನೆ ಇದ್ದಕ್ಕಿದ್ದಂತೆ ಸೌಮ್ಯವಾಯಿತು ; ಎಂಟು ಜನರನ್ನು ಒಟ್ಟಿಗೆ ಸುತ್ತಿ ಎಸೆಯುತ್ತಿದ್ದ ಆ 'ರತ್ನಪಾಲ' ಭಗವಂತನನ್ನು ನೋಡಿದೊಡನೆಯೇ ನಮ್ರವಾಯಿತೋ ಎನ್ನು ಹಾಗೆ ಬಂದು, ಬಗ್ಗಿ, ಭಗವಂತನ ಕಾಲಿಗೆ ಸೊಂಡಿಲು ಮುಟ್ಟಿಸಿ, ಪಕ್ಕಕ್ಕೆ ಸರಿದು ನಿಂತಿತು. ಮೈತ್ರಿಯೇ ರಸವಾಗಿ ಉಳ್ಳ ಭಗವಂತನ ಪಾಲಿಗೆ ಎಲ್ಲವೂ ಸಾಧುವಾದುದೇ ಅಲ್ಲವೇ ? ಇದೂ ದೇವದತ್ತನಿಗೆ ಕಹಿಯೇ ಆಯಿತು.

ಇದೆಲ್ಲ ಪ್ರಕಟವಾದ ಮೇಲೆ, ಜನರೆಲ್ಲ ಅಂದರು — "ದೇವದತ್ತ ನೀನು ಭಗವಂತನಿಗೆ ಅಪಚಾರ ಮಾಡಿದ್ದು ನಿಜ, ಆದರೆ ಭಗವಂತನಿಗೆ ನಿನ್ನ ಮೇಲೆ ವೈರವಾಗಲೀ, ಛಲವಾಗಲೀ ಇಲ್ಲ. ಅವನು ಕಾರುಣ್ಯವೇ ಮೂರ್ತಿವೆತ್ತ ವ್ಯಕ್ತಿ, ಅವನಲ್ಲಿ ಹೋಗಿ ಕ್ಷಮೆ ಬೇಡು, ನಿಜವಾಗಿ ನಿನ್ನನ್ನು ಆದರಿಸುತ್ತಾನೆ" ಎಂದರು. ದೇವದತ್ತನಿಗೂ ತಾನು ಮಾಡಿದ ಎಲ್ಲ ಪಾಪಗಳ ಆಳದ ಅರಿವಾಗಿ ಲೋಕಜ್ಯೇಷ್ಠನಾದ ಸುಗತನಿಗೆ ಅಪಚಾರವೆಣೆಸಿದೆನಲ್ಲಾ ಎಂಬ ಪಶ್ಚಾತ್ತಾಪ ಗಾಢವಾಯಿತು. ಭಗವಂತ ನನ್ನೂ ಅವನ ಧರ್ಮವನ್ನೂ ಭಂಗಮಾಡಲು ಅವನು ಮಾಡಿದ ಪ್ರಯತ್ನವೆಲ್ಲ ವಿಫಲವಾಗಿ, ಅವನಿಗೆ ಅಯ್ಯೋ ಎಂದು ಸಹಾನುಭೂತಿ ತೋರಿಸುವವರು ಒಬ್ಬರೂ ಇಲ್ಲವಾಗಿ, ಅಕ್ಷರಶಃ ಅನಾಥನಾಗಿ, ದುಷ್ಕರ್ಮ-ಪಾಪಗಳ ಭಾರ

ದುರ್ಭರವಾದಾಗ, ದೇಹದಲ್ಲಿ ದೌರ್ಬಲ್ಯ, ವಿಕಳತೆಗಳು ಮನೆ ಮಾಡಿದಾಗ, ಅಂತರಂಗದಲ್ಲಿ ಮಾರ ಕಟ್ಟಿಸಿದ ಅರಮನೆಯ ಗಾತ್ರ ತನ್ನನ್ನು ಕಂಗಾಲು ಮಾಡಿದಾಗ ಭಗವಂತನಲ್ಲಿ ಅವನ ಶ್ರದ್ಧೆ ಮೂಡತೊಡಗಿತು. ''ಭಗವಂತ ನಿಜವಾಗಿ ನನ್ನನ್ನು ಮನ್ನಿಸುವನೇ ? ನನ್ನಂಥ ಪಾಪಿಯನ್ನು ಯಾರು ತಾನೆ ಮನ್ನಿಸಿಯಾರು ? ನನ್ನ ಕರ್ಮದ ಫಲ ನಾನು ಉಣಬೇಕಷ್ಟೆ ? ನಾನು ನಿಜವಾಗಿ ಅಂಧಕಾರದಲ್ಲಿಯೇ ಇದ್ದೇನಲ್ಲಾ, ದಯಾಮಯನಾದ, ಪುರುಷ ದಮ್ಯಸಾರಥಿಯಾದ, ದೇವಮನುಷ್ಯರಿಗೆ ಶಾಸ್ತಾರನಾದ, ಆಸ್ರವಗಳೆಲ್ಲ ವನ್ನೂ ದಾಟಿ ಜಿನನಾದ, ಲೋಕಜ್ಯೇಷ್ಠನಾದ, ಅರ್ಹತನಾದ ಸಂಬುದ್ಧನಿಗೆ ನಾನು ಅಪಚಾರವೆಣಿಸಿದೆನಲ್ಲಾ!'' ಎಂಬ ಕೊರಗು ಅವನನ್ನು ಕಾಡಿಸಿತು. ದೇಹದಲ್ಲಿ ಶಕ್ತಿ ಉಡುಗಿತು ; ರೋಗ ಹಿಡಿದು, ಬುದ್ಧಿ ಭ್ರಮಿಸಿ, ತೀರ ನಿಶ್ಯಕ್ತನಾಗಿ, ಖಿನ್ನನಾಗಿ ಮಲಗಿದ ಒಂದು ದಿನ ಇದ್ದಕ್ಕಿದ್ದಂತೆ, ಉನ್ಮತ್ತನಂತೆ ಎದ್ದು ''ಸಂಬುದ್ಧ, ನನ್ನನ್ನು ಮನ್ನಿಸುವೆಯಾ ? ನಿನ್ನನ್ನೇ ನಂಬಿದ್ದೇನೆ. ನಿನ್ನ ಧರ್ಮದಲ್ಲಿ ಶ್ರದ್ಧೆ ನನ್ನ ನರಗಳಲ್ಲಿ, ಮೂಳೆಗಳಲ್ಲಿ, ರಕ್ತಮಾಂಸಗಳಲ್ಲಿ ಮೂಡಿದೆ. ನಿಜವಾಗಿ ನುಡಿಯುವೆ, ಭಗವಂತ ! ನನ್ನನ್ನು ಕ್ಷಮಿಸು. ನಿನ್ನ ಬಂಧುವೆಂದಾದರೂ ನನ್ನನ್ನು ಕ್ಷಮಿಸು, ಶಾಕ್ಯಸಿಂಹ !'' ಎಂದು ಅಳುತ್ತಾ ಅರಚುತ್ತಾ ''ಭಗವಂತನೆಲ್ಲಿ ? ಸಂಬುದ್ಧನೆಲ್ಲಿ ?'' ಎಂದು ಎದ್ದು ಓಡತೊಡಗಿದ. ರೋಗ ತೀಕ್ಷ್ಣವಾಗಿ, ಅಶಕ್ತನಾಗಿದ್ದ ದೇವದತ್ತ ನಿಲ್ಲಲಾರದೆ ಕೆಳಗೆ ಬಿದ್ದು ನಿಸ್ಸಂಜ್ಞನಾಗಿ ಪ್ರಾಣಬಿಟ್ಟ. ಕರುಣಾಶೀತಲಹೃದಯನಾದ ನಮ್ಮ ಸ್ವಾಮಿ ಆಗ ದೇವದತ್ತನ ಬಳಿಗೆ ತಾನೇ ಬಂದು, ಅವನ ಪ್ರಶಂಸೆಯ ಮಾತುಗಳನ್ನಾಡಿ, ಅವನ ಸಂಸ್ಕಾರಾದಿಗಳಲ್ಲಿ ಭಾಗವಹಿಸಿದ.

ಇದೀಗ, ಭಿಕ್ಷುಗಳೇ ದೇವದತ್ತನ ಕಥೆ ಎಂದು ಸ್ಥವಿರ ಅನುರುದ್ಧ ಮುಗಿಸಿದ. ನೆರೆದ ಭಿಕ್ಷುಗಳು ನಿಟ್ಟುಸಿರುಬಿಟ್ಟು ''ಜಗತ್ತು ಬೆಂಕಿಯಿಂದ ಆವೃತ ವಾಗಿದೆ, ಎಂದು ನಮ್ಮ ಸ್ವಾಮಿ ಹೇಳುತ್ತಿದ್ದನಲ್ಲವೆ ?'' ಎಂದುಕೊಂಡರು.

◈ ◈ ◈

ಪಟಾಚಾರಾ *

ಶ್ರಾವಸ್ತಿಯಲ್ಲಿ ಶ್ರೀಮಂತನಾದ ಶ್ರೇಷ್ಠಿಯೊಬ್ಬನಿದ್ದ ; ಅವನಿಗೆ ಒಬ್ಬಳು ಚೆಲುವೆ ಮಗಳು — ಪಟಾಚಾರಾ. ಹುಡುಗಿಗೆ ಹದಿನಾರು ವರ್ಷ ಆಗುತ್ತಿದ್ದಂತೆ ಅವಳ ತಂದೆತಾಯಿಯರು ತಮ್ಮ ಏಳಂತಸ್ತಿನ ಮಹಲಿನ ಮೇಲನೆಯ ಅಂತಸ್ತಿನಲ್ಲಿ ಅವಳ ವಾಸಕ್ಕೆಂದು ಅಣಿಮಾಡಿ, ಅಲ್ಲಿ ಎಲ್ಲ ಅನುಕೂಲ ಮಾಡಿ, ಸರಿಯಾದ ಸಿಬ್ಬಂದಿಯನ್ನಿಟ್ಟರು. ಹೀಗಿದ್ದರೂ ಹುಡುಗಿ ವಯಸ್ಸಿನ ಪ್ರಮಾದದಿಂದ ಅಲ್ಲಿಯ ಕಾವಲುಗಾರನೊಂದಿಗೆ ಪ್ರಣಯ ಮಾಡಿದಳು.

ಕಾಲಕ್ರಮದಲ್ಲಿ ಅವಳ ತಂದೆ ತಾಯಿ ಅದೇ ಊರಿನ ಒಬ್ಬ ಶ್ರೀಮಂತನಾದ, ತಮ್ಮ ಯೋಗ್ಯತೆಗೆ ಸಾಟಿಯಾದ ಒಬ್ಬ ಯುವಕನಿಗೆ ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡುವಂತೆ ನಿಶ್ಚಯಿಸಿ ಲಗ್ನ-ಮುಹೂರ್ತಗಳನ್ನಿಡಿಸಿದರು. ಇದು ತಿಳಿದೊಡನೆ ಪಟಾಚಾರಾ ತನ್ನ ಪ್ರಿಯನಾದ ಕಾವಲುಗಾರರನ್ನು ಕರೆದು, ''ಇಗೋ ನನ್ನ ತಂದೆ ತಾಯಿ ನನಗೆ ಬೇರೊಬ್ಬನೊಂದಿಗೆ ವಿವಾಹ ಮಾಡಲು ಹವಣಿಸುತ್ತಿದ್ದಾರೆ. ಹಾಗೇನಾದರೂ ಆಗಿ ನಾನು ಗಂಡನ ಮನೆಗೆ ಹೋದೆನೆಂದರೆ ನೀನು ನನ್ನನ್ನು ಕಾಣುವುದು ಕೂಡ ಅಸಾಧ್ಯವಾಗುತ್ತದೆ. ಅದು ಕಾರಣ, ನೀನು ನನ್ನಲ್ಲಿ ನಿಜವಾಗಿ

---

* ಜೀವನ, ಸಂಪುಟ ೧೪, ಸಂಚಿಕೆ ೩ ; ಪುಟ ೧೦೨

ಅನುರಕ್ತನಾಗಿದ್ದರೆ ಏನಾದರೊಂದು ಉಪಾಯಮಾಡಿ ನನ್ನನ್ನು ಈ ಮನೆಯಿಂದ ಹೊರಗೆ ಹಾಯಿಸಿ ಕರೆದುಕೊಂಡು ಹೋಗು'' ಎಂದಳು. ಅವನೂ ಇದಕ್ಕೊಪ್ಪಿ ''ನಾಳೆ ಮುಂಜಾನೆ ನಾನು ನಗರದ್ವಾರದ ಬಳಿ ನಿನಗಾಗಿ ಕಾಯುತ್ತಿರುತ್ತೇನೆ. ನೀನು ಏನಾದರೂ ಮಾಡಿ ಇಲ್ಲಿಂದ ಹೊರ ಬಂದು ನನ್ನನ್ನು ಅಲ್ಲಿ ಸಂಧಿಸು. ನಾವು ಎಲ್ಲಿಯಾದರೂ ಮರೆಯಾಗೋಣ'' ಎಂದು ಹೇಳಿದ.

ಮರುದಿನ ಗೊತ್ತಾದ ಸ್ಥಳದಲ್ಲಿ ಅವನು ಕಾಯುತ್ತಿದ್ದಾಗ, ಇತ್ತ ಪಟಾಚಾರಾ ಬೆಳಕು ಹರಿಯುವ ಮುನ್ನ ಎದ್ದು, ಮಾಸಿದ ಬಟ್ಟೆಯುಟ್ಟು ಕೂದಲು ಕೆದರಿ, ಸಿಂಧೂರದಿಂದ ಮೈಯೆಲ್ಲ ಬಳಿದು, ನೀರಿನ ಕೊಡವೊಂದನ್ನು ತಲೆಯ ಮೇಲೆ ಹೊತ್ತು, ತನ್ನ ಊಳಿಗದವರೊಡಗೂಡಿ ನೀರು ತರಲು ಹೋಗುವವರಂತೆ ಹೊರ ಹೊರಟಳು. ಇಲ್ಲಿಂದ ಹೀಗೆ ತಪ್ಪಿಸಿಕೊಂಡವಳು ನೇರವಾಗಿ ನಗರದ್ವಾರದ ಬಳಿ ಕಾಯುತ್ತಿದ್ದ ತನ್ನ ಪ್ರಿಯನ ಬಳಿ ಬಂದು, ಅಲ್ಲಿಂದ ಇಬ್ಬರೂ ಬಹು ದೂರ ಹೋಗಿ ಒಂದು ಹಳ್ಳಿಯಲ್ಲಿ ನೆಲೆಸಿದರು. ಅಲ್ಲಿ ಗಂಡ ಭೂಮಿ ಉಳುವುದು, ಕಾಡಿನಿಂದ ಸೌದೆ ತರುವುದು ; ಹೆಂಡತಿ ನೀರು ತರುವುದು, ಅಕ್ಕಿ ಕುಟ್ಟುವುದು, ಅಡಿಗೆ ಮಾಡುವುದು — ಹೀಗೆ ಸಾಗುತ್ತಿತ್ತು ಇವರ ಸಂಸಾರ.

ಕಾಲಕ್ರಮದಲ್ಲಿ ಪಟಾಚಾರಾ ಗರ್ಭವತಿಯಾದಳು. ಪ್ರಸವದ ಸಮಯ ಸಮೀಪಿಸುವಲ್ಲಿ, ಅವಳು ಗಂಡನನ್ನು ಕರೆದು, ''ಈ ಸ್ಥಳದಲ್ಲಿ ನನಗೆ ಸಹಾಯ ಒಂದಿಲ್ಲ. ತಂದೆ ತಾಯಿಯರು ಎಂದಿದ್ದರೂ ಹಿತವರು, ನನ್ನಲ್ಲಿ ದೋಷ ಎಣಿಸರು. ಅದು ನಿಮಿತ್ತ ನನ್ನನ್ನು ಪ್ರಸೂತಿಗೆ ಅಲ್ಲಿ ಬಿಡು'' ಎಂದು ಕೇಳಿಕೊಂಡಳು. ಆದರೆ ಗಂಡ, ''ಏನು ಮಾತಿದು, ನನ್ನ ಚಿನ್ನ ? ನಿನ್ನ ತಂದೆ ತಾಯಿ ನನ್ನನ್ನು ಕಂಡರೆ ಸುಮ್ಮನೆ ಬಿಟ್ಟಾರೆ ? ನಾನು ಅಲ್ಲಿಗೆ ಹೋಗುವುದು ಎಂದೂ ಆಗದ ಮಾತು'' ಎಂದು ಅವಳ

ಅಭ್ಯರ್ಥನೆಯನ್ನು ನಿರಾಕರಿಸಿಬಿಟ್ಟ. ಮತ್ತೆ ಮತ್ತೆ ಅವಳು ಕೇಳಿಕೊಂಡಳು ; ಮತ್ತೆ ಮತ್ತೆ ಅದೇ ಉತ್ತರ.

ಒಂದು ದಿನ, ಅವಳ ಗಂಡ ಕಾಡಿಗೆ ಹೋಗಿದ್ದಾಗ ಅವಳು ನೆರೆಯವರನ್ನು ಕರೆದು, "ನಾನು ನನ್ನ ತೌರು ಮನೆಗೆ ಹೋಗುತ್ತೇನೆ. ನನ್ನ ಗಂಡ ಬಂದು ಕೇಳಿದರೆ ಹೇಳಿಬಿಡಿ" ಎಂದು ಹೇಳಿ, ತನ್ನ ಮನೆಯ ಬಾಗಿಲು ಮುಚ್ಚಿ ಹೊರಟಳು. ಗಂಡ ಮನೆಗೆ ಬಂದು, ತನ್ನವಳು ಇಲ್ಲದುದು ಕಂಡು, ನೆರೆಯವರನ್ನು ಕೇಳಿದಾಗ ಅವರು ಅಂತೆಯೇ ಹೇಳಿದರು. ಅದು ಕೇಳಿ ಅವನು "ಈಗಲೂ ಅವಳನ್ನು ಹಿಂಬಾಲಿಸಿ ಹಿಡಿದು ಬೇಡೆಂದು ಹೇಳುತ್ತೇನೆ" ಎಂದುಕೊಂಡು ಅವಳನ್ನು ಹುಡುಕುತ್ತ ಹೊರಟ. ಕಡೆಗೆ ಅವಳು ಸಿಕ್ಕಾಗ, ಅವಳನ್ನು ಕುರಿತು ಎಷ್ಟು ವಿಧದಲ್ಲಿ ಬೇಡೆಂದರೂ, ಅವಳು ಹೋಗೇ ಹೋಗುತ್ತೇನೆಂದು ಹಟ ಹಿಡಿದಳು.

ಉಪಾಯಗಾಣದೆ ಗಂಡ ಅವಳ ಜೊತೆಯಲ್ಲಿ ಮುಂದೆ ಹೊರಟ. ದಾರಿಯಲ್ಲಿ ಪ್ರಸವವೇದನೆ ಬಲವಾಗಿ ಅವಳು ತನ್ನ ಗಂಡನ ಮುಂದೆ ಹೇಳಿದಾಗ ಅವನು ಅಲ್ಲಿಂದ ಇಲ್ಲಿಂದ ಸೊಪ್ಪು-ಎಲೆ-ಬಳ್ಳಿಗಳನ್ನು ಆಯ್ದು ತಂದು ಮೆತ್ತಗೆ ಒಂದು ಹಾಸಿಗೆ ಮಾಡಿ ಅವಳನ್ನು ಮಲಗಿಸಿದ. ತುಸುಹೊತ್ತು ವೇದನೆಯಿಂದ ನರಳಿ ಪಟಾಚಾರಾ ಒಂದು ಗಂಡುಮಗುವನ್ನು ಹೆತ್ತಳು. ಇಷ್ಟೆಲ್ಲ ಆದಮೇಲೆ ಅವಳು, "ನಾನು ತೌರುಮನೆಗೆ ಹೋಗಬೇಕೆಂದಿದ್ದ ಕಾರ್ಯ ಇಲ್ಲಿಯೇ ಆಯಿತು," ಎಂದು ಹೇಳಿ ತಮ್ಮ ಹಳ್ಳಿಗೆ ತನ್ನ ಗಂಡನೊಂದಿಗೆ ಹಿಂತಿರುಗಿದಳು.

ಮತ್ತೊಮ್ಮೆ ಗರ್ಭವತಿಯಾದಾಗ ಹೀಗೆಯೆ ಅವಳು ತೌರುಮನೆಗೆ ಹೋಗುವ ಹಠಮಾಡಿ ತನ್ನ ಗಂಡನ ಜತೆಯಲ್ಲಿ ಹೋಗುತ್ತಿದ್ದಾಗ, ಹೀಗೆಯೇ ದಾರಿಯಲ್ಲಿ ಪ್ರಸವವೇದನೆ ಅತಿಯಾಗಿ ತನ್ನ ಗಂಡನಿಗೆ ಮೆತ್ತನೆಯ ಜಾಗ ಮಾಡ ಹೇಳಿದಳು. ಗಂಡ ಆಗಲೆಂದು

ಸೊಪ್ಪು-ಎಲೆ-ಬಳ್ಳಿಗಳನ್ನು ಹುಡುಕುತ್ತ ಹೊರಟ. ಆ ಸಮಯದಲ್ಲಿ ಇದ್ದಕ್ಕಿದ್ದಂತೆ ಕಾರ್ಮೋಡಗಳು ಕವಿದು, ಗುಡುಗು ಸಿಡಿಲುಗಳ ಆರ್ಭಟ ಅತಿಯಾಗಿ, ಬಲವಾದ ಜಡಿಮಳೆ ಆರಂಭವಾಯಿತು. ಅತ್ತ ಗಂಡ ತನ್ನ ಪ್ರೇಯಸಿಯ ಶಯ್ಯೆಗೆಂದು ಬಳ್ಳಿಗಳನ್ನು ಬಿಡಿಸಲು ಗಿಡದಮೇಲೆ ಕೊಡಲಿಯ ಪೆಟ್ಟು ಹಾಕುತ್ತಿದ್ದ ; ಅಷ್ಟರಲ್ಲಿ ಗಿಡದ ಬುಡದಲ್ಲಿದ್ದ ಒಂದು ಹುತ್ತದಿಂದ ವಿಷಸರ್ಪ ಬುಸ್ಸೆಂದು ಎದ್ದು ಅವನ ಕಾಲು ಕಚ್ಚಿತು ; ಒಡನೆಯೇ ವಿಷದ ಜ್ವಾಲೆ ದೇಹವನ್ನೆಲ್ಲ ಆವರಿಸಿ, ಚರ್ಮ ನೀಲಿಗಟ್ಟಿ ನಿಂತಿದ್ದಲ್ಲೇ ಬಿದ್ದು ಪ್ರಾಣಬಿಟ್ಟ

ಪಾಟಾಚಾರಾ ಇತ್ತ ಪ್ರಸವವೇದನೆಯಿಂದ ಬಹಳವಾಗಿ ಸಂಕಟ ಪಡುತ್ತಾ ಮತ್ತೊಂದು ಗಂಡುಮಗುವನ್ನು ಹೆತ್ತಳು. ಗಾಳಿ ಛಳಿಮಳೆಗಳನ್ನು ತಡೆಯಲಾರದೆ ಎರಡೂ ಹಸುಳೆಗಳು ಕಿಟ್ಟೆಂದು ಕಿರಿಚಿಕೊಂಡು, ಅಳತೊಡಗಿದವು. ತಾಯಿ ಅವೆರಡನ್ನೂ ಎದೆಗೆ ಅವುಚಿಕೊಂಡು, ಮಂಡಿಗಳನ್ನು ಸೇರಿಸಿ, ಕೈಗಳಿಂದ ನೆಲ ಊರಿ ಚಳಿಯಲ್ಲಿ ನಡುಗುತ್ತ ರಾತ್ರಿ ಎಲ್ಲ ಕಳೆದಳು. ಬೆಳಕು ಹರಿದಾಗ, ಪಟಾಚಾರಾ ಕೆಂಡದಂತೆ ಕೆಂಪಡರಿದ ಕೂಸನ್ನು ಎತ್ತಿಕೊಂಡು, ಮೊದಲನೆಯ ಮಗನನ್ನು ಕೈಹಿಡಿದು ನಡಸಿಕೊಂಡು ಗಂಡನನ್ನು ಹುಡುಕುತ್ತ ಹೊರಟಳು. ಆ ಹುತ್ತದ ಬಳಿ ಬಂದು, ತನ್ನ ಗಂಡ ಸತ್ತುಬಿದ್ದಿರುವದು ನೋಡಿ, ''ನನಗಾಗಿ ಇಂಥ ದುರ್ಗತಿ ಇವನಿಗೆ ಬಂತೆಂ''ದು ಎದೆ ಬಡಿದುಕೊಂಡು ಅಳುತ್ತ ಅರಚುತ್ತ ಮುಂದೆ ನಡೆದಳು.

ದಾರಿಯಲ್ಲಿ ಅಚಿರವತೀ ನದಿ ಸಿಕ್ಕಿತು. ಆಗತಾನೇ ಬಂದ ಭಾರಿ ಮಳೆಯ ದೆಸೆಯಿಂದ ನದಿಯಲ್ಲಿ ಪ್ರವಾಹ ಬಂದು ಭೋ ಎಂದು ಹರಿಯುತ್ತಿತ್ತು. ದುರ್ಬಲಳಾದ ಪಟಾಚಾರಾ ಎರಡೂ ಮಕ್ಕಳನ್ನು ಎತ್ತಿಕೊಂಡು ನದಿ ಹಾಯುವುದೆಂದರೆ ಅಸಾಧ್ಯದ ಮಾತಾಗಿತ್ತು. ಆದ್ದರಿಂದ

ದೊಡ್ಡ ಹುಡುಗನನ್ನು ಈ ದಡದಲ್ಲಿಯೇ ಕೂಡಿಸಿ, ಚಿಕ್ಕಮಗುವನ್ನು ಎತ್ತಿಕೊಂಡು, ಬಹಳ ಪ್ರಯಾಸದಿಂದ ನದಿಯನ್ನು ದಾಟಿ, ಆಚೆಯ ದಡ ಸೇರಿದಳು. ಅಲ್ಲಿ ಎಲೆಬಳ್ಳಿಗಳಿಂದ ಒಂದು ಪುಟ್ಟಹಾಸಿಗೆ ಮಾಡಿ ಮಗುವನ್ನು ಮಲಗಿಸಿ, ದೊಡ್ಡವನನ್ನು ಕರೆತರಲು ಮತ್ತೆ ನದಿಗೆ ಇಳಿದಳು. ಅವಳು ಅರ್ಧಹಾದಿ ಹೋಗುತ್ತಿದ್ದಾಗ, ಮೇಲಿಂದ ಒಂದು ಹದ್ದು ಹಾರಿಬಂದು ಮಾಂಸದಂತೆ ಕೆಂಚಗಿದ್ದ ತನ್ನ ಮಗುವನ್ನು ಎತ್ತಿಕೊಂಡು ಹಾರಿದುದು ಅವಳ ಕಣ್ಣಿಗೆಬಿದ್ದಿತು. ಇದು ನೋಡಿ ಪಟಾಚಾರಾ 'ಶ್ ಶ್' ಎಂದು ಅದನ್ನು ಹೆದರಿಸುತ್ತಿದ್ದರೂ ಅದು ಮಗುವನ್ನು ಕಚ್ಚಿಕೊಂಡು ಹಾರಿಯೇ ಹೋಯಿತು.

ಹೀಗೆ ನದಿಯಲ್ಲಿ ತನ್ನ ತಾಯಿ ನಿಂತು ಕೂಗುತ್ತಿದ್ದುದು ಈಚೆಯ ದಡದಲ್ಲಿದ್ದ ದೊಡ್ಡ ಮಗುವಿಗೆ ಕೇಳಿಸಿ, ತನ್ನನ್ನು ಬಾ ಎಂದು ಕರೆಯುತ್ತಿದ್ದಾಳೆ ಎಂದು ಬಗೆದು ನೀರಿಗೆ ಇಳಿದನು ; ಅವಸರದಲ್ಲಿ ಆಯತಪ್ಪಿ ನೀರಿಗೆ ಬಿದ್ದು ಪ್ರವಾಹದಲ್ಲಿ ಕೊಚ್ಚಿಹೋದ. ಪಟಾಚಾರಳ ದುಃಖ ಹೇಳುವುದೇನು ? ಒಂದು ಮಗು ಹದ್ದಿನ ಬಾಯಿಗೆ, ಮತ್ತೊಂದು ಪ್ರವಾಹದ ಪಾಲಿಗೆ ; ತನ್ನ ಗಂಡ ಹಾವಿಗೆ ಆಹುತಿ ! ಅವಳಿಗೆ ದಿಕ್ಕೇ ತೋಚಲಿಲ್ಲ. ಹುಚ್ಚಿಯಂತೆ ಕಿರುಚುತ್ತ ಮುಂದೆ ನಡೆದಳು.

ನಡೆಯುತ್ತ ನಡೆಯುತ್ತ ದಾರಿಯಲ್ಲಿ ಶ್ರಾವಸ್ತಿಯ ಒಬ್ಬ ಮನುಷ್ಯನನ್ನು ಪಟಾಚಾರಾ ಕಂಡಳು. "ಸ್ವಾಮಿ, ತಾವು ಎಲ್ಲಿಯವರು ?" "ನನ್ನದು ಶ್ರಾವಸ್ತಿಯಮ್ಮಾ". "ಹಾಗಾದರೆ ಶ್ರಾವಸ್ತಿಯಲ್ಲಿ ಇಂಥ ಬೀದಿಯಲ್ಲಿ ಇಂಥ ಮನೆಯಲ್ಲಿ ಇಂಥವರು ಇದ್ದಾರಲ್ಲ, ತಮಗೆ ಗೊತ್ತೇ ?" ಎಂದು ತನ್ನ ತಾಯಿತಂದೆಯರ ಗುರುತು ಹೇಳಿದಳು. ಆತ ಹೂಂ ಎಂದಾಗ, ಪಟಾಚಾರ "ಅವರು ಹೇಗಿದ್ದಾರೆ, ಸ್ವಾಮಿ !" ಎಂದು ಕೇಳಿದಳು. ಅದಕ್ಕಾತ, "ಅಯ್ಯೋ, ತಾಯಿ, ಬೇರೆಯವರ

ವಿಚಾರಬೇಕಿದ್ದರೆ ಕೇಳು, ಅವರದು ಮಾತ್ರ ಕೇಳಬೇಡ'' ಎಂದು ಹೇಳಿದಾಗ ಅವಳ ಹೃದಯ ಕುಗ್ಗಿ ''ಇಲ್ಲ, ಇಲ್ಲ, ನನಗೆ ಬೇರೆಯವರ ವಿಚಾರದ ಅವಶ್ಯ ಇಲ್ಲ, ದಯಮಾಡಿ ಇವರ ವಿಚಾರ ಹೇಳಿ'' ಎಂದು ಬೇಡಿಕೊಂಡಳು. ''ನೆನ್ನೆ ಬಂದ ಮಳೆ ನೋಡಿದೆಯಷ್ಟೆ? ''ಹೂಂ. ಅದು ನನಗೊಬ್ಬಳಿಗೆ ಮಾತ್ರ ಬಂದಿತ್ತು, ಅದರ ವಿಚಾರ ಆಮೇಲೆ ಹೇಳುತ್ತೇನೆ. ಈಗ ಇದು ಹೇಳಿ.'' ''ತಾಯಿ, ಈ ಮಳೆಗಾಳಿಯಿಂದ ಆ ಮನೆ ಕುಸಿದು ಬಿದ್ದು ಒಳಗಿದ್ದ ಮಂದಿಯೆಲ್ಲ ಒಬ್ಬರೂ ಉಳಿಯದಂತೆ ಸತ್ತರು. ನೆರೆಯವರು, ನೆಂಟರು ಅವರ ಶವಗಳನ್ನೆಲ್ಲ ಒಟ್ಟಾರೆ ಸೇರಿಸಿ ಸುಟ್ಟರು. ಅಗೋ ಆ ಬೆಂಕಿ ಇನ್ನೂ ಕಾಣುತ್ತಿದೆ.''

ಪಟಾಚಾರಾ ಒಮ್ಮೆಲೇ ಪ್ರಜ್ಞೆ ತಪ್ಪಿದಳು. ಸ್ಮೃತಿ ಬಂದಾಗ ಹುಚ್ಚಿ ಯಾದಳು. ಮೈಮೇಲಿನ ಬಟ್ಟೆ ಕಳಚಿ ಬಿತ್ತು, ಬರಿಬೆತ್ತಲೆಯೇ ಅಲೆದಾಡ ಹತ್ತಿದಳು. ಹುಟ್ಟಿದಂತೆಯೇ ನಗ್ನಳಾಗಿ ಪಟಾಚಾರ ಆರ್ತಸ್ವರದಿಂದ ಕೂಗುತ್ತ ಧಾರೆ ಧಾರೆ ಕಣ್ಣೀರು ಸುರಿಸುತ್ತ ಓಡ ಹತ್ತಿದಳು.

ಕಂಡವರೆಲ್ಲ ''ಹುಚ್ಚಿ! ಹುಚ್ಚಿ!'' ಎಂದು ನಗುತ್ತಿದ್ದರು. ಕೆಲವರು ಅವಳ ಮೇಲೆ ಸಗಣಿ ಎಸೆದರು, ಕೆಲವರು ಕಲ್ಲು ಬೀರಿದರು, ಕೆಲವರು ಅವಳ ತಲೆಯ ಮೇಲೆ ಬೂದಿ ಚೆಲ್ಲಿದರು.

ಅಲ್ಲಿಯೇ ಜೇತವನದಲ್ಲಿ ಆಗ ಅರ್ಹತನಾದ ಗೌತಮ ಬುದ್ಧ ತಂಗಿದ್ದ. ಆ ಸಂಜೆ ತನ್ನ ಶಿಷ್ಯಸಂಘಕ್ಕೆ ಬುದ್ಧ ಧರ್ಮಬೋಧೆ ಮಾಡುತ್ತಿದ್ದ ಸಮಯದಲ್ಲಿ ಅಲ್ಲಿಗೆ ಪಟಾಚಾರಾ ಬೆತ್ತಲೆಯಾಗಿ ಅರಚುತ್ತ ಅಳುತ್ತ ಓಡಿ ಬಂದಳು. ಇವಳ ಘೋರ ರೂಪ ನೋಡಿ ನೆರೆದವರೆಲ್ಲ ''ಇವಳು ಅರ್ಹತನ ಬಳಿಗೆ ಹೋಗಬಾರದು'' ಎಂದು ತಡೆಯುವ ಪ್ರಯತ್ನ ಮಾಡಹತ್ತಿದರು. ಆಗ ಬುದ್ಧನಾದವನು, ''ಅವಳನ್ನೇಕೆ ತಡೆಯುವಿರಿ ?'' ಎಂದು ಹೇಳಿ ಅವಳನ್ನು ಕುರಿತು ''ಬಾಮ್ಮಾ, ಬಾ'' ಎಂದು ಕರೆದ.

ಒಡನೆಯೇ ಅವಳಿಗೆ ಸಾಮಾನ್ಯ ಲೋಕದ ಅರಿವಾಗಿ, ತನ್ನ ನಗ್ನತೆಗೆ ನಾಚಿ, ದೇಹ ಮುದುಡಿಕೊಂಡು ಭೂಮಿಗೆ ಬಗ್ಗಿ ಕೂತಳು. ಸಂಘದಲ್ಲಿದ್ದವ ನೊಬ್ಬ ತನ್ನ ಉತ್ತರೀಯವನ್ನು ಅವಳ ಮೇಲೆ ಎಸೆಯಲು, ಅವಳು ಅದನ್ನುಟ್ಟು ಎದ್ದು ಮುಂದೆ ಬಂದು ಭಗವಂತನಾದ ಸಂಬುದ್ಧನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದಳು. ಮಾಡಿ, ''ಅರ್ಹತನು ನನ್ನನ್ನು ರಕ್ಷಿಸಬೇಕು, ನನ್ನನ್ನು ಉದ್ಧರಿಸಿ ಕಾಪಾಡಬೇಕು. ನನ್ನ ಒಂದು ಮಗು ಹದ್ದಿನ ಬಾಯಿಗೆ ತುತ್ತಾಯಿತು ; ಮತ್ತೊಂದು ನದಿಯ ಪಾಲಾಯಿತು. ನನ್ನ ಗಂಡ ಹಾವು ಕಚ್ಚಿ ಸತ್ತ. ಮಳೆಗಾಳಿಯಿಂದ ಮನೆ ಬಿದ್ದು ನನ್ನ ತಾಯಿ ತಂದೆ ಸಮಾಧಿಯಾದರು !'' ಎಂದು ಕರುಣಾಜನಕವಾಗಿ ಅಂದಳು.

ಬುದ್ಧನಾದ ಗೌತಮ ಅವಳ ಮಾತು ಕೇಳಿ, ''ಅಳಬೇಡ, ಪಟಾಚಾರ, ಧೈರ್ಯ ತಂದುಕೋ ! ನಿನ್ನ ಮಕ್ಕಳು, ಗಂಡ, ತಂದೆ ತಾಯಿ ಎಲ್ಲರೂ ತೀರಿದರು, ನಿಜ. ಆದರೆ ಇಂಥ ಎಷ್ಟು ಜನಕ್ಕೆ ಜನ್ಮ ಜನ್ಮಗಳಲ್ಲಿ ಜನ ದುಃಖಿಪಟ್ಟಿಲ್ಲ ? ಆಗೆಲ್ಲ ಸುರಿಸಿದ ಕಣ್ಣೀರು ಸೇರಿಸಿದರೆ ನಾಲ್ಕು ಸಮುದ್ರಗಳ ನೀರಿಗಿಂತ ಅಧಿಕವಾಗುತ್ತದೆ, ಪಟಾಚಾರಾ ! ದುಃಖ ಇಷ್ಟು ಸಾಮಾನ್ಯ ಆದರೂ ಜನ ಪ್ರಮಾದದಲ್ಲಿಯೇ ಇರುತ್ತಾರೆ' ಎಂದು ಸಂಸಾರದ ಸ್ವರೂಪ ವರ್ಣನೆ ಮಾಡತೊಡಗಿದ. ಇದು ಕೇಳುತ್ತ ಕೇಳುತ್ತ ಅವಳ ದುಃಖದ ಕಾವು ಆರುತ್ತ ಬಂತು, ಚಿತ್ತ ಶಾಂತವಾಗುತ್ತ ಬಂತು. ಆಗ ಬುದ್ಧ ''ಇಹವನ್ನು ದಾಟಿ ಪರವನ್ನು ನಾವು ಸೇರುವಲ್ಲಿ ತಂದೆ-ತಾಯಿ-ಬಂಧು- ಬಳಗ ಒಬ್ಬರೂ ಸಹಾಯವಾಗಲಾರರು ; ಅಂದಮೇಲೆ ಅವರಿಂದ ಇಲ್ಲಿ ಏನು ಸಹಾಯವಾದೀತು ? ಸಾವು ಬಾಗಿಲಿಗೆ ಬಂದಾಗ ಯಾರು ನಮ್ಮನ್ನು ರಕ್ಷಿಸಬಲ್ಲರು, ಪಟಾಚಾರಾ ? ಇವೆಲ್ಲ ಅನಿವಾರ್ಯ, ಇದು ತಪ್ಪಿಸಲು ಯಾರಿಂದಲೂ ಸಾಧ್ಯ ಇಲ್ಲ. ಇದನ್ನು ತಿಳಿದು ಬುದ್ಧಿವಂತನಾದವನು ತನ್ನ ಶೀಲಗಳನ್ನು ಕಾಪಾಡಿಕೊಂಡು ತನ್ನ ನಿರ್ವಾಣದ ದಾರಿಯನ್ನು ಶುದ್ಧಪಡಿಸಿಕೊಳ್ಳಬೇಕು'' ಎಂದು ಬೋಧಿಸಿದನು.

ಈಗ ಪಟಾಚಾರಾ ಮನಸ್ಸು ಪರಿವರ್ತಿಸಿ, ಧರ್ಮದಲ್ಲಿ ಶ್ರದ್ಧೆ ಬೆಳೆದು, ಬುದ್ಧನ ಬಳಿ ಭಿಕ್ಷುಣಿಯಾಗಿ ನಿಂತಳು.

ಒಂದು ದಿನ ಅವಳ ಕೊಡದಿಂದ ನೀರು ಬಗ್ಗಿಸಿ ತನ್ನ ಕಾಲು ತೊಳೆದುಕೊಳ್ಳುತ್ತಿದ್ದಾಗ, ಸ್ವಲ್ಪ ನೀರು ನೆಲದ ಮೇಲೆ ಬಿದ್ದು ತುಸುದೂರ ಹರಿದು ಇಂಗಿ ಮರೆಯಾಯಿತು. ಇನ್ನೊಮ್ಮೆ ಪಟಾಚಾರಾ ಅದೇರೀತಿ ನೀರು ಚೆಲ್ಲಿದಳು ; ಅದೇ ದಿಕ್ಕಿನಲ್ಲಿ ನೀರು ಇನ್ನೂ ಸ್ವಲ್ಪ ದೂರ ಹರಿದು ಇಂಗಿ ಮಾಯವಾಯಿತು. ಮತ್ತೊಮ್ಮೆ ನೀರು ಚೆಲ್ಲಿದಾಗ, ಅದೇ ದಿಕ್ಕಿನಲ್ಲಿ ಮತ್ತೂ ಸ್ವಲ್ಪದೂರ ಹೋಗಿ ಇಂಗಿ ಮರೆಯಾಯಿತು. ಇದನ್ನೆಲ್ಲ ನೋಡುತ್ತ ಪಟಾಚಾರಾ ಇದನ್ನು ಚಿಂತಿಸುತ್ತ ನಿಂತಳು. ''ಮೊದಲ ಬಾರಿ ತುಸುದೂರ ಹರಿದು ಮರೆಯಾದ ನೀರಿನಂತೆಯೇ ಜನ ಈ ಜಗತ್ತಿನಲ್ಲಿ ಹುಟ್ಟಿ ಶೈಶವದಲ್ಲೇ ಸಾಯುತ್ತಾರೆ. ಎರಡನೆಯ ಬಾರಿಯ ನೀರಿನಂತೆ, ಜನ ಮಧ್ಯ ಪ್ರಾಯದವರೆಗೂ ಬಂದು ಸಾಯುತ್ತಾರೆ. ಮೂರನೆಯ ಬಾರಿಯ ನೀರಿನಂತೆ ಜನ ಮುಪ್ಪಿನವರೆಗೆ ಬದುಕಿ ಸಾಯುತ್ತಾರೆ. ಅಂತೂ ಹುಟ್ಟಿ ಸಾಯದವರು ಯಾರೂ ಇಲ್ಲ'' ಎಂದು ಅವಳಿಗೆ ಮನದಟ್ಟಾದೊಡನೆಯೇ ಪಟಾಚಾರಾ ಅರ್ಹತಳಾದಳು.

ಆಗ ಬುದ್ಧ ''ಪಟಾಚಾರಾ, ಇದು ತಿಳಿದು ಒಂದು ದಿನ ಒಂದು ಕ್ಷಣ ಬದುಕಿರುವುದು, ಇದು ತಿಳಿಯದೆ ಒಂದು ನೂರು ವರ್ಷ ಬದುಕಿರುವುದಕ್ಕಿಂತ ಎಷ್ಟೋ ಉತ್ತಮ !'' ಎಂದ.*

---

* ಧಮ್ಮಪದಟ್ಠ ಕಥಾ, ಸಹಸ್ಸವಗ್ಗ, ಹನ್ನೆರಡನೆಯ ಕಥೆ.

◈ ◈ ◈

ಸಾವಿಲ್ಲದ ಮನೆ ಎಲ್ಲಿ? *

ಹಿಂದೆ ಶ್ರಾವಸ್ತಿಯಲ್ಲಿ ಬಹಳ ಧನವಂತನಾದ ಒಬ್ಬ ಸೆಟ್ಟಿ ಇದ್ದ. ಒಂದು ದಿನ ಇದ್ದಕ್ಕಿದ್ದಂತೆ ಅವನ ಧನ ಎಲ್ಲ ಇದ್ದಿಲು ಆಗಿಬಿಟ್ಟಿತು. ಇದರಿಂದ ಅತಿಯಾಗಿ ದುಃಖಗೊಂಡು ಆ ಸೆಟ್ಟಿ ಅನ್ನ ನೀರು ಬಿಟ್ಟು ಯೋಚಿಸಲಾರಂಭಿಸಿದ. ಅವನ ಗೆಳೆಯ ಒಬ್ಬ ಹೀಗೆ ಸೆಟ್ಟಿ ತಪಿಸುತ್ತಿರುವುದನ್ನು ಕಂಡು, ''ಅಯ್ಯಾ ಸೆಟ್ಟಿ ಏನು ವಿಚಾರ ಹೇಳು'' ಎಂದುಕೇಳಲು ನಡೆದ ಸಂಗತಿಯನ್ನೆಲ್ಲ ಸೆಟ್ಟಿ ಹೇಳಿದ. ಅದಕ್ಕೆ ಗೆಳೆಯನಾದವನು, ''ಇದಕ್ಕೆ ನನಗೊಂದು ಉಪಾಯ ತಿಳಿದಿದೆ. ನೀನು ಹಾಗೆ ಮಾಡುವುದಾದರೆ ಹೇಳುತ್ತೇನೆ'' ಎಂದನು. ಸೆಟ್ಟಿ ಹೇಳೆಂದಾಗ ಗೆಳೆಯ— ''ನಿನ್ನ ಅಂಗಡಿಯಲ್ಲಿ ಜಮಖಾನೆ ಹಾಸಿ, ಅದರ ಮೇಲೆ ಈ ಇದ್ದಿಲನೆಲ್ಲ ಒಟ್ಟಿ ಅದನ್ನು ಮಾರುವವನಂತೆ ಕುಳಿತುಕೊ. ಆಗ ಜನ ಬಂದು 'ಏನಯ್ಯಾ ಸೆಟ್ಟಿ ಸಾಮಾನ್ಯವಾಗಿ ವರ್ತಕರು ಜವಳಿ, ಎಣ್ಣೆ ಜೇನುತುಪ್ಪ, ಬೆಲ್ಲ ಮುಂತಾದುವನ್ನು ಮಾರುವರು. ನೀನೇನು ಇದ್ದಿಲು ಮಾರುತ್ತಿ' ಎನ್ನುವರು. ಅದಕ್ಕೆ ನೀನು 'ನನ್ನ ಬಳಿ ಇದ್ದ ಸಾಮಾನು ಮಾರದೆ ನಾನೇನು ಮಾಡಲಿ ?' ಎನ್ನು. ಇನ್ನು ಕೆಲವರು 'ಏನು ಸೆಟ್ಟಿ ಎಲ್ಲರೂ ಜವಳಿ, ಎಣ್ಣೆ ಜೇನು ತುಪ್ಪ, ಬೆಲ್ಲ ಮುಂತಾದುವನ್ನು ಮಾರಿದರೆ ನೀನೇನು ಬಂಗಾರದ ಗಟ್ಟಿಗಳನ್ನು ಮಾರುತ್ತಿದ್ದೀ ?'

---

* ಜೀವನ, ಸಂಪುಟ ೧೪, ಸಂಚಿಕೆ ೧೧ ; ಪುಟ ೪೫೨

ಎನ್ನುವರು. ಅದಕ್ಕೆ ನೀನು, 'ಎಲ್ಲಿ ಸ್ವಾಮಿ, ಭಂಗಾರ ಎಲ್ಲಿದೆ ?' ಎಂದು ಕೇಳು. 'ಅಗೋ ಅಲ್ಲಿ' ಎಂದವರು ಅಂದರೆ, 'ಎಲ್ಲಿ ಈ ಕಡೆ ಕೊಡಿ ನೋಡೋಣ' ಎನ್ನು, ಅವರು ಮುಟ್ಟಿದುದೆಲ್ಲ ಭಂಗಾರ ! ತಿಳಿದುಕೋ. ಹಾಗೆ ಹೇಳಿದ ವ್ಯಕ್ತಿ ಹುಡುಗಿಯಾದರೆ ನಿನ್ನ ಮಗನಿಗೆ ತಂದು ಕೊಂಡು ಮದುವೆ ಮಾಡಿ, ಅವಳಿಗೇ ನಿನ್ನ ಆಸ್ತಿಯೆಲ್ಲ ಕೊಟ್ಟು, ಅವಳು ನಿನಗೆಂದು ಕೊಟ್ಟಿದ್ದರಲ್ಲಿ ಜೀವನ ಮಾಡು. ಹಾಗಲ್ಲದೆ ಆ ವ್ಯಕ್ತಿ ಯುವಕನಾಗಿದ್ದರೆ ಅವನಿಗೆ ನಿನ್ನ ಮಗಳನ್ನು ಕೊಟ್ಟು ಮದುವೆ ಮಾಡಿ, ನಿನ್ನ ಆಸ್ತಿಯೆಲ್ಲ ಅವನಿಗೆ ಕೊಟ್ಟು, ಅವನು ನಿನಗೆ ಕೊಟ್ಟಿದ್ದರಲ್ಲಿ ಜೀವಿಸು'' ಎಂದು ಹೇಳಿಕೊಟ್ಟ.

ಅದರಂತೆಯೇ ಸೆಟ್ಟಿ ತನ್ನ ಅಂಗಡಿಯಲ್ಲಿ ಇದ್ದಿಲು ರಾಶಿ ಹಾಕಿಕೊಂಡು ಮಾರುವಂತೆ ನಟಿಸುತ್ತ ಕುಳಿತ. ಕೆಲವರು ಬಂದು, ''ಏನು ಸೆಟ್ಟರೆ, ಇದ್ದಿಲು ಮಾರಹತ್ತಿದಿರಿ ? ಎಲ್ಲರೂ ಎಣ್ಣೆ ಬಟ್ಟೆ ಬೆಲ್ಲ ಮಾರಿದರೆ ನೀವು ಇದ್ದಿಲು ಮಾರುತ್ತೀರಿ !'' ಎಂದರು. ಅದಕ್ಕವನು ''ಏನು ಸ್ವಾಮಿ ಮಾಡುವುದು ? ನಮ್ಮ ಬಳಿ ಇದ್ದುದು ತಾನೆ ನಾವು ಮಾರಬೇಕು ? ಇಲ್ಲದಿದ್ದರೆ ಹೇಗೆ ?'' ಎಂದು ಉತ್ತರ ಹೇಳುತ್ತಿದ್ದ.

ಒಂದು ದಿನ ಅವನ ಅಂಗಡಿಯ ಬಾಗಿಲಿಗೆ, ಬಡವರ ಮನೆಯ ಹುಡುಗಿಯೊಬ್ಬಳು ಬಂದಳು. ಅವಳ ಹೆಸರು ಗೌತಮಿ ; ಅವಳು ಬಹಳ ತೆಳ್ಳಗಿದ್ದುದರಿಂದ ತೆಳುಗೌತಮಿ (ಕೃಶಾಗೌತಮಿ) ಎಂದು ಎಲ್ಲ ಕರೆಯುತ್ತಿದ್ದರು. ಅವಳು ಏನೋ ವ್ಯಾಪಾರಕ್ಕೆ ಬಂದವಳು, ಈ ಇದ್ದಿಲು ಮಾರುತ್ತಿದ್ದ ಸೆಟ್ಟಿಯನ್ನು ನೋಡಿ, ''ಸೆಟ್ಟರೇ, ಇದೇನಿದು? ಬಂಗಾರದ ಗಟ್ಟಿಗಳನ್ನು ಮಾರುತ್ತಿದ್ದೀರಿ ?'' ಎಂದಳು. ಅದನ್ನು ಕೇಳಿ ಸೆಟ್ಟಿ ''ಎಲ್ಲಮ್ಮ ಬಂತು ಬಂಗಾರದ ಗಟ್ಟಿ ?'' ಎಂದ. ''ಅಗೋ ಅಲ್ಲೇ, ನೀವು ಕೂತಿರುವಲ್ಲೇ'' ಎಂದಳಾಕೆ. ''ಎಲ್ಲಿ ನೋಡುವ, ಸ್ವಲ್ಪ ತೆಗೆದುಕೊಡು'',

ಎಂದಾಗ ಗೌತಮಿ ಒಂದು ಬೊಗಸೆಯಷ್ಟು ತೆಗೆದು ಸೆಟ್ಟಿಯ ಕೈಗೆ ಕೊಟ್ಟಳು. ಅದು ಅವನ ಕೈಗೆ ಬಿದ್ದೊಡನೆಯೇ, ಇದ್ದಿಲು ಬಂಗಾರವಾಗಿಬಿಟ್ಟಿತು !

ಅದು ನೋಡಿ ಸೆಟ್ಟಿ ''ನಿಮ್ಮ ಮನೆ ಎಲ್ಲಮ್ಮಾ ?'' ಎಂದು ಕೇಳಿ ತಿಳಿದುಕೊಂಡು, ಅವಳು ಅವಿವಾಹಿತೆ ಎಂದು ತಿಳಿದ ಮೇಲೆ, ಅವಳನ್ನು ತನ್ನ ಮಗನಿಗೆ ತಂದು ಕೊಂಡು ಮದುವೆ ಮಾಡಿದ. ನಂತರ ಇದ್ದಿಲಾಗಿದ್ದ ತನ್ನ ಧನವನ್ನೆಲ್ಲ ಮುಟ್ಟಿ ಮತ್ತೆ ಬಂಗಾರ ಮಾಡಿ, ಎಲ್ಲವನ್ನೂ ಗೌತಮಿಗೆ ಕೊಟ್ಟುಬಿಟ್ಟ.

ಕಾಲಕ್ರಮೇಣ ಗೌತಮಿ ಗರ್ಭವತಿಯಾದಳು ; ನವಮಾಸಗಳು ಕಳೆದು, ಗಂಡುಮಗುವನ್ನು ಹೆತ್ತಳು. ಆದರೆ ಮಗು ತಪ್ಪು ಹೆಜ್ಜೆ ಇಡಲು ಶುರುಮಾಡುವಷ್ಟರಲ್ಲಿ ಬೇನೆ ಬಂದು ಸತ್ತುಹೋಯಿತು.

ಈವರೆಗೆ ಗೌತಮಿ ಸಾವನ್ನು ನೋಡಿಯೇ ಇರಲಿಲ್ಲ. ಜ್ಞಾತಿಗಳು ಬಂದು ಮಗುವನ್ನು ಸುಡಲು ಒಯ್ಯಲು ಹವಣಿಸುತ್ತಿದ್ದಾಗ ಬೇಡಬೇಡೆಂದು ಅಡ್ಡಗಟ್ಟಿದಳು. ತನ್ನ ಮಗು ಸತ್ತಿಲ್ಲವೆಂದೇ ಅವಳ ಚಿಂತನೆ. ''ಎಲ್ಲಿಯಾದರೂ ಔಷಧಿ ತಂದು ಮಗುವಿನ ಬೇನೆ ಹೋಗಿಸುತ್ತೇನೆ'' ಎಂದುಕೊಂಡು, ಸತ್ತ ಮಗುವನ್ನು ಎದೆಗೆ ಅಪ್ಪಿಕೊಂಡು ಮನೆಯಿಂದ ಮನೆಗೆ, ''ನನ್ನ ಮಗುವಿನ ಬೇನೆ ನೀಗಿಸುವಂಥ ಮದ್ದು ನಿಮಗೆ ಗೊತ್ತೇ ? ಎಂದು ಕೇಳುತ್ತ ಹೊರಟಳು. ಕಂಡವರೆಲ್ಲ ''ಹುಚ್ಚಿ ! ಸತ್ತು ಹೋದ ಮಗುವಿಗೆ ಎಂಥ ಮದ್ದು ?'' ಎಂದರೂ ಅವಳಿಗೆ ಮಾತ್ರ ''ಯಾರಾದರೊ ಬ್ಬರಿಗೆ ಈ ಮದ್ದು ತಿಳಿದೇ ಇರುತ್ತದೆ'' ಎಂದು ವಿಶ್ವಾಸ !

ಗೌತಮಿ ಹೀಗೆ ತಿರುಗುವುದು ಕಂಡು ಯಾರೋ ಒಬ್ಬ ಪುಣ್ಯಾತ್ಮ-ಸ್ವಲ್ಪ ಬುದ್ಧಿವಂತ — 'ಈಕೆಯ ಮಗು ಸತ್ತಿದೆ. ಆದರೆ ಈಕೆ ಈ ಮುಂಚೆ ಸಾವನ್ನೇ ಕಂಡಂತಿಲ್ಲ'— ಎಂದುಕೊಂಡು ಗೌತಮಿಯನ್ನು ಕರೆದು,

''ತಾಯಿ, ನಿನ್ನ ಮಗುವಿನ ಬೇನೆಗೆ ಮದ್ದು ನನಗೆ ತಿಳಿಯದು ; ಆದರೆ ಅದು ತಿಳಿದಿರುವವರೊಬ್ಬರು ನನಗೆ ಗೊತ್ತು'' ಎಂದ. ತಕ್ಷಣ ಗೌತಮಿ ''ಹಾಂ ! ಯಾರದು ಹೇಳಿ'' ಎನ್ನಲು ಆತ ''ಅಗೋ ಆ ಶ್ರಮಣ ಗೌತಮನಿಗೆ ಗೊತ್ತು, ಅವನನ್ನು ಹೋಗಿ ಕೇಳು'' ಎಂದ.

ಅಂತೆಯೇ ಗೌತಮಿ ಬುದ್ಧನ ಬಳಿಗೆ ಬಂದು, ಪ್ರಣಾಮ ಮಾಡಿ, ಒಂದು ಪಕ್ಕಕ್ಕೆ ಸರಿದು ನಿಂತು, ''ಪೂಜ್ಯನಾದವನು ಅನುಗ್ರಹಿಸಬೇಕು. ಈ ನನ್ನ ಮಗುವಿನ ಬೇನೆಗೆ ಮದ್ದು ತಮಗೆ ತಿಳಿದಿದೆಯೆಂದು ಜನ ಅನ್ನುತ್ತಾರೆ, ಅದು ನಿಜವೆ ?'' ಎಂದು ಪ್ರಶ್ನಿಸಿದಳು. ಲೋಕಪೂಜ್ಯನಾದ ಸಂಬುದ್ಧ ಮಗುವನ್ನು ನೋಡಿ, ''ಹೌದು, ತಂಗಿ'' ಎನ್ನಲು, ''ಅದಕ್ಕೆ ಏನು ಬೇಕು ?'' ಎಂದು ಉತ್ಸುಕಳಾಗಿ ಕೇಳಿದಳು. ಸಂಬುದ್ಧ ''ಏನಿಲ್ಲ, ಒಂದು ನಾಲ್ಕು ಕಾಳು ಸಾಸಿವೆಯಷ್ಟೆ'' ಎಂದು ಹೇಳಿ ಮುಗಿಸುವಷ್ಟರಲ್ಲಿ, ''ಓ, ಅದಕ್ಕೇನಂತೆ'' ಎಂದು ಗೌತಮಿ ಹಿಗ್ಗಿದಳು. ಆದರೆ ಬುದ್ಧ ''ಸಾವು ಕಾಣದ ಮನೆಯಿಂದ ತರಬೇಕು, ತಂಗಿ, ಆ ಸಾಸುವೆ ಕಾಳು'' ಎಂದ. ಆಗಲೆಂದು ಗೌತಮಿ, ತನ್ನ ನಿರ್ಜೀವಿ ಮಗುವನ್ನು ಕಂಕುಳಿಗೆ ಹಾಕಿಕೊಂಡು ಹೊರಟು, ಕಣ್ಣಿಗೆ ಕಂಡ ಮೊದಲಮನೆಯ ಬಾಗಿಲು ತಟ್ಟಿ ''ತಾಯಿ, ಒಂದು ನಾಲ್ಕು ಕಾಳು ಸಾಸಿವೆ ಇದೆಯೆ ? ಅದರಿಂದ ನನ್ನ ಮಗುವಿನ ಪ್ರಾಣ ಉಳಿಯುತ್ತದೆ'' ಎಂದು ಕೂಗಿದಳು. ಮನೆಯವರು ಒಂದು ಹಿಡಿ ಸಾಸಿವೆ ಕಾಳು ತಂದುಕೊಟ್ಟರು. ಗೌತಮಿ ಮತ್ತೆ ''ಪುಣ್ಯಾತ್ಮರೆ, ಈ ಮನೆಯಲ್ಲಿ ಯಾರೂ ಸತ್ತುದಿಲ್ಲವಷ್ಟೆ ?'' ಎಂದು ಕೇಳಲಾಗಿ, ಅವರು ''ಅಯ್ಯೋ ತಾಯಿ, ಬದುಕಿರುವರೇ ಕೆಲವರಮ್ಮ, ಸತ್ತವರು ಬಹುಮಂದಿ !'' ಎಂದರು. ''ಹಾಗಾದರೆ ನಿಮ್ಮ ದಾನದಿಂದ ನನಗೇನು ಉಪಯೋಗವಿಲ್ಲ'' ಎಂದು ಗೌತಮಿ ಅದನ್ನು ಹಿಂದಕ್ಕೆ ಕೊಟ್ಟು ಮುಂದೆ ಹೊರಟಳು.

ಹೀಗೆ ಮನೆಯಿಂದ ಮನೆಗೆ ಸಂಜೆಯವರೆಗೆ ತಿರುಗಿದರೂ ಸಾವು ಕಾಣದ ಮನೆಯೊಂದೂ ಸಿಕ್ಕದೆ, ಬರಿಗೈಯಲ್ಲಿ ಹಿಂದಿರುಗಿದಳು ಗೌತಮಿ. ಹಿಂದಕ್ಕೆ ಬರುವಾಗ ಅವಳಿಗನಿಸಿತು — "ಆ, ಏನು ಸಾಧಿಸಲು ನಾ ಹೊರಟೆ ? ನನಗೊಬ್ಬಳಿಗೆ ಮಾತ್ರ ಮಗು ಹೋಯಿತೆಂದು ನೆನದಿದ್ದೆ. ಆದರೆ ಪ್ರತಿಯೊಂದು ಮನೆಯಲ್ಲೂ ಸತ್ತವರ ಸಂಖ್ಯೆಯೇ ಬದುಕಿರುವ ವರಿಗಿಂತ ಅಧಿಕ" — ಎಂದು. ಈ ಯೋಚನೆ ಬಂದಾಗ, ಮಗುವಿಗಾಗಿ ಅಳುತ್ತಿದ್ದ ಗೌತಮಿಯ ಹೃದಯ ಗಟ್ಟಿಯಾಯಿತು. ಮಗುವನ್ನು ಕೊಂಡೊಯ್ದು ಒಂದು ಕಾಡಿನಲ್ಲಿ ಮಲಗಿಸಿ, ಸಂಬುದ್ಧನ ಬಳಿಗೆ ಬಂದು, ನಮಸ್ಕರಿಸಿ, ಪಕ್ಕಕ್ಕೆ ಸರಿದು ನಿಂತಳು.

ಸಂಬುದ್ಧ "ಏನು ತಂಗಿ, ಸಾಸಿವೆ ಕಾಳು ತಂದೆಯಾ ?"ಎಂದು ಕೇಳಿದ. ಅದಕ್ಕವಳು "ಇಲ್ಲ ಪೂಜ್ಯರೇ, ಇಲ್ಲಿ ಎಲ್ಲ ಮನೆಯಲ್ಲೂ ಬದುಕಿ ರುವವರಿಗಿಂತ ಸತ್ತವರೇ ಬಹು ಮಂದಿ" ಎಂದಳು. ಆಗ ಬುದ್ಧ "ನಿನ್ನೊಬ್ಬಳ ಮಗು ಮಾತ್ರ ಹೋಯಿತೆಂದು ನೆನದಿದ್ದೆಯಲ್ಲಾ ? ಜೀವಿಸುವ ಪ್ರಾಣಿಗಳೆಲ್ಲ ಈ ನಿಯಮದಿಂದ ಬದ್ಧವಾಗಿವೆ ; ಅದೇನೆಂದರೆ — ಮೃತ್ಯು ಪ್ರವಾಹದಂತೆ ಬಂದು ಜೀವಿಗಳನ್ನೆಲ್ಲ ನಾಶದ ಸಮುದ್ರಕ್ಕೆ ಕೊಚ್ಚಿಸುತ್ತದೆ ; ಆದರೂ ಅವುಗಳ ಆಶೆ ಇನ್ನೂ ಉಳಿಯುವುವು. 'ಇವು ನನ್ನ ಮಕ್ಕಳು, ನನ್ನ ಪಶುಗಳು, ನನ್ನವು' ಎಂದು ಅವುಗಳಲ್ಲಿ ಆಶೆ ಮೂಡಿರುವ ಮನುಷ್ಯನನ್ನು ಸಾವು ಬಂದು — ಮಲಗಿರುವ ಗ್ರಾಮವನ್ನು ರಾತ್ರಿ ಪ್ರವಾಹ ಬಂದು ಕೊಚ್ಚಿಕೊಂಡು ಹೋಗುವ ಹಾಗೆ — ಎತ್ತಿಕೊಂಡು ಹೋಗುತ್ತದೆ" ಎಂದನು.

ಇದನ್ನು ಕೇಳಿ ಗೌತಮಿಗೆ ಧರ್ಮದಲ್ಲಿ ಶ್ರದ್ಧೆ ಮೂಡಿ ಶ್ರೋತಾಪತ್ತಿಫಲ ಪಡೆದು, ಸಂಬುದ್ಧನ ಸಂಘಕ್ಕೆ ಸೇರಿ ಭಿಕ್ಷುಣಿಯಾದಳು.

ಒಂದು ಬಾರಿ ಧರ್ಮಸಭೆಯಲ್ಲಿ ದೀಪ ಹಚ್ಚುವ ಕೆಲಸ ಇವಳ ಪಾಲಿಗೆ ಬಿತ್ತು. ಒಂದು ರಾತ್ರಿ ದೀಪ ಹಚ್ಚಿ ಅಲ್ಲಿಯೇ ಕೂತು ದೀಪ ಉರಿಯುತ್ತಿರುವುದನ್ನು ನೋಡುತ್ತಿದ್ದಳು. ಕೆಲವು ಹತ್ತಿ ಉರಿಯುತ್ತಿತ್ತು ; ಕೆಲವು ಆರುತ್ತಿತ್ತು. ಇದನ್ನೇ ಧ್ಯಾನಮಾಡುತ್ತ ಗೌತಮಿ "ಈ ದೀಪದ ಜ್ವಾಲೆಯಂತೆಯೇ ಈ ಪ್ರಪಂಚದಲ್ಲಿರುವ ಪ್ರಾಣಿಗಳು : ಕೆಲವು ಹತ್ತಿ ಉರಿಯುತ್ತವೆ ; ಕೆಲವು ಸಣ್ಣಗಾಗಿ ನಂದಿಹೋಗುತ್ತವೆ. ದೀಪ ಪೂರಾ ಆರಿದಂತೆ ಅವು ಕಣ್ಣಿಗೆ ಕಾಣವು (ನಿರ್ವಾಣ ಪಡೆದವರಿಗೆ ಈ ಜೀವನದ ಏರಿಳಿತ ಇಲ್ಲ)" ಎಂದು ಮನನ ಮಾಡಿಕೊಂಡಳು. ಆಗ ಗೌತಮಿ ಅರ್ಹತಳಾದಳು.*

---

* (ಧಮ್ಮಪದಟ್ಠ ಕಥಾ, ಸಹಸ್ಸವಗ್ಗ ಹದಿಮೂರನೆಯ ಕಥೆ.)

◈ ◈ ◈

ರೇವತ ಭಿಕ್ಷುವಾದದ್ದು *

ಶಾರಿಪುತ್ರ ತನಗಿದ್ದ ಎಂಬತ್ತೇಳು ಕೋಟಿ ದ್ರವ್ಯದ ಆಸ್ತಿ ಬಿಟ್ಟು, ಜೀವನದಲ್ಲಿ ಬೇಸರಿಕೆ ಬಂದು, ಶ್ರಮಣಗೌತಮನ ಬಳಿ ಭಿಕ್ಷುವಾಗಿ ನಿಂತಾಗ, ಅವನ ತಂಗಿಯರಾದ, ಚಾಲಾ, ಉಪಚಾಲಾ, ಸೀಸುಪ ಚಾಲಾ ಹಾಗೂ ಅವನ ತಮ್ಮಂದಿರು ಚಂದ ಮತ್ತು ಉಪಸೇನ ಇವರುಗಳು ತಾವೂ ಮನೆಯ ಜೀವನ ಬಿಟ್ಟು ಧರ್ಮಜೀವಿಗಳಾದರು. ಮನೆಯಲ್ಲಿ ಉಳಿದವನೆಂದರೆ ರೇವತ ಒಬ್ಬ. ಅವನ ತಾಯಿಗನಿಸಿತು— ''ಎಲಾ, ನನ್ನ ಮಗ ಉಪತಿಸ್ಸ** ತನಗಿದ್ದ ಐಶ್ವರ್ಯವನ್ನೆಲ್ಲ ಬಿಟ್ಟು ಸಂನ್ಯಾಸಿಯಾದ ; ರೇವತನೊಬ್ಬ ಬಿಟ್ಟು ಉಳಿದ ಎಲ್ಲ ಮಕ್ಕಳೂ ಹೀಗೆಯೇ ಆಗಿಬಿಟ್ಟರು. ಈಗ ರೇವತನೂ ಸಂನ್ಯಾಸಿಯಾಗಿಬಿಟ್ಟರೆ ಈ ಆಸ್ತಿಪಾಸ್ತಿಗಳೂ ಹಾಳಾಗಿ ಹೋಗುತ್ತವೆ, ನಮ್ಮ ವಂಶವಾದರೋ ನಿರ್ಮೂಲವಾಗಿ ಹೋಗುತ್ತದೆ. ಆದು ಕಾರಣ, ಅವನಿಗೆ ತಕ್ಷಣ ಮದುವೆಮಾಡಿ ಗೃಹಸ್ಥನನ್ನಾಗಿ ಮಾಡಿ ನಿಲ್ಲಿಸುತ್ತೇನೆ'' ಎಂದು ಯೋಚಿಸಿ, ರೇವತ ಇನ್ನೂ ಚಿಕ್ಕ ಹುಡುಗನಾಗಿ ರುವಾಗಲೇ ಮದುವೆಯ ಪ್ರಯತ್ನ ನಡೆಸತೊಡಗಿದಳು. ಒಳ್ಳೆಯ ಮನೆತನದ ಒಂದು ಹುಡುಗಿಯನ್ನು ನಿಶ್ಚಯಿಸಿ, ಲಗ್ನದ ವೇಳೆಗೆ ರೇವತನಿಗೆ ಸರ್ವಾಭರಣಗಳನ್ನೂ ತೊಡಿಸಿ ಹೆಣ್ಣಿನ ಮನೆಗೆ ಒಯ್ದಳು. ಎರಡೂ

* ಜೀವನ, ಸಂಪುಟ ೧೫, ಸಂಚಿಕೆ ೧೦ ; ಪುಟ ೩೬೧

** ಅಂದರೆ ಶಾರಿಪುತ್ರ

ಕಡೆಯ ಜನರು ಅಲ್ಲಿ ನೆರೆದಿದ್ದರು. ವಿವಾಹ ಸಮಯದಲ್ಲಿ ಎಲ್ಲರೂ ವಧೂ-ವರರಿಗೆ ಆಶೀರ್ವಾದ ಮಾಡುತ್ತ ಬಂದರು. ಈ ಶುಭಾಶಂಸನೆಯ ಕಾಲದಲ್ಲಿ ಯಾರೊ ಒಬ್ಬರು ಹುಡುಗಿಗೆ ''ಅಮ್ಮಾ ನಿಮ್ಮಜ್ಜಿ ಕಂಡ ಸತ್ಯ ನೀನೂ ಕಾಣು. ನಿಮ್ಮಜ್ಜಿಯಂತೆಯೇ ದೀರ್ಘಾಯುವಾಗಿರಮ್ಮಾ'' ಎಂದು ಹರಸಿದರು. ಅದು ಕೇಳಿ ರೇವತ ''ಈ ಹುಡುಗಿಯ ಅಜ್ಜಿ ಕಂಡ ಸತ್ಯ ಎಂದರೇನು ?'' ಎಂದು ಚಿಂತಿಸತೊಡಗಿ, ''ಈ ಹೆಂಗಸರಲ್ಲಿ ಇವಳ ಅಜ್ಜಿ ಯಾರು ?'' ಎಂದು ಕೇಳಿದ. ಆಗ ಅವರು, ''ಅಗೋ, ಅಲ್ಲಿ ಒಬ್ಬಳು ಮುದುಕಿ ಕೂತಿಲ್ಲವೇ, ನೂರಿಪ್ಪತ್ತು ವರ್ಷದವಳು, ಹಲ್ಲಿಲ್ಲದೆ, ತಲೆಗೂದಲೆಲ್ಲ ಬಿಳಿಯಾಗಿ, ಮೈಚರ್ಮವೆಲ್ಲ ಸುಕ್ಕುಸುಕ್ಕಾಗಿ, ಟೊಂಕ ಬಗ್ಗಿರುವವಳು. ಅವಳೇ ಈ ವಧುವಿನ ಅಜ್ಜಿ'' ಎಂದರು. ಅಂದಾಗ ರೇವತ, ''ಆದರೆ ನನ್ನ ಹೆಂಡತಿ ಕೂಡ ಹೀಗೆಯೇ ಆಗುತ್ತಾಳೆಯೇನು ?'' ಎಂದು ಪ್ರಶ್ನಿಸಿದ. ಆದಕ್ಕವರು ನಕ್ಕು ''ಹೌದು, ಬದುಕಿದ್ದರೆ ಅವಳೂ ಹೀಗೆಯೇ ಆಗುತ್ತಾಳೆ'' ಎಂದರು. ಆಗ ರೇವತನಿಗನಿಸಿತು — ''ಏನಿದು ನನ್ನ ಹೆಂಡತಿ ಎಂಥ ಚೆಲುವೆ ! ಇಂಥವಳೂ ವಯಸ್ಸಾಗುತ್ತ ಹೀಗೆ ಕುಗ್ಗಿ - ಮಾಸುವಳೆ ? ಇದು ನೋಡಿಯೇ ನಮ್ಮಣ್ಣ ಉಪತಿಸ್ಸ ಮನೆಬಿಟ್ಟು ಹೊರಟು ಸಂನ್ಯಾಸಿಯಾದನೆಂದು ತೋರುತ್ತದೆ. ನನಗೆ ಇದೇ ಸೂಕ್ತವೆನಿಸುತ್ತಿದೆ.''

ಮದುವೆಯ ಸಂಭ್ರಮ ಎಲ್ಲ ಮುಗಿದು ನೆಂಟರೆಲ್ಲ ವಧೂವರರನ್ನು ಗಾಡಿಯಲ್ಲಿ ಕೂರಿಸಿ ಊರಿಗೆ ಕಳುಹಿಸುವ ಸನ್ನಾಹದಲ್ಲಿ ತುಸುದೂರ ಜೊತೆಗೆ ಹೋಗಿ ಬೀಳ್ಕೊಟ್ಟು ಬರಲು ಹೊರಟಿದ್ದರು. ಸ್ವಲ್ಪ ದೂರ ಹೋಗುತ್ತಲೇ ರೇವತ ಬಂಡಿಯವನಿಗೆ — ''ಅಯ್ಯಾ, ಸ್ವಲ್ಪ ಗಾಡಿ ನಿಲ್ಲಿಸು. ಕೆಳಗಿಳಿದು ಈಗಲೇ ಬರುತ್ತೇನೆ''— ಎಂದು ಹೇಳಿ ಗಾಡಿಯಿಂದಿಳಿದು ಪಕ್ಕದ ಪೊದೆಯ ಬಳಿ ತುಸು ಹೊತ್ತು ನಿಂತಿದ್ದು ಹಿಂದಿರುಗಿ ಬಂದು ಬಂಡಿಯೇರಿದ. ಹೀಗೆಯೇ ಮೂರು ನಾಲ್ಕು ಬಾರಿ ದಾರಿಯಲ್ಲಿ ಬಂಡಿಯಿಂದ ಕೆಳಗಿಳಿದು ಸ್ವಲ್ಪ

ಮರೆಯಾಗಿ ಮತ್ತೆ ಬಂದು ಬಂಡಿಯೇರುತ್ತಿದ್ದ. ಇದು ನೋಡಿ ಅವನ ಬಂಧುಗಳು "ಇದು ಅವನ ಸ್ವಭಾವವಾದ ಕಾಲಪ್ರವೃತ್ತಿಗಳು" ಎಂದುಕೊಂಡು ಗಮನಿಸಲಿಲ್ಲ. ಕೊಂಚದೂರ ಹೋದಮೇಲೆ ರೇವತ ಮತ್ತೆ ಇಳಿದು ಬಂಡಿಯವನಿಗೆ "ನೀನು ಮುಂದೆ ಹೊಡಿಯುತ್ತಿರು ; ನಾನು ಇನ್ನು ಸ್ವಲ್ಪ ಹೊತ್ತಿನಲ್ಲೆ ಬಂದು ಸೇರುತ್ತೇನೆ" ಎಂದು ಪೊದೆಯ ಕಡೆ ಹೊರಟು ಮರೆಯಾದ. ಅವನ ಬಂಧುಗಳು 'ಮತ್ತೆ ಬಂದು ಸೇರುತ್ತಾನೆ' ಎಂದುಕೊಂಡು ಮುಂದೆ ಸಾಗುತ್ತಿದ್ದರು.

ಅಲ್ಲಿ ಆ ಕಾಡಿನಲ್ಲಿ ಸುಮಾರು ಮೂವತ್ತು ಸಂನ್ಯಾಸಿಗಳು ವಾಸಮಾಡುತ್ತಿದ್ದರು. ಅವರ ಬಳಿ ಬಂದು ರೇವತ ತಾನೂ ಭಿಕ್ಷುವಾಗಿ ನಿಂತ.

---

* ಧಮ್ಮಪದಟ್ಠಕಥಾ, ಅರಹಂತವಗ್ಗ, ಒಂಭತ್ತನೆಯ ಕಥೆ.

◈ ◈ ◈

ಶಾರಿಪುತ್ರ-ಮೌದ್ಗಲ್ಯಾಯನರ ಕಥೆ *

ಮಗಧದ ಸೌಂದರ್ಯಕ್ಕೆ ಕಂಠಾಭರಣವೆನಿಸಿದ ರಾಜಗೃಹದಲ್ಲಿ ಅಂದು ಅತಿಸಂಭ್ರಮ ; ನಗರದ ಅಂಚಿನಲ್ಲಿದ್ದ ರಮಣೀಯವಾದ ಭವನ ದೆಡೆಗೆ ಊರ ಜನರೆಲ್ಲ ಹಿಂಡುಹಿಂಡಾಗಿ ಸಾಗುತ್ತಿದ್ದಾರೆ. ದೊಡ್ಡವರು, ಚಿಕ್ಕವರು, ಹೆಂಗಸರು, ಮಕ್ಕಳು, ಗೃಹಸ್ಥರು, ಸಂನ್ಯಾಸಿಗಳು, ಆಸ್ತಿಕರು, ನಾಸ್ತಿಕರು, ಬ್ರಾಹ್ಮಣರು, ಶ್ರಮಣರು, ಶಾಕ್ಯಪುತ್ರರು, ನಿರ್ಗ್ರಂಥಕರು ಎಲ್ಲರೂ ಚೈತ್ಯದ ಕಡೆಗೇ ಮುಖಮಾಡಿ, ತಮ್ಮ ತಮ್ಮಲ್ಲಿ ಮಾತನಾಡಿ ಕೊಂಡು ಹೋಗುತ್ತಿದ್ದಾರೆ. ಊರಿಗೆ ತಲೆಯಾಳಾದ ಸುದತ್ತನೆಂಬ ಶ್ರೇಷ್ಠಿ — ಅವನ ದಾನ - ಧರ್ಮಗಳಿಗೆ ಮಾರು ಹೋಗಿ ಜನ ಅವನನ್ನು 'ಅನಾಥ ಪಿಂಡಿಕ' ಎಂದು ಕರೆಯುತ್ತಿದ್ದರು— ಶಾಕ್ಯಪುತ್ರ ಶ್ರಮಣರ ದೊಡ್ಡ ಸಂಘದೊಂದಿಗೆ, ವಾದ್ಯ ಮೇಳಗಳನ್ನು ಮುಂದೆ ಮಾಡಿಕೊಂಡು, ಕೈಯಲ್ಲಿ ಚಿನ್ನದ ಕಲಶವೊಂದನ್ನು ಹಿಡಿದು, ಗಂಭೀರವಾದ ಮುದ್ರೆಯಿಂದ ಸಾರುತ್ತಿದ್ದ. ಚೈತ್ಯದ ಸಮಿಪದಲ್ಲಿ ರಸ್ತೆಯಂಚಿನಲ್ಲಿ ವೃದ್ಧನಾದ ಭಿಕ್ಷುವೊಬ್ಬ ತದೇಕಚಿತ್ತನಾಗಿ ಇದನ್ನೆಲ್ಲ ನೋಡುತ್ತ ನಿಂತಿದ್ದ ; ಆಗ ಅವನ ಬಳಿಗೆ ತರುಣನಾದ ಮತ್ತೊಬ್ಬ ಭಿಕ್ಷು ಬಂದು "ಭಂತೇ ವಾಪ್ಪ , ಇಂದೇನು ಈ ಸಂಭ್ರಮ ?" ಎಂದು ಪ್ರಶ್ನಿಸಿದ. ಅದಕ್ಕೆ ಅರ್ಹತನಾದ ವಾಪ್ಪ ನಡುಗುವ ದನಿಯಲ್ಲಿ "ಚೆನ್ನಾಯಿತು, ಆಯುಷ್ಮಂತ, ಇದೇನು ಹೀಗ ಕೇಳುವೆ ?

* ಜೀವನ, ಸಂಪುಟ ೧೩, ಸಂಚಿಕೆ ೭ ; ಪುಟ ೨೭೩

ನಮ್ಮ ಸಂಘದ ಕೀರ್ತಿಗೆ, ಹಿರಿಮೆಗೆ ವೈಜಯಂತಿಯಾದ ಬಧಂತ ಶಾರಿಪುತ್ರ ಹಾಗೂ ಅವನ ನೆಚ್ಚಿನ ಗೆಳೆಯ ಭದಂತ ಮೌದ್ಗಲ್ಯಾಯನರು ತೀರಿಹೋದ ಸಂಗತಿ ನಿನಗೆ ತಿಳಿಯದೆ ? ಅವರ ಅವಶೇಷಗಳನ್ನು ಈ ಚೈತ್ಯದಲ್ಲಿಡುವ ಸನ್ನಾಹವಾಗಿದೆ. ಈ ಚೈತ್ಯವನ್ನು ಶಾಲೆಯಲ್ಲಿರುವ ನಮ್ಮ ಜೇತವನಾರಾಮದ ದಾತೃವಾದ ಶ್ರೇಷ್ಠಿ ಸುದತ್ತ ಕಟ್ಟಿಸಿದ್ದಾನೆ. ಇಲ್ಲಿ ಪ್ರತಿ ವರ್ಷ ಶಾರಿಪುತ್ರ - ಮೌದ್ಗಲ್ಯಾಯನರ ನೆನಪಿಗಾಗಿ ಇಂದು ಸಂತೆ ನಡೆಯಬೇಕೆಂದು ನಿಶ್ಚಯವಾಗಿದೆ. ಈ ಸಮಯದಲ್ಲಿ ಇಲ್ಲಿಗೆ ಬರುವ ವರ್ತಕರು ತಮ್ಮ ಯಾವುದೇ, ಎಷ್ಟೇ ಸಾಮಾನಿಗಾಗಲೀ ತೆರಿಗೆ ಕೊಡಬೇಕಾಗಿಲ್ಲ ಎಂದು ನಮ್ಮ ದೊರೆ ಆಯುಷ್ಮಂತನಾದ ಪ್ರಸೇನಜಿತ ಶಾಸನ ಮಾಡಿದ್ದಾನೆ. ಯಶೋಭದ್ರ, ಈ ಸಂಗತಿ ಒಂದೂ ನಿನಗೆ ತಿಳಿಯದೆ ?'' ಎಂದು ಆಶ್ಚರ್ಯ ಸೂಚಿಸಿದ. ಅದಕ್ಕೆ ಸ್ಥವಿರನಾದ ಯಶೋಭದ್ರ, ''ಭದಂತನಾದವನು ಮನ್ನಿಸಬೇಕು, ನಾನು ಇಷ್ಟು ದಿನ ಜನದ ಗಿಜಿಗಿಜಿಯಿಂದ ದೂರಾಗಿ ಊರುವಿಲ್ವದ ಕಾಡಿನ ಮಧ್ಯೆ ಒಂಟಿಯಾಗಿ ವಾಸಿಸುತ್ತಿದ್ದೆ. ಅದು ಕಾರಣ ಈ ಸುದ್ದಿ ನನ್ನ ಕಿವಿ ಮುಟ್ಟಲಿಲ್ಲ. ಭದಂತರಾದ ಶಾರಿಪುತ್ರ - ಮೌದ್ಗಲ್ಯಾಯನರ ವಿಖ್ಯಾತಿ ಲೋಕವಿಶ್ರುತ ವಾಗಿದೆ ತಾನೆ. ಆದರೆ ಅವರ ವಿಚಾರ ನನಗೆ ಹೆಚ್ಚು ತಿಳಿಯದು ; ಅಲ್ಪನಲ್ಲಿ ದಯೆಮಾಡಿ ಹೇಳಲು ಸಾಧ್ಯವೇ ?'' ಎಂದು ನಮ್ರನಾಗಿ ಕೇಳಿದ. 'ಆಗಲಿ, ಆಯುಷ್ಮಂತ. ಚೈತ್ಯದ ಹಿಂಭಾಗದಲ್ಲಿರುವ ಕಲ್ಲಿನ ಮೇಲೆ ಕೂಡೋಣ, ಬಾ'' ಎಂದು ಅರ್ಹತನಾದ ವಾಷ್ಪ ಯಶೋಭದ್ರನನ್ನು ಕರೆದುಕೊಂಡು, ಜನದ ಗದ್ದಲದಿಂದ ದೂರ ಸಾಗಿ, ಚೈತ್ಯಕ್ಕೆ ಸ್ವಲ್ಪ ದೂರದಲ್ಲಿದ್ದ ಕಲ್ಲು ಬಂಡೆಯ ಕಡೆಗೆ ನಡೆದ. ಅಲ್ಲಿ ಚೀವರ ಹಾಸಿ ಕೂತು ಇಬ್ಬರೂ ಮಾತುಕತೆ ಆರಂಭಿಸಿದರು.

ಸ್ಥವಿರನಾದ ವಾಷ್ಪ ಸ್ವಲ್ಪ ಹೊತ್ತು ಸುಮ್ಮನಿದ್ದು ಪೂರ್ವದ ವೃತ್ತಾಂತಗಳನ್ನೆಲ್ಲ ನೆನಪಿಗೆ ತಂದುಕೊಂಡು ಜಾವಮಗ್ನನಾಗಿ ಹೀಗೆ ಹೇಳಿದ :

''ಶಾರಿಪುತ್ರ ನಮ್ಮ ಸಂಘ ಸೇರಲು ನನ್ನ ಒಡನಾಡಿಯಾದ ಅಶ್ವಜಿತನೇ ಕಾರಣ.''

''ಆರ್ಯನಾದ ಅಶ್ವಜಿತ ಯಾರು, ಭಂತೇ ?''

''ನಮ್ಮ ಸ್ವಾಮಿಯಾದ ಭಗವಂತ ಬುದ್ಧನಾಗುವ ಮುಂಚೆ ಉರುವಿಲ್ವದಲ್ಲಿ ಕಠಿಣವಾದ ತಪಶ್ಚರ್ಯೆ ಮಾಡಿ ವಾರಾಣಸಿಗೆ ಬಂದಾಗ ಅಲ್ಲಿ ನಾವು ನಾಲ್ಕು ಜನರು ಅವನನ್ನು ಗೌರವಿಸಿ ಅವನ ಜೊತೆ ಸೇರಿದೆವು. ಕೌಂಡಿನ್ಯ, ಅಶ್ವಜಿತ, ಮಹಾನಾಮ, ಭದ್ರಿಕ ಮತ್ತು ನಾನು ಲೋಕವನ್ನು ದಾಟಿದ ಸತ್ಯವನ್ನರಸುತ್ತ ಮನೆಯಿಂದ ಹೊರಸಾರಿ ಅಲ್ಲಿ ತಪಶ್ಚರ್ಯೆ ಮಾಡುತ್ತಿದ್ದೆವು. ಶ್ರಮಣನಾದ ಗೌತಮನ ಮನಸ್ಥೈರ್ಯ, ವ್ರತವನ್ನು ಸಾಧಿಸುವ ನಿಶ್ಚಲವಾದ ಧೈರ್ಯ ಇವುಗಳಿಗೆ ಮನಸೋತು ಅವನನ್ನು ಹಿರಿಯನೆಂದು ಬಗೆದು ಅವನನ್ನು ನಮ್ಮ ನಾಯಕನನ್ನಾಗಿ ಆರಿಸಿದೆವು. ಆಗ ಶ್ರಮಣ ಗೌತಮನದು ಎಂಥ ಕಠೋರವಾದ ಸಾಧನೆ, ಅದನ್ನು ನೆನೆಸಿ ಕೊಂಡರೆ ಮೈ ಜುಂ ಎನ್ನುತ್ತದೆ. ನಾಲಿಗೆಯನ್ನು ಮೇಲದವಡೆಗೆ ಅಂಟಿಸಿ ಮನಸ್ಸನ್ನು ಬಿಗಿಹಿಡಿದು ಮನಸ್ಸನ್ನು ಮುರಿಯುತ್ತಿದ್ದ ; ಕಂಕುಳ ಸಂಧಿಯಿಂದ ಬೆವರು ಧಾರೆಧಾರೆಯಾಗಿ ಹರಿಯುತ್ತಿತ್ತು. ಉಸಿರಾಡುವುದನ್ನು ಅತಿ ದೀರ್ಘ ವಾಗಿ ತಡೆಯುತ್ತಿದ್ದ. ಕಿವಿಯಿಂದ ಭರ್ರೋ ಎಂಬ ಶಬ್ದ ಕೇಳುತ್ತಿತ್ತು ; ದೊಡ್ಡ ಸುಂಟರಗಾಳಿ ತಲೆಯೊಳಗೆ ಸಿಕ್ಕಿದಂತೆ ಆಗುತ್ತಿತ್ತಂತೆ. ಸ್ವಲ್ಪ ದಿನ ಅಂಜಲಿಯಲ್ಲಿ ಹಿಡಿಸುವಷ್ಟು ಮಾತ್ರ ಆಹಾರ ತೆಗೆದುಕೊಳ್ಳುತ್ತಿದ್ದ, ಅದೂ ಆ ಕಾಳು, ಈ ಕಾಳು. ಕ್ರಮೇಣ ಅದನ್ನೂ ಕಡಿಮೆ ಮಾಡಿ ದಿವಸಕ್ಕೆ ಒಂದೇ ಒಂದು ಕಾಳು ಆಹಾರ ತೆಗೆದುಕೊಳ್ಳುತ್ತಿದ್ದ. ಅವನ ದೇಹ

ಅಸ್ಥಿಪಂಜರವಾಯಿತು ; ಆಳವಾದ ಬಾವಿಯೊಳಗಿನ ನೀರಿನಂತಿತ್ತು ಅವನ ಕಣ್ಣುಗಳು ಗುಳಿಯೊಳಗೆ ಬಿದ್ದು ; ಒಣಗಿದ ಸೋರೆಯ ಬುರುಡೆಯ ಮೇಲಿನ ಸಿಪ್ಪೆಯಂತಿತ್ತು ಅವನ ಚರ್ಮ ; ಹೊಟ್ಟೆಯೆಂದು ಮುಟ್ಟಿದರೆ ಬೆನ್ನುಮೂಳೆ ಕೈಗೆ ಸಿಗುತ್ತಿತ್ತು. ಅಬ್ಬಾ! ಅದೇನು ದೃಢವಾದ ವ್ರತ ! ಅಂಥ ಸಾಹಸವನ್ನು ನಾವು ನೋಡೇ ಅರಿಯೆವು. ನಿಸ್ತ್ರಾಣನಾಗಿ ಆಗಾಗ ಗೌತಮ ಪ್ರಜ್ಞೆ ತಪ್ಪಿ ಬಿದ್ದುಬಿಡುತ್ತಿದ್ದ. ಆದರೆ ಸ್ವಲ್ಪ ಕಾಲವಾದ ಮೇಲೆ ಈ ಎಲ್ಲ ದೇಹದಂಡನೆ ನಿರರ್ಥಕವೆಂದು ನಿರ್ಧರಿಸಿ ಮತ್ತೆ ಆಹಾರ ತೆಗೆದುಕೊಳ್ಳಲಾರಂಭಿಸಿದ. ಆಗ ನಾವು "ಓಹೋ, ಶ್ರಮಣನಾದ ಗೌತಮ ಸಾಧನೆ ಮಾಡಲಾರದೆ ಮತ್ತೆ ಭೋಗದ ಹಾದಿ ಹಿಡಿಯುತ್ತಿದ್ದಾನೆ" ಎಂದುಕೊಂಡು ಅವನನ್ನು ಬಿಟ್ಟು ಋಷಿಪತನದ ಮೃಗದಾವಕ್ಕೆ ಹೋಗಿಬಿಟ್ಟೆವು. ನಾವು ಮತ್ತೆ ಅವನನ್ನು ಸಂಧಿಸಿದುದು ಅವನು ಸಮ್ಯಕ್ಸಂಬುದ್ಧನಾದಮೇಲೆ. ತನ್ನ ಬೋಧಿಯ ಫಲವನ್ನು ಹೇಳಲು ನಮ್ಮನ್ನೇ ಮೊದಲಿಗರಾಗಿ ಆರಿಸಿದುದು ನಮ್ಮ ಸೌಭಾಗ್ಯ ; ನಾವೇ ಅವನ ಮೊಟ್ಟಮೊದಲ ಶಿಷ್ಯರು. ತಥಾಗತನ ಬೋಧಿದರ್ಶನ ಸಮಗ್ರವಾಗಿ ಅರ್ಥವಾದುದು ನಮ್ಮಲ್ಲಿ ಹಿರಿಯನಾಗಿದ್ದ ಕೌಂಡಿನ್ಯನಿಗೆ ಮಾತ್ರ ; ಆದರಿಂದ ಅವನನ್ನು 'ಅಜ್ಞಾತ ಕೌಂಡಿನ್ಯ' ಎಂದು ಕರೆಯುತ್ತಿದ್ದೆವು. ನಮಗೆಲ್ಲ ಅದರ ವಿವರ ಅರ್ಥವಾಗದಿದ್ದರೂ, ಅವನ ದರ್ಶನದ ಸಾರ ಅರ್ಥವಾಗಿ ಅವನನ್ನು ನಮ್ಮ ಶಾಸ್ತ್ರುವೆಂದು ಒಪ್ಪಿಕೊಂಡೆವು.

ಅಲ್ಲಿಂದ ನಾವೆಲ್ಲ - ಭಗವಂತ ಮತ್ತೆ ನಾಲ್ವರು, ಯಶಸ್ಸೆಂಬ ಕಾಶಿಯ ಯುವಕನೊಬ್ಬ – ಉರುವಿಲ್ವಕ್ಕೆ ಬಂದು ಅಲ್ಲಿ ಜಟಿಲರ ಆಚಾರ್ಯರಾದ ಮಹಾಕಾಶ್ಯಪ, ನದೀಕಾಶ್ಯಪ, ಗಯಾಕಾಶ್ಯಪ ಮತ್ತು ಅವರ ಸಾವಿರ ಶಿಷ್ಯರು ನಮ್ಮ ಸಂಘ ಸೇರಿದ ಮೇಲೆ ರಾಜಗೃಹಕ್ಕೆ ಬಂದೆವು. ಭಗವಂತನ ಕೀರ್ತಿ ಇನ್ನೂ ಪ್ರಸೃತವಾಗಿರಲಿಲ್ಲ. ನಾವು ರಾಜಗೃಹದಲ್ಲಿದ್ದಾಗ

ಒಂದು ದಿನ ಸ್ಥವಿರನಾದ ಅಶ್ವಜಿತ ಹಾಗೂ ನಾನೂ ಭಿಕ್ಷೆಗೆ ಹೊರಟಿದ್ದೆವು. ಸ್ಥವಿರವಾದ ಅಶ್ವಜಿತ ಪ್ರೌಢ ; ತಥಾಗತನ ಮುಖದಲ್ಲಿ ಕಾಣುತ್ತಿದ್ದ ವರ್ಚಸ್ಸು, ಗಾಂಭೀರ್ಯ, ಶಾಂತಿ ಅಶ್ವಜಿತನಲ್ಲೂ ಕಾಣುತ್ತಿತ್ತು. ನಾವು ದಾರಿಯಲ್ಲಿ ಹೋಗುತ್ತಿದ್ದಾಗ ಒಬ್ಬ ಯುವಕನಾದ ಪರಿವ್ರಾಜಕ ನಮ್ಮ ಮುಂದೆ ಬರುತ್ತಿದ್ದ ; ಅವನು ಅಶ್ವಜಿತನನ್ನು ನೋಡಿ, ಅವನ ಗಂಭೀರ ವಾದ ಮುದ್ರೆಯಿಂದ ಆಕರ್ಷಿತನಾಗಿ, ಹತ್ತಿರ ಬಂದು ''ಭದಂತ, ನೀನು ಯಾರ ಅಣತಿಯಂತೆ ಭಿಕ್ಷುವಾಗಿರುವೆ ? ನಿನ್ನ ಆಚಾರ್ಯ ಯಾರು ? ಯಾರ ಧರ್ಮ ನಿನಗೆ ಹಿಡಿಸಿದೆ ?'' ಎಂದು ಕುತೂಹಲಿಯಾಗಿ ಪ್ರಶ್ನಿಸಿದ. ಅದು ಕೇಳಿ ಗಾಂಭೀರ್ಯದ ಪುತ್ಥಳಿಯಾದ ಅಶ್ವಜಿತ, ''ಶಾಕ್ಯವಂಶದಿಂದ ಹೊರಹೊರಟು ಮಹಾಶ್ರಮಣನಾದ ಶಾಕ್ಯಪುತ್ರನ ಅಣತಿಯಂತೆ ಭಿಕ್ಷುವಾಗಿದ್ದೇನೆ ; ಅವನೇ ನನ್ನ ಆಚಾರ್ಯ ; ಅವನ ಧರ್ಮವೇ ನನಗೆ ಹಿಡಿಸಿರುವುದು'' ಎಂದುತ್ತರವಿತ್ತ. ಅದಕ್ಕೆ ಆ ಯುವಕ ''ನಿನ್ನ ಆಚಾರ್ಯ ಏನು ಹೇಳುವನು ? ಅವನ ಧರ್ಮದ ಹೆಸರೇನು?'' ಎಂದು ಮತ್ತೆ ಪ್ರಶ್ನಿಸಿದ. ಅಶ್ವಜಿತ ''ನಾನಿನ್ನೂ ಮುಗ್ಧ, ಹೊಸದಾಗಿ ಭಿಕ್ಷುವಾದವನು. ಅದು ಕಾರಣ ಧರ್ಮವನ್ನೂ ವಿನಯವನ್ನೂ ವಿಸ್ತಾರವಾಗಿ ಹೇಳುವುದು ನನ್ನಿಂದಾಗದು ; ಆದರೆ ಅದನ್ನು ಸಂಕ್ಷಿಪ್ತವಾಗಿ ಹೇಳೆಂದರೆ ಹೇಳುವೆನು'' ಎಂದ. ಹೇಳಿ ಎಂದಾಗ, ''ಕಾರಣದಿಂದಾದ ಈ ಎಲ್ಲ ಸ್ಥಿತಿಗಳ ಆಗುವಿಕೆಯನ್ನು ತಥಾಗತ ಹೇಳಿದ್ದಾನೆ ; ಅವು ಆಗದಂತೆ ಮಾಡುವುದನ್ನೂ ಈ ಮಹಾಶ್ರಮಣ ಹೇಳಿದ್ದಾನೆ'' ;* ಎಂದು ಸುಮ್ಮನಾದ. ಇದನ್ನು ಕೇಳಿ ಆ ತರುಣಪರಿವ್ರಾಜಕನ ಮುಖ ಉದ್ದೀಪ್ತವಾಯಿತು ; ತುಸು ಹೊತ್ತು ಸ್ತಬ್ಧನಾಗಿ, ಕೆಳಮುಖ ಮಾಡಿ ನಿಂತಿದ್ದು ನಂತರ ''ಬರುತ್ತೇನೆ, ಭದಂತ''

---

* ''ಯೆ ಧಮ್ಮಾ ಹೇತುಪ್ಪಭವಾ ತೇಸಂ ಹೇತುಂ ತಥಾಗತೋ ।
ಆಹ, ತೇಸಂ ಚ ಯೋ ನಿರೋಧೋ ಏವಂ ವಾದೀ ಮಹಾ ಸಮಣೋ ॥

ಎಂದು ದಾರಿಯಲ್ಲೇ ಹಿಂದೆ ಹೊರಟುಬಿಟ್ಟ. ಮಾರನೆಯ ದಿನ ಇದೇ ಯುವಕರ ಮತ್ತೊಬ್ಬ ಯುವಕನೊಂದಿಗೆ ಭಗವಂತನ ಬಳಿಗೆ ಬಂದು, ಅವನ ಅನುಜ್ಞೆ ಪಡೆದು ಸಂಘ ಸೇರಿದ. ಆಮೇಲೆ ನಮಗೆ ಗೊತ್ತಾಯಿತು ಅವನು ಶಾರಿಪುತ್ರನೆಂದೂ, ಅವನ ಸಂಗಡ ಬಂದವನು ಮೌದ್ಗಲ್ಯಾಯನನೆಂದೂ.

ನಾಳಂದ ಇರುವುದು ರಾಜಗೃಹದ ಬಳಿ, ನಿನಗೆ ಗೊತ್ತಷ್ಟೆ ಅಲ್ಲಿ ಮಾಥರನೆಂಬೊಬ್ಬ ಬ್ರಾಹ್ಮಣನ ಮಗ ಕೋಷ್ಠಿಲ ಎಂಬುವನು. ಇವನು ಲೋಕಾಯತ ಮತವನ್ನು ಅಧ್ಯಯನ ಮಾಡಲು ದಕ್ಷಿಣ ದೇಶಕ್ಕೆ ಹೊರಟು ಅಲ್ಲಿ ನೆಲೆಸಿದ ; ಶಾಸ್ತ್ರ ತನ್ನ ಅಧೀನವಾಗುವವರೆಗೂ ನಖವನ್ನು ತೆಗೆಯುವುದಿಲ್ಲವೆಂದು ಪಣತೊಟ್ಟಿದ್ದರಿಂದ ಇವನನ್ನು 'ದೀರ್ಘನಖ' ನೆಂದು ಕರೆಯುತ್ತಿದ್ದರು. ಇವನ ತಂಗಿ ಶಾರಿ ಎಂಬುವಳು ದಕ್ಷಿಣದ ಬ್ರಾಹ್ಮಣನಾದ ತಿಷ್ಯನೆಂಬುವವನನ್ನು ಮದುವೆಯಾಗಿ ಒಬ್ಬ ಮಗನನ್ನು ಪಡೆದಳು. ಇವನನ್ನು ಉಪತಿಷ್ಯ, ಶಾರಿಪುತ್ರ, ಶಾರದ್ವತೀಪುತ್ರ ಎಂದೂ ಕರೆಯುತ್ತಿದ್ದರು ; ತಿಷ್ಯ ತಂದೆ, ಶಾರಿ ತಾಯಿ, ಶಾರದ್ವತಿ ವಂಶದ ಹೆಸರು. ಇವನು ಚಿಕ್ಕವಯಸ್ಸಿನಿಂದ ಮೇಧಾವಿಯೆಂದು ಪ್ರಸಿದ್ಧನಾಗಿ ಅತಿ ಬೇಗ ವೇದ — ಉಪನಿಷತ್ತು — ಬ್ರಾಹ್ಮಣ ಮುಂತಾದ ವೈದಿಕ ಧರ್ಮದಲ್ಲಿ ವಿಶಾರದನಾದ.

ಪಕ್ಕದ ಹಳ್ಳಿಯೊಂದರಲ್ಲಿ ಬ್ರಾಹ್ಮಣನೊಬ್ಬನಿದ್ದ ; ಪೋತಾಲ ಎಂದವನ ಹೆಸರು ; ಕೌಂಡಿನ್ಯ ರಾಜನ ಪುರೋಹಿತ ಅವನು. ಅವನ ಹೆಂಡತಿ ಮುದ್ಗಲಿ ಎಂಬುವಳು. ಅವರ ಒಬ್ಬನೇ ಮಗ ಕೋಲಿತ ; ತಾಯಿಯನ್ನು ರೂಪದಲ್ಲಿ ತುಂಬ ಅನುಸರಿಸಿದ್ದರಿಂದ ಅವನನ್ನು ಮುದ್ಗಲೀಪುತ್ರ ಅಥವಾ ಮೌದ್ಗಲ್ಯಾಯನ ಎಂದು ಕರೆಯುತ್ತಿದ್ದರು. ಇವನೂ ಕುಶಾಗ್ರಬುದ್ಧಿಯವನಾಗಿದ್ದು ಚಿಕ್ಕ ವಯಸ್ಸಿನಲ್ಲಿ ವೈದಿಕ ಧರ್ಮದಲ್ಲಿ ಪಾಂಡಿತ್ಯ ಪಡೆದು ಪ್ರಸಿದ್ಧನಾದ.

ನಾಳಂದದ ಶಾಲೆಯಲ್ಲಿ ಇಬ್ಬರೂ ಸಂಧಿಸಿದರು ; ಸ್ವಲ್ಪ ಕಾಲದಲ್ಲೇ ಅವರಲ್ಲಿ ಪರಸ್ಪರ ಪ್ರೀತಿ-ಸೌಹಾರ್ದ ಬೆಳೆದು ನೆಚ್ಚಿನ ಗೆಳೆಯರಾದರು. ಇಬ್ಬರೂ ತಾರುಣ್ಯದಲ್ಲಿ ಕಾಲಿಡುತ್ತಿದ್ದಾಗ ಮೌದ್ಗಲ್ಯಾಯನನಿಗೆ ವೈರಾಗ್ಯ ಹುಟ್ಟಿ ಸನ್ಯಾಸಿಯಾಗುವ ಇಚ್ಛೆ ಬಲವಾದಾಗ ಶಾರಿಪುತ್ರನೂ ಸನ್ಯಾಸಿ ಯಾಗುತ್ತೇನೆಂದ. ಇಬ್ಬರೂ ಮನೆಯಿಂದ ಹೊರಗಾಗಿ ಮನೆಯಿಲ್ಲ ದವರಾಗಿ ರಾಜ ಗೃಹದಲ್ಲಿದ್ದ ಸಂಜಯ ಎಂಬ ಗಣಾಚಾರ್ಯನ ಬಳಿ ಪರಿವ್ರಾಜಕರಾಗಿ ಸೇರಿದರು. ಸಂಜಯ ಒಂದು ಸಂಘದ ನಾಯಕನಾಗಿದ್ದ ಯಶಸ್ವಿಯಾಗಿದ್ದ ಸಾಧು ಸಮ್ಮತನಾಗಿದ್ದ ಅನೇಕ ಕಾಲದಿಂದ ಪರಿವ್ರಾಜಕನಾಗಿದ್ದ ವೃದ್ಧನಾಗಿದ್ದ. ಅವನು "ಇದೇ ಸರಿ, ಅದೇ ಸರಿ ಎಂದು ತರ್ಕ ಮಾಡಿ ಹೆಣಗಾಡುವುದು ಮೌಢ್ಯ. ಬರಿಯ ತರ್ಕದಿಂದ ಏನು ಪ್ರಯೋಜನ ? ಮನಸ್ಸು ಸ್ಥಿಮಿತದಲ್ಲಿ ಇದ್ದು ಭ್ರಮಿಸದಿರುವುದೇ ನಿಜವಾದ ಶಾಂತಿ'' ಎಂದು ಹೇಳುತ್ತಿದ್ದ. ಅವನು ಸಾಯುವ ಮುನ್ನ ಶಾರಿಪುತ್ರ — ಮೌದ್ಗಲ್ಯಾಯನರ ಮುಂದೆ ಶ್ರಮಣ ಶಾಕ್ಯಪುತ್ರನ ವಿಚಾರ ಹೇಳಿದ್ದನಂತೆ ; ಅವನು ಸತ್ತಮೇಲೆ ಗಣದ ನಾಯಕತ್ವ ಶಾರಿಪುತ್ರ— ಮೌದ್ಗಲ್ಯಾಯನರ ಪಾಲಿಗೆ ಬಂತು. ಈ ಸಮಯದಲ್ಲೇ ಶಾರಿಪುತ್ರ ನಮ್ಮನ್ನು (ಅಶ್ವಜಿತನನ್ನೂ ನನ್ನನ್ನೂ) ರಾಜಗೃಹದ ಬೀದಿಯಲ್ಲಿ ಸಂಧಿಸಿದ್ದು. ಅಶ್ವಜಿತನಿಂದ ಧರ್ಮದ ಸಾರ ಕೇಳಿ ಶಾರಿಪುತ್ರ ತನ್ನ ಆವಾಸಕ್ಕೆ ಹಿಂದಿರುಗಿ ಅಲ್ಲಿ ತನ್ನ ಗೆಳೆಯ ಮೌದ್ಗಲ್ಯಾಯನನಿಗೆ ಈ ಸಂಗತಿ ಹೇಳಿದ. ಅವರಿಬ್ಬರಲ್ಲೂ ಒಂದ ನಿರ್ಣಯ ಆಗಿತ್ತಂತೆ- ಯಾರು ತತ್ತ್ವದ ಅರ್ಥ ಮೊದಲು ತಿಳಿದರೆ ಅದನ್ನು ಇನ್ನೊಬ್ಬರಿಗೆ ಹೇಳುವುದು, ಎಂದು. ಅಂತೆಯೇ ಶಾರಿಪುತ್ರ ಮೊದಲು ತಿಳಿದ ಕೂಡಲೇ ಹಿಂದಿರುಗಿ ಮೌದ್ಗಲ್ಯಾಯನನ ಮುಂದೆ ಹೇಳಿದ. ಮರುದಿನ ಇಬ್ಬರೂ ಶಾಕ್ಯಪುತ್ರ ಶ್ರಮಣರ ಸಂಘ ಸೇರುವುದೆಂದು ನಿರ್ಧರಿಸಿದರು. ಅಶ್ವಜಿತನ ಉತ್ತರ ಕೇಳಿದಂದೇ ಶಾರಿಪುತ್ರನಿಗೆ ಧರ್ಮದ ಪವಿತ್ರವಾದ ದೃಷ್ಟಿ

ಉತ್ಪನ್ನವಾಯಿತು. ಶಾರಿಪುತ್ರನಿಂದ ಸುದ್ದಿ ಕೇಳಿದಾಗಲೇ ಮೌದ್ಗಲ್ಯಾಯನನಿಗೆ ಧರ್ಮದ ದೃಷ್ಟಿ ಗೋಚರವಾಯಿತು.

ಶಾರಿಪುತ್ರ ಮೌದ್ಗಲ್ಯಾಯನರದು ಅಭಿರೂಪವಾದ ಜೋಡಿ ; ಇಬ್ಬರೂ ನೆಚ್ಚಿನ ಗೆಳೆಯರು ; ಎರಡು ದೇಹದಲ್ಲಿ ಒಂದು ಪ್ರಾಣ. ಎಂಥ ನಿಷ್ಕಲ್ಮಷವಾದ ಪ್ರೇಮ ಅವರಿಬ್ಬರದು ! ಒಬ್ಬರನ್ನಗಲಿ ಇನ್ನೊಬ್ಬರು ಇರುತ್ತಿರಲಿಲ್ಲ. ಶಾಲೆಯಲ್ಲಿ ಅಂಕುರವಾದ ವಿಶ್ವಾಸ, ಸೌಹಾರ್ದ ಕಡೆಯವರೆಗೂ ವಿಶಾಲವಾಗಿ, ಗಾಢವಾಗಿ ಬೆಳೆಯಿತು. ಇಬ್ಬರೂ ಶಾಸ್ತ್ರದಲ್ಲಿ ವಿಶಾರದರು ; ಸ್ಥಿತಪ್ರಜ್ಞರು ; ಸಾಧನೆಯಲ್ಲಿ ಶ್ರಮಿಸಿದವರು ; ತತ್ತ್ವದ ಕಡೆ ಒಲಿದವರು ; ಹೃದಯವನ್ನು ಜಗತ್ತಿನ ಗೊಂದಲದಿಂದ ದೂರ ಮಾಡಿ ಪವಿತ್ರವಾಗಿಟ್ಟುಕೊಂಡಿದ್ದವರು. ಭಗವಂತನಿಗೆ ಅವರು ಸಂಘ ಸೇರಿದಂದಿನಿಂದ ಒಂದು ಹೊಸ ಹುರುಪು, ವಿಶ್ವಾಸ ಇದ್ದದ್ದು ಕಾಣುತ್ತಿದ್ದೆವು. ಅವರನ್ನು ಭಗವಂತ ಸಂಪೂರ್ಣವಾಗಿ ನಂಬಿದ್ದ. ಸಮಯ ಬಂದಾಗಲೆಲ್ಲ ಭಗವಂತ ಅವರ ಪ್ರಶಸ್ತಿ ಹೇಳದೆ ಇರುತ್ತಿರಲಿಲ್ಲ. ಒಮ್ಮೆ ಹೀಗೆ ಹೇಳಿದ — ''ಶಾರಿಪುತ್ರ ಶಿಷ್ಯನಾದವನಿಗೆ ಮಗುವನ್ನು ಹೆತ್ತ ತಾಯಿಯಂತೆ ; ಮೌದ್ಗಲ್ಯಾಯನ ಪಾಠ ಕಲಿಸುವ ಗುರುವಿನಂತೆ. ಹೀಗೆ ಇಬ್ಬರೂ ಧರ್ಮದ ಹಾದಿಯಲ್ಲಿ ಶಿಷ್ಯನನ್ನು ನಡೆಸುತ್ತಾರೆ. ಮೌದ್ಗಲ್ಯಾಯನ ಧರ್ಮದ ಅತಿ ಕ್ಲಿಷ್ಟ ತತ್ತ್ವಗಳನ್ನೂ ಬಿಡಿಸಿ ಸರಳವಾಗಿ ಬೋಧಿಸಬಲ್ಲ ; ಶಾರಿಪುತ್ರ ನಾಲ್ಕು ಆರ್ಯಸತ್ಯಗಳನ್ನೂ ವಿವರವಾಗಿ ಹೃದಯ ಮುಟ್ಟುವಂತೆ ಹೇಳಬಲ್ಲ. ಇವರಿಬ್ಬರಿಂದ ಬೋಧಿಸಲ್ಪಟ್ಟವರು ಧರ್ಮದಲ್ಲಿ ದೃಢವಾಗಿ ನಿಲ್ಲುತ್ತಾರೆ'' ಎಂದು. ಶಾರಿಪುತ್ರನನ್ನು 'ಧರ್ಮಸೇನಾಪತಿ' ಎಂದು ಕರೆಯುತ್ತಿದ್ದ. ತನ್ನ ನಂತರ ಸಂಘದಲ್ಲಿ ಧರ್ಮಚಕ್ರವನ್ನು ಪ್ರವರ್ತನ ಮಾಡುವವರು ಇವರಿಬ್ಬರು ಎಂದು ಹೇಳುತ್ತಿದ್ದ ; ಆದರೆ ನಮ್ಮ ದುರದೃಷ್ಟ ; ಇಬ್ಬರೂ ಇಷ್ಟು ಬೇಗ ಕಾಣದಾದರು !

ಭಗವಂತ ರಾಜಗೃಹದ ಸಿತವನದಲ್ಲಿದ್ದಾಗ ಶ್ರಾವಸ್ತಿಯ ಧನಿಕ ಶ್ರೇಷ್ಠಿ ಸುದತ್ತ ಭಗವಂತನನ್ನು ಶ್ರಾವಸ್ತಿಗೆ ಆಹ್ವಾನಿಸಿದ. ಆಗ ಭಗವಂತ ''ಅಲ್ಲಿ ಏನಾದರೂ ಭಿಕ್ಷುಗಳು ತಂಗಲು ವಿಹಾರವುಂಟೋ ?'' ಎಂದಾಗ, ''ಭಗವಂತ ಬರಲಿ, ವಿಹಾರ ಕಟ್ಟಿಸಿದರಾಯಿತು'' ಎಂದು ರಾಜಕುಮಾರ ಜೇತನಿಂದ ಒಂದು ದೊಡ್ಡ ಭೂಮಿಯನ್ನು ಕ್ರಯಕ್ಕೆ ಕೊಂಡು ಅಲ್ಲಿ ಒಂದು ವಿಹಾರ ನಿರ್ಮಿಸುವ ಆಲೋಚನೆ ಮಾಡಿದ. ಭೂಮಿಯನ್ನು ಆರಿಸಿ ವಿಹಾರದ ನಿರ್ಮಾಣವನ್ನು ಪರಿಶೀಲಿಸುವ ಕೆಲಸವನ್ನು ಭಗವಂತ ಶಾರಿಪುತ್ರನಿಗೆ ಒಪ್ಪಿಸಿದ. ಶಾರಿಪುತ್ರ ಈ ಕೆಲಸವನ್ನು ಅತಿ ದಕ್ಷತೆಯಿಂದ ಪೂರೈಸಿದ. ವಿಹಾರದ ನಿರ್ಮಾಣ ಎಲ್ಲಾ ಪೂರ್ಣವಾಗುವ ವೇಳೆಗೆ ಅಲ್ಲಿದ್ದ ತೀರ್ಥಕರಿಗೆಲ್ಲ ಈ ನಮ್ಮ ಶಾಕ್ಯಪುತ್ರ ಶ್ರಮಣರ ಮೇಲೆ ಅಸೂಯೆ ಬೆಳೆದು ಶಾರಿಪುತ್ರನನ್ನು ವಾಗ್ಯುದ್ಧಕ್ಕೆ ಎಳೆದರು ; ವಾದದಲ್ಲಿ ಸೋಲುವವನೇ ಶಾರಿಪುತ್ರ ? ಬಹುಮಂದಿ ತೀರ್ಥಕರು ನಮ್ಮ ಸಂಘ ಸೇರುವಂತೆ ಮಾಡಿದ. ಉಳಿದವರು ಸಿಟ್ಟುಗೊಂಡು ಶಾರಿಪುತ್ರನನ್ನು ಕೊಲ್ಲುವ ಪ್ರಯತ್ನ ಮಾಡಿದರು. ಶಾರಿಪುತ್ರನ ವಧೆಗೆ ನೇಮಿತರಾಗಿದ್ದವರೆಲ್ಲ ಅವನ ಸೌಜನ್ಯ, ಸದ್ಗುಣಗಳಿಗೆ ಮಾರು ಹೋಗಿ ಶಿಷ್ಯರಾಗಿ ಬಿಟ್ಟರು !

ಮತ್ತೊಂದು ಪ್ರಸಂಗ ನನಗಿನ್ನೂ ನೆನಪಿದೆ. ಶ್ರಾವಸ್ತಿಯ ದಕ್ಷಿಣದಲ್ಲಿ ಒಂದುದೊಡ್ಡ ನದಿ ಇದೆಯಲ್ಲಾ, ಅದರ ಒಂದು ದಡದಲ್ಲಿ ಸುಮಾರು ಐನೂರು ಮನೆಗಳ ಸಣ್ಣಹಳ್ಳಿ ಒಂದು ಇದೆ. ಅಲ್ಲಿ ಒಮ್ಮೆ ಭಗವಂತ ಧರ್ಮ ಹೇಳುತ್ತಿದ್ದಾಗ, ಶಾರಿಪುತ್ರ ಆಚೆಯ ದಡದಲ್ಲಿದ್ದ. ಆಗ ಇದ್ದಕ್ಕಿದ್ದಂತೆ ಶಾರಿಪುತ್ರನಿಗೆ ತಥಾಗತನನ್ನು ನೋಡಿ ಸತ್ಕರಿಸುವ ಆಸೆ ಬಲವಾಯಿತು ; ಆದರೆ ದೊಡ್ಡ ನದಿ, ಪ್ರವಾಹ ಬೇರೆ ಬಂದಿದೆ, ಎಲ್ಲಿ ಸುಳಿಯೋ ಎಲ್ಲಿ ಆಳವೋ ತಿಳಿಯದು ; ಕಗ್ಗತ್ತಲು. ಶಾರಿಪುತ್ರನಿಗಾದರೋ ಇದೇನೂ ಅಡ್ಡಿಯೆನಿಸಲಿಲ್ಲ, ಕಚ್ಚೆಕಟ್ಟಿ ನೀರಿಗಿಳಿದೇ ಇಳಿದ,

ಅರ್ಧದೂರ ನದಿಯನ್ನು ದಾಟಿದ್ದಾನೆ ; ಆಗ ಮುಂದೆ ಹೋಗಲು ಸ್ವಲ್ಪ ಅಧೈರ್ಯವಾಯಿತು. ಅಧೈರ್ಯವಾದದ್ದೇ ತಡ ಪ್ರವಾಹ ಜಾಸ್ತಿಯಾಗಿ ಬರಹತ್ತಿ ಕಾಲಿಗೆ ನೆಲ ಸಿಗಲೊಲ್ಲದೆ ಅಸ್ತಾವಸ್ತೆಯಾಗಲಾರಂಭಿಸಿತು. ಹಿಂದಿರುಗಲೇ, ಎಂದೆನಿಸಿತು ಅವನಿಗೆ ; ಆದರೆ ಸಂಬುದ್ಧನನ್ನು ನೋಡುವ ಆಸೆ ? ಕಡೆಗೆ ಆ ಸಂಬುದ್ಧನನ್ನು ಕಂಡು ಸತ್ಕರಿಸುವುದೇ ಸರಿಯೆಂದು ಮನಸ್ಸು ಮಾಡಿ ಧೈರ್ಯತಂದುಕೊಂಡು ಮುಂದೆ ನಡೆದ. ಆಯುಷ್ಮಂತನ ಶ್ರದ್ಧೆಗೆ ಹುಚ್ಚು ಹೊಳೆಯೂ ಬೆದರಿತು ; ನದಿ ದಾಟಿ ಸ್ಥವಿರ ಶಾರಿಪುತ್ರ ಭಗವಂತನೆಡೆಗೆ ಬಂದಾಗ, ಎಲ್ಲರಿಗೂ ಆಶ್ಚರ್ಯ ! ಕತ್ತಲಲ್ಲಿ ಈ ಹೊಳೆ ದಾಟಿದ ಗಂಡುಗಲಿಯ ಸಾಹಸ ಯಾರಿಗುಂಟು ? ಆಗ ಭಗವಂತನೆಂದ — ''ಶಾರಿಪುತ್ರ, ನಿನ್ನ ಶ್ರದ್ಧೆ ನಿಜವಾಗಿ ಮಹತ್ತಾದ್ದು ; ಆದರೆ ಅದನ್ನು ಚೆನ್ನಾಗಿ ನೆಡಬೇಕು'' ಎಂದು.

ಶಾರಿಪುತ್ರನಿಗೆ ಶ್ರದ್ಧೆಯ ಹುಚ್ಚುಹೆಚ್ಚು, ಒಮ್ಮೆ ಭಗವಂತನ ಬಳಿಗೆ ಬಂದು ಆವೇಗದಿಂದ — ''ಭಂತೇ, ನಿನ್ನಂಥ ಅರ್ಹತ ಹಿಂದೆ ಇರಲಿಲ್ಲ, ಈಗಿಲ್ಲ, ಮುಂದೆಯೂ ಇರಲಾರ. ನನ್ನ ಶ್ರದ್ಧೆ ಹಾಗೆನಿಸುತ್ತದೆ. ಭಂತೆ !''— ಎಂದ. ಅದಕ್ಕೆ ಭಗವಂತ ನಕ್ಕು ''ಶಾರೀಪುತ್ರ, ನನ್ನ ಹಿಂದೆ ಇದ್ದೆಲ್ಲ ಅರ್ಹತರ ಪರಿಚಯ ನಿನಗುಂಟಷ್ಟೆ?'' ಎಂದು ಕೇಳಿದ. ''ಇಲ್ಲ, ಭಂತೇ'' ''ಹಾಗಾದರೆ, ಮುಂದೆ ಬರುವ ಅರ್ಹತರ ಪರಿಚಯವಾದರೂ ಉಂಟಲ್ಲ ?'' ''ಅದೂ ಇಲ್ಲ, ಭಂತೆ'' ''ಹೋಗಲಿ, ನನ್ನನ್ನಾದರೂ ಆದ್ಯಂತವಾಗಿ ಪರೀಕ್ಷಿಸಿದ್ದೀಯಷ್ಟೆ ?'' ''ಇಲ್ಲ, ಭಂತೆ.'' ''ಹಾಗಾದರೆ, ಶಾರಿಪುತ್ರ, ಎಷ್ಟು ಧೈರ್ಯವಾಗಿ ಆ ಮಾತನ್ನು ಹೇಳಿದೆ ?'' ಸಂಜಯನ ಶಿಷ್ಯನಾಗಿದ್ದ ಶಾರಿಪುತ್ರನಿಗೆ ಮನಸ್ಸಿನಲ್ಲಿ ವಿಶ್ವಾಸಕ್ಕಿಂತ ಹೃದಯದಲ್ಲಿ ವಿಶ್ವಾಸ ಹೆಚ್ಚು, ಮನಸ್ಸಿನಿಂದ ಪರೀಕ್ಷೆ ಮಾಡಿ ಸಂಶಯಪಡುವುದಕ್ಕಿಂತ ಹೃದಯದಲ್ಲಿ ನಂಬಿ ತೃಪ್ತರಾಗುವುದು ಒಳ್ಳಿತೆಂದು ಅವನ ಮತ.

ಅವನು ಧರ್ಮ ಬೋಧಿಸಲು ನಿಂತನೆಂದರೆ ನಿರಾತಂಕನಾಗಿ ಧರ್ಮದ ಗಂಟೆ ಬಾರಿಸಿಬಿಡುತ್ತಿದ್ದ. ಅದೇನು ಧ್ವನಿಯಲ್ಲಿ ಶಂಕೆಯೆ ? ಹೃದಯದಲ್ಲಿ ಚುಚ್ಚೆ? ಮಾತಿನಲ್ಲಿ ಒಡಕೇ ? ವಿದ್ಯೆಯಲ್ಲಿ ಬಡತನವೇ ? ಸಿಂಹದಂತೆ ನಿರ್ಭಯವಾಗಿ ಸಂಬುದ್ಧನ ಧರ್ಮವನ್ನು ಸಾರಿ ಸಾರಿ ಹೇಳಿ, ಜನರನ್ನು ನಂಬಿಸಿ, ಸಂಘ ಸೇರುವಂತೆ ಮಾಡುತ್ತಿದ್ದ. ಅವನ ಮಾತು ಕೇಳಿ ನಂಬದವರು ಬಹು ವಿರಳ. ದೇವದತ್ತನೊಮ್ಮೆ ಭಗವಂತನಿಂದ ದೂರವಾಗಿ ತನ್ನದೇ ಒಂದು ಸಂಘ ಕಟ್ಟಿಕೊಂಡು, ಭಗವಂತನ ವಿಚಾರವಾಗಿ ಅಪಪ್ರಚಾರ ಮಾಡುತ್ತಿದ್ದಾಗ, ಇಂಥ ಒಂದು ಸಭೆಯಲ್ಲಿ ಶಾರಿಪುತ್ರನೂ ಇದ್ದ ; ದೇವದತ್ತ 'ಸಾರಿಪುತ್ರ ಗೌತಮನನ್ನು ಬಿಟ್ಟು ನನ್ನ ಸಂಘ ಸೇರಬಯಸಿ ಬಂದಿದ್ದಾನೆಂದು ಬಗೆದು, "ಆಯುಷ್ಮಂತ ಶಾರಿಪುತ್ರ, ನನಗೆ ವಿಪರೀತ ಆಯಾಸವಾಗಿದೆ, ಸ್ವಲ್ಪ ವಿಶ್ರಮಿಸಿಕೊಳ್ಳುತ್ತೇನೆ ; ನನ್ನ ಬದಲಿಗೆ ಸ್ವಲ್ಪ ಬೋಧೆ ಮಾಡುತ್ತೀಯಾ ?" ಎಂದ ; ಶಾರಿಪುತ್ರ 'ಹೂಂ' ಎಂದು ವೇದಿಕೆ ಹತ್ತಿದಾಗ ದೇವದತ್ತ ನಿದ್ರಾದೇವಿಗೆ ವಶನಾದ. ದೇವದತ್ತ ಏಳುವಷ್ಟರಲ್ಲಿ ಶಾರಿಪುತ್ರ ತನ್ನ ಧರ್ಮ ಬೋಧೆಯಿಂದ ದೇವದತ್ತನ ಸಂಘದವರಿಗೆಲ್ಲ ಶಾಕ್ಯಪುತ್ರ ಶ್ರಮಣ ನಲ್ಲಿ ವಿಶ್ವಾಸ ಹುಟ್ಟಿಸಿ ಬಿಟ್ಟಿದ್ದ ; ದೇವದತ್ತ ಎದ್ದು ನೋಡುತ್ತಾನೆ, ಅಲ್ಲೇನಿದೆ ? ಬರಿಯ ಗಿಡ, ಮರ, ಕಲ್ಲು ಬಂಡೆಗಳು ! ಶಾರಿಪುತ್ರನ ವಾಕ್ಚಾತುರ್ಯಕ್ಕೆ ಇದೊಂದು ನಿದರ್ಶನ.

ಧರ್ಮಬೋಧೆಯಲ್ಲಿ ಆಯುಷ್ಮಂತನಾದ ಶಾರಿಪುತ್ರ ಹೀಗೆ ಅಪ್ರತಿಮನಾಗಿದ್ದಂತೆಯೇ, ಸ್ಥವಿರನಾದ ಮೌದ್ಗಲ್ಯಾಯನ ಋದ್ಧಿಪದದಲ್ಲಿ ಅನುತ್ತರನಾದವನು. ಪ್ರಾಪಂಚಿಕವಾದ ಋದ್ಧಿಪದದಲ್ಲೂ ಆಧ್ಯಾತ್ಮಿಕವಾದ ಋದ್ಧಿಪದದಲ್ಲೂ ಅವನ ಶಕ್ತಿ ಅಸಾಧಾರಣವಾದದ್ದು ; ಅವನ ನಿಷ್ಠೆ ಸಾಧನೆ, ಯೋಗಕೌಶಲ್ಯಗಳು ನಿಜವಾಗಿ ಪ್ರಶಂಸನೀಯ.

ದೇವದತ್ತ ಭಗವಂತನ ಮೇಲೆ ಅವಿರತವಾಗಿ ಅಸೂಯೆಯ ಪ್ರವಾಹವನ್ನೇ ಕಾರಿ, ಕಡೆಗೆ ವಿಕ್ಲವನಾಗಿ, ಗೊತ್ತಿಲ್ಲ ! ಅವನು ಸಾಯುವ ಮುಂಚೆ ಸಂಬುದ್ಧನಾದ ತಥಾಗತನನ್ನೇ ಶರಣುಹೋಗುತ್ತೇನೆಂದು ಹೇಳಿ, ತನ್ನ ಪಾಪಗಳನ್ನು ಮನ್ನಿಸುವಂತೆ ಕೇಳಿಕೊಂಡ. ನಮ್ಮ ಸ್ವಾಮಿ ಎಂದೂ ಕರುಣಾಶೀತಲ ಹೃದಯಿ ; ದೇವದತ್ತನನ್ನು ಯಾವಾಗಲೂ ದ್ವೇಷಿಸಿದವನಲ್ಲ. ಅವನ ಅಂತ್ಯಕ್ರಿಯೆಗಳನ್ನು ಶಾರಿಪುತ್ರನಿಗೇ ಒಪ್ಪಿಸಿದ. ಇದರಿಂದ ದೇವದತ್ತನ ಶಿಷ್ಯರುಗಳಿಗೆ ಅತಿಯಾದ ಕ್ರೋಧ ಹುಟ್ಟಿ ಆಯುಷ್ಮಂತನಾದ ಶಾರಿಪುತ್ರನನ್ನು ಕೊಲ್ಲುವ ಪ್ರಯತ್ನ ಮಾಡಿದರು ; ಅದು ಸಾಗಲಿಲ್ಲ. ಆಗ ಈ ತೀರ್ಥಕರು ಶ್ರಮಣಗುತ್ತಕನೆಂಬುವವನನ್ನು ಮುಂದೆ ಮಾಡಿಕೊಂಡು, ರಾಜಗೃಹದ ಬೀದಿಯಲ್ಲಿ ಹೋಗುತ್ತಿದ್ದ ಸ್ಥವಿರ ಮೌದ್ಗಲ್ಯಾಯ ನನ ಮೇಲೆ ಬಿದ್ದು ಅವನನ್ನು ಚೆನ್ನಾಗಿ ಹೊಡೆದರು ; ಶಾರಿಪುತ್ರ ಅಷ್ಟುಹೊತ್ತಿಗೆ ಅಲ್ಲಿ ಬರದಿದ್ದರೆ ಅಲ್ಲಿಯೇ ಮೌದ್ಗಲ್ಯಾಯನನ ವಧೆಯಾಗುತ್ತಿತ್ತು. ಅಲ್ಲಿಂದ ಮೌಗ್ಗಲ್ಯಾಯನನ್ನು ವೇಣುವನವಿಹಾರಕ್ಕೆ ತಂದು ಅಲ್ಲಿ ಉಪಚರಿಸಿ, ಅವನ ಸ್ಥಿತಿ ಸ್ವಲ್ಪ ಮೇಲೆನಿಸದ ಮೇಲೆ ತಾನು ನಾಳಂದಕ್ಕೆ ಹೋಗುವ ನಿಶ್ಚಯ ಮಾಡಿದ.

ಆ ದಿನ ಆಯುಷ್ಮಂತನಾದ ಶಾರಿಪುತ್ರ ತನ್ನ ಭೈಕ್ಷವೃತ್ತಿ ಮುಗಿಸಿಕೊಂಡು ತನ್ನ ಆವಾಸಕ್ಕೆ ಬಂದು, ತನ್ನ ಕೋಣೆಯನ್ನು ಗುಡಿಸಿ, ತನ್ನ ಸಾಮಾನುಗಳನ್ನೆಲ್ಲ ಸಿದ್ಧಪಡಿಸಿ ಧ್ಯಾನಮುದ್ರೆಯಲ್ಲಿದ್ದ. ಆಗ ನಾನು ಅವನ ಬಳಿ ಬಂದು, ಅವನ ಕೋಣೆ ಎಂದೂ ಇಲ್ಲದೆ ಇಂದು ಇಷ್ಟು ಒಪ್ಪವಾಗಿ, ಬಹುಶಃ ಬರಿದಾಗಿರುವುದನ್ನು ಕಂಡು, ''ಆಯುಷ್ಮಂತ, ಏನು ವಿಚಾರ ?'' ಎಂದೆ. ಅದಕ್ಕೆ ಆಯುಷ್ಮಂತ, ''ಭಂತೇ, ನಾನು ಇಲ್ಲಿ ಇರುವುದು ಇದೇ ಕಡೆಯ ದಿನ ; ಈ ನೋಟವೇ ಕಡೆಯ ನೋಟ. ನನ್ನ ಅವಸಾನ ಸನ್ನಿಹಿತವಾಗಿದೆ ; ಇನ್ನು ಏಳೆಂಟು ದಿವಸಗಳಿಗಿಂತ ಹೆಚ್ಚು ಜೀವಿಸಲಾರೆ''

ಎಂದ. ನನಗೆ ಸ್ವಲ್ಪ ದಿಗಲಾಯಿತು. ಅಲ್ಲಿಂದ ಎದ್ದು ಸ್ಥವಿರ ಶಾರಿಪುತ್ರ ಭಗವಂತನ ಬಳಿ ಬಂದು, ''ಭಂತೇ, ನನ್ನ ಸಾವು ಸನ್ನಿಹಿತವಾಗಿದೆ ; ಪರಿನಿರ್ವಾಣಕ್ಕೆ ಅನುಜ್ಞೆ ಕೊಡಬೇಕು'' ಎಂದು ಸಾಷ್ಟಾಂಗ ಪ್ರಣಾಮ ಮಾಡಿ ಬಿನ್ನವಿಸಿಕೊಂಡ. ಭಗವಂತ ತುಸು ಹೊತ್ತು ಮೌನವಾಗಿದ್ದು ''ಎಲ್ಲಿ ಸಾಯಬೇಕೆಂದು ನಿಶ್ಚಯಿಸಿರುವೆ ? ಸೋಮ್ಯ ಶಾರಿಪುತ್ರ ?'' ಎನ್ನಲಾಗಿ ''ನನ್ನ ತೌರೂರಾದ ನಾಳಂದದಲ್ಲಿ, ಭಂತೆ, ನಾನು ಹುಟ್ಟಿದ ಕೋಣೆಯಲ್ಲೇ ಸಾಯುವ ಆಸೆ ಇದೆ'' ಎಂದು ಶಾರಿಪುತ್ರ ಹೇಳಿದ. ಇದನ್ನು ಕೇಳಿ ಭಗವಂತ ಪ್ರೀತಿಯಿಂದ, ''ಶಾರಿಪುತ್ರ, ನಿನ್ನಂಥ ಪ್ರಜ್ಞಾವಂತ, ಶೀಲವ್ರತ ಮತ್ತೊಬ್ಬ ಸಿಗುವುದು ದುರ್ಲಭ. ಕಡೆಯಬಾರಿ ಸಂಘವನ್ನುದ್ದೇಶಿಸಿ ಧರ್ಮ ಹೇಳುವೆಯಾ ?'' ಎಂದ. ಶಾರಿಪುತ್ರ ಆಗಲೆಂದು ಎದ್ದು ಧರ್ಮ ಹೇಳಿ, ಕಡೆಯಲ್ಲಿ ''ಭೋ, ಭಗವಂತನಾದ ಅರ್ಹತನಾದ ಸಂಬುದ್ಧನಿಗೆ ಪ್ರಣಾಮ ಮಾಡುತ್ತೇನೆ ; ಇದೇ ಕಡೆ ಪ್ರಣಾಮ, ಭಂತೇ, ಇನ್ನು ಸ್ವಲ್ಪದರಲ್ಲೇ ಭವವನ್ನು ದಾಟಿ ಹೋಗುವವನಿದ್ದೇನೆ ; ಇನ್ನು ಕೆಲವೇ ದಿನಗಳಲ್ಲಿ ದೊಡ್ಡ ಭಾರವನ್ನು ಹೊತ್ತವನು ಭಾರವನ್ನು ಇಳಿಸಿ ವಿರಮಿಸುತ್ತೇನೆ'' ಎಂದು ಉದ್ವೇಗದಿಂದ ಹೇಳಿದ. ಎಲ್ಲರೂ ಚಕಿತರಾಗಿ ಉದ್ವಿಗ್ನರಾದರು. ಆಗ ಭಗವಂತ ನಮ್ಮನ್ನೆಲ್ಲ ನೋಡಿ, ''ಭಿಕ್ಷುಗಳೆ, ನಿಮ್ಮ ಸೋದರ ಶಾರಿಪುತ್ರ ಜಗತ್ತು ಬಿಟ್ಟು ಹೊರಡುವುದರಲ್ಲಿದ್ದಾನೆ. ಸ್ವಲ್ಪದೂರ ನಾಳಂದದವರೆಗೆ ಹೋಗಿ ಕಳುಹಿಸಿ ಬೀಳ್ಕೊಟ್ಟು ಬನ್ನಿ'' ಎಂದ.

ಈ ಸುದ್ದಿ ಊರ ಜನರ ಕಿವಿ ಮುಟ್ಟಿ ಆರಾಮದ ಹೊರಗೆ ದೊಡ್ಡ ಜನಸಂದಣಿ ಸೇರಿಬಿಟ್ಟಿತ್ತು. ಗಮನೋತ್ಸುಕನಾದ ಶಾರಿಪುತ್ರನ ಸೌಹಾರ್ದ, ಶಾಂತತೆ, ಪ್ರೀತಿ, ಎಲ್ಲರಿಗೂ ತಿಳಿದಿತ್ತು ; ಅವನ ವಿಷಯದಲ್ಲಿ ಜನಗಳಿಗೆ ಗಾಢವಾದ ವಿಶ್ವಾಸಭಾವನೆ ತುಂಬಿತ್ತು. ಗಂಧ-ಮಾಲ್ಯಗಳಿಂದ, ಪ್ರಶಂಸೆಗಳಿಂದ, ಕಣ್ಣೀರಿನಿಂದ ಹೂಮಳೆಯಿಂದ ಆಯುಷ್ಮಂತನಾದ

ಶಾರಿಪುತ್ರನನ್ನು ಸತ್ಕರಿಸಿದರು. ಶಾರಿಪುತ್ರ ಈ ಪ್ರೀತಿಯಿಂದ ಪರವಶನಾಗಿ, ''ನಿಮ್ಮ ಔದಾರ್ಯ ನಾ ಎಂದೂ ಮರೆತಿಲ್ಲ'' ಎಂದಷ್ಟು ಹೇಳಿ ಮುಗಿಸಿದ. ನಾಳಂದಕ್ಕೆ ಹೊರಟಾಗ ಊರಬಾಗಿಲವರೆಗೂ ಜನ ಮಂಗಳವಾದ್ಯ ಗಳೊಡನೆ ಹಿಂಬಾಲಿಸಿ ಮನಸ್ಸಿಲ್ಲದ ಮನಸ್ಸಿನಿಂದ ಬೀಳ್ಕೊಟ್ಟರು. ನಮ್ಮ ಭಿಕ್ಷುಗಳ ತಂಡವೊಂದು ಶಾರಿಪುತ್ರನೊಡನೆ ನಾಳಂದಕ್ಕೆ ಹೊರಟಿತು.

ಅದು ಏಳು ದಿನಗಳ ಪ್ರಯಾಣ. ಈ ಭಿಕ್ಷು ಸಂಘ ನಾಳಂದದ ಬಾಗಿಲು ಮುಟ್ಟಿದಾಗ ಮುಂಜಾನೆಯ ಮಬ್ಬು ಇನ್ನೂ ಹರಿದಿರಲಿಲ್ಲ. ಶಾರಿಪುತ್ರನಿಗೆ ಮಾರ್ಗಾಯಾಸವಾಗಿ ಅಲ್ಲಿ ಒಂದು ಆಲದ ಮರದ ಬುಡದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದಾಗ ಅವನ ಅಣ್ಣನ ಮಗ ಉಪರೇವತ ಅಕಸ್ಮಾತ್ ಆ ರಸ್ತೆಯಲ್ಲಿ ಹೋಗುತ್ತಿದ್ದುದು ಕಣ್ಣಿಗೆ ಬಿದ್ದು ಅವನನ್ನು ಕರೆದು ಶಾರಿಪುತ್ರ, ''ಮಗು, ನಿಮ್ಮಜ್ಜಿ ಕ್ಷೇಮವೇ ?'' ಎಂದು ಕೇಳಿದ. ಅದಕ್ಕೆ ಆ ಹುಡುಗ, ''ಕ್ಷೇಮ ಹಿರಿಯರೇ, ಮನೆಯಲ್ಲೇ ಇದ್ದಾಳೆ'' ಎಂದ. ''ಹಾಗಾದರೆ ಆಕೆಗೆ ಹೇಳು — ನಿನ್ನ ಮಗ ಶಾರಿಪುತ್ರ ಬರುತ್ತಿದ್ದಾನಂತೆ ; ಮನೆಯಲ್ಲಿ ಅವನು ಹುಟ್ಟಿದ ಕೋಣೆಯನ್ನು ತೆರವು ಮಾಡಬೇಕಂತೆ - ಎಂದು, ಮಗು''. ''ಆಗಲಿ'' ಎಂದು ಆ ಹುಡುಗ ಓಡಿಹೋಗಿ ವೃದ್ಧಶಾರಿಯ ಮುಂದೆ ಹೇಳಿದ. ಆಕೆಗೆ ಎಲ್ಲೂ ಹಿಡಿಸದ ಸಂಭ್ರಮ ; ನಲವತ್ತು ವರ್ಷಗಳ ಹಿಂದೆ ಮನೆಬಿಟ್ಟು ಹೋದವನು ಇಂದು ಮತ್ತೆ ಬರುವನೆಂದು. ಅವನು ಹುಟ್ಟಿದ ಕೋಣೆಯನ್ನು ಅಣಿಮಾಡಿಟ್ಟಳು. ತನ್ನ ಮುದ್ದಿನ ಮಗನ ಬರವನ್ನೇ ನೋಡುತ್ತಾ ಅಂಗಳದಲ್ಲಿ ಅನ್ನ ನೀರು ಬಿಟ್ಟು ನಿಂತಳು. ಶಾರಿಪುತ್ರ ಸಂಜೆಯ ಸುಮಾರಿಗೆ ಮನೆಗೆ ಬಂದ. ಉಭಯತ್ರ ವಾಗಿ ಪ್ರೀತಿಪುರಸ್ಸರವಾದ ಕುಶಲ ಪ್ರಶ್ನೋತ್ತರವಾದ ಮೇಲೆ ಶಾರಿಪುತ್ರ ತನ್ನ ಕೋಣೆಯನ್ನು ಹೊಕ್ಕು, ''ನಾನು ಸ್ವಲ್ಪ ಮಲಗುತ್ತೇನೆ, ನೀವೆಲ್ಲ ಹೊರಡಿ'' ಎಂದು ಭಿಕ್ಷುಸಂಘವನ್ನು ಕಳುಹಿಸಿದ. ಅವರು ಹೊರಡುತ್ತಿ

ದ್ದಂತೆಯೇ ಶಾರಿಪುತ್ರನಿಗೆ ಬೇನೆ ಬಂತು ; ರಕ್ತವನ್ನು ಕಾರತೊಡಗಿದ, ಪಾತ್ರೆ ಹಿಡಿಸದಷ್ಟು ರಕ್ತ ! ಈ ದಾರುಣ ದೃಶ್ಯ ನೋಡಲಾರದೆ ವೃದ್ಧಮಾತೆ ನಡುಗತೊಡಗಿದಳು ; ಕರಗಳಲ್ಲಿ ಧಾರಾಕಾರವಾಗಿ ನೀರು ಸುರಿಯಹತ್ತಿತು. ಬೇನೆ ಸ್ವಲ್ಪ ಹೊತ್ತಿನ ಮೇಲೆ ಸುಧಾರಿಸಿತು. ಆಗ ಪರಿನಿರ್ವಾಣದ ಬಾಗಿಲಲ್ಲಿ ನಿಂತ ಆಯುಷ್ಮಂತನಾದ ಶಾರಿಪುತ್ರನ ಮುಖದಲ್ಲಿ ಅಪೂರ್ವವಾದ, ದಿವ್ಯವಾದ, ಜ್ವಾಜ್ವಲ್ಯಮಾನವಾದ ಕಾಂತಿ ಹುಟ್ಟಿತು. ಇದನ್ನು ನೋಡಿ ಆ ವೃದ್ಧಮಾತೆಗನ್ನಿಸಿತು — "ನನ್ನ ಮಗನೇ ಇಷ್ಟು ದಿವ್ಯವಾಗಿರುವಲ್ಲಿ, ಅವನ ಗುರು ಇನ್ನೆಷ್ಟು ಇರಲಾರ !"— ಎಂದು. ಶಾರಿಪುತ್ರ ಅವಳ ಮನೋಗತ ಅರಿತು ಅವಳಿಗೆ ಧರ್ಮ ಬೋಧಿಸಿದ ; ಆಕೆ ಪ್ರಪಂಚದ ನಿಜವಾದ ಸ್ವರೂಪ ಅರಿತು ಸ್ರೋತಾಪತ್ತಿ ಪಡೆದಳು. ನಂತರ ಆಯುಷ್ಮತನಾದ ಶಾರಿಪುತ್ರ ನೆರೆದ ಭಿಕ್ಷುಗಳನ್ನು ನೋಡಿ, "ಸೋದರರೇ, ಕಳೆದ ನಲವತ್ತು ವರ್ಷಗಳಿಂದ ನೀವು ನನ್ನೊಂದಿಗೆ ವಾಸಿಸಿದ್ದೀರಿ. ಎಂದಾದರೂ ತಮಗೆ ನಾನು ಅಪಚಾರ ಮಾಡಿದ್ದರೆ, ತಮ್ಮ ಮನಸ್ಸು ನೋಯಿಸಿದ್ದರೆ, ತಮ್ಮಲ್ಲಿ ದೋಷವೆಣಿಸಿದ್ದರೆ ಕ್ಷಮಿಸಿರಿ" ಎಂದಾಗ ನೆರೆದವರೆಲ್ಲ ಕಂಬನಿ ದುಂಬಿ, "ಎಂಥ ಮಾತು, ಭಂತೆ ! ನಿನ್ನ ನೆರಳಿನಂತೆ ನಾವು ನಿನ್ನ ಹಿಂದೆ ನಲವತ್ತು ವರ್ಷ ಇದ್ದೆವು ; ಒಂದು ಗಳಿಗೆಯೂ ನಿನ್ನಲ್ಲಿ ಬೇಸರಿಕೆ ಬರಲಿಲ್ಲ, ನಮ್ಮಗಳಿಂದ ಆಗಿರಬಹುದಾದ ಅಪರಾಧವೇ ಬಹಳ ; ಅದು ನಿಮಿತ್ತ ನಾವು ನಿನ್ನ ಕ್ಷಮೆ ಕೇಳುವುದು ಸಹಜ" ಎಂದರು.

ಮರುದಿನ ಬೆಳಿಗ್ಗೆ ಭದಂತನಾದ ಶಾರಿಪುತ್ರನಿಗೆ ಮತ್ತೆ ಬೇನೆ ತೀಕ್ಷ್ಣವಾಯಿತು ; ಏಳಲೂ ಅಶಕ್ತನಾದ. ಆಗ ನಮ್ಮಲ್ಲಿ ಒಬ್ಬ ಅವನ ಚೀವರ ಮಡಿಸಿ, ಹೊದಿಸಿ, ಬಲಮಗ್ಗುಲಲ್ಲಿ ಮಲಗಿಸಿದ. ತನ್ನ ಸದ್ಗುಣಗಳಿಂದ ಎಲ್ಲರ ಹೃದಯವನ್ನೂ ಸೂರೆಗೊಂಡಿದ್ದ, ಶಾಸ್ತ್ರವಿಶಾರದನಾದ, ಧರ್ಮಸೇನಾಪತಿಯಾದ, ಅರ್ಹತನಾದ ಶಾರಿಪುತ್ರ ಶಾಂತನಾಗಿ

ಮುಗುಳ್ನಗೆ ನಕ್ಕು ಪ್ರಾಣಬಿಟ್ಟ. ಮನುಷ್ಯರಲ್ಲಿ ಒಂದು ಅನರ್ಘ್ಯ ರತ್ನ ನಮ್ಮಿಂದ ಮಾಯವಾಯಿತು.

ಇತ್ತ ತೀರ್ಥಕರಿಂದ ಏಟು ತಿಂದು ಜರ್ಝರಿತನಾಗಿ ಹಾಸಿಗೆ ಹಿಡಿದು ವೇಣುವನದಲ್ಲಿ ಸುಧಾರಿಸಿಕೊಳ್ಳುತ್ತಿದ ಸ್ಥವಿರ ಮೌದ್ಗಲ್ಯಾಯನ ಸ್ವಲ್ಪ ಗುಣಮುಖನೆಂದು ಭಾಸವಾಗಿತ್ತಾದರೂ, ಸಾವಿನ ಕಡೆಗೇ ಸಾಗುತ್ತಿದ್ದ. ಅಲ್ಲಿ ಅವನನ್ನು ಮಗಧದ ದೊರೆ ಅಜಾತಶತ್ರು ಮತ್ತು ಊರ ಜನರೆಲ್ಲ ಬಂದು ನೋಡಿಕೊಂಡು ಹೋಗುತ್ತಿದ್ದರು. ಆಸ್ಥಾನದ ವೈದ್ಯರೆಲ್ಲ ಅವನ ಉಪಚಾರದಲ್ಲೇ ನಿರತರಾಗಿದ್ದರು ; ಅಜಾತಶತ್ರುವಿಗಂತೂ "ಮೌದ್ಗಲ್ಯಾಯನನ ಪ್ರಾಣ ಉಳಿಸದಿದ್ದರೆ ನಿಮ್ಮನ್ನೆಲ್ಲ ಪದಚ್ಯುತರನ್ನಾಗಿ ಮಾಡಿಬಿಡುತ್ತೇನೆ" ಎಂದು ವೈದ್ಯರಿಗೆ ರಾಜಾಜ್ಞೆ. ಇದು ಕೇಳಿ ಸ್ಥವಿರ ಮೌದ್ಗಲ್ಯಾಯನ ನಕ್ಕು, "ಆಗಲಿ ನಾನು ಗುಣವಾಗಿಯೇ ಬಿಡುತ್ತೇನೆ " ಎಂದು ನಿಶ್ಚಯಿಸಿ, ಮನೋದಾರ್ಢ್ಯದಿಂದ ತನ್ನ ಬೇನೆಯನ್ನು ದಾಟಿ, ಏಳನೆಯ ದಿನ ರಾಜಗೃಹದ ಬೀದಿಯಲ್ಲಿ ಭಿಕ್ಷೆಗೆ ಹೊರಟಿದ್ದ ! ಅವನ ಚಿತ್ತಸ್ಥೈರ್ಯ ಅಂತಹುದು ! ಆದರೆ ಅಂದೇ ಮಧ್ಯಾಹ್ನ ತನ್ನ ಆವಾಸಕ್ಕೆ ಬಂದು, ಮಲಗಿ ಶಾಂತನಾಗಿ ಪ್ರಾಣಬಿಟ್ಟ. ಎಂದೂ ಸ್ನೇಹದ ಮಾಧುರ್ಯದಲ್ಲಿ ಪರಸ್ಪರ ನಿರತರಾದ ಶಾರಿಪುತ್ರ-ಮೌದ್ಗಲಾಯನರು ಒಂದೇ ದಿನ, ಒಂದೇ ಸಮಯದಲ್ಲಿ ಪ್ರಾಣಬಿಟ್ಟರು !

ಆ ದಿನದ ಶೋಕ ಬಣ್ಣಿಸಲಾರೆ, ಯಶೋಭದ್ರ ! ಮಗಧವೆಲ್ಲ ಗೋಳೋ ಎಂದು ಅಳುತ್ತಿತ್ತು ; ಆಸ್ರವಗಳನ್ನೆಲ್ಲ ದಾಟಿ ಅರ್ಹತರಾದವರು ಕೂಡ ಮುಗ್ಧರಂತೆ ಅಳುತ್ತಿದ್ದರು. ನಮ್ಮ ಆಯುಷ್ಮಂತ ಆನಂದನಂತೂ ಮಗುವಿನಂತೆ ಬಿದ್ದು ಬಿದ್ದು ಅಳುತ್ತಿದ್ದ ; ಭಗವಂತ ತಾನೇ ಬಂದು ಸಂತೈಸುತ್ತಿದ್ದ. ಶಾರಿಪುತ್ರ ಮಗುವಾಗಿದ್ದಾಗ ಅವನನ್ನು ನೋಡಿಕೊಳ್ಳುತ್ತಿದ್ದ ವಳಂತೆ - ರೇವತಿ ಎಂಬ ಮುದುಕಿ —ಆಕೆಯ ರೋದನ ಹೃದಯ

ಹಿಂಡುವಂತಿತ್ತು. ವೃದ್ಧಮಾತೆ ಶಾರಿ, ಹೊಸದಾಗಿ ಧರ್ಮದಲ್ಲಿ ಕಾಲಿಟ್ಟವಳು ಶೋಕದಿಂದ ಸ್ತಂಭಿತಳಾಗಿದ್ದಳು.

ದಹನಕ್ರಿಯೆಗೆ ಊರ ಜನರು ಚಂದನದ ಕಟ್ಟಿಗೆ, ಗಂಧ, ಪರಿಮಳ ದ್ರವ್ಯಗಳು ಎಲ್ಲವನ್ನೂ ಸಿದ್ಧಪಡಿಸಿಕೊಟ್ಟರು. ಶಾರಿಪುತ್ರನ ತಮ್ಮ ಚಂದನೆಂಬುವನು ಶಾರಿಪುತ್ರನ ಚಿತೆ ಹತ್ತಿಸಿದ ; ಸ್ಥವಿರ ಅನುರುದ್ಧ ಅದನ್ನು ಎಲ್ಲ ಉರಿದ ಮೇಲೆ ಪರಿಮಳದ ನೀರಿನಿಂದ ಆರಿಸಿದ. ಚಂದ ಅಸ್ಥಿ ಭಸ್ಮಗಳನ್ನು ಸಂಚಯನ ಮಾಡಿ ಒಂದು ಕರಂಡದಲ್ಲಿಟ್ಟು ಆಯುಷ್ಮಂತನಾದ ಅನುರುದ್ಧನೇ ಮೊದಲಾದ ಭಿಕ್ಷುಸಂಘದೊಡನೆ ರಾಜಗೃಹಕ್ಕೆ ಕೊಂಡೊಯ್ದು ಅಲ್ಲಿ ಭಗವಂತನ ಕೈಲಿ ಕೊಟ್ಟ. ಭಗವಂತ ಶಾರಿಪುತ್ರನ ಅವಶೇಷವನ್ನು ನೆರೆದವರಿಗೆ ಪ್ರದರ್ಶಿಸಿ "ಈಗ ಏಳೆಂಟು ದಿನಗಳ ಹಿಂದೆ ಜೀವಕಳೆಯಿಂದ ತುಂಬಿ, ಉತ್ಸಾಹದಿಂದ ಚಿಮ್ಮುತ್ತಿದ್ದ ಸ್ಥವಿರ ಶಾರಿಪುತ್ರ ಇಂದು ಈ ಬೂದಿಯಲ್ಲಿ ಮಾತ್ರ ಉಳಿದಿದ್ದಾನೆ ! ಭಿಕ್ಷುಗಳೇ, ಎಲ್ಲವೂ ಅನಿತ್ಯ ; ಇದು ಮಾರನ ಮಾಯೆ ; ಇದನ್ನು ತಿಳಿಯದವನು ಅಂಧಕಾರ ದಿಂದ ಮುಚ್ಚಿದವನು. ಧರ್ಮದ ಅರ್ಥ ನಿಜವಾಗಿ ಅರಿತಿದ್ದವನೆಂದರೆ ಈ ಶಾರಿಪುತ್ರ. ಅವನು ಮತ್ತೊಬ್ಬ ಬುದ್ಧನಂತೆ ಧರ್ಮ ಬೋಧಿಸುತ್ತಿದ್ದ ; ಭಿಕ್ಷುಗಳೇ, ಅವನು ಎಲ್ಲದರ ಅನಿತ್ಯತೆಯನ್ನು ಅರಿತಿದ್ದರೂ ಎಲ್ಲರಲ್ಲೂ ದಯೆಯಿಂದ, ಪ್ರೀತಿಯಿಂದ, ಮೈತ್ರಿಯಿಂದ ವರ್ತಿಸುತ್ತಿದ್ದ. ಅವನ ಪ್ರಜ್ಞೆ ಅಸಾಧಾರಣವಾದದ್ದು, ಮನಸ್ಸು ಅತಿ ಸರಳ, ಗಂಭೀರ : ಚಿತ್ತವನ್ನು ದಮನ ಮಾಡುವುದರಲ್ಲಿ ಅಪ್ರತಿಮ. ಜನಜಂಗುಳಿ ಅವನಿಗೆ ರುಚಿಸದು ; ಏಕಾಂತದಲ್ಲೇ ಅವನ ಅಭಿರುಚಿ. ಕಲಹ-ಕದನ, ತರ್ಕ-ವಾದಗಳು ಅವನಿಂದ ಎಂದೂ ದೂರವಾಗಿದ್ದವು. ಅವನು ಪುರುಷದಮ್ಯಸಾರಥಿ, ಅರ್ಹತ !" ಎಂದು ಪ್ರಶಂಸೆ ಮಾಡಿದಾಗ ಎಲ್ಲರೂ ತಲೆಬಾಗಿ ಭದಂತ ಶಾರಿಪುತ್ರನ ಅವಶೇಷಗಳಿಗೆ ಮಣಿದು ಸತ್ಕರಿಸಿದರು. ನಂತರ ಭಗವಂತ

ಅವಶೇಷದ ಕರಂಡವನ್ನು ಸ್ಥವಿರ ಆನಂದನ ವಶಕ್ಕೆ ಒಪ್ಪಿಸಿದನು ; ಆಗ ಸುದತ್ತ ಶ್ರೇಷ್ಠಿ ('ಅನಾಥಪಿಂಡಿಕ ') ಅದರ ಚೈತ್ಯವೊಂದು ಕಟ್ಟಿಸುವೆನೆಂದು ಹೇಳಿದಾಗ ಅವಶೇಷವನ್ನು ಅವನ ವಶಕ್ಕೆ ಒಪ್ಪಿಸಲಾಯಿತು. ಸುದತ್ತಶ್ರೇಷ್ಠಿ ಅವಶೇಷದ ಕರಂಡವನ್ನು ತನ್ನ ಪ್ರಾಸಾದಕ್ಕೆ ಒಯ್ದು ಅಲ್ಲಿ ಅತಿ ವೈಭವದಿಂದ, ಸಂಭ್ರಮದಿಂದ ಸತ್ಕರಿಸಿದನು ; ಊರ ಜನರೆಲ್ಲ ಹಿರಿಯರು — ಕಿರಿಯರೆನ್ನದೆ ಬಂದು ಅವಶೇಷಗಳನ್ನು ಪೂಜಿಸಿದರು.

ಭದಂತ ಮೌದ್ಗಲ್ಯಾಯನನ ಅವಶೇಷಗಳನ್ನೂ ತರಿಸಿಕೊಂಡು ಎರಡನ್ನೂ ಒಟ್ಟಿಗೆ ಈ ಮುಂದೆ ಕಾಣುವ ಚೈತ್ಯದಲ್ಲಿಡುವ ಏರ್ಪಾಡಾಗಿದೆ. ಜೀವ ಇರುವವರೆಗೆ ಅವರ ನಡುವೆ ಇದ್ದ ಮೈತ್ರಿ ಅಸಾಧಾರಣವಾದುದು ; ಅವರ ಅವಶೇಷಗಳೂ ಒಟ್ಟಿಗೆ ಚಿರಂತನವಾಗಿ ಇರುವುದು ಸಹಜ ತಾನೆ ? ಮನುಷ್ಯರಲ್ಲಿ ಸ್ನೇಹದ ಪರಮಾವಧಿ ಅವರ ಸ್ನೇಹ ; ಅವರು ಆದರ್ಶ ದ್ವಂದ್ವ. ಯಶೋಭದ್ರ, ಇಂಥ ಮಹಾವ್ಯಕ್ತಿಗಳ ನೆನಪು ಎಂದಿಗೆ ತಾನೆ ನಿಸ್ತೇಜವಾಗುವುದು ?''

ಎಂದು ವೃದ್ಧಸ್ಥವಿರನಾದ ಭಿಕ್ಷು ಮುಗಿಸಿದ ಮೇಲೆ, ಯಶೋಭದ್ರ - ''ಚೈತ್ಯದೆಡೆ ಹೋಗೋಣವೇ, ಭಂತೇ ವಾಪ್ಪ ?'' ಎಂದಾಗ ಇಬ್ಬರೂ ಎದ್ದು ಸ್ಥವಿರ ಶಾರಿಪುತ್ರ- ಮೌದ್ಗಲ್ಯಾಯನರ ಚೈತ್ಯಮಂದಿರಕ್ಕೆ ಹೊರಟರು.

◈ ◈ ◈

'ಧರ್ಮಧರ'ನ ಭಾರತಯಾತ್ರೆ

ಈಗ್ಗೆ ಸುಮಾರು ಒಂದು ಸಾವಿರ ವರ್ಷಗಳ ಹಿಂದಿನ ಮಾತು. ಪ್ರಪಂಚದಲ್ಲಿ ಪ್ರಯಾಣ ಸೌಕರ್ಯ ಇನ್ನೂ ಅವತರಿಸಿಯೇ ಇರಲಿಲ್ಲ, ನಮಗೆ ಆಗಿನ ಸ್ಥಿತಿ ಊಹನೆಗೂ ನಿಲುಕದೋ ಏನೋ ! ಈಗ ದೂರ, ಕಾಲ ಎರಡರ ಎಣಿಕೆಯೂ ಇಲ್ಲ : ಸಾವಿರಾರು ಮೈಲುಗಳನ್ನು ಕೆಲವೇ ಗಂಟೆಗಳಲ್ಲಿ ಸುಖವಾಗಿ ದಾಟುವ ಸಾಧನಗಳುಂಟು ; ಮಾರ್ಗ ಮಧ್ಯೆ ಆತಂಕಗಳು ಸಾಧಾರಣವಾಗಿ ಇರವು. ಆದರೆ ಆ ಕಾಲದಲ್ಲಿ ಪ್ರಯಾಣದ ಬಹುಭಾಗ ಕಾಲ್ನಡಗೆಯಲ್ಲೇ ಆಗಬೇಕಾಗಿದ್ದಿತು. ಇದರಿಂದಾಗಿ ದೇಹ ಶ್ರಮ. ಕಾಲವ್ಯಯದೊಂದಿಗೆ ಪ್ರಯಾಣದಲ್ಲಿ ಗಂಡಾಂತರಗಳ ಪರಂಪರೆಯೇ ಆಗಿ ಹೋಗುವ ಸಂಭವ ಇರುವಂತಿತ್ತು. ಅದು ಕಾರಣ, ಜನರಲ್ಲಿ ಪ್ರಾಯಶಃ ಪ್ರಯಾಣಮಾಡಬೇಕೆಂಬ ಉತ್ಸುಕತೆಯೇ ಇರುತ್ತಿರಲಿಲ್ಲ— ತೀರ ಅನಿವಾರ್ಯವಾದಾಗ, ಅತ್ಯಗತ್ಯವಾದಾಗ ಮಾತ್ರ ಜನ ಜೀವ ಬಿಗಿ ಹಿಡಿದು, ಗುಂಡಿಗೆ ಗಟ್ಟಿಮಾಡಿ, ಪುನಃ ಮರಳುವ ಆಸೆ ಇರದೆ ಹೊರಡುತ್ತಿದ್ದರು. ಊರಿಂದ ಊರಿಗೆ ಹೋಗುವುದೇ ದುಸ್ತರವೆನಿಸಿದ್ದ ಆ ಕಾಲದಲ್ಲಿ ದೇಶದಿಂದ ದೇಶಕ್ಕೆ ಹೋಗುವ ಸಾಹಸ ಸಾಮಾನ್ಯವಾಗಿ ಯಾರೂ ಮಾಡುತ್ತಿರಲಿಲ್ಲ. ಇಂಥ ಕಾಲದಲ್ಲಿ ನಮ್ಮ ಭಾರತದ ನೆರೆನಾಡಾದ ಚೀಣಾದಿಂದ ನಮ್ಮ ದೇಶಕ್ಕೆ ಅಸಹಾಯನಾಗಿ, ಏಕಾಂಗಿಯಾಗಿ ನಡೆದು ಬಂದು ಹಿಂದಿರುಗಿದ ಒಬ್ಬ ಚೀಣೀ ಸಂನ್ಯಾಸಿಯ ಸಾಹಸದ ಕಥೆ ಇದು. ಹ್ಯುಎನ್-ತ್ಸ್ಯಾಂಗ್ ಎಂದವನ ಹೆಸರು.

ಆ ಕಾಲಕ್ಕೆ ಚೀಣ ಜಗತ್ತಿನ ನಡುವೆ ಕಾರಾಗೃಹದಂತಿತ್ತು. ಸುತ್ತಮುತ್ತಲೂ ಅಗಾಧವಾದ ಬೆಟ್ಟ-ಬೆಂಗಾಡುಗಳು ಹಿರಿದಾಗಿ ಹಬ್ಬಿ ಪ್ರಯಾಣಕ್ಕೆ ಅಸಾಧ್ಯವೆನಿಸಿತ್ತು. ಆದರೆ ಹೊರ ದೇಶಗಳೊಂದಿಗೆ ಸಂಪರ್ಕ ಇರಲಿಲ್ಲವೆಂದಲ್ಲ. ಕ್ರಿಸ್ತೋತ್ತರ ೧೬೬ರಿಂದಲೇ ಚೀಣದ ಸಮೃದ್ಧಿ ಸಂಪತ್ತು, ಸಂಸ್ಕೃತಿಗಳ ಅರಿವು ಜಗತ್ತಿಗಿತ್ತು. ರಾಜಕಾರಣದ ಸಂಬಂಧ, ಸಮರರೂಪೀ ಸಂಬಂಧಗಳು ಚೀಣ ಹಾಗೂ ನೆರೆನಾಡು ಕೆಲವುಗಳ ನಡುವೆ ಬೆಳೆದಿತ್ತು. ಕ್ರಿಸ್ತಪೂರ್ವ ೨೧೭ರಲ್ಲೇ ಬೌದ್ಧ ಧರ್ಮ ಚೀಣವನ್ನು ಪ್ರವೇಶಿಸಿತೆಂದು ಕೆಲವರ ಅಭಿಪ್ರಾಯ. ಕ್ರಿಸ್ತೋತ್ತರ ೬೧ರಲ್ಲಿ ಮಿಂಗ್‌ಟಿ ಎಂಬ ಚೀಣೀ ಚಕ್ರವರ್ತಿ ಭಾರತ ದೇಶದಿಂದ ಬೌದ್ಧಗ್ರಂಥಗಳನ್ನು ಹಾಗೂ ಭಿಕ್ಷುಗಳನ್ನು ಸಂಗ್ರಹಿಸಲು ನಿಯೋಗವೊಂದನ್ನು ಕಳುಹಿಸಿದ್ದ. ೪೦೫ರಂದು ಟ್ಸಿನ್ ದೇಶದ ದೊರೆ ಕುಮಾರಜೀವನೆಂಬ ನಮ್ಮ ಕಡೆಯ ಭಿಕ್ಷುವನ್ನು ಕರೆಯಿಸಿಕೊಂಡು ಅವನಿಂದ ಮುನ್ನೂರಕ್ಕೂ ಮೀರಿ ಬೌದ್ಧ ಗ್ರಂಥಗಳ ಪರಿವರ್ತನೆ ಮಾಡಿಸಿದ. ಆ ಕಾಲಕ್ಕೆ ಫಾಹಿಯನ್ ಎಂಬ ಯಾತ್ರಿಕ ಭಾರತಕ್ಕೆ ಬಂದಿದ್ದ. ಸುಮಾರು ೫೨೦ರಲ್ಲಿ ದಾಕ್ಷಿಣಾತ್ಯ ಬ್ರಾಹ್ಮಣನಾಗಿ ಭಿಕ್ಷುವಾದ ಬೋಧಿಧರ್ಮ ಚೀಣಾದೇಶಕ್ಕೆ ಬಂದು ಅಲ್ಲಿ ಬೌದ್ಧಧ್ಯಾನಪಂಥದ ಪ್ರವರ್ತನೆ ಮಾಡಿದ. ಬೋಧಿಧರ್ಮ ಚೀಣದಲ್ಲಿ ಒಂಬತ್ತು ವರ್ಷಗಳು ವಾಸಮಾಡಿ ತನ್ನ ಅಮೋಘ ವ್ಯಕ್ತಿ ಪ್ರಭಾವದಿಂದ ಬುದ್ಧವಚನ ಅಲ್ಲಿ ಬೇರೂರಿ, ಬಿಳಿಲು ಬಿಟ್ಟು, ಬೆಳೆಯುವಂತೆ ಮಾಡಿದ. ಬುದ್ಧ ಭಾರತದಲ್ಲಿ ಬೋಧನೆ ಮಾಡಿ ಗತಿಸಿದ ಸುಮಾರು ಐದು ಶತಮಾನಗಳ ನಂತರ ಅವನ ಪ್ರಭಾವ ಚೀಣವನ್ನು ಹೊಕ್ಕು ಅಲ್ಲಿ ರಾಜಸನ್ಮಾನಿತವಾಗಿ, ಜನಪ್ರಿಯವಾಗಿ, ಸರ್ವತೋಮುಖವಾಗಿ ಬೆಳೆಯ ಹತ್ತಿತ್ತು ; ಅಲ್ಲಲ್ಲಿ ವಿಹಾರಗಳೂ ಮಠಗಳೂ ಆಶ್ರಮಗಳೂ ಬಂದವು. ಇಂಥ ಒಂದು ವಿಹಾರದಲ್ಲಿ ಸಂನ್ಯಾಸಿಯಾಗಿ ಬೌದ್ಧಧರ್ಮದ ಅಧ್ಯಯನ-ಅಧ್ಯಾಪನ ಮಾಡುತ್ತಿದ್ದವನು ಹ್ಯುಎನ್-ತ್ಸಾಂಗ್. ಇವನು ಹುಟ್ಟಿದ್ದು

ಕ್ರಿಸ್ತೋತ್ತರ ೬೦೫ರಂದು — ಅಂದರೆ ಬುದ್ಧ ನಿರ್ವಾಣಪಡೆದು ಸುಮಾರು ಸಾವಿರದ ನೂರು ವರ್ಷಗಳಮೇಲೆ. ಮಧ್ಯಚೀಣಾದ ಹೊ-ನಾನ್‌ನಲ್ಲಿ ಅಧ್ಯಾಪಕನೊಬ್ಬನ ನಾಲ್ಕನೆಯ ಮಗನಾಗಿ ಹುಟ್ಟಿ ಎಳೆಯವನಿದ್ದಾಗಲೇ ಲೋ-ಯಾಂಗ್‌ನ ಬೌದ್ಧ ವಿಹಾರ ಸೇರಿ, ತನ್ನ ಬುದ್ಧಿಶಕ್ತಿ-ಧರ್ಮ ಶ್ರದ್ಧೆಗಳ ಫಲವಾಗಿ ಪಂಡಿತಪ್ರವರನಾದ. ಧರ್ಮದಲ್ಲಿ ಆಸಕ್ತಿ ಬೆಳೆದಂತೆ ಯೌವ್ವನದ ಬಾಗಿಲಲ್ಲಿ ತಲೆಯಿಟ್ಟಿದ್ದ ಹ್ಯುಎನ್-ತ್ಸಾಂಗನಿಗೆ (ಅವನ ಅಸಾಧಾರಣವಾದ ಪಾಂಡಿತ್ಯಕ್ಕಾಗಿ ಜನ ಅವನನ್ನು 'ಧರ್ಮಧರ' ಎಂದು ಕರೆಯುತ್ತಿದ್ದರು ; ಇಲ್ಲಿ ಕೂಡ ಮುಂದೆ ಆ ಹೆಸರನ್ನೇ ಬಳಸಿ ಕೊಳ್ಳುತ್ತೇವೆ.) ತನ್ನ ಧರ್ಮದ ಆದಿಗುರುವಾದ ಬುದ್ಧ ಬದುಕಿ, ಬಾಳಿ, ಬೋಧಿಸಿ, ಸಂಬೋಧಿಯನ್ನು ಸಂದ ಭೂಭಾಗವನ್ನು ನೋಡಿ ಬರಬೇಕೆಂಬ ಹಂಬಲ ಮೈದೋರಿತು. ತನ್ನ ಆರಾಧ್ಯ-ದೈವ ಮನುಷ್ಯನಾಗಿ ತನ್ನಂತೆ ಇದ್ದಾಗ ನಡೆಯುತ್ತಿದ್ದ ನೆಲ, ಇರುತ್ತಿದ್ದ ಮನೆ, ಆಡುತ್ತಿದ್ದ ಮಾತು — ಎಲ್ಲವೂ ಪವಿತ್ರವಲ್ಲವೆ ? 'ಧರ್ಮಧರ'ನಿಗೆ ಈ ಆಸೆ ಬಲವಾಗಿ ಭಾರತದೇಶಕ್ಕೆ ಒಮ್ಮೆ ಹೋಗಿಬರುವುದೆಂದು ನಿರ್ಧರಿಸಿದ. ಹಿಂದೆ ಫಾಹಿಯನ್ ಮತ್ತು ಫಿ-ಎನ್ ಈ ಕಾರ್ಯ ಮಾಡಿದ್ದರು ; ಅವರ ಉದಾತ್ತವಾದ ಚಾರಿತ್ರವನ್ನು ಬೆಳಗಲು ಅವರ ಅನುಕರಣೆಯೇ ಉಚಿತವಾದ ಮಾರ್ಗವಲ್ಲವೆ ? ಎಂದು 'ಧರ್ಮಧರ'ನ ತರ್ಕ.

ಆಗಮನ :

ಆದರೆ ಆದೀಗ ಬೌದ್ಧಮತಕ್ಕೆ ರಾಜಾಶ್ರಯದ ಕಾಕದೃಷ್ಟಿ ಬಿದ್ದಿತ್ತು ; ಚೀಣದಲ್ಲಿ ಯಾದವೀ ಕಲಹದ ಪಚ್ಚೆದ್ದಿತ್ತು ; ಹತ್ಯಾಕಾಂಡ ಆರಂಭ ವಾಗಿತ್ತು, ಒಂದು ರಾಜಸಂತಾನದ—ವಂಶದ—ಅವಸಾನವಾಗಿ ಮತ್ತೊಂದರ (ಟಿ' ಆಂಗ್ ವಂಶದ) ಉದಯ ಆಯಿತು ; ಆದರ ದೊರೆ ಕಒ-ಟ್'ಸೌ

ಎಂಬುವನು. ಸಮದರಿಂದ ಕೃಶವಾದ ಪ್ರಜಾಸಮೂಹ ನೋಡಿ ಸಂನ್ಯಾಸಿಗಳೂ ಪ್ರಜಾಭಿವೃದ್ಧಿಗಾಗಿ ಮದುವೆ ಆಗಬೇಕೆಂದು ಶಾಸನ ಮಾಡಿದ. 'ಧರ್ಮಧರ' ಮತ್ತು ಅವನ ಕೆಲವು ಸಂಗಾತಿಗಳು (ಅವರೂ ಸಂನ್ಯಾಸಿಗಳು) ತಾವು ಧರ್ಮಗ್ರಂಥಗಳ ಸಂಚಯನಕ್ಕಾಗಿ ಭಾರತಕ್ಕೆ ಹೋಗಲು ಅನುಮತಿಬೇಕೆಂದು ಕೇಳಿದಾಗ ಒಪ್ಪುವವನೇ ಆ ದೊರೆ ? ಆಗದೆಂದು ಖಂಡಿತವಾಗಿ ನುಡಿದ. ಸಂಗಾತಿಗಳು ರಾಜಾಜ್ಞೆಗೆ ಬಗ್ಗಿದರು. ಆದರೆ 'ಧರ್ಮಧರ' ದೃಢವ್ರತ, ನಿಶ್ಚಿತಮನೋವೃತ್ತಿಯ ಸಾಹಸಿ. ಆಗಿನ್ನೂ ೨೪ರ ಹರೆಯಲ್ಲಿ ಕಾಲಿಡುತ್ತಿದ್ದ ಅವನಿಗೆ ಧರ್ಮಕ್ಕೆ ಅಡ್ಡಿ ಬರಲು ಈ ರಾಜಕಾರಣ ಉಚಿತವೆನಿಸಲಿಲ್ಲ. ತನ್ನ ಹೃದಯದ ದೈವನಾದ ಬುದ್ಧ ಭಗವಂತನ ನಾಡಿನ ಕರೆ ತನ್ನ ಜೀವಿತದ ನಾಳ ನಾಳಗಳಲ್ಲಿ ಪ್ರತಿಧ್ವನಿತವಾಗುತ್ತಿರುವಲ್ಲಿ ಅದರ ಅಭಿವ್ಯಕ್ತಿಗೆ ಆತಂಕವಾಗಿ ಬರುವ ಈ ದೊರೆಯ ಶಾಸನವನ್ನು ಉಲ್ಲಂಘಿಸಲು ಸಿದ್ಧನಾದ. 'ಧರ್ಮಧರ' ತನ್ನ ವಿಹಾರದಿಂದ ಹೊರ ಹೊರಟು, ತಿರುಗುವ ವರ್ತಕರ ಗುಂಪೊಂದನ್ನು ಸೇರಿ, ಭಾರತದೆಡೆ ಮುಖ ಮಾಡಿ ಚೀಣಾದ ಗಡಿ ದಾಟಲು ಉದ್ಯುಕ್ತನಾದ. ಅನತಿಕಾಲದಲ್ಲೇ ಚೀಣಾದ ಅಂಚಿನ ನಗರಗಳಲ್ಲೊಂದಾದ ಲಿಯಾಂಗ್— ಛೌನಲ್ಲಿದ್ದ 'ಧರ್ಮಧರ'. ಅಲ್ಲಿ ಸುತ್ತಮುತ್ತಲಿನ ದೇಶಗಳ ವ್ಯಾಪಾರಿಗಳೆಲ್ಲ ಕಲೆತು ವ್ಯವಹಾರ ಮಾಡುತ್ತಿದ್ದರು ; 'ಧರ್ಮಧರ'ನ ತೇಜಸ್ಸು, ಪಾಂಡಿತ್ಯ, ಪೌರುಷ, ಮನೋದಾರ್ಢ್ಯ ಇವುಗಳು ಅವರ ಮನಸ್ಸನ್ನು ಸೆಳೆದು ಅವರಿಂದ ಸನ್ಮಾನ ಸಹಾಯಗಳನ್ನು ಸೆಳೆದವು.

ಆದರೆ ಆ ನಗರಿಯಲ್ಲೂ ಆತಂಕದ ವಾತಾವರಣ ಇದ್ದು ಆಂದೋಲನದ ಭೀತಿ ಇದ್ದಿತಾಗಿ ಯಾರೂ ಗಡಿದಾಟಿ ಹೋಗುವಂತಿರಲಿಲ್ಲ; ನಗರಾಧಿಪತಿಯೋ ಶಾಸನವೇ ವ್ರತವಾಗಿ ದಂಡನೆಯೇ ಧರ್ಮವಾಗಿ ದ್ದವನು. ನಮ್ಮ 'ಧರ್ಮಧರ' ತನ್ನ ವಿಹಾರದಿಂದಲೇ ಬಂದವನು ಇಲ್ಲಿ

ನಿಲ್ಲುವನೆ ? ಒಂದು ಸಮರಾತ್ರಿಯ ಕಗ್ಗತ್ತಲೆಯಲ್ಲಿ ಇಬ್ಬರು ತರುಣ ಸನ್ಯಾಸಿಗಳೊಂದಿಗೆ ವೇಷ ಮರೆಸಿ ನಗರದಿಂದ ಮಾಯವಾದ. ರಾತ್ರಿ ಮುಂದೆ ಸಾಗುವುದು, ಹಗಲು ಮರೆಯಲ್ಲಿ ಅವಿತುಕೊಂಡಿರುವುದು— ಹೀಗೆ ಲಿಯಾಂಗ್–ಭೌನಿಂದ ಸುಮಾರು ಒಂದು ನೂರು ಮೈಲಿ ನಡೆದರು ಈ ಮೂವರು ತರುಣ ಸನ್ಯಾಸಿಗಳು. ದಾರಿಯಲ್ಲಿ ಭಾರತಕ್ಕೆ ಮಾರ್ಗ ಕೇಳಿದಾಗ ಭಯಾನಕವಾದ ಕಾಡು, ಬೆಂಗಾಡು, ಬೆಟ್ಟ ಗುಡ್ಡ ನದಿಗಳನ್ನು ದಾಟಿ ಹೋಗಬೇಕೆಂದು ತಿಳಿಯಿತು. ‘ಧರ್ಮಧರ’ ಏರಿ ಹೋಗುತ್ತಿದ್ದ ಕುದುರೆ ಪ್ರಯಾಣದ ಬಿರುಸು ತಡೆಯಲಾರದೆ ಸತ್ತು ಬಿದ್ದಿತು. ಇಬ್ಬರು ಸಂಗಾತಿಗಳೂ ಹೆದರಿ ಹಿಂದಿರುಗಬಯಸಿದರು. ‘ಧರ್ಮಧರ’ನಿಗೆ ದಾರಿ ತಿಳಿಯದು ; ಅದೃಷ್ಟ ಹೀಗೆ ವಿಪರೀತವಾದಾಗ ಮಂಕಾಗಿ ಕಂಗೆಟ್ಟು ಅಲ್ಲಿಯೇ ಒಂದು ತಿಂಗಳು ಉಳಿದುಬಿಟ್ಟ. ಕಡೆಗೆ ಧೈರ್ಯತಾಳಿ ಮುಂದೆ ಸಾಗಬೇಕೆನ್ನುವಷ್ಟರಲ್ಲಿ ಲಿಯಾಂಗ್-ಭೌನ ಅಧಿಕಾರಿಗಳು ಅವನನ್ನು ಹಿಡಿದು ತರಲು ದೂತರನ್ನಟ್ಟಿದ್ದರು ; ಗಡಿ ದಾಟಬಾರದೆಂಬ ರಾಜಾಜ್ಞೆಯನ್ನು ಅವನು ಉಲ್ಲಂಘಿಸಿದ್ದನಲ್ಲವೆ ? ಅದು ಕಂಡು ಒಬ್ಬ ಸಂಗಾತಿ ಕೂಡಲೆ ಹಿಂದಿರುಗಿದ ; ಮತ್ತೊಬ್ಬ ದುರ್ಬಲನಾಗಿದ್ದುದರಿಂದ ‘ಧರ್ಮಧರ’ನೇ ಅವನನ್ನು ಹಿಂದಕ್ಕೆ ಕಳುಹಿಸಿಕೊಟ್ಟ, ತಾನು ಮಾತ್ರ ಭಾರತ ಕಂಡೇ ಬರುವೆನೆಂದು ಪ್ರತಿಜ್ಞೆ ಮಾಡಿದ. ಇವನ ಮನೋದಾರ್ಢ್ಯಕ್ಕೆ ಅಲ್ಲಿಯ ಅಧಿಕಾರಿಗಳೂ ತಲೆದೂಗಿ ಅವನು ಅಲ್ಲಿಂದ ತಪ್ಪಿಸಿಕೊಂಡು ಓಡಲು ತಾವೇ ಅಣಿಮಾಡಿಕೊಟ್ಟರು.

ಆದರೆ ಮುಂದೆ ಸಾಗಲು ಮಾರ್ಗದರ್ಶಿ ಯಾರು ? ‘ಧರ್ಮಧರ’ ಹೀಗೆ ಚಿಂತಿಸುತ್ತಿರುವಲ್ಲಿ ಅದೃಷ್ಟವಶಾತ್ ಒಬ್ಬ ಹೊರದೇಶದವನು ಅವನಲ್ಲಿಗೆ ಬಂದು ಅವನ ಬಳಿ ಸಂನ್ಯಾಸ ಸ್ವೀಕರಿಸ ಬಯಸಿ, ಅವನನ್ನು ಐದು ಕೋಟೆಗಳನ್ನೂ ದಾಟಿಸಿ ಚೀಣಾ ರಾಜ್ಯದ ಹೊರಗೆ ಬಿಡಬಲ್ಲೆನೆಂದ.

ಅವನು 'ಧರ್ಮಧರ'ನಿಗೆ ಒಬ್ಬ ವೃದ್ಧ ವರ್ತಕನ ಪರಿಚಯವನ್ನೂ ಮಾಡಿಸಿ ಕೊಟ್ಟ ; ಅವನು ಚೀಣಾದ ನೆರೆ ನಾಡಾದ ಊಯ್‌ಷುರ್‌ಗೆ ಮೂವತ್ತು ಸಾರಿ ಹೋಗಿ ಬಂದಿದ್ದ. ಮೊದಲು ಈ ವೃದ್ಧ 'ಧರ್ಮಧರ'ನಿಗೆ ಪ್ರಯಾಣದ ಕಡುಕಷ್ಟವನ್ನು ವರ್ಣಿಸಿ ಭಾರತಯಾತ್ರೆಯ ಚಿಂತೆಯನ್ನು ದೂರ ಮಾಡೆಂದ. 'ಧರ್ಮಧರ' ಎಷ್ಟು ಕಷ್ಟವಾದರೂ ಹೋಗಿಯೇ ಸಿದ್ಧವೆಂದು ಹಟ ಹಿಡಿದಾಗ ವೃದ್ಧ ವರ್ತಕ ಒಳ್ಳೆಯದೆಂದು ಅವನ ಜತೆಯಲ್ಲಿ ಹೊರಟ. ಮೂರೂ ಜನ ತುಸು ದೂರ ಮುಂದುವರೆದಾಗ ಶಿಷ್ಯನಾದವನು ''ನನಗೆ ಮನೆಯ ಯೋಚನೆ ಉಂಟು, ಅಲ್ಲದೆ ರಾಜಾಜ್ಞೆಯನ್ನು ಮೀರಲಾರೆ'' ಎಂದು ಹೇಳಿ ಹಿಮ್ಮೆಟ್ಟಿದ್ದ. ಇನ್ನೊಬ್ಬನೂ ಪ್ರವಾಸದ ಪ್ರಯಾಸಗಳನ್ನು ವಿಸ್ತರಿಸಿ ವರ್ಣಿಸುತ್ತ 'ಧರ್ಮಧರ'ನ ಮನೋರಥ ಕಡೆಯಲ್ಲಿ ವಿಫಲವೇ ಆಗುವುದೆಂದು ಹೇಳಿದ ; ಆದರೆ 'ಧರ್ಮಧರ' — ''ಈ ದೇಹವೇ ಮುರಿದು ಬಿದ್ದು ಮಣ್ಣಾದರೂ ಹಿಂದಿರುಗುವ ಯೋಚನೆಯನ್ನು ಮಾಡೆನೆಂ''ದು ನುಡಿದಾಗ ಈ ಮಾರ್ಗದರ್ಶಿಯೂ ಅವನನ್ನು ಬಿಟ್ಟು ಮರಳಿದ. ಅವನು ಮರಳುವಾಗ 'ಧರ್ಮಧರ' ತನ್ನ ಕುದುರೆಯನ್ನು ಅವನ ಉಪಕಾರಕ್ಕಾಗಿ ಬಹುಮಾನವಾಗಿ ಕೊಟ್ಟು ಕಳುಹಿಸಿದ.

ಈ ಸಮಯಕ್ಕೆ 'ಧರ್ಮಧರ' ತುದಿಯಿಲ್ಲದ, ಸಮುದ್ರಸಮವಾಗಿ ಅಗಾಧವಾದ, ಬಿಸಿಲಿನ ಬೇಗೆ ಬೀಡು ಬಿಟ್ಟಿದ್ದ ಗೋಬಿ ಮರುಭೂಮಿಯಲ್ಲಿ ಏಕಾಕಿಯಾಗಿ, ನಿಸ್ಸಹಾಯನಾಗಿ, ದಾರಿ ಅರಿಯದೆ, ಮೃತ ಯಾತ್ರಿಕರ ಮೂಳೆಗಳು, ಕುದುರೆಗಳ ಉಚ್ಛಿಷ್ಟ ಇವುಗಳ ಮೇಲೆಯೇ ದಾರಿಯನ್ನು ನಿರ್ಧರಿಸುತ್ತ ನಡೆದು ಹೋಗುತ್ತಿದ್ದ. ಬಿಸಿಲಿನ ಝಳ ಮರಳಿನ ಮೇಲೆ ಮೂಡಿದಾಗ ಭಯಂಕರವಾದ ಮರುಮರೀಚಿಕೆಯ ಚಿತ್ರಗಳು ಎದ್ದು ಮರೆಯಾಗುತ್ತಿದ್ದುವು ; ಪಿಶಾಚನ ಆಟದಂತೆ ವಿಚಿತ್ರವಾಗಿ

ಭೀಕರವಾಗಿ ಕಾಣುತ್ತಿದ್ದುವು. 'ಧರ್ಮಧರ'ನಿಗೆ ಮೊದಮೊದಲು ಸಹಜವಾಗಿಯೇ ದಿಗಿಲಾಯಿತು ; ಆದರೆ ತನಗೆ ತಾನೇ ನಿರ್ಭೀತಿಯ ಆಶ್ವಾಸನೆ ಮಾಡಿಕೊಂಡು ಮೆಲ್ಲನೆ ಮುಂದುವರೆದ. ಸುಮಾರು ೮೦ ಗಾವುದ ಹೀಗೆಯೇ ಹೋಗುವಲ್ಲಿ ಮೊದಲನೆಯ ರಕ್ಷಾಶಿಖರ ಕಂಡಿತು ; ಅಲ್ಲಿಯ ಅಧಿಕಾರಿಗಳು ತನ್ನನ್ನು ಕಂಡಾರೆಂದು ಬೆದರಿ 'ಧರ್ಮಧರ' ಮರಳನ್ನು ಮೊಗೆದು ಒಳಗೆ ದಿನವೆಲ್ಲ ಅವಿತು ಮಲಗಿದ್ದ. ಸಂಜೆ ಮೂಡಿದಾಗ ಬಾಯಾರಿ ಕಂಗೆಟ್ಟು ಮೇಲೆದ್ದು ನೀರಿಗಾಗಿ ತಡಕಾಡುತ್ತಿರುವಲ್ಲಿ ಎಲ್ಲಿಂದಲೋ ಬಾಣ ಬಂದು ಮೈ ಮುಟ್ಟಿತು. ಆಗ 'ಧರ್ಮಧರ' — "ನಿಲ್ಲಿರಿ, ಹೊಡೆಯದಿರಿ, ನಾನು ರಾಜಧಾನಿಯ ಸಂನ್ಯಾಸಿ" ಎಂದು ಅರಚಿದ. ಸಿಪಾಯಿಗಳು ಬಂದು ಅವನನ್ನು ಹಿಡಿದು ಶಿಬಿರಕ್ಕೊಯ್ದು ಮೇಲಧಿಕಾರಿಯ ಮುಂದೆ ನಿಲ್ಲಿಸಿದರು. ಸಂಭಾಷಣೆಯಿಂದಾಗಿ 'ಧರ್ಮಧರ'ನ ದೃಢವಾದ ಸಂಕಲ್ಪ ಮತ್ತು ಅಪ್ರತಿಹತವಾದ ಪರಾಕ್ರಮಗಳಿಗೆ ಅಧಿಕಾರಿಯೂ ಮನಸೋತು ಅವನ ಮುಂದಿನ ಪ್ರಯಾಣಕ್ಕೆ ಕೆಲವು ಅನುಕೂಲಗಳನ್ನೇ ಕಲ್ಪಿಸಿಕೊಟ್ಟ ! ಮುಂದಿನ ರಕ್ಷಾಶಿಖರದಲ್ಲೂ ಈ ನಾಟಕವೇ ನಡೆಯಿತು ; ಅಲ್ಲಿ ಮೂರನೆಯ ಶಿಖರವನ್ನು ಮುಟ್ಟದೆ ಮುಂದೆ ಹೋಗುವ ದಾರಿಯನ್ನು ನಿರ್ದೇಶಿಸಿಕೊಟ್ಟರು.

ಅಲ್ಲಿ ದಾರಿಯುದ್ದಕ್ಕೂ ದೆವ್ವ ಭೂತ, ಮಾರಿ ಮಸಣಿಗಳು ಯಥೇಚ್ಛವಾಗಿ ಸ್ವಚ್ಛಂದವಾಗಿ ಕುಣಿದಾಡುತ್ತಿರುವಂತೆ ತೋರಿತು. ಆಗ ತನ್ನ ಬಳಿಯಲ್ಲಿದ್ದ 'ಪ್ರಜ್ಞಾಪಾರಮಿತ ಹೃದಯ ಸೂತ್ರ'ದ ಗ್ರಂಥವನ್ನು ಎದೆಗೆ ಅವುಚಿಕೊಂಡು 'ದರ್ಮಧರ' ಬುದ್ಧನನ್ನೇ ಧ್ಯಾನಿಸುತ್ತ ಮುಂದೆ ನಡೆದ. ಹೀಗೆ ಒಂದು ನೂರು ಗಾವುದ ಸವೆಯಿತು. ಅಷ್ಟರಲ್ಲಿ ಅವನು ತಂದಿದ್ದ ನೀರಿನಪಾತ್ರೆ ಕೆಳಗೆ ಆಕಸ್ಮಾತ್ ಬಿದ್ದು ಒಡೆದು, ಇದ್ದ ನೀರೆಲ್ಲಾ ಭೂಮಿಯ ಪಾಲಾಯಿತು ; ಅವನ ಕುದುರೆ ದಾರಿಯನ್ನು ಮರೆತು, ನಡೆದ

ದಾರಿಯಲ್ಲೇ ಮತ್ತೆ ಮತ್ತೆ ತಿರುಗಲಾರಂಬಿಸಿತು. ಇಂತು ನಾಲ್ಕು ಹಗಲು ನಾಲ್ಕು ರಾತ್ರಿ ಆಯಿತು. ಬಟ್ಟಬಯಲಿನಲ್ಲಿ ಏಕಾಕಿ ; ಅತಿಯಾದ ಆಯಾಸ ; ಶಮನದ ಮಾರ್ಗವೇ ಇಲ್ಲ, ದುಸ್ಸ್ವಪ್ನಗಳು, ದುರ್ದೃಶ್ಯಗಳು ; ನೀರಿಲ್ಲ ನೆರಳಿಲ್ಲ, ದೇಹದಲ್ಲಿ ಬಾಧೆ — ಒಂದು ಜೀವಿತ ನರಕವೇ ಆಯಿತು ನಮ್ಮ ಯಾತ್ರಿಕನಿಗೆ. ಕರುಣಾಮಯನಾದ ಬೋಧಿಸತ್ತ್ವವನ್ನೇ ಚಿಂತಿಸುತ್ತ 'ಧರ್ಮಧರ' ಬಳಲಿ ಬೆಂಡಾಗಿ ನಿದ್ದೆಯಕ್ಕೆ ಸೇರಿದ. ಅಷ್ಟರಲ್ಲಿ ಆ ಬೆಂಗಾಡಿನಮೇಲೆ ಯಾವುದೋ ಶೀತಲಮಾರುತ ಬೀಸಿ, ವಾತಾವರಣದ ಬೇಗೆ ಆರಿ, ಆಹ್ಲಾದಕೊಡುವ ತನುವು ಹುಟ್ಟಿತು. ಅನತಿ ದೂರದಲ್ಲೇ ಇದ್ದ ಸಣ್ಣ ಜಲಾಶಯವೊಂದು ಗೋಚರವಾಯಿತು. 'ಧರ್ಮಧರ' ಎದ್ದು ಸುಮಾರು ಹತ್ತುಗಾವುದ ನಡೆದು ಆ ಜಲಾಶಯದಲ್ಲಿ ಮಿಂದು, ನೀರು ಕುಡಿದು, ದೇಹದ ಬಾಧೆಯನ್ನು ನೀಗಿಸಿಕೊಂಡು, ಅಲ್ಲೇ ಒಂದು ದಿನವೆಲ್ಲ ವಿಶ್ರಮಿಸಿಕೊಳ್ಳುತ್ತ ಕುಳಿತಿದ್ದು, ಮತ್ತೆ ಉತ್ಸಾಹದಿಂದ ಎರಡುದಿನ ನಡೆದು ಬೆಂಗಾಡನ್ನು ಕಳೆದು ಇ-ಗು ಪಟ್ಟಣವನ್ನು ಮುಟ್ಟಿದ. ಅಲ್ಲಿ ಒಂದು ಮಂದಿರದಲ್ಲಿ ಮೂರು ಚೀಣೀ ಸಂನ್ಯಾಸಿಗಳಿದ್ದರು ; ಅವರಿಗೆ 'ಧರ್ಮಧರ'ನನ್ನು ಕಂಡು ಅತಿ ಆನಂದವಾಯಿತು. ಆ ನಗರವಾಸಿಗಳು ನಮ್ಮ ಯಾತ್ರಿಕನನ್ನು ಬಹುವಾಗಿ ಆದರಿಸಿ ಸತ್ಕಾರಮಾಡಿದರು ; ಊರಿನ ದೊರೆ ತನ್ನ ಆಸ್ಥಾನಕ್ಕೆ ಅವನನ್ನು ಕರೆಯಿಸಿಕೊಂಡು ವಿಶೇಷವಾಗಿ ಪುರಸ್ಕರಿಸಿ ತನ್ನ ನಗರದಲ್ಲೇ ವಾಸಮಾಡುವಂತೆ ಬೇಡಿಕೊಂಡ. ಆದರೆ ಇಷ್ಟುಕಷ್ಟ ನಿಷ್ಠುರಗಳನ್ನು ಸಹಿಸಿ, ತನ್ನ ದೇಶದಿಂದ ಬಂದು ನಡೆಯುತ್ತಿರುವ 'ಧರ್ಮಧರ' ಈ ಅಲ್ಪ ಸತ್ಕಾರಕ್ಕೆ ಮನಸೋತು ನಿಂತಾನೆ ? ತಾನು ವಿಧ ವಿಧವಾಗಿ ಪ್ರಾರ್ಥಿಸಿದರೂ ಯಾತ್ರಿಕ ಒಪ್ಪದಿರಲು ದೊರೆ ಬಲಾತ್ಕಾರವಾಗಿ ಅವನನ್ನು ನಿಲ್ಲಿಸಿಕೊಳ್ಳಲೆಣಿಸಿದ. ಅದಕ್ಕೆ ಯಾತ್ರಿಕ, "ಅಯ್ಯಾ ದೊರೆಯೇ, ನಿನ್ನ ಶಕ್ತಿ ಇರುವುದು ನನ್ನ ದೇಹದ ಮೇಲಲ್ಲದೆ ನನ್ನ ಮನಸ್ಸಿನ ಮೇಲಲ್ಲ, ನಾನು ಧರ್ಮದ ಜಿಜ್ಞಾಸುವಾಗಿ ಹೊರಟವನು ಇಲ್ಲಿಯೇ ಎಂದಿಗೂ

ಇರಲಾರೆ !'' ಎಂದು ಹೇಳಿ ಕೂತಲ್ಲಿಂದ ಮೂರುದಿನ ಮೇಲಕ್ಕೇಳದೆ, ಅನ್ನಾಹಾರಬಿಟ್ಟು ಸತ್ಯಾಗ್ರಹ ಆರಂಭಿಸಿದ. ನಾಲ್ಕನೆಯದಿನ ದೊರೆ ನಡುಗಿ, ಕ್ಷಮೆ ಬೇಡಿ ತನ್ನ ದೇಶದಲ್ಲಿ ಒಂದು ತಿಂಗಳ ಮಟ್ಟಿಗಾದರೂ ಇರಲು ಕೇಳಿಕೊಂಡ. 'ಧರ್ಮಧರ' ಆಗಲೆಂದು ಒಪ್ಪಿ ಅಲ್ಲಿ ಒಂದು ತಿಂಗಲಿದ್ದಾಗ ಅವನ ಶ್ರದ್ಧೆ, ನಿಷ್ಠೆ ಧರ್ಮ ಬುದ್ಧಿ ತ್ಯಾಗಗಳಿಂದ ಊರ ಜನರ ಜೀವನದಲ್ಲೇ ಮಹತ್ವದ ಪರಿಣಾಮ ಆಯಿತು. ಅವನು ಹೊರಡುವಾಗ ದೊರೆ ಅತಿವೈಭವದಿಂದ ಬೀಳ್ಕೊಟ್ಟು ಮುಂದಿನ ದೇಶವಾದ ಯೆ—ಹುನ ಒಡೆಯನಿಗೆ 'ಧರ್ಮಧರ'ನನ್ನು ಆದರಿಸಿ ಸ್ವೀಕರಿಸಲು ಪತ್ರ ಕಳುಹಿಸಿದ ; ಜತೆಗೆ ಸಿಬ್ಬಂದಿ, ಚಳಿಗಾಲ ತಡೆಯುವ ಬಟ್ಟೆಗಳು, ಬೆಳ್ಳಿ ಬಂಗಾರಗಳನ್ನು ಕಳುಹಿಸಿಕೊಟ್ಟ

ಅಲ್ಲಿಂದ ಪಶ್ಚಿಮಕ್ಕೆ ಹೊರಟು ಓ-ಕಿ-ನಿ ರಾಜ್ಯಕ್ಕೆ ಬಂದರು. ಅಲ್ಲಿ ಒಂದು ರಾತ್ರಿ ಇದ್ದು ತಾರಿಂನದಿಯ ದಡಕ್ಕೆ ಬಂದಾಗ ದೊಡ್ಡದೊಂದು ಕಳ್ಳರಗುಂಪು ಅವರನ್ನು ಮುತ್ತಿ ಸುಲಿಗೆ ಮಾಡಿಬಿಟ್ಟಿತು. ಜೀವ ಉಳಿಸಿದ್ದೇ ಉಪಕಾರವೆಂದು ಬಗೆದು 'ಧರ್ಮಧರ' ಮತ್ತು ಅವನ ಸಿಬ್ಬಂದಿ ಮುಂದೆ ಕರಾ-ಷಹಾರ್ ನಗರಕ್ಕೆ ಬಂದರು. ಅಲ್ಲಿಯ ದೊರೆ 'ಧರ್ಮಧರ'ನ ಗೌರವಾರ್ಥವಾಗಿ ಒಂದುಬಾರಿ ಔತಣಸಮಾರಂಭ ಏರ್ಪಡಿಸಿದ. ಸಂನ್ಯಾಸಿಯಾದ 'ಧರ್ಮಧರನು' ಅದರಲ್ಲಿ ಭಾಗಿಯಾಗಲು ಒಪ್ಪದಿರಲು ದೊರೆಗೆ ಅಸಮಾಧಾನವಾದಂತಾಯಿತಾದರೂ ಅವನನ್ನು ಸನ್ಮಾನಿಸಿ ಬೀಳ್ಕೊಟ್ಟ. ಅಲ್ಲಿಂದ ಪ್ರಯಾಣಮಾಡುವಲ್ಲಿ ಸುಮಾರು ೨೦೦೦ ಟರ್ಕಿ ದರೋಡೆಗಾರರು ಭೇಟಿಯಾದರು. ಮುಂದೆ ೧೨೦ ಮೈಲಿಗಳನ್ನು ಕಳೆದು ಈ ಯಾತ್ರಿಕರ ಗುಂಪು ಒಂದು ಸಣ್ಣ ಮರುಭೂಮಿಯನ್ನು ದಾಟಿ, ಅಲ್ಲಿಯ ಒಂದೂರಿನಲ್ಲಿ ಒಂದು ರಾತ್ರಿ ತಂಗಿ, ಅಲ್ಲಿಂದ ಮುಂದೆ ಕಿಯಾನ್—ಷಾ‍ ಬೆಟ್ಟ ಸಾಲುಗಳನ್ನು ಕಡುಕಷ್ಟದಿಂದ ಏಳುದಿನಗಳಲ್ಲಿ ಹತ್ತಿಳಿದು, ತ್ಸಿಂಗ್

ಎಂಬ ದೊಡ್ಡ ಕೆರೆಯನ್ನು ಸುತ್ತಿ ಸು-ಯೆ ಎಂಬ ದೇಶಕ್ಕೆ ಬಂದರು. ಈ ಮಧ್ಯೆ ಬೆಟ್ಟ ಹತ್ತುವ ಸಾಹಸದಲ್ಲಿ ಹನ್ನೆರಡು—ಹದಿಮೂರು ಮಂದಿ ಸಂಗಾತಿಗಳು ಮಡಿದಿದ್ದರು. ಅನೇಕ ಕುದುರೆಗಳು, ಎತ್ತುಗಳೂ ನಾಶವಾದವು.

ಅಲ್ಲಿಯ ಒಡೆಯನಾದ ಯೆಹ್— ಯು ಎಂಬುವನು (ಟುರ್ಕಿ ಜನ) 'ಧರ್ಮಧರ'ನನ್ನು ಅತ್ಯಾದರದಿಂದ ಬರಮಾಡಿಕೊಂಡು ಬಹಳವಾಗಿ ಉಪಚರಿಸಿ, ಹಲವಾರು ದಿನ ಅವನನ್ನು ತನ್ನ ಅತಿಥಿಯಾಗಿ ನಿಲ್ಲಿಸಿಕೊಂಡು ಕಡೆಗೆ ಮನಸ್ಸಿಲ್ಲದ ಮನಸ್ಸಿನಿಂದ ಬೀಳ್ಕೊಟ್ಟ ; ಹತ್ತು ಗಾವುದಗಳಷ್ಟು ದೂರ ತಾನೇ ಸ್ವತಃ ಅವನ ಜೊತೆಯಲ್ಲಿ ನಡೆದು ಹೋಗಿಬಿಟ್ಟು ಬಂದ. ಮುಂದೆ ೪೦೦ ಗಾವುದ ಪ್ರಯಾಣಮಾಡಿ 'ಧರ್ಮಧರ' ಸಹಸ್ರ ಜಲಾಶಯ ಎಂಬ ಗಟಕೋದ್ಯಾನಗಳಿಂದ ರಮಣೀಯವಾದ ಭೂಭಾಗಮುಟ್ಟಿದ. ಅಲ್ಲಿಂದ ೧೫೦ ಗಾವುದ ಪಶ್ಚಿಮದಲ್ಲಿ ನಡೆದು ಟು-ಲೊ-ಸ್ಸೆ ಅಲ್ಲಿಂದ ೨೦೦ ಗಾವುದ ನೈರುತ್ಯ ದಿಕ್ಕಿನಲ್ಲಿ ಪೆ-ಷ್ವ್ಯಾಯ್ ಮತ್ತೆ ೨೦೦ ಗಾವುದ ಆಚೆ ಕೊಂಗ್-ಯು, ಮತ್ತೆ ದಕ್ಷಿಣಕ್ಕೆ ೫೦ ಗಾವುದದಲ್ಲಿ ನು-ಛಿ-ಕೈಕ್, ಅಲ್ಲಿಂದ ಪಶ್ಚಿಮದಲ್ಲಿ ೨೦೦ ಗಾವುದಕ್ಕೆ ಛೆ-ಶಿ. ದೇಶ, ಮತ್ತೆ ಪಶ್ಚಿಮದಲ್ಲಿ ಸುಮಾರು ೧೦೦೦ ಗಾವುದದಾಚೆ ಸು-ತು-ಲಿ-ಸ್ಸೆ-ನ, ಅಲ್ಲಿಂದ ವಾಯುವ್ಯದ ಕಡೆ ತಿರುಗಿ ಬಟ್ಟಬಯಲುಸೇರಿ, ನೀರು ನೆರಳಿಲ್ಲದೆ ಬಳಲಿ ಬೆಂಡಾಗಿ, ೫೦ ಗಾವುದಗಳು ಸುತ್ತಿ ಸು-ಮೊ-ಕೈಕ್ ಸೇರಿದ. ಅಲ್ಲಿಯ ಜನ ಅಗ್ನಿಪೂಜಕರು, ಅವರಿಗೆ ಸಂನ್ಯಾಸಿಗಳನ್ನು ಕಂಡರೆ ಆಗದು. ಅಲ್ಲಿಯ ದೊರೆ 'ಧರ್ಮಧರನನ್ನು' ಮೊದಲು ಬಹು ಉದಾಸೀನತೆಯಿಂದ ಕಂಡ. ಆದರೆ ಆ ರಾತ್ರಿ 'ಧರ್ಮಧರ' ಅಲ್ಲಿ ಪುರುಷಾರ್ಥದ ಮೇಲೆ ಮಾಡಿದ ಧರ್ಮಬೋಧೆಯನ್ನು ಕೇಳಿ, ಮನಸ್ಸು ಪರಿವರ್ತಿಸಿ 'ಧರ್ಮಧರ'ನನ್ನು

ಸನ್ಮಾನಿಸಿದ. ಅಲ್ಲಿಯ ಕೆಲವರು ಪುಂಡರು 'ದರ್ಮಧರ'ನ ಶಿಷ್ಯರಿಬ್ಬರನ್ನು ಪೀಡಿಸಿದರೆಂದು ಕೇಳಿ ದೊರೆ ಆ ಪುಂಡರನ್ನು ಹಿಡಿಸಿ ಅವರ ಕೈ ಕತ್ತರಿಸಲು ಆಜ್ಞೆ ಮಾಡಿದ ; ಆದರೆ 'ಧರ್ಮಧರ' ಅಹಿಂಸೆಯನ್ನು ಪ್ರಶಂಸಿಸಿ ಅವರ ದಂಡನೆಯನ್ನು ತಪ್ಪಿಸಿದ. ಆ ಊರಿನ ಅನೇಕರು ಅವನ ಬಳಿ ಶಿಷ್ಯರಾಗಿ ಸಂನ್ಯಾಸಿಗಳಾದರು. ಅಲ್ಲಿ ಬುದ್ಧನ ಹೆಸರೇ ಇರದಿದ್ದಲ್ಲಿ ಬುದ್ಧನ ಧರ್ಮ ಈಗ ಬೇರೂರಿತು.

ಇವೆಲ್ಲ ಈಗ ಸಾಮರ್‌ಕಂದ್ ಎನಿಸಿಕೊಳ್ಳುವ ಪ್ರದೇಶದಲ್ಲಿ ನಡೆದದ್ದು. ಸಾಮರ್‌ಕಂದ್ ದಾಟಿ 'ಧರ್ಮಧರ', ಸುಮಾರು ೯೦ ಮೈಲುಗಳಾಚೆ, ಒಂದು ಇಕ್ಕಟ್ಟಿನ ಕಣಿವೆಗೆ ಬಂದ ; ಆಕಾಶ ಮುಟ್ಟುವ ಬೆಟ್ಟಗಳು, ಬಲು ಕಿರಿದಾದ ದಾರಿ, ಕೆಳಗೆ ಪಾತಾಳ ಮುಟ್ಟುವ ಕೊರಕಲುಗಳು, ಅಲ್ಲಲ್ಲಿ ಸುಭದ್ರವಾದ ಮರದ ಬಾಗಿಲುಗಳು, ಕಬ್ಬಿಣದ ಗಂಟೆಗಳು. ಇಂಥ ದುರ್ಗಮವಾದ ಕಣಿವೆಯನ್ನೂ ದಾಟಿ 'ಧರ್ಮಧರ' ಟು-ಹೊ-ಲೊ ದೇಶ, ಆಮೇಲೆ ಓಕ್ಸಸ್ ಸೇರಿದ. ಇಲ್ಲಿ ತನ್ನ ದಾರಿಯನ್ನು ತುಸು ಬದಲಿಸಿ ಪಕ್ಕಕ್ಕೆ ನೂರಾರುಮೈಲಿ ಬಂದು ಹ್ವೋ ರಾಜ್ಯ ಮುಟ್ಟಿದ. ಇವನ ಹಿಂದೆ ಉಯ್‌ಘರ್ ದೇಶದ ಒಡೆಯನ ಅಳಿಯ ಇಲ್ಲಿಲ್ಲದ್ದ. ಅವನನ್ನು ಭೇಟಿಮಾಡುವೆನೆಂದು ಉಯ್‌ಘರ್ ಪ್ರಭುವಿಗೆ ಮಾತು ಕೊಟ್ಟಿದ್ದ. ಆದರೆ ಈ ವೇಳೆಗೆ ಹ್ವೋನ ಒಡೆಯ ಮೃತ್ಯುಮುಖನಾಗಿದ್ದ ; ಅವನ ಅಪರಕ್ರಿಯೆಗಳೆಲ್ಲ ಮುಗಿಯುವವರೆಗೆ — ಅಂದರೆ ಒಂದು ತಿಂಗಳಿಗೂ ಮೀರಿ —'ಧರ್ಮಧರ' ಅಲ್ಲೇ ಇರಬೇಕಾಯಿತು. ಈ ಸಮಯದಲ್ಲಿ ಅವನಿಗೆ ಭಾರತಯಾತ್ರೆ ಮಾಡಿದ್ದ ಧರ್ಮಸಿಂಹನೆಂಬ ಸಂನ್ಯಾಸಿಯ ಪರಿಚಯ ಆಗಿ ಇಬ್ಬರೂ ಒಟ್ಟಿಗೆ ಪೋ-ಹೊ-ಲೋ (ಈಗಿನ ಬಾಲ್ಖ್)ಗೆ ಹೋದರು. ಅದನ್ನು ಜನ 'ಕಿರಿಯ ರಾಜಗೃಹ' ಎನ್ನುತ್ತಿದ್ದರು. ಅಲ್ಲಿ ಸುಮಾರು ಒಂದು ನೂರು ಸಂಘಾರಾಮಗಳಿದ್ದುವು. ಮೂರು ಸಾವಿರ

ಸಂನ್ಯಾಸಿಗಳಿದ್ದರು. (ಹೀನಯಾನಕ್ಕೆ ಸೇರಿದವರು), ಪವಿತ್ರವಾದ ಅವಶೇಷ ಗಳು ಲೆಖ್ಖವಿಲ್ಲದಷ್ಟು ಇದ್ದುವು. ಅಲ್ಲಿಯ ಜನರು 'ಧರ್ಮಧರನನ್ನು' ಕಂಡು ಹಿಗ್ಗಿ ಅವನಿಗೆ ಧನಕನಕ ವಾಹನಗಳನ್ನು ಯಥೇಚ್ಛವಾಗಿ ಕೊಟ್ಟು ಅಲ್ಲಿಯೇ ನೆಲಸುವಂತೆ ಬೇಡಿಕೊಂಡರು. 'ಧರ್ಮಧರ' ಅದೊಂದನ್ನೂ ಮುಟ್ಟದೆ, ತನ್ನ ಭರತಯಾತ್ರೆಯನ್ನು ಅರ್ಧದಲ್ಲಿ ಕೈಬಿಡಲು ಒಪ್ಪದೆ, ಪೊ-ಹೊ-ಲೋಗೆ ಹಿಂದಿರುಗಿದ.

ಅಲ್ಲಿಂದ ಪ್ರಜ್ಞಾಕರನೆಂಬ ಸಂಗಾತಿಯೊಡಗೂಡಿ ದಕ್ಷಿಣಕ್ಕಿದ್ದ ಕೈ-ಛಿ-ರಾಜ್ಯ ಸೇರಿದ. ಅಲ್ಲಿಂದ ಅವರು ಈಶಾನ್ಯಕ್ಕೆ ೬೦೦ ಗಾವುದ ನಡೆದರು (ಈಗಿನ ಆಫ್‌ಘಾನಿಸ್ಥಾನ) ಫಾನ್-ಯೆನ್-ನ (ಬಾವಿಯಾರ್) ರಾಜ್ಯಕ್ಕೆ ಬಂದರು. ಅಲ್ಲಿ ಮಂಜು ಅಗಾಧವಾಗಿ ಕವಿದು ಸಂಚಾರ ಅಸಾಧ್ಯ ವಾಗಿತ್ತು. ಹಾಗೂ ಅಲ್ಲಿಯ ಸಂಘಾರಾಮಗಳನ್ನೂ, ಬುದ್ಧವಿಗ್ರಹಗಳನ್ನೂ ನೋಡಿಕೊಂಡು ಭಿಕ್ಷುಗಳನ್ನು ಸಂದರ್ಶಿಸಿ ಅವರೊಂದಿಗೆ ಧರ್ಮದ ವಿಚಾರ ಮಾತನಾಡಿ 'ಧರ್ಮಧರ' ಅಲ್ಲಿಂದ ಮತ್ತೆ ಈಶಾನ್ಯಕ್ಕೆ ತಿರುಗಿ ೨೦೦ ಗಾವುದ ನಡೆದು ಅಲ್ಲಿ ಶಾಣಕವಾಸ ನೆಂಬೊಬ್ಬ ಪ್ರಾಚೀನನಾದ ಅರ್ಹತನ ಭಿಕ್ಷಾಪಾತ್ರೆ, ಸಂಘಾಟಿವಾಸ (ಹೊದೆಯುತ್ತಿದ್ದ ಬಟ್ಟೆ)ಗಳನ್ನು ಸಂದರ್ಶಿಸಿ, ಆ ಸ್ಥಳದಲ್ಲೇ ಭಕ್ತಿಪರವಶನಾಗಿ ಹದಿನೈದು ದಿನಗಳು ನಿಂತು, ಮುಂದೆ ನಡೆದು ತುಸು ದೂರ ದಾಟುವಲ್ಲೇ ದೊಡ್ಡ ಬಿರುಗಾಳಿ ಎದ್ದು ಅವನಿಗೆ ದಾರಿ ತಪ್ಪಿ ಹೋಯಿತು. ಅಲ್ಲಲ್ಲಿ ಅಲೆದಾಡಿ ಕೆಲವು ಬೇಡರಿಂದ ದಾರಿ ತಿಳಿದು ಕೊಂಡು ಕಪಿಶದೇಶದ ಅಂಚೆಗೆ ಬಂದ. (ಇದು ಈಗಿನ ಕಾಬೂಲ್ ದೇಶಕ್ಕೆ ಸ್ವಲ್ಪ ಉತ್ತರದಲ್ಲಿತ್ತು.) ಅವನ ಆಗಮನದ ಸುದ್ದಿ ಕೇಳುತ್ತಲೇ ಕ್ಷತ್ರಿಯವಂಶದ ಅಲ್ಲಿನ ದೊರೆ ತನ್ನ ಮಂತ್ರಿ-ಪುರೋಹಿತವರ್ಗದವರೊಡಗೂಡಿ ಊರಬಾಗಿಲಲ್ಲಿ ಬಂದು ಅವನನ್ನು ಆದರದಿಂದ ಎದುರುಗೊಂಡು ಒಳಗೊಯ್ದ. ಊರಿನ ಸಂನ್ಯಾಸಿಗಳೆಲ್ಲ

ಉತ್ಸವದಲ್ಲಿ 'ಧರ್ಮಧರ'ನನ್ನು ಕರೆದೊಯ್ದು ಸತ್ಕರಿಸಿದರು. ಅಲ್ಲಿನ ಹೀನಯಾನ ವಿಹಾರವೊಂದರಲ್ಲಿ 'ಧರ್ಮಧರ' ಪ್ರಜ್ಞಾಕರನೊಂದಿಗೆ ತಂಗಿ ವರ್ಷಾವಾಸವನ್ನು ಅಲ್ಲೇ ಕಳೆದ. ಮಳೆಗಾಲ ಮುಗಿಯಲು ಪ್ರಜ್ಞಾಕರ ತುಖಾರದ ದೊರೆಯ ಅಭ್ಯರ್ಥನೆಯಂತೆ ಹಿಂದಿರುಗಿದ. ಅಲ್ಲಿಂದ 'ಧರ್ಮಧರ' ಒಂಟಿಯಾಗಿ ಪೂರ್ವಕ್ಕೆ ತಿರುಗಿ ೬೦೦ ಗಾವುದ ದೂರ ಪ್ರಯಾಣಮಾಡಿ ಲನ್-ಪೊ (ಲಮ್‌ಘಾನ್)ನಲ್ಲಿ ಭಾರತ ದೇಶದ ಗಡಿ ಸೇರಿದ.

ಆಗ 'ಧರ್ಮಧರ'ನ ಉತ್ಸಾಹ, ಆನಂದ ಎಷ್ಟಿತ್ತೆಂಬುದು ಮಾತುಗಳಿಂದ ಹೇಳಲಸಾಧ್ಯ. ವಿವಿಧ ಪ್ರತಿಬಂಧಕಗಳನ್ನು ದಾಟಿ ಅಡ್ಡಿ ಆತಂಕಗಳನ್ನು ಮೀರಿ, ಅಸಹನೀಯವಾದ ಕಷ್ಟಪರಂಪರೆಯನ್ನೆಲ್ಲ ಸಹಿಸಿ, ಸಾವಿರಾರು ಮೈಲಿಗಳನ್ನು ಸಾಧನೆಯಂತೆ ಸವೆಸಿ ಒಬ್ಬೊಂಟಿಗನಾದ ಸಂನ್ಯಾಸಿ ತನ್ನ ಶ್ರದ್ಧೆಯ ಬಲದಿಂದ, ಧರ್ಮದ ಉತ್ಸಾಹದಿಂದ, ದೃಢ ಮನೋರಥದ ಸಂಪತ್ತಿನಿಂದ, ಪುರಾಕೃತ ಪುಣ್ಯ ದಿಂದ ನಮ್ಮ ದೇಶದ— ತನ್ನ ಇಷ್ಟದೈವವಾದ ಬುದ್ಧ ಭಗವಂತ ಬದುಕಿ ಬೋಧಿಸಿ, ಬಾಳಿ, ಭುವಿ ದಾಟಿದ ಮಹಾಕ್ಷೇತ್ರದ — ತಲೆಬಾಗಿಲಲ್ಲಿ ನಿಂತು ಕೃತಾರ್ಥತೆಯ ದೀರ್ಘನಿಃಶ್ವಾಸ ಬಿಟ್ಟಂದು ಈ ಅಪ್ರತಿಮ ಯಾತ್ರಿಕನ ಮನಸ್ಸಿನ ಸುಖ ಹೇಗಿತ್ತೆಂಬುದು ಓದುಗನ ಊಹನೆಗೆ ಮಾತ್ರ ನಿಲುಕೀತು.

ಇಲ್ಲಿ (ಲನ್-ಪೋದಲ್ಲಿ) ಮಹಾಯಾನ ಭಿಕ್ಷುಗಳಿರುವ ಹತ್ತು ಸಂಘಾ ರಾಮಗಳಿದ್ದುವು. 'ಧರ್ಮಧರ' ಇಲ್ಲಿ ಮೂರು ದಿನಗಳಿದ್ದು ಅಲ್ಲಿಂದ ದಕ್ಷಿಣಕ್ಕೆ ತಿರುಗಿ ಅಲ್ಲಿ ಪರ್ವತವೊಂದರ ಮೇಲಿದ್ದ ಸ್ತೂಪವನ್ನು ಸಂದರ್ಶಿಸಿ, ಸುಮಾರು ಇಪ್ಪತ್ತು ಗಾವುದ ಮತ್ತೆ ದಕ್ಷಿಣಕ್ಕೆ ಬಂದು ಒಂದು ನದಿದಾಟಿ, ನ-ಕಿ-ಲೊ-ಹೊ (ನಗರಹಾರ)ಕ್ಕೆ ಬಂದ. ಅದು ಈಗ ಜಲಾಲಾಬಾದ್ ಜಿಲ್ಲೆಯಲ್ಲಿದೆ. ಅಲ್ಲಿ ಅಶೋಕ ಚಕ್ರವರ್ತಿ ಕಟ್ಟಿಸಿದ್ದ

ಸುಮಾರು ೩೦೦ ಅಡಿ ಎತ್ತರದ ಸ್ತೂಪವನ್ನು ನೋಡಿಕೊಂಡು, ಅಲ್ಲಿಂದ ನೆರೆಯಲ್ಲೇ ಇದ್ದ ಹಿಡ್ಡಾ (ದೀಪಂಕರಬುದ್ಧ ವಾಸಿಸಿದ ಸ್ಥಳ)ವನ್ನು ಸೇರಿ, ಅಲ್ಲಿಂದ ದೀಪಂಕರ ನಗರಕ್ಕೆ ಬಂದು ಅಲ್ಲಿಯ ಗುಹಾವಾಸದಲ್ಲಿ ಜ್ಯೋತಿದರ್ಶನ ಮಾಡಿ ಅಲ್ಲಿಂದ ಗಾಂಧಾರ ರಾಷ್ಟ್ರಕ್ಕೆ ಬಂದು ಸೇರಿದ. ಮಹಾಯಾನ ಬೌದ್ಧಧರ್ಮದ ಆಚಾರ್ಯ ಸ್ವರೂಪರಾದ ಅಸಂಗ, ವಸುಬಂಧು, ಧರ್ಮತ್ರಾತ, ಪಾರ್ಶ್ವಿಕ ಇವರು ಈ ಗಾಂಧಾರದವರೇ. ಗಾಂಧಾರದ ಪ್ರಧಾನ ನಗರವಾದ ಪುರುಷಪುರ (ಇಂದಿನ ಪೆಷಾವರ)ಕ್ಕೆ 'ಧರ್ಮಧರ' ಬಂದು ಕನಿಷ್ಕರಾಜ ಕಟ್ಟಿಸಿದ್ದ ಸ್ತೂಪವನ್ನು ನೋಡಿಕೊಂಡು ಅಲ್ಲಿಯ ಸಂಘಾರಾಮದಲ್ಲಿ ತಂಗಿ ಅಲ್ಲಿಂದ ಒಂದು ದೊಡ್ಡ ನದಿಯನ್ನು ದಾಟಿ ಪುಷ್ಕಲಾವತೀ ನಗರಿಗೆ ಬಂದು ಅಲ್ಲಿ ಅಶೋಕನ ಸ್ತೂಪವನ್ನು ನೋಡಿಕೊಂಡು, ಉತ್ತರಕ್ಕೆ ತಿರುಗಿ ಬೆಟ್ಟಗುಡ್ಡಗಳನ್ನು ದಾಟಿ ಉದ್ಯಾನ ದೇಶಕ್ಕೆ ಬಂದ.

ಪ್ರಧಾನ ನಗರದಿಂದ ಎಂಟು ಒಂಬತ್ತು ಗಾವುದ ದೂರ ಆಗ್ನೇಯದ ಕಡೆ ಒಂದು ದೊಡ್ಡ ಅಶ್ವತ್ಥ ಮರ ಇತ್ತು; ಎತ್ತರ ನೂರು ಅಡಿ. ಅದರಡಿಯಲ್ಲಿ ಬುದ್ಧ ಕುಳಿತು ಧ್ಯಾನಮಾಡಿದ್ದಾನೆಂದು ಪ್ರತೀತಿ. ಅದರಿಂದ ಅದು ಯಾತ್ರಾಸ್ಥಳವೆನಿಸಿತ್ತು. 'ಧರ್ಮಧರ'ನೂ ಅಲ್ಲಿಗೆ ಹೋಗಿ ಆ ವೃಕ್ಷವನ್ನು ಪೂಜಿಸಿ, ಪಕ್ಕದಲ್ಲೇ ಕನಿಷ್ಕ ಕಟ್ಟಿಸಿದ್ದ ನಾನೂರು ಅಡಿ ಎತ್ತರದ ಸ್ತೂಪವನ್ನೂ ಸಂದರ್ಶಿಸಿದ. ಆ ಸ್ತೂಪದಲ್ಲಿ ವಜ್ರದ ಧರ್ಮಚಕ್ರಗಳು ಇಪ್ಪತ್ತೈದು ಇದ್ದುವಂತೆ ; ಬುದ್ಧನ ಭಸ್ಮಾವಶೇಷದ ಮೇಲೆ ಕಟ್ಟಿಸಿದ್ದು ಆ ಸ್ತೂಪ. ಅಲ್ಲಿಂದ 'ಧರ್ಮಧರ' ಅಲ್ಲಲ್ಲಿಯ ಸಂಘಾರಾಮಗಳಲ್ಲಿ ತಂಗಿ, ಪವಿತ್ರ ಸ್ಥಳಗಳಲ್ಲಿ ಪೂಜೆಮಾಡಿ, ತನಗೆ ಕೌ-ಚಾಂಗ್‌ನ ದೊರೆ ಕೊಟ್ಟಿದ್ದ ಧನಕನಕ ದ್ರವ್ಯಗಳಲ್ಲಿ ಅಷ್ಟಷ್ಟು ಧರ್ಮ ಮಾಡಿ ಮುಂದುವರಿಯುತ್ತಿದ್ದ. ಶುಭವಾಸ್ತುನದಿಯ ದಂಡೆಯಲ್ಲೇ ೧೪೦೦ ಸಂಘಾರಾಮಗಳಿದ್ದುವಂತೆ ;

ಸುಮಾರು ೧೮,೦೦೦ ಸಂನ್ಯಾಸಿಗಳಿದ್ದರಂತೆ. ಬೌದ್ಧರು ಐದು ಪಂಗಡದವರಾಗಿದ್ದರು. ಅಲ್ಲಿ ಆ ಕಾಲಕ್ಕೆ-ಧರ್ಮಗುಪ್ತರು, ಮಹೀಶಾಸಕರು, ಕಾಶ್ಯಪೀಯರು, ಸರ್ವಾಸ್ತಿವಾದಿಗಳು, ಮಹಾ ಸಾಂಘಿಕರು — ಎಂದು. ಮುಂಗಲಿನಗರ, ನಾಗ-ಅಪಲಾಪುರಿ, ರೋಹಿತಕ-ವಿಹಾರ, ಅದ್ಭುತ-ಸ್ತೂಪ, ಅವಲೋಕಿತೇಶ್ವರ- ವಿಹಾರ, ಇವೆಲ್ಲ ದಾಟಿ 'ಧರ್ಮಧರ' ತಕ್ಷಶಿಲಾ ಎನ್ನುವ ಊರಿಗೆ ಬಂದ. ಅಲ್ಲಿ ಅಶೋಕ ನಿರ್ಮಿಸಿದ್ದ ಸ್ತೂಪ, ಅದರ ಪಕ್ಕದಲ್ಲೇ ಒಂದು ದೊಡ್ಡ ಸಂಘಾರಾಮ ಇದ್ದುವು. ಹಿಂದೆ ಸೌತ್ರಾಂತಿಕ ಶಾಖೆಯ ಆಚಾರ್ಯಪುರುಷನಾದ ಕುಮಾರಲಬ್ಧನೆಂಬುವನು ಇಲ್ಲಿದ್ದನಂತೆ. ಅಲ್ಲಿಂದ ಈಶಾನ್ಯಕ್ಕೆ ತಿರುಗಿ ಉರಶಪ್ರದೇಶಕ್ಕೆ ಬಂದು ಅಲ್ಲಿಂದ ಪ್ರಯಾಸಪಟ್ಟು ಕಾಶ್ಮೀರ ದೇಶ ಸೇರಿದ.

ಕಾಶ್ಮೀರದಲ್ಲಿ ಆಗ ೧೦೦ ಮಠಗಳೂ, ೫೦೦ ಸಂನ್ಯಾಸಿಗಳೂ ಇದ್ದರಂತೆ ; ಅಶೋಕಚಕ್ರವರ್ತಿ ಕಟ್ಟಿಸಿದ್ದ ಮನೋಹರವಾದ, ಉತ್ತುಂಗವಾದ ನಾಲ್ಕು ಸ್ತೂಪಗಳಿದ್ದುವಂತೆ. 'ಧರ್ಮಧರ' ಗಡಿ ಮುಟ್ಟುತ್ತಲೇ ದೇಶದ ದೊರೆ ಅತ್ಯಾದರದಿಂದ ಅತಿ ವೈಭವದಿಂದ ಸ್ವಾಗತಿಸುವ ಸನ್ನಾಹ ಮಾಡಿದ್ದ ; ರಾಜಮಾತೆಯೇ ಸ್ವತಃ ಅವನನ್ನು ಸನ್ಮಾನಿಸಿ ಆಹ್ವಾನಿಸಿದಳು. ರಾಜಧಾನಿಗೆ ಒಂದು ಗಾವುದ ಇರುವಲ್ಲೇ ಅವನು ತಂಗಿದ್ದ ಧರ್ಮಶಾಲೆಗೆ ರಾಜ ತನ್ನ ಅಮಾತ್ಯ ಪರಿಜನ ಸಮೇತ ಬಂದು 'ಧರ್ಮಧರ'ನನ್ನು ಪೂಜಿಸಿ, ಅವನನ್ನು ಸಿಂಗರಿಸಿದ ಆನೆಯ ಮೇಲೆ ಕೂರಿಸಿ ಊರಿಗೆ ಕರೆತಂದ. ಅಲ್ಲಿ ಜಯೇಂದ್ರಮಠ ಎಂಬಲ್ಲಿ ತಂಗಿ, ಧರ್ಮಬೋಧೆ ಮಾಡಿದ. ಅಲ್ಲಿಯ ಸಂನ್ಯಾಸಿಗಳಲ್ಲಿ ಹಿರಿಯನಾದ, ಚತುರನಾದ, ನಿಷ್ಠನಾದ, ಪ್ರದಾನನಾದವನ ಬಳಿ ಕೋಶಶಾಸ್ತ್ರ, ನ್ಯಾಯಾನುಸಾರಶಾಸ್ತ್ರ ಹೇತು ವಿದ್ಯಾಶಾಸ್ತ್ರಗಳನ್ನು ತದೇಕಚಿತ್ತನಾಗಿ ಅರಿತುಕೊಂಡ. ಅಲ್ಲದೆ, ಹೆಸರಾಂತ ಪಂಡಿತರಾಗಿದ್ದ ವಿಶುದ್ಧಸಿಂಹ, ಜಿನಬಂಧು, ಸುಗತಮಿತ್ರ,

ವಸುಮಿತ್ರ, ಸೂರ್ಯ ದೇವ, ಜಿನತ್ರಾತ ಇವರನ್ನು ಭೇಟಿಮಾಡಿ ಅವರಲ್ಲಿ ದರ್ಶನಗಳನ್ನು, ಶಾಸ್ತ್ರಗಳನ್ನು ಅಧ್ಯಯನ ಮಾಡಿದ. ಆ ಪ್ರಾಂತ್ಯದಲ್ಲೇ ಸುಮಾರು ಎರಡು ವರ್ಷಗಳು ನೆಲೆಸಿದ್ದು ಅಲ್ಲಿಂದ ಈಗ ಪಂಜಾಬ್ ಎನಿಸಿಕೊಳ್ಳುವ ಸೀಮೆ ಸೇರಿದ. ಅಲ್ಲಿ ರಾಜಪುರಿ, ಜಯಪುರ, ಶಕಲ, ನಾರಸಿಂಹ, ಟಕ್ಕ ಮುಂತಾದ ಊರುಗಳಲ್ಲಿ ನಡೆದ. ಮಧ್ಯೆ ಒಂದು ಕಾಡಿನಲ್ಲಿ ಹೋಗುತ್ತಿದ್ದಾಗ ಒಮ್ಮೆ ಸುಮಾರು ಐವತ್ತು ಮಂದಿ ಕ್ರೂರಕರ್ಮಿಗಳಾದ ಕಳ್ಳರ ಕೈಗೆ ಸಿಕ್ಕಿದ ; ಇವನ ಹಾಗೂ ಇವನ ಜತೆಯಲ್ಲಿದ್ದ ಕೆಲವು ಶ್ರಾಮಣೇರ (ಎಳೆಯ ಬೌದ್ಧ ಸಂನ್ಯಾಸಿಗಳು)ರ ಬಳಿ ಇದ್ದ ವಸ್ತು, ಬಟ್ಟೆ ಬರೆ ಎಲ್ಲವನ್ನೂ ಈ ಕಳ್ಳರು ಕಿತ್ತುಕೊಂಡುದು ಮಾತ್ರವಲ್ಲದೆ ಅವರನ್ನು ಕೊಲ್ಲಲು ಕತ್ತಿ ಹಿರಿದು ಅಟ್ಟಿಸಿಕೊಂಡು ಹೋದರು. 'ಧರ್ಮಧರ'ನೂ ಮತ್ತು ಅವನ ಸಂಗಾತಿಗಳು ಜೀವಭಯ ದಿಂದ ತತ್ತರಿಸಿ ಓಡಿ ಕಡೆಗೆ ನೆರೆಯಲ್ಲಿದ್ದ ಹಳ್ಳಿ ಮುಟ್ಟಿ ಅಲ್ಲಿ ಒಬ್ಬ ಬ್ರಾಹ್ಮಣನ ದಯೆಯಿಂದ ಪಾರಾದರು. ಇದ್ದ ಸರ್ವಸ್ವವೂ ಕಳುವಾಯಿ ತೆಂದು ಸಂಗಾತಿಗಳು ಅಳುತ್ತಿದ್ದಾಗ 'ಧರ್ಮಧರ'ನೊಬ್ಬ ನಗುತ್ತಾ 'ಮನುಷ್ಯನಿಗೆ ಜೀವ ಮುಖ್ಯ ; ಅದು ಉಳಿದಿರುವಾಗ ಬೇರೆಯವಕ್ಕಾಗಿ ಗೋಳಾಡುವುದು ಬೇಡ' ಎಂದವರನ್ನು ಸಂತೈಸಿದ. ಇವನ ಧರ್ಮಶ್ರದ್ಧೆಗೆ ಒಪ್ಪಿಕೊಂಡು ಊರ ಜನ ಅವರಿಗೆ ಬಹುವಾಗಿ ಸಹಾಯ ಮಾಡಿ ಸನ್ಮಾನಿಸಿದರು. ಅಲ್ಲಿ ಒಂದು ತಿಂಗಳಿದ್ದು ಅಲ್ಲಿಂದ ಚೀನಪತಿ ನಗರಿಗೆ ಬಂದು ಅಲ್ಲಿ ವಿನೀತಪ್ರಭನೆಂಬ ಸಂನ್ಯಾಸಿಯ ಬಳಿ ಒಂದು ವರ್ಷ ಎರಡು ತಿಂಗಳು ಶಿಷ್ಯವೃತ್ತಿಮಾಡಿ, 'ಧರ್ಮಧರ' ಅಲ್ಲಿಂದ ತಾಮಸವನ ಸಂಘಾರಾಮ ದಾಟಿ, ಜಾಲಂಧರ ದೇಶಕ್ಕೆ ಬಂದು, ಅಲ್ಲಿಯ ನಗರಧನ ವಿಹಾರದಲ್ಲಿ ತ್ರಿಪಿಟಿಕಾಚಾರ್ಯನಾಗಿದ್ದ ಚಂದ್ರವರ್ಮನ ಬಳಿ, ನಾಲ್ಕು ತಿಂಗಳ ಕಾಲ 'ಪ್ರಕರಣಪಾದ ವಿಭಾಷಾಶಾಸ್ತ್ರ'ವನ್ನು ಕಲಿತ.

ಅಲ್ಲಿಂದ ಶತದ್ರು, ಪರ್ಯತ್ರ ದೇಶಗಳಲ್ಲಿ ನಡೆದು ಮಥುರಾ ಪ್ರಾಂತ್ಯಕ್ಕೆ ಬಂದ. ಇಲ್ಲಿ ಬುದ್ಧ, ಶಾರಿಪುತ್ರ, ಮೌದ್ಗಲ್ಯಾಯನ, ಪೂರ್ಣಮೈತ್ರಾಯಿಣೀ ಪುತ್ರ, ಉಪಾಲಿ, ಆನಂದ ಇವರೆಲ್ಲರ ಭಸ್ಮಾವಶೇಷದ ಮೇಲೆ ಸ್ತೂಪಗಳನ್ನು ಕಟ್ಟಿಸಿದ್ದರು. ಅನತಿದೂರದಲ್ಲೇ ಉಪಗುಪ್ತನೆಂಬ ಆರ್ಯಸ್ಥವಿರ ನಿರ್ಮಿಸಿದ್ಧ ಸಂಘಾರಾಮ ಇತ್ತು. ಇವೆಲ್ಲ ನೋಡಿಕೊಂಡು 'ಧರ್ಮಧರ' ಸ್ಥಾಣೇಸ್ವರಕ್ಕೆ ಬಂದು, ಅಲ್ಲಿಂದ ೮೦೦ ಗಾವುದ ನಡೆದು ಗಂಗಾನದಿಯ ಜನ್ಮಸ್ಥಳ ನೋಡಿ, ಜಯಗುಪ್ತನೆಂಬ ತ್ರಿಪಿಟಕಾಚಾರ್ಯನಲ್ಲಿ ಮೂರು-ನಾಲ್ಕು ತಿಂಗಳು ನಿಂತು ಸೌತ್ರಾಂತಿಕ ವಿಭಾಷಾ ಶಾಸ್ತ್ರವನ್ನು ಅಧ್ಯಯನಮಾಡಿ, ಅಲ್ಲಿಂದ ಮತಿಪುರಕ್ಕೆ ಬಂದು ಅಲ್ಲಿ ಗುಣಪ್ರಭ ಸಂಘಾರಾಮದಲ್ಲಿ ತಂಗಿ, ಮುಂದೆ ಮತಿಪುರಕ್ಕೆ ಬಂದು ಅಲ್ಲಿ ಗುಣಪ್ರಭ ಸಂಘಾರಾಮದಲ್ಲಿ ತಂಗಿ, ಮುಂದೆ ಸಂಘಭದ್ರನ ಸ್ತೂಪವನ್ನು ಸಂದರ್ಶಿಸಿ, ಗುಣಪ್ರಭನ ಅಂತೇವಾಸಿಯಾಗಿದ್ದ ಎಂಭತ್ತು ವರ್ಷದ ವೃದ್ಧಸಂನ್ಯಾಸಿ ಮಿತ್ರನೆಂಬು ವನ ಬಳಿ ಬೇಸಿಗೆಯನ್ನು ಕಳೆದು, ಅಲ್ಲಿಂದ ಸಂಚರಿಸುತ್ತ ಕನ್ಯಾಕುಬ್ಜ (ಕನೋಜ್)ಕ್ಕೆ ಬಂದ.

ಅಲ್ಲಿ ಒಂದುನೂರು ಸಂಘಾರಾಮಗಳಿದ್ದುವು, ಹತ್ತುಸಾವಿರ ಸಂನ್ಯಾಸಿಗಳಿದ್ದರು. ಆಗ ದೇಶದ ದೊರೆ ಶೀಲಾದಿತ್ಯ-ಹರ್ಷವರ್ಧನ ; ಆವನು ಸಾಹಸಿ, ಸದಾಚಾರ ಸಂಪನ್ನ, ಸಾಧುಸಂತರನ್ನು ಸತ್ಕರಿಸಿ, ಸಂಘಾರಾಮಗಳನ್ನು ನಿರ್ಮಿಸಿ, ಜನದ ಮನ ಧರ್ಮಕ್ಕೆ ಒಲಿಯಲು ತವಕಪಡುತ್ತಿದ್ದವನು. 'ಧರ್ಮಧರ' ಅಲ್ಲಿಂದ ಗಂಗೆಯನ್ನು ದಾಟಿ ಭದ್ರ ವಿಹಾರವೆಂಬಲ್ಲಿಗೆ ಬಂದು ಅಲ್ಲಿ ತ್ರಿಪಿಟಿಕಾಚಾರ್ಯ ವೀರ್ಯಸೇನನೆಂಬ ಪಂಡಿತನ ಬಳಿ ಬುದ್ಧದಾಸನ 'ವರ್ಮವಿಭಾಷಾ ವ್ಯಾಕರಣ' ಎಂಬ ಗ್ರಂಥ ಓದುತ್ತ ಮೂರು ತಿಂಗಳು ಕಳೆದ. ಗಂಗೆಗೆ ಈಶಾನ್ಯದಲ್ಲಿ ೬೦೦ ಗಾವುದ ದೂರ ನಡೆದು ಅಯೋಧ್ಯಾದೇಶಕ್ಕೆ ಬಂದು ಅಲ್ಲಿಯ ಸಂಘಾರಾಮ

ಗಳನ್ನೂ ಸ್ತೂಪಗಳನ್ನೂ ಸಂದರ್ಶಿಸಿ, ಸನ್ಮಾನಿಸಿ ಪ್ರಮುದಿತಹೃದಯನಾಗಿ ಹಯಮುಖದೇಶದ ಕಡ ಹೊರಟ.

ಈ ದೇಶ ಮುಟ್ಟಲು ಗಂಗೆಯನ್ನು ದೋಣಿಯಲ್ಲಿ ಕಳೆಯಬೇಕಾಗಿದ್ದಿತು ; ಗಂಗೆಯ ಎರಡೂ ಕಡೆ ಕಾಡು ದಟ್ಟವಾಗಿ ಹಬ್ಬಿತ್ತು. ನಮ್ಮ 'ಧರ್ಮಧರ' ಮತ್ತೆ ಅವನ ಹಲವು ಸಂಗಾತಿಗಳು ಗಂಗೆಗೆ ಇಳಿದು ದೋಣಿಯೇರಿ ಹುಟ್ಟುಹಾಕಿ ಮಧ್ಯನದಿ ಮುಟ್ಟಿದರೆನ್ನುವಷ್ಟರಲ್ಲಿ ದಡದ ಕಾಡುಮರಗಳಿಂದ ಕಳ್ಳರ ಭಾರಿ ಗುಂಪೊಂದು ಬಂದು ಇವರನ್ನು ಮುತ್ತಿತು. ಗಾಬರಿಗೆ ಕೆಲವರು ದೋಣಿಯಿಂದ ಹಾರಿ ಗಂಗೆಯ ಪಾಲಾದರು. ಉಳಿದವರನ್ನು ಕಳ್ಳರು ಹಿಡಿದು ಕಟ್ಟಿ ದಡಕ್ಕೆ ಒಯ್ದರು. ಅವರನ್ನೆಲ್ಲ ಸಂಪೂರ್ಣವಾಗಿ ಸುಲಿಗೆ ಮಾಡಿಬಿಟ್ಟರು. ಈ ಕಳ್ಳರು ದುರ್ಗಾದೇವಿಯ ಆರಾಧಕರಾಗಿದ್ದು ಪ್ರತಿವರ್ಷ ಶರದೃತುವಿನಲ್ಲಿ ದುರ್ಗಿಗೆ ನರಬಲಿ ಕೊಡುವವರಾಗಿದ್ದರು. ಇದು ಆ ಸಮಯವೇ ಆಗಿದ್ದುದರಿಂದ ಕಳ್ಳರಿಗೆ ಸುಂದರನಾಗಿ, ದೃಢಕಾಯನಾಗಿ, ವರ್ಚಸ್ವಿಯಾದ 'ಧರ್ಮಧರ'ನನ್ನು ನೋಡಿ ಬಹು ಆನಂದವಾಗಿ ಅವನೇ ಈ ಬಾರಿಯ ಬಲಿಯೆಂದು ನಿರ್ಧರಿಸಿ ಕೊಂಡರು. ಈ ನಿರ್ಧಾರ 'ಧರ್ಮಧರ'ನಿಗೆ ತಿಳಿದಾಗ ಅವನೆಂದ — ''ಅಯ್ಯಾ, ನೀವು ನನ್ನನ್ನು ಭಕ್ತಿಯಿಂದ ನಿಮ್ಮ ದೇವತೆಗೆ ಬಲಿಕೊಡಬೇಕೆನ್ನುತ್ತೀರಿ ; ಇದು ಮಹತ್ಕಾರ್ಯ. ನನ್ನ ಈ ಅಶಾಶ್ವತವಾದ, ಕ್ಲೇಶಸ್ಥಾನವಾದ ದೇಹ ಈ ಕಾರ್ಯಕ್ಕೆ ನೆರವಾದೀತೆಂದರೆ ಅದು ನನ್ನ ಪುಣ್ಯವೆಂದೇ ಎಣಿಸುತ್ತೇನೆ. ಎಂತೂ, ನಿಮ್ಮ ದೈವಕಾರ್ಯಕ್ಕೆ ಅಡ್ಡಿ ತರುವ ಯೋಚನೆಯನ್ನೂ ಮಾಡೆ. ಆದರೆ ನಾನು ಇಲ್ಲಿಗೆ ಬಂದುದು ಬುದ್ಧ ಬೋಧಿಯನ್ನು ಸಂದ ಸ್ಥಳವನ್ನೂ, ಧರ್ಮಸಾರಿದ ಕ್ಷೇತ್ರಗಳನ್ನೂ ಸಂದರ್ಶಿಸಿಕೊಂಡು, ಅವನ ಸದ್ಧರ್ಮದ ಬೆಳಕನ್ನು ಕಂಡುಕೊಳ್ಳುವ ಆಶೆಯಿಂದ. ಈ ಆಶೆ ಇನ್ನೂ ಪೂರ್ಣವಾಗಿಲ್ಲ. ಈ ಸ್ಥಿತಿಯಲ್ಲಿ ನೀವು

ನನ್ನನ್ನು ಬಲಿಕೊಟ್ಟಿರಾದರೆ ಅದರಿಂದ ನಿಮಗೆ ಪುಣ್ಯ ಬರದು, ಪಾಪವೇ ಫಲಿಸೀತು !'' ಎಂದು. ಅವನ ಸಂಗಾತಿಗಳೆಲ್ಲ ''ಈ ಯಾತ್ರಿಕ ಮಹಾತ್ಮ; ಅವನನ್ನು ಉಳಿಸಿ ನಮ್ಮನ್ನೆಲ್ಲ ಬೇಕೆಂದರೆ ಬಲಿಕೊಡಿ'' ಎಂದು ಕಳ್ಳರಿಗೆ ಅಂಗಲಾಚಿದರು. ಆದರೆ ಅವರು ಒಪ್ಪಲಿಲ್ಲ. ಕಳ್ಳರ ಒಡೆಯ ಅಲ್ಲೇ ಒಂದು ಬಲಿಪೀಠ ನಿರ್ಮಾಣಮಾಡಿಸಿ ಅದಕ್ಕೆ 'ಧರ್ಮಧರ'ನನ್ನು ಕಟ್ಟಿಹಾಕಿಸಿದ. ಆಗ 'ಧರ್ಮಧರ' ತನ್ನ ಪ್ರಾರ್ಥನೆಗೆ ಕೆಲವು ನಿಮಿಷಗಳನ್ನು ದಯಪಾಲಿಸುವಂತೆ ಕೇಳಿಕೊಂಡ. ಉಳಿದವರೆಲ್ಲ ಗಳಗಳನೆ ಅಳುತ್ತ ಆರ್ತರಾಗಿ ಅರಚುತ್ತಿದ್ದರು ; 'ಧರ್ಮಧರ'ನಾದರೋ ಪ್ರಶಾಂತವಾದ ಮುಖದಿಂದ, ಗಂಭೀರವಾದ ಮುದ್ರೆಯಿಂದ, ಭಯದ ಸೋಂಕೂ ಇಲ್ಲದೆ ದೃಢನಾಗಿ ಪದ್ಮಾಸನದಲ್ಲಿ ಕೂತು ಕಣ್ಣುಮುಚ್ಚಿ ಧ್ಯಾನವಶನಾದ. ಬೋಧಿಸತ್ತ್ವ ಮೈತ್ರೇಯನನ್ನು ಸ್ಮರಿಸುತ್ತ 'ನಾನು ಮುಂದಣ ಜನ್ಮದಲ್ಲಿ ಇಲ್ಲೇ ಹುಟ್ಟಿ ಈ ಕಳ್ಳರನ್ನು ಸತ್ಪಥಕ್ಕೆ ಪರಿವರ್ತಿಸಿ ಲೋಕಕಲ್ಯಾಣಕ್ಕಾಗಿ ಶ್ರಮಿಸುವೆ'ನೆಂದು ಪ್ರಣಿಧಾನ ಮಾಡಿದ. ಆ ಸಮಯಕ್ಕೆ ಸರಿಯಾಗಿ ಭಯಂಕರವಾದ ಕಾರ್ಮೋಡ ಕವಿದು ಅತಿ ರೌದ್ರವಾದ ಬಿರುಗಾಳಿ ಬೀಸತೊಡಗಿತು ; ಪ್ರಲಯವೇ ಆದೀತೋ ಎಂಬ ಶಂಕೆ ಆಯಿತು. ಕಳ್ಳರು ಗಡಗಡನೆ ನಡುಗತೊಡಗಿದರು. 'ಧರ್ಮಧರ' ಧ್ಯಾನದಿಂದೆದ್ದು ''ನಾನು ಸಿದ್ಧನಿದ್ದೇನೆ'' ಎಂದಾಗ ಅವರು ಅವನ ಕಾಲಿಗೆ ಬಿದ್ದು ಕ್ಷಮೆ ಬೇಡಿದರು. 'ಧರ್ಮಧರ' ಅವರಿಗೆ ಧರ್ಮಬೋಧೆ ಮಾಡಿದ. ಅವರು ತಮ್ಮ ಕತ್ತಿ ಮುಂತಾದ ಆಯುಧಗಳನ್ನೆಲ್ಲ ಗಂಗೆಯಲ್ಲಿ ಬಿಸುಟು ಬೌದ್ಧ ಉಪಾಸಕರಾಗಿ ನಿಂತರು.

ಅಲ್ಲಿಂದ ಗಂಗೆಯ ದಕ್ಷಿಣದಲ್ಲಿ ಮುಂದೆ ಸಾಗಿ ಯಮುನಾನದಿಯ ಉತ್ತರ ದಂಡೆಯ ಮೇಲಿರುವ ಪ್ರಯಾಗ (ಅಲಹಾಬಾದ)ಕ್ಕೆ ಬಂದು 'ಧರ್ಮಧರ' ಅಲ್ಲಿ ಚಂಪಕವನದಲ್ಲಿದ್ದ ಸ್ತೂಪಗಳನ್ನು ನೋಡಿಕೊಂಡು

ಅಲ್ಲಿಂದ ಐನೂರು ಗಾವುದ ನಡೆದು ಕೌಶಾಂಬೀ ನಗರಕ್ಕೆ ಬಂದು, ಅಲ್ಲಿಂದ ವಿಶಾಖಾ ಪ್ರದೇಶಕ್ಕೆ ತೆರಳಿ, ಅಲ್ಲಿಂದ ಶ್ರಾವಸ್ತಿಗೆ ಬಂದು ಅಲ್ಲಿ ಪ್ರಸೇನಜಿತನ ಪ್ರಸಾದ, ಬುದ್ಧನಿಗಾಗಿ ಏರ್ಪಡಿಸಿದ ವಿಹಾರಗಳು, ಬುದ್ಧನ ಮಲತಾಯಿ ಪ್ರಜಾಪತೀ ಗೌತಮಿಯ ವಿಹಾರ, ಬುದ್ಧನ ಧ್ಯಾನಪತಿಯಾದ ಅನಪತಿಯಾದ ಅನಾಥ ಪಿಂಡಕನ ಮನೆ, ಚೇತನ, ಅಂಗುಲಿಮಾಲನೆಂಬ ಕಳ್ಳನನ್ನು ಬುದ್ಧ ಧರ್ಮಮಾರ್ಗಕ್ಕೆ ತಿರುಗಿಸಿದಲ್ಲಿ ಕಟ್ಟಿದ ಸ್ತೂಪ — ಇವುಗಳ ಭಗ್ನಾವಶೇಷಗಳನ್ನು ನೋಡಿಕೊಂಡು, ಮುಂದೆ (South-East) ೮೦೦ ಗಾವುದದಲ್ಲಿ ಕಪಿಲವಸ್ತುವಿಗೆ ಬಂದ. ಕಪಿಲವಸ್ತು ಬುದ್ಧಭಗವಂತ ಹುಟ್ಟಿದ ಊರು. ಬುದ್ಧನ ತಂದೆ ಶುದ್ಧೋಧನ ರಾಜನ ಅರಮನೆಯ ಅವಶೇಷಗಳು ಇನ್ನೂ ಕಾಣುತ್ತಿದ್ದವು. ಬುದ್ಧ ಹುಟ್ಟಿದಂದು ಅಸಿತ ಋಷಿ ಅವನ ಜಾತಕ ಬರೆದಲ್ಲಿ ಕಟ್ಟಿಸಿದ್ದ ಸ್ತೂಪ ಇನ್ನೂ ನಿಂತಿತ್ತು. ಬುದ್ಧ ಸಣ್ಣವನಿದ್ದಾಗ ಆಡುತ್ತಿದ್ದ ಜಾಗಗಳು ವಿಹರಿಸುತ್ತಿದ್ದ ಸ್ಥಳಗಳೂ ಇನ್ನು ಜನರಿಗೆ ನೆನಪಿನಲ್ಲಿತ್ತು. ಅವನು ಮನೆಬಿಟ್ಟು ಹೊರಟು, ತಲೆ ಬೋಳಿಸಿ, ಶ್ರೀಮಂತಿಗೆಯ ಉಡಿಗೆ ತೊಡಿಗೆಗಳನ್ನು ಬಿಸುಟು ಸಂನ್ಯಾಸಿಯಾದ ಸ್ಥಳವನ್ನೂ ಜನ ತೋರಿಸುತ್ತಿದ್ದರು. ಬುದ್ಧ ಪರಿನಿರ್ವಾಣ ಪಡೆದ ಮೇಲೆ ಅವನ ಅವಶೇಷಗಳ ಮೇಲೆ ಕಟ್ಟಿಸಿದ್ದ ನೂರಡಿ ಎತ್ತರದ ಚೈತ್ಯಮಂದಿರವೂ ಇತ್ತು. 'ಧರ್ಮಧರ' ಅತಿಭಕ್ತಿಯಿಂದ, ಧರ್ಮಶ್ರದ್ಧೆಯಿಂದ ಈ ಸ್ಥಳಗಳಲ್ಲಿ ಪೂಜೆಮಾಡಿ ಅಲ್ಲಿಯ ಅನೇಕ ವಿಹಾರಗಳನ್ನೂ, ಸ್ತೂಪಗಳನ್ನೂ, ಚೈತ್ಯ ಗಳನ್ನೂ, ಬುದ್ಧ ವಿಗ್ರಹಗಳನ್ನೂ ನೋಡಿಕೊಂಡು ಪ್ರಸನ್ನಚಿತ್ತನಾಗಿ ಕಾಶಿಗೆ ಬಂದ.

ಕಾಶಿಯಲ್ಲಿ ಸಂಸಾರ ಬಂಧನದಿಂದ ಮುಕ್ತರಾಗಲು ದೃಢ ಪ್ರತಿಜ್ಞರಾದ ಬ್ರಾಹ್ಮಣಶ್ರಮಣರನೇಕರಿದ್ದರು. ಮುವ್ವತ್ತು ಸಂಘಾರಾಮ ಗಳೂ, ಹೀನಯಾನಕ್ಕೆ ಸೇರಿದ ಸುಮಾರು ೨೦೦ ಸಂನ್ಯಾಸಿಗಳೂ ಇದ್ದರು ;

ನೂರಡಿ ಎತ್ತರದ ವಿಹಾರ ವೊಂದಿದ್ದಿತು — ಅದರ ಮಧ್ಯಶಾಲೆಯಲ್ಲಿ ಮನುಷ್ಯ ಪ್ರಮಾಣದ ಹಿತ್ತಾಳೆಯ ಒಂದು ಸುಂದರ ಬುದ್ಧಮೂರ್ತಿ ಇದ್ದಿತಂತೆ. ಬುದ್ಧನ ಜೀವನಕ್ಕೆ ನಂಟಿನಿಸಿದ ಅನೇಕ ಭಗ್ನಾವಶೇಷಗಳಿದ್ದವು. ಎಲ್ಲವನ್ನೂ ನೋಡಿಕೊಂಡು 'ಧರ್ಮಧರ' ದಕ್ಷಿಣಕ್ಕೆ ಗಂಗೆ ದಾಟಿ ಮಗಧ ರಾಜ್ಯದ ಒಳಹೊಕ್ಕ. ಅಲ್ಲಿ ಮಹಾಯಾನ ಮತ ಪ್ರಬಲವಾಗಿತ್ತು ; ಈ ಗುಂಪಿನ ಸುಮಾರು ಐವತ್ತು ಸಂಘಾರಾಮಗಳಿದ್ದವಂತೆ. ಆದರೆ ಮುಖ್ಯ ಪಟ್ಟಣ ಕುಸುಮಪುರ (ಪಾಟಲಿಪುತ್ರಪುರ) ಎಂದು ಪ್ರಸಿದ್ಧವಾದದ್ದು ; ಆದರೆ ಆ ಹೊತ್ತಿಗಾಗಲೇ ಆದರ ಅವನತಿ ಅತಿದೂರ ಸಾಗಿತ್ತು. ಸ್ತೂಪಗಳು ಮುರಿದು, ವಿಹಾರಗಳು ಬರಿದಾಗಿ ಹಾಳು ಬಡಿಯುತ್ತಿದ್ದುವು. ಗೌತಮ ಬುದ್ಧನ ಜೀವಿತದ ಬಹುಭಾಗ ಈ ಪ್ರದೇಶದಲ್ಲೇ ಸಂದುದು ಕಾರಣ ಸ್ಮಾರಕಸ್ಥಳಗಳು ಅನೇಕ ಇದ್ದುವು. ಈ ದೇಶ ಮುಟ್ಟಿದೊಡನೆ 'ಧರ್ಮಧರನಿಗೆ ಪ್ರಬಲವಾದ ಧರ್ಮಶ್ರದ್ಧೆಯ ಅರಿವಾಯಿತು. ಆದರ ದಿಂದ ಉತ್ಸಾಹದಿಂದ ವಿನಮ್ರನಾಗಿ 'ಧರ್ಮಧರ' ಬುದ್ಧ ಚೈತ್ಯಗಳ ಅವಶೇಷವೆಲ್ಲವನ್ನೂ ಸಂದರ್ಶಿಸಿದ. ಈ ಧಾರ್ಮಿಕ ವೃತ್ತಿಯಲ್ಲೇ ಏಳೆಂಟು ದಿನ ಕಳೆಯಿತು. ಅಲ್ಲಿದ್ದಾಗ ಈ ಯಾತ್ರಿಕನಿಗೆ ಅಂದು ಸುಪ್ರಸಿದ್ಧವಾಗಿದ್ದ ನಾಳಂದದ ಮಹಾಸಂಘಾರಾಮದಿಂದ ಕರೆ ಬಂತು. ಆ ಬೌದ್ಧ ವಿದ್ಯಾಪೀಠದಿಂದ ನಾಲ್ಕುಮಂದಿ ಪಂಡಿತರಾದ ಸರ್ವಶ್ರೇಷ್ಠರಾದ ಹಿರಿಯ ಸಂನ್ಯಾಸಿಗಳು 'ಧರ್ಮಧರ' ಇದ್ದಲ್ಲಿಗೆ ಬಂದು ವೈಭವದಿಂದ ಮರ್ಯಾದೆ ಯಿಂದ ಆಣತಿ ಇತ್ತರು. 'ಧರ್ಮಧರ' ನಾಳಂದ ಮುಟ್ಟುತ್ತಲೆ ಅದ್ಭುತವಾದ ಸ್ವಾಗತವನ್ನು ಅಲ್ಲಿಯ ಜನಸ್ತೋಮ ಜಯಕಾರದೊಂದಿಗೆ ಕೊಂಬು ಕಹಳೆ ಮಂಗಳವಾದ್ಯಗಳೊಂದಿಗೆ ಮಾಡಿ ಅವನಿಗೆ ಉಚ್ಚಾಸನವನ್ನಿತ್ತು ಬರಮಾಡಿ ಕೊಂಡಿತು. ಬಂದವನೆ ಹಿಂದೆ ಮಹಾಮೌದ್ಗಲ್ಯಾಯನ ಹುಟ್ಟಿದ ಮನೆಯಲ್ಲಿ ತುಸುಹೊತ್ತು ತಂಗಿ ಮಹಾಸಂಘಾರಾಮದೆಡೆಗೆ ನಡೆದ. ಅಲ್ಲಿಯ ಭಿಕ್ಷುವೃಂದ ಅವನನ್ನು ಸಂಭ್ರಮದಿಂದ ಎದುರ್ಗೊಂಡು

ಪಂಡಿತರಾದ ಹಿರಿಯರಾದ ಇಪ್ಪತ್ತುಮಂದಿ ಭಿಕ್ಷುಗಳ ಜತೆಮಾಡಿ ಅವನನ್ನು ಸಂಘಾರಾಮದ ಮುಖ್ಯಭಿಕ್ಷುವಾದ 'ವಿನಯಧರ' ಶೀಲಭದ್ರನೆಡೆಗೆ ಕಳುಹಿಸಿಕೊಟ್ಟರು. ಶೀಲಭದ್ರ ನಾಡಿನಲ್ಲೆಲ್ಲ ಹೆಸರಾಂತ ವ್ಯಕ್ತಿ ; ಅವನ ಪಾಂಡಿತ್ಯ ಸಾಗರದಂತೆ ವಿಸ್ತಾರ, ಆಗಸದಂತೆ ಆಳ. ಅತಿವೃದ್ಧನಾದ ಈ ಸಂನ್ಯಾಸಿ ಅಧ್ಯಯನ ಮಾಡದ ಗ್ರಂಥ ಇರಲಿಲ್ಲ, ಅನುಸಂಧಾನ ಮಾಡದ ಆಚಾರ ಇರಲಿಲ್ಲ. ಅತ್ಯಂತ ಪವಿತ್ರವಾದ ಜೀವ ನಡೆಸುತ್ತ, ನಾಳಂದದ ಮಹಾಸಂಘಾರಾಮದ ನೂರಾರು ಸಂನ್ಯಾಸಿಗಳ ಆಡಳಿತ ನೋಡುತ್ತ ಬುದ್ಧವಚನವನ್ನು ಪಸರಿಸುತ್ತ ಧರ್ಮನಿಷ್ಠನಾಗಿ, ವ್ರತವಂತನಾಗಿ, ವಿದ್ವನ್ಮಣಿಯಾಗಿದ್ದ ಶೀಲಭದ್ರನ ಯಶಸ್ಸು ದಿಗ್ದಿಗಂತಪರಿಸ್ಪೃತವಾಗಿತ್ತು. 'ಧರ್ಮದರ'ನನ್ನು ಶೀಲಭದ್ರ ಆದರದಿಂದ ಬರಮಾಡಿಕೊಂಡು, ಸನ್ಮಾನಮಾಡಿ, ಅವನ ಯಾತ್ರೆಯ ವಿವರಗಳನ್ನೆಲ್ಲ ಕೇಳಿ ತಿಳಿದುಕೊಂಡು, ಅವನಿಗೆ ತನ್ನ ಏಕಾಂತಶಿಷ್ಯ ಬುದ್ಧಭದ್ರ ಇದ್ದಲ್ಲೇ ವಸತಿ ಮಾಡಿಕೊಟ್ಟು, ಅವನಿಗೆ ಸುತ್ತಮುತ್ತಲ ಬೌದ್ಧಸ್ಮಾರಕಸ್ಥಳಗಳನ್ನು ತೋರಿಸಲು ಅನುಕೂಲ ಮಾಡಿಕೊಟ್ಟ. 'ಧರ್ಮಧರ' ಒಬ್ಬ ಬ್ರಾಹ್ಮಣ, ಹಾಗೂ ಒಬ್ಬ ಸಂನ್ಯಾಸಿ ಇವರೊಂದಿಗೆ ರಾಜಗ್ರಹ, ಕುಶಾಗಾರಪುರ, ವೈಶಾಲಿ ಮುಂತಾದ ಸ್ಥಳಗಳನ್ನು ನೋಡಿಕೊಂಡು ನಾಳಂದಕ್ಕೆ ಹಿಂದಿರುಗಿ ಶೀಲಭದ್ರ ಭಿಕ್ಷುವಿನ ಬಳಿ ಶಿಷ್ಯವೃತ್ತಿಯಲ್ಲಿ ಯೋಗಶಾಸ್ತ್ರವನ್ನು ಅಧ್ಯಯನ ಮಾಡಿದ. ವೇದಾಂತ, ವ್ಯಾಕರಣ, ನ್ಯಾಯ, ನಿರುಕ್ತ ಮುಂತಾದ ಶಾಸ್ತ್ರಗಳನ್ನು ಓದುತ್ತ 'ಧರ್ಮಧರ' ಅಲ್ಲಿಯೇ ಐದು ವರ್ಷಗಳು ಕಳೆದು ನಾಡಿನಲ್ಲಿ ಅತಿ ಪ್ರಗಲ್ಭಪಂಡಿತರೆಂದು ಹೆಸರಾದ ಹತ್ತು ಮಂದಿಯಲ್ಲಿ ಒಬ್ಬನಾದ. ಅಲ್ಲಿಯ ವಿದ್ಯಾಮಂದಿರದ ವಿಚಾರ ಬಹು ಮೆಚ್ಚಿಕೊಂಡ ಅವನು.

ನಾಳಂದದಿಂದ ಹೊರಟ 'ಧರ್ಮಧರ' ಈಗಿನ ಪಾಟ್ನಾ , ಗಯಾಗಳಿಗೆ ಹೋಗಿ ಈಗಿನ ಭಾಗಲ್ಪುರಕ್ಕೆ ಬಂದು ಅಲ್ಲಿಯ ಬೌದ್ಧ

ವಿಹಾರವನ್ನು ನೋಡಿಕೊಂಡು ಬಂಗಾಳಾ ಕೊಲ್ಲಿಗೆ ಸೇರಿದ. ಅಲ್ಲಿಂದ-ಅವನ ಪೂರ್ವ ಸೂರಿಯಾದ ಫಾ—ಹಿಯಾನ್ ಹೋದಂತೆ— ಸಿಂಹಳ ದ್ವೀಪಕ್ಕೆ ಸಮುದ್ರ ಮಾರ್ಗದಲ್ಲಿ ಹೋಗುವುದೆಂದು ನಿರ್ಧರಿಸಿದ. ಆದರೆ ಸಮುದ್ರಯಾನ ವಿಪತ್ತುಗಳಿಂದ ಕೂಡಿದ್ದೆಂದು ತಿಳಿದವರು ಹೇಳಿದ ಮೇಲೆ, ಮನಸ್ಸು ಬದಲಾಯಿಸಿ ಒರಿಸ್ಸಾಗೆ ಬಂದು, ಅಲ್ಲಿಯ ಅಶೋಕಸ್ತೂಪಗಳನ್ನು ಸಂದರ್ಶಿಸಿ ಅಲ್ಲಿಂದ ಈಶಾನ್ಯಕ್ಕೆ ತಿರುಗಿ, ಮಹಾನದೀ, ಗೋದಾವರೀ ನದಿ ಹರಿಯುವ ಪ್ರಾಂತಗಳಲ್ಲಿ ಸುತ್ತಾಡಿ, ಗಂಜಾಂ ದಾಟಿ ಕಳಿಂಗ, ದಕ್ಷಿಣ ಕೋಸಲಗಳ ಮುಖಾಂತರ ಆಂಧ್ರಪ್ರದೇಶಕ್ಕೆ ಬಂದು ಅಲ್ಲಿಂದ ತಮಿಳುನಾಡಿಗೆ ಸೇರಿದ. ಅವನು ಕಾಂಚಿಪುರದಲ್ಲಿದ್ದಾಗ ಸಿಂಹಳದಲ್ಲಿ ಗೊಂದಲ, ಅರಾಜಕತೆ ಇದೆಯೆಂಬ ಸುದ್ದಿ ಬಂತು ; ಅದು ಕೇಳಿ ಒಲ್ಲದ ಮನಸ್ಸಿನಿಂದ 'ಧರ್ಮಧರ' ಮತ್ತೆ ಉತ್ತರಕ್ಕೆ ಮುಖಮಾಡಿದ. ಪಶ್ಚಿಮಕ್ಕೆ ಭಾರತದ ದೇಶಗಳಲ್ಲಿ ಸುತ್ತಿ ಮಾಳವ, ರಾಜಪುತ್ರಸ್ಥಾನ, ಸಿಂದ್, ಮುಲ್ತಾನ್, ಮಾಗಧದ ಪಟ್ಟಣಗಳನ್ನು ನೋಡಿಕೊಂಡು ಚೀಣಕ್ಕೆ ಹಿಂದಿರುಗುವ ಯೋಚನೆ ಮಾಡಿದ.

ಈ ಮಧ್ಯೆ ಒಂದು ವಾಕ್ಯಾರ್ಥದಲ್ಲಿ 'ಧರ್ಮಧರ' ಒಬ್ಬ ಬ್ರಾಹ್ಮಣ ಪಂಡಿತನನ್ನು ಸೋಲಿಸಿದ್ದ. ಈ ಬ್ರಾಹ್ಮಣ ಕಾಮರೂಪ ರಾಜ್ಯಕ್ಕೆ ಹೋಗಿ ಅಲ್ಲಿಯ ರಾಜನೆದುರು 'ಧರ್ಮಧರ'ನ ಪ್ರಶಂಸೆಯ ಮಾತುಗಳನ್ನಾಡಿದ. ಆ ರಾಜ 'ಧರ್ಮಧರ'ನನ್ನು ತನ್ನ ರಾಜ್ಯಕ್ಕೆ ಆಹ್ವಾನಿಸಿದ ; ಆದರೆ ಸ್ವದೇಶಕ್ಕೆ ಮರಳುವ ಸನ್ನಾಹದಲ್ಲಿದ್ದ ಯಾತ್ರಿಕ ಈ ಆಹ್ವಾನವನ್ನು ಮನ್ನಿಸಲು ಒಪ್ಪಲಿಲ್ಲ. ರಾಜ ಸಿಟ್ಟಿಗೆದ್ದು ನಾಳಂದದ ಶೀಲಭದ್ರನಿಗೆ 'ಧರ್ಮಧರ'ನನ್ನು ಕಳುಹಿಸದಿದ್ದರೆ ನಾಳಂದವನ್ನು ಹಾಳುಮಾಡುವೆ'ನೆಂದು ಸಂದೇಶ ಕಳುಹಿದ. ಶೀಲಭದ್ರ ಈ ಬೆದರಿಕೆಗೆ ಅಂಜದಿದ್ದರೂ ಅನ್ಯಾಯವಾದ ರಕ್ತಪಾತ ತಪ್ಪಿಸಲು 'ಧರ್ಮಧರ'ನನ್ನು ಕಾಮರೂಪಕ್ಕೆ ಕಳುಹಿಸಿಕೊಟ್ಟ.

'ಧರ್ಮಧರ'ನಿಗೆ ತಾನು ಬರೆದ ಶ್ರೀಮುಖದಲ್ಲಿ ಶೀಲಭದ್ರ ಹೀಗೆ ಒಕ್ಕಣಿಸಿದ್ದ — ''ಈ ರಾಜನ ಚೇತನ ಬದ್ಧ ಹಾಗೂ ದುರ್ಬಲ ; ಅವನ ರಾಜ್ಯದಲ್ಲಿ ಬುದ್ಧವಚನ ಹರಡಿಲ್ಲ. ಆದರೂ ನಿನ್ನಲ್ಲಿ ಅವನ ಅನುರಕ್ತಿ ನಿಂತಂತೆ ತೋರುತ್ತದೆ ; ನೀನು ಅವನ ಪರಮಮಿತ್ರನಾಗಿ ಅವನ ಹಿತಕಾರಿಯಾಗುವ ಸಂಭವವುಂಟು. ಲೋಕಕಲ್ಯಾಣಕ್ಕೆಂದೇ ನೀನು ಶ್ರವಣನಾಗಿದ್ದೀ. ಅಂದಮೇಲೆ ಈ ಸ್ವಲ್ಪ ತೊಂದರೆಯನ್ನು ಗಮನಿಸದೆ ಅಲ್ಲಿಗೆ ಹೋದದ್ದೇ ಆದರೆ ರಾಜನ ಹೃದಯದಲ್ಲಿ ಧರ್ಮೋದಯ ಮಾಡಿದ ಪುಣ್ಯ ಬಂದೀತು. ಆದ್ದರಿಂದ ನೀನು ಅವಶ್ಯ ಹೋಗುವುದು.'' 'ಧರ್ಮಧರ' ಮರುಮಾತಾಡದೆ ಕಾಮರೂಪಕ್ಕೆ ಬಂದ. ಆ ಸುದ್ದಿ ಆ ರಾಜನ ಅಧಿರಾಜನಾಗಿದ್ದ ಶೀಲಾದಿತ್ಯ ಮಹಾ ಸಾಮ್ರಾಟನಿಗೆ ಮುಟ್ಟಿ ಅವನು ಬಲವಂತದಿಂದ 'ಧರ್ಮಧರ'ನನ್ನು ತನ್ನ ರಾಜ್ಯಕ್ಕೆ ಕೊಂಡೊಯ್ದ. ತನ್ನ ಆಹ್ವಾನವನ್ನು ಒಪ್ಪದ ಕಾರಣ ಏನು ? ಎಂದು ರಾಜ ಕೇಳಿದ್ದಕ್ಕೆ 'ಧರ್ಮಧರ' ಹೇಳಿದ — ''ನಾನು ಭಾರತಕ್ಕೆ ಬಂದುದು ಈ ಸನ್ಮಾನಗಳಿಗೆ ಆಸೆಪಟ್ಟಲ್ಲ ; ಧರ್ಮವನ್ನು ಅಧ್ಯಯನ ಮಾಡಿ ಪವಿತ್ರಗ್ರಂಥಗಳನ್ನು ಸಂಗ್ರಹಿಸಿಕೊಳ್ಳಲು'' ಎಂದು.

ಅತಿಪರಾಕ್ರಮಿಯಾಗಿದ್ದ ಸಮರ ಶೂರನಾಗಿದ್ದ ಏಕಚಕ್ರಾಧಿಪತಿಯಾಗಿದ್ದ ಶೀಲಾದಿತ 'ಧರ್ಮಧರ'ನ ಧರ್ಮಶ್ರದ್ಧೆಗೆ ಮಾರುಹೋಗಿ ಅವನ ಕಾಲು ಮುಟ್ಟಿ ಪ್ರಣಾಮಮಾಡಿದ. ಅವನ ಗೌರವಾರ್ಥವಾಗಿ ತನ್ನ ರಾಜಧಾನಿಯಾದ ಕನ್ಯಾಕುಬ್ಜದಲ್ಲಿ ಒಂದು ಮಹಾಧರ್ಮಸಭೆಯನ್ನು ನೆರೆಸಿ, ಅಲ್ಲಿಗೆ ಆನೆಯ ಮೇಲೆ ಭಂಗಾರದ ಬುದ್ಧ ವಿಗ್ರಹವನ್ನಿಟ್ಟು ಅದರ ಬಲಪಕ್ಕದಲ್ಲಿ ತಾನು ದೇವೇಂದ್ರನ ರೂಪ ಧರಿಸಿ ಚಾಮರ ಬೀಸುತ್ತ ಎಡಪಕ್ಕದಲ್ಲಿ ಕಾಮರೂಪದ ರಾಜ ಬ್ರಹ್ಮನ ರೂಪ ಧರಿಸಿ, ವಿವಿಧಾಭರಣಗಳಿಂದ, ಅತಿ ವೈಭವದಿಂದ ಉತ್ಸವದಲ್ಲಿ ಸಭೆಗೆ ಬಂದು,

ರಾಜರಾಜರುಗಳೂ ಮಹಾಜನರೂ ಭಕ್ತಿಯಿಂದ ವಿನೀತರಾಗಿರಲು 'ಧರ್ಮಧರ' ನಿಗೆ ಆತಿಥ್ಯ ನಡೆಯಿಸಿದ. ಸಭಾಸದರಿಗೆ ದಿವ್ಯವಾದ ಆದರಾತಿಥ್ಯ ನಡೆಯಿತು ; ಸಭೆ ಮುಗಿದಂದು ವಿಶೇಷವಾದ ಪುರಸ್ಕಾರದ ಮಹಾನದಿಯೇ ಹರಿಯಿತು. ಹದಿನೆಂಟು ಸಾಮಂತರಾಜರು ಸಾಲಾಗಿ ಟೊಂಕಕಟ್ಟಿ ನಿಂತು ಸಂನ್ಯಾಸಿಯಾದ 'ಧರ್ಮಧರ'ನಿಗೆ ಮಣಿದರು. ನಗರದಲ್ಲಿ ಒಂದು ಮಾಸಪರ್ಯಂತ ಅಖಂಡವಾಗಿ ಅನ್ನದಾನ ನಡೆಯಿತು. ಆ ಸಭೆಯ ವೈಭವ ಬಣ್ಣಿಸಲು ಇಡೀ ಗ್ರಂಥ ಸಾಲದಾದೀತು. 'ಧರ್ಮಧರ'ನಿಗೆ ಬಹುಮಾನದ ಬೆಟ್ಟವೆ ಬಂದಿಳಿದರೂ, ಬೆಚ್ಚನೆಯ ವಸ್ತ್ರ ಒಂದನ್ನು ಬಿಟ್ಟು ಬೇರೆ ಏನನ್ನೂ ಅವನು ಮುಟ್ಟಲಿಲ್ಲ ! ಅಲ್ಲಿ ತುಸಕಾಲ ಇದ್ದು ಚೀಣಕ್ಕೆ ಹಿಂದಿರುಗುವ ನಿರ್ಧಾರಮಾಡಿದ. ಶೀಲಾದಿತ್ಯ ತಾನೇ ಅವನೊಂದಿಗೆ ಸ್ವಲ್ಪ ದೂರ ಹೋಗಿ, ಬಹುದೂರ ತನ್ನ ಸಿಬ್ಬಂದಿಯನ್ನು ಕಳುಹಿಸಿ ಅವನ ಸತ್ಕಾರಕ್ಕೆ ಇಡೀ ಪಂಜಾಬದಲ್ಲೆಲ್ಲ ವ್ಯವಸ್ಥೆಮಾಡಿದ. ಈ ವೇಳೆಗಾಗಲೇ 'ಧರ್ಮಧರ' ಬೌದ್ಧ ಗ್ರಂಥಗಳ ದೊಡ್ಡ ಮೂಟೆಗಳನ್ನೆಲ್ಲ ಒಯ್ಯಲು ಶೀಲಾದಿತ್ಯ ರಾಜ ಒಂದು ಆನೆ, ಕೆಲವು ಕುದುರೆಗಳು, ರಥಗಳು ಇವುಗಳನ್ನು 'ಧರ್ಮಧರ' ನೊಂದಿಗೆ ಕಳುಹಿಸಿಕೊಟ್ಟು, ಮಾರ್ಗವ್ಯಯ ಕ್ಕೆಂದು ೩೦೦೦ ಚಿನ್ನದ ನಾಣ್ಯಗಳು, ೧೦,೦೦೦ ಬೆಳ್ಳಿ ನಾಣ್ಯಗಳನ್ನು ಕಳುಹಿಸಿದ. ಸ್ವಲ್ಪದೂರ ಹೋಗಿ ಬೀಳ್ಕೊಟ್ಟು ಬಂದಮೇಲೆ ಚಕ್ರವರ್ತಿ ಮತ್ತೆ ಹೋಗಿ ಎರಡನೆಯ ಬಾರಿ ಬೀಳ್ಕೊಟ್ಟು ಬಂದ ! ಧರ್ಮದ ಶಕ್ತಿ ಎಷ್ಟು ಪ್ರಭಾವಮಯ !

ಭಾರತದಲ್ಲಿ 'ಧರ್ಮಧರ'ನ ಅಸಾಧಾರಣ ಪಾಂಡಿತ್ಯ, ಸೌಜನ್ಯಾದಿ ಸದ್ಗುಣಗಳು, ಧರ್ಮಶ್ರದ್ಧೆ ಮನೋದಾರ್ಢ್ಯ ಇವುಗಳು ಪಂಡಿತರಿಂದ ಸಾಮಾನ್ಯರಿಂದ ರಾಜರಿಂದ ಮೆಚ್ಚುಗೆ ಪಡೆದುವು ; ಜನ ಅವನನ್ನು 'ಮಹಾಯಾನ ದೇವ', 'ಮೋಕ್ಷದೇವ' ಎಂದು ಮುಂತಾಗಿ

ಸನ್ಮಾನಿಸಿದರು. ಪ್ರಯಾಗದಲ್ಲಿ ರಾಜಶೀಲಾದಿತ್ಯ ಅವನನ್ನು ಬೀಳ್ಕೊಟ್ಟ ಮೇಲೆ 'ಧರ್ಮಧರ' ಕೌಶಾಂಬಿಗೆ ಬಂದು ಮತ್ತೆ ಅಲ್ಲಿನ ಪುಣ್ಯಸ್ಥಳಗಳನ್ನು ಸಂದರ್ಶಿಸಿ, ಕ್ರಮವಾಗಿ ಜಾಲಂಧರಕ್ಕೆ ಬಂದು ಅಲ್ಲಿಂದ ತಕ್ಷಶಿಲೆ, ಕಾಶ್ಮೀರಗಳನ್ನು ಮುಟ್ಟಿ ಸಿಂಧೂನದಿಯನ್ನು ದಾಟಲು ಮೊದಲಿಟ್ಟ. ತಾನು ತಂದಿದ್ದ ಧರ್ಮಗ್ರಂಥಗಳ ಮೂಟೆಗಳನ್ನು ದೋಣಿಯಲ್ಲಿ ಸುರಕ್ಷಿತವಾಗಿ ಸಾಗಿಸಲು ವ್ಯವಸ್ಥೆಮಾಡಿ ತಾನು ಆನೆಯ ಮೇಲೆ ಕೂತು ನದಿ ದಾಟಿದ. ದೋಣಿ ಅರ್ಧ ನದಿಯಲ್ಲಿದ್ದಾಗ ಇದ್ದಕ್ಕಿದ್ದಂತೆ ಪ್ರವಾಹ ಬಂದು ಬಿರುಗಾಳಿ ಎದ್ದು ದೋಣಿ ತತ್ತರಿಸಿತು ; ಅಂಬಿಗ ಹೆದರಿ ನೀರಿಗೆ ಬಿದ್ದನಾದರೂ ಪ್ರಯಾಸದಿಂದ ಅವನ ಜೀವ ಉಳಿಸಲಾಯಿತು. ಆದರೆ ಐವತ್ತು ಧರ್ಮ ಸೂತ್ರಗಳು — 'ಧರ್ಮಧರ' ಕಷ್ಟದಿಂದ ಅರ್ಜಿಸಿದ್ದ ಆಸ್ತಿ — ನೀರು ಪಾಲಾದುವು. ನದಿ ಹಾಯ್ದು 'ಧರ್ಮಧರ' ಕಪಿಶದೇಶದ ಮಠವೊಂದರಲ್ಲಿ ೫೦ ದಿನಗಳಿದ್ದ; ಅವನ ಬರವನ್ನು ಅರಿತು ಕಾಶ್ಮೀರದ ದೊರೆ ಅವನಿದ್ದಲ್ಲಿಗೆ ಬಂದು ಸನ್ಮಾನಮಾಡಿದ.

ಅಲ್ಲಿಂದ ಕ್ರಮವಾಗಿ ವರಣದೇಶ, ಅವಗಣ, ಸೌಕೂಟ, ವರದಸ್ಥಾನ ಮುಂತಾದ ಊರುಗಳನ್ನು ದಾಟಿ ಹಿಮಾಲಯದ ಬೆಟ್ಟ ಗುಡ್ಡಗಳನ್ನು ಏರಿಳಿದು ತುಖಾರದ ಕಣಿವೆಯಲ್ಲಿ ಐದು ದಿನಗಳು ವಾಸಮಾಡಿ ಅಲ್ಲಿಂದ ಹಿಮತಲ ಎಂಬ ಪ್ರಾಂತ್ಯ ಸೇರಿ ಅಲ್ಲಿಂದ ತುರ್ಕಿಸ್ಥಾನದ ದೇಶಗಳಲ್ಲಿ ನಡೆದು ಪಾಮಿರ್ ಕಣಿವೆ ಮುಟ್ಟಿದ. ಅಲ್ಲೆಲ್ಲ ಸಂಚರಿಸಿ ಪೂರ್ವದ ಕಡೆ ತಿರುಗಿ ಕಿ-ಪ್‌ಅನ್-ತೋ ಎಂಬ ರಾಜ್ಯಕ್ಕೆ ಬಂದ — ಅದು ಸಿತಾ ಮತ್ತು ಪೀತ ನದಿಗಳು ಹರಿಯುವ ಸ್ಥಳ. ಅಲ್ಲಿಯ ರಾಜ ಚೀನದೇವ ಗೋತ್ರದವನು ; ಅಲ್ಲಿಯೇ ತಕ್ಷಶಿಲೆಯ ಸುಪ್ರಸಿದ್ಧ ಪಂಡಿತ ಕುಮಾರಲಬ್ಧನ ಸಂಘಾರಾಮವೊಂದಿತ್ತು. ಇಲ್ಲಿ 'ಧರ್ಮಧರ' ಸುಮಾರು ಇಪ್ಪತ್ತು ದಿನಗಳಿದ್ದು ಈಶಾನ್ಯದಿಕ್ಕಿಗೆ ತಿರುಗಿದ. ಅಲ್ಲಿ ಕಳ್ಳರ

ಗುಂಪೊಂದರ ಕೈಗೆ ಸಿಕ್ಕು ಪ್ರಯಾಸದಿಂದ ತಪ್ಪಿಸಿಕೊಂಡು ಮುಂದುವರಿದ ಕಷ್ಗರ್ ಎಂಬ ದೇಶ ಸೇರಿದ. ಅಲ್ಲಿಂದ ಪೂರ್ವದಿಕ್ಕಿನಲ್ಲಿ ಹಲವಾರು ಮೈಲಿ ಪ್ರಯಾಣಮಾಡಿ ಖೋಟ್ಟಾ ಪ್ರದೇಶಕ್ಕೆ ಬಂದ. ಇಲ್ಲಿ ನೂರು ಮಠಗಳೂ ಸುಮಾರು ೫೦೦೦ ಸಂನ್ಯಾಸಿಗಳೂ ಇದ್ದು ಮಹಾಯಾನ ಬೌದ್ಧಧರ್ಮಕ್ಕೆ ಆಶ್ರಯ ದೊರೆತಿತ್ತು; ಅಲ್ಲಿನ ದೊರೆ ವೈಶ್ರವಣ ವಂಶದವನು. ಅಶೋಕನ ಪೀಳಿಗೆಯಲ್ಲಿ ಬಂದವನು, ಧಾರ್ಮಿಕ. ಇಲ್ಲಿ 'ಧರ್ಮಧರ' ತಂಗಿ, ಮಾರ್ಗಮಧ್ಯೆ ಹಾಳಾದ ಗ್ರಂಥಗಳ ಬೇರೆ ಪ್ರತಿಗಳನ್ನು ತರಲೆಂದು ಕುಚಿ ಮತ್ತು ಕಷ್ಗರ್ ದೇಶಗಳಿಗೆ ದೂತರನ್ನು ಕಳುಹಿಸಿದ. ಅಲ್ಲಿಂದ ಮುಂದೆ ೩೦೩ ಗಾವುದಗಳಷ್ಟು ನಡೆದು ಪೆಮಾ ದೇಶ ಸೇರಿದ. ಅಲ್ಲಿಂದ ನೂರು ಗಾವುದ ದೂರ ತುಖಾರ. ಮಧ್ಯೆ ದುಸ್ತರವಾದ ಬೆಂಗಾಡು ; ಪ್ರಯಾಣ ಮಾಡುತ್ತ ಸಾಗಿದ. ಸತ್ತುಬಿದ್ದ ಪ್ರಾಣಿಗಳ ಮನುಷ್ಯರ ಮೂಳೆಗಳೇ ಮಾರ್ಗದರ್ಶಿ ; ನೀರಿಲ್ಲ, ನೆರಳಿಲ್ಲ; ವಿಚಿತ್ರವಾದ ಕೂಗುಗಳೂ, ಶಬ್ದಗಳೂ, ಆರ್ತಧ್ವನಿ ಹಾಹಾಕಾರಗಳೂ ಎತ್ತಣಿಂದಲೋ ಕೇಳುವುದುಂಟು. ಇದಕ್ಕೆ ಬೆದರಿಯೇ ಎಷ್ಟೋ ಪ್ರಯಾಣಿಕರು ಹೃದಯ ನಿಂತು ಮಡಿದುದುಂಟು. ಇಂಥ ಭೀಕರವಾದ ಬೆಂಗಾಡನ್ನು 'ಧರ್ಮಧರ' ದಾಟಿ, ತನ್ನ ದೇಶದ ಸಮೀಪ ಸೇರಿದ. ಚೀಣದ ಗಡಿಯಾದ ಷ-ಛೌ ಮುಟ್ಟಿ ಅಲ್ಲಿಂದ ಅವನು ಲಿ-ಯಾಂಗ್‌ನಲ್ಲಿದ್ದ ಚೀಣೀ ಚಕ್ರವರ್ತಿಗೆ ಪತ್ರವೊಂದನ್ನು ಕಳುಹಿದ. ಆ ಚಕ್ರವರ್ತಿ ಒಡನೆಯೇ ಲಿ-ಯಾಂಗ್‌ನ ಮುಖ್ಯಾಧಿಪತಿಯನ್ನು ಕಳುಹಿಸಿ ಧರ್ಮಧರನನ್ನು ಆದರಿಸಿ ಬರಮಾಡಿಕೊಳ್ಳಲು ಸನ್ನಾಹ ಮಾಡಿದ.

'ಧರ್ಮಧರ' ಚೀಣ ಬಿಟ್ಟು ಹದಿನಾರು ವರ್ಷಗಳು ಸಂದಿದ್ದವು ; ಈ ಕಾಲದಲ್ಲಿ ಇಪ್ಪತ್ತು ಸಾವಿರ ಮೈಲಿಗಳಿಗೂ ಮೀರಿ ಪ್ರಯಾಣ ಮಾಡಿದ್ದ, ನೂರಾರು ದೇಶಗಳನ್ನು ನೋಡಿದ್ದ ; ಬೆಂಗಾಡು, ಹಿಮದ ಬೆಟ್ಟಗಳು, ಕಣಿವೆಗಳು, ನದಿ, ಸಮುದ್ರ, ಸಮದೇಶ— ಎಲ್ಲದರ ಅನುಭವವೂ

ಆಗಿತ್ತು. ಒಂದು ಪತ್ರದಲ್ಲಿ ಹೀಗೆ ಒಕ್ಕಣಿಸಿದ್ದ— "ದೇವರ ದಯೆಯಿಂದ, ಒಂದೂ ಅಪಾಯವಿಲ್ಲದೆ ಹಿಂದಿರುಗಿದ್ದೇನೆ, ದೇಹ ದೃಢವಾಗಿಯೇ ಇದೆ, ಮನಸ್ಸು ಕೃತಕೃತ್ಯತೆಯ ಸಮಾಧಾನ ಪಡೆದಿದೆ. ಗೃಧ್ರಕೂಟಪರ್ವತ ನೋಡಿದೆ ; ಬೋಧಿವೃಕ್ಷಕ್ಕೆ ಪೂಜೆ ಮಾಡಿದೆ. ಹಿಂದೆ ನೋಡದುದನ್ನು ನೋಡಿದೆ, ಕೇಳದುದನ್ನು ಕೇಳಿದೆ, ಪ್ರಕೃತಿಯ ವೈಚಿತ್ರವನ್ನು ಅರಿತುಕೊಂಡೆ" ಎಂದು. ಬರುವಾಗ ಜತೆಯಲ್ಲಿ ಐನೂರು ಸ್ಮಾರಕ ವಸ್ತುಗಳನ್ನೂ, ಮಹಾಯಾನದ ನೂರ ಇಪ್ಪತ್ತನಾಲ್ಕು ಗ್ರಂಥಗಳನ್ನೂ, ಇತರ ಐನೂರಿಪ್ಪತ್ತು ಗ್ರಂಥಗಳನ್ನೂ, ಬೆಳ್ಳಿ — ಬಂಗಾರ — ಗಂಧದ ಆರು ಬುದ್ಧಮೂರ್ತಿಗಳನ್ನೂ ತಂದಿದ್ದ.

ತಲೆತಪ್ಪಿಸಿಕೊಂಡು ಓಡಿಹೋದ ಈ ಸಂನ್ಯಾಸಿಯನ್ನು ಹೇಗೆ ಸ್ವಾಗತಿಸಬೇಕು ಎನ್ನುವುದು ಅಧಿಕಾರಿಗಳಿಗೆ ತಿಳಿಯದಾಯಿತು ; ಅವರು ಏನನ್ನೂ ಸಿದ್ಧಮಾಡಲಾರದಾದರು. ಆದರೆ 'ಧರ್ಮಧರ'ನ ಪುನರಾಗಮನದ ವಾರ್ತೆ ವಾಯುವೇಗದಲ್ಲಿ ಜನರ ಮಧ್ಯೆ ಹರಡಿ, ಚೀಣದ ತೀರ ನಗರವಾದ ಸಿ-ಗನ್- ಫುನಲ್ಲಿ ಜನರ ಮಹಾ ಸಮುದ್ರವೇ ನೆರೆಯಿತು. ಜನಸಂದಣಿ ಎಷ್ಟು ಅಧಿಕ ವಾಗಿತ್ತೆಂದರೆ 'ಧರ್ಮಧರ'ನಿಗೆ ದೋಣಿಯಿಂದ ಇಳಿಯಲೂ ಸಾಧ್ಯವಾಗದೆ ಒಂದು ಇಡೀ ರಾತ್ರೆ ಅಲ್ಲಿಯೇ ಇರಬೇಕಾಯಿತು. ಸಿ-ಗನ್-ಫು ಮುಟ್ಟಿದಂದು ಕ್ರಿಸ್ತೋತ್ತರ ೬೪೫ರ ವಸಂತಮಾಸ. ಸೇರಿದ್ದ ಜನ ಅತಿ ಸಂಭ್ರಮದಿಂದ 'ಧರ್ಮಧರ'ನನ್ನು ಬರಮಾಡಿಕೊಂಡು ಆನಂದವರ್ಧನ ಮಠ (ಹೊಂಗ್-ಫು) ಎಂಬಲ್ಲಿ ಇಳಿಸಿದರು. 'ಧರ್ಮಧರ' ತಂದಿದ್ದ ಧರ್ಮಗ್ರಂಥಗಳನ್ನು ವಿಶೇಷ ಉತ್ಸಾಹದಿಂದ, ಉತ್ಸವದಿಂದ ಉನ್ನತಾಧಿಕಾರಿಗಳು, ಶ್ರಮಣರು ಸಾಮಾನ್ಯ ಜನರು ಸ್ವೀಕರಿಸಿ ಅದೇ ಮಠದಲ್ಲೇ ನಿಕ್ಷೇಪಮಾಡಿದರು.

'ಧರ್ಮಧರ' ಅಲ್ಲಿಯ ಅಧಿಕಾರಿಗಳನ್ನೆಲ್ಲ ನೋಡಿಕೊಂಡು ದೇಶದ ಚಕ್ರವರ್ತಿಯನ್ನು ನೋಡಲೆಂದು ಅವನಿದ್ದ ಲಿ-ಯಾಂಗ್ ನಗರಕ್ಕೆ ಹೋದ. ಚಕ್ರವರ್ತಿ ಅವನಿಗೆ ಆದರದ ಆತಿಥ್ಯ ಮಾಡಿದನಾದರೂ, ತನ್ನ ಆಜ್ಞೆಯನ್ನು ಅತಿಕ್ರಮಿಸಿ ದೇಶ ಬಿಟ್ಟುದೇಕೆಂದು ಪ್ರಶ್ನಿಸಿದ. ಆದಕ್ಕೆ ಧೈರ್ಯ ದಿಂದ 'ಧರ್ಮಧರ', ನಾನು ಭಾರತಯಾತ್ರೆ ಮಾಡಲು ಅಪ್ಪಣೆ ಕೊಡಬೇಕೆಂದು ತಮ್ಮಲ್ಲಿ ಮೂರು ಬಾರಿ ನಿವೇದಿಸಿಕೊಂಡೆ ; ಅದಕ್ಕೆ ಉತ್ತರ ಏನೂ ಬರಲಿಲ್ಲ. ನನ್ನ ಮನೋರಥ ಪೂರಣೆಗೆ ಹೃದಯ ಹಾತೊರೆಯುತ್ತಿತ್ತು. ಅಂತೆಯೇ ಹೊರಟೆ' ಎಂದುತ್ತರವಿತ್ತ. ಚಕ್ರವರ್ತಿಗೆ ಅವನ ಉತ್ಸಾಹ, ಶ್ರದ್ಧೆಗಳನ್ನು ನೋಡಿ ಹಿಡಿಸಲಾರದಷ್ಟು ಆನಂದ ವಾಯಿತು ; ತನ್ನ ಆಸ್ಥಾನದಲ್ಲಿ ಒಂದು ಉನ್ನತಾಧಿಕಾರವನ್ನು ಕೊಡುವೆ ನೆಂದ. ಆದರೆ ಸಂನ್ಯಾಸಿಯಾದ 'ಧರ್ಮಧರ' ಅಧಿಕಾರದಲ್ಲಿರುವುದು ಹೇಗೆ ? ಆಗದೆಂದು ನಿರಾಕರಿಸಿ ಮತ್ತೆ ಸಿ-ಗನ್-ಫುದಲ್ಲಿದ್ದ ಆನಂದ ವರ್ಧನಮಠ (ಹೊಂಗ್-ಫು)ಕ್ಕೆ ಮರಳಿ ಅಲ್ಲಿ ತಾನು ಭಾರತದಿಂದ ತಂದಿದ್ದ ಗ್ರಂಥಗಳನ್ನು ಚೀಣೀ ಭಾಷೆಗೆ ಅನುವಾದ ಮಾಡುವ ಕೆಲಸದಲ್ಲಿ ಮುಳುಗಿದ. ಎರಡು ವರ್ಷಗಳು ಅಲ್ಲಿ ಏಕಾಂತದಲ್ಲಿದ್ದು ಬೋಧಿಸತ್ವ ಪಿಟಿಕಸೂತ್ರ, ಬುದ್ಧಿ ಭೂಮಿಸೂತ್ರ, ಷಣ್ಮುಖೀಧಾರಣೀ ಮುಂತಾದ ಗ್ರಂಥಗಳನ್ನು ಚೀಣೀಭಾಷೆಗೆ ಪರಿವರ್ತಿಸಿದ. ಮುಂದಿನ ವರ್ಷದ ವೇಳೆಗೆ ಒಟ್ಟು ಐವತ್ತೆಂಟು ಗ್ರಂಥಗಳನ್ನು ಮುಗಿಸಿದ್ದ. ಅದರ ಮುಂದಿನ ವರ್ಷ, ಚಕ್ರವರ್ತಿಯ ಇಷ್ಟದಂತೆ, ಅಪಾರಕರುಣಾಮಂದಿರ (ಸ್ಸ್-ಎನ್)ದಲ್ಲಿ ವಾಸಮಾಡಲು ಪ್ರಾರಂಬಿಸಿ, ತನ್ನ ಅನುವಾದ ಕಾರ್ಯವನ್ನು ಮುಂದುವರಿಸಿದ. ಅಲ್ಲಿ ಅವನ ದಿನಚರ್ಯೆ ಹೀಗಿತ್ತು. ಕೋಳಿ ಕೂಗುವ ಮುನ್ನ ಎದ್ದು ಬೆಳಕು ಹರಿಯುವವರೆಗೆ ಧ್ಯಾನದಲ್ಲಿ ನಿರತನಾಗಿದ್ದು, ನಂತರ ಬೆಳಗಿನ ಅಲ್ಪಾಹಾರ ತೀರಿಸಿ, ಮಧ್ಯಾಹ್ನದವರೆಗೆ ಶಿಷ್ಯರಿಗೆ ಪಾಠ ಹೇಳುತ್ತಿದ್ದು, ಉಳಿದ ಕಾಲವನ್ನೆಲ್ಲ ಭಾಷಾಂತರ ಮಾಡುತ್ತ ಕಳೆಯುತ್ತಿದ್ದ.

ದಿನಕ್ಕೆ ಇಷ್ಟು ಭಾಷಾಂತರ ಮಾಡಬೇಕೆಂದು ನಿಶ್ಚಯಿಸಿಕೊಂಡು ಅದು ಮುಗಿಯುವವರೆಗೆ ಏಳುತ್ತಿರಲಿಲ್ಲ. ಭಾಷಾಂತರ ಮಾತ್ರವಲ್ಲದೆ ತಾನು ತಂದಿದ್ದ ಗ್ರಂಥಗಳಲ್ಲೇ ಸ್ಖಾಲಿತ್ಯಗಳನ್ನು ತಿದ್ದುತ್ತ ಮೂಲಪಾಠವನ್ನು ಪರಿಶೋಧನ ಮಾಡುತ್ತಿದ್ದ. ಹೀಗೆ ಅನವರತ ಕಾರ್ಯನಿಮಗ್ನ ನಾಗಿದ್ದರೂ, ತನ್ನನ್ನು ನೋಡಲೆಂದು ಬಂದ ಪಂಡಿತರೊಂದಿಗೆ, ಶ್ರಮಣರೊಂದಿಗೆ ಜಿಜ್ಞಾಸೆ ಮಾಡಲು ಎಂದೂ ಸಿದ್ಧನಾಗಿರುತ್ತಿದ್ದ. ಈಗ ಅವನು ಮಠಾಧಿಪತಿಯಾಗಿದ್ದುದರಿಂದ ಶಿಷ್ಯರ ಮೇಲ್ವಿಚಾರಣೆಯೆಲ್ಲ ಅವನ ಕರ್ತವ್ಯವೇ ಆಗಿತ್ತು. ದಿನಕ್ಕೆ ನಾಲ್ಕು ಗಂಟೆ ಅವನ ಧರ್ಮಪ್ರವಚನ ನಡೆಯುತ್ತಿತ್ತು ; ನೂರಕ್ಕೂ ಮೀರಿ ಶಿಷ್ಯರು ಅವನಲ್ಲಿ ಅಧ್ಯಯನ ಮಾಡುತ್ತಿದ್ದರು. ಅವನು ಪ್ರವಚನ ಮಾಡುತ್ತಿದ್ದಾಗ, ಧ್ವನಿ ನಿರುದ್ವೇಗವಾಗಿ ಸಾಗರ ಗಂಭೀರವಾಗಿದ್ದು, ಶೈಲಿ ಗಂಗೆಯಂತೆ ಧಾರೆಧಾರೆಯಾಗಿ ಸರಳವಾಗಿ ಹರಿಯುತ್ತ, ವಿಚಾರಮಥನ ಆಳವಾಗಿ ವಿಸ್ತಾರವಾಗಿ ನಡೆಯುತ್ತಿತ್ತು. ಕೇಳುವವರಿಗೆ ಎಂದೂ ಬೇಸರವಾಗದಂಥ ಮನೋಹರವಾದ ಧ್ವನಿ ಅದು, ಎಂದು ಅವನ ಶಿಷ್ಯ ಬರೆದಿದ್ದಾನೆ. "ಉದ್ವೇಗದ ಸೋಂಕೂ ಇಲ್ಲದ ಸರಳ ಸುಂದರ ಮೂರ್ತಿ ಧರ್ಮಧರ ; ನಡೆಯುವಲ್ಲಿ ಸಮಗತಿ ; ಕೂಡುವಲ್ಲಿ ಏರಿಸಿದ ಬಿಲ್ಲಿನಂತೆ ; ನೋಡುವಲ್ಲಿ ಸ್ಥಿರದೃಷ್ಟಿ , ಓರೆಗಣ್ಣಲ್ಲಿ ಎಂದೂ ಏನನ್ನೂ ನೋಡಿದವನಲ್ಲ, ವ್ರತವಂತ, ಎಂದೂ ಅದೇ ಮನುಷ್ಯ — ಅದೇ ಶಾಂತ ಮುಂದ್ರೆ, ಅದೇ ಗಂಭೀರಭಾವ, ಅದೇ ಅವ್ಯಾಜ ಕರುಣಾರ್ದ್ರವಾದ ಹೃದಯ. ಅವನು ಸಾಮಾನ್ಯವಾಗಿ ಅಂತರ್ಮುಖಿ ; ಜನದೊಂದಿಗೆ ಬೇಗ ಆತ್ಮೀಯತಗೆ ಬೆಳೆಸಲೊಲ್ಲ, ಆದರೆ ನೇಹಿಗರಾದವರನ್ನು ನೆಚ್ಚಿನಿಂದ ನಂಬುವವನು."

ಭಾರತದಿಂದ ಹಿಂದಿರುಗಿದ ಮೇಲೆ ತನ್ನ ಸ್ವಗ್ರಾಮಕ್ಕೊಮ್ಮೆ ಹೋಗಿ ಬಂದ. ತನ್ನ ವಂಶದಲ್ಲಿ ಒಬ್ಬಳೇ ತಂಗಿ ಉಳಿದಿದ್ದಳು. ಅವಳನ್ನು

ರತ್ನಕೂಟಸೂತ್ರ ಎಂಬೊಂದು ಗ್ರಂಥವನ್ನು ಅನುವಾದ ಮಾಡಲು ಕೆಲವರು 'ದರ್ಮಧರ'ನನ್ನು ಕೇಳಿಕೊಂಡಾಗ, ಅವನು ''ನನ್ನ ಬಾಳು ಇಷ್ಟರಲ್ಲೇ ನಂದಿಹೋಗುತ್ತದೆ ; ಆ ಸೂತ್ರವನ್ನು ಮುಗಿಸುವಷ್ಟು ಅವಕಾಶ ಇಲ್ಲ'' ಎಂದು ಹೇಲಿ ತನ್ನ ಮರಣದ ಗಳಿಗೆಯನ್ನು ಎದುರುನೋಡುತ್ತಿದ್ದ. ಮೈತ್ರೇಯಬುದ್ಧನ ಪ್ರಶಸ್ತಿಗಾಥೆಯನ್ನು ಸ್ಮರಿಸುತ್ತ ಸಾವಿನ ದವಡೆಯೊಳಗೆ ಅಡಿಯಿಟ್ಟ. ದೇಹದ ದಾರ್ಢ್ಯ ಕ್ರಮೇಣ ಕುಗ್ಗಿತು : ''ನಿನ್ನ ಮನೋರಥ ಪೂರ್ತಿಯಾಗಿದೆಯೇ ?'' ಎಂದು ಹತ್ತಿರ ಇದ್ದವರು ಕೇಳಿದಾಗ ''ಹೂ'' ಎಂದು ತೀರ ನಿರ್ಬಲವಾದ ದನಿಯಲ್ಲಿ ಉತ್ತರವಿತ್ತು ಕ್ರಿಸ್ತೋತ್ತರ ೬೬೪ರ ಹತ್ತನೆಯ ಮಾಸದ ಹದಿಮೂರನೆಯ ದಿನ ತೀರಿಕೊಂಡ. ಆಗ ಅವನಿಗೆ ೬೫ ವರ್ಷಗಳು. ಸರಳವಾದ ಸಮಾಧಿ ಬೇಡಿದ ಅವನಿಗೆ ಅತ್ಯಂತ ಸಂಭ್ರಮದ ಸಮಾಧಿ ದೊರೆಯಿತು ; ಅವನ ಸಮಾಧಿಯ ಮೇಲೆ ಚೀಣೀ ಚಕ್ರವರ್ತಿ ಸ್ಮಾರಕ ಶಿಖರವನ್ನು ಕಟ್ಟಿಸಿದ ; ಅವನ ಸಮಾಧಿಯ ಬಳಿ ವಿಶೇಷವಾದ ಅನ್ನದಾನ ನಡೆಯಿತು.

'ಧರ್ಮಧರನ' ಬಾಳ್ವೆ ನಿರಾಡಂಬರ ಸುಂದರವಾಗಿದ್ದಿತು ; ಶೀಲದ ಅಡಿಗಲ್ಲ ಮೇಲೆ ಊರಿ ನಿಂತಿತ್ತು. ಅವನ ದೃಢಮನೋವೃತ್ತಿ ಅಸಾಧಾರಣ ವಾಗಿದ್ದು ಎಂದೂ ಉತ್ಸಾಹ ಹೊರಚಿಮ್ಮುತ್ತಿತ್ತು. ದುಸ್ತರವಾದ, ಭಯಂಕರವಾದ ಪರ್ಯಟನೆಗಳನ್ನು ಮಾಡಿ ದುಷ್ಪ್ರಾಪವಾದ ಗ್ರಂಥಗಳನ್ನು ಸಂಚಯನ ಮಾಡಿದುದು ಮಾತ್ರವಲ್ಲದೆ, ಅವುಗಳ ಶುದ್ಧ ಪಾಠಗಳನ್ನು ನಿರ್ಧರಿಸಿ ಅವನ್ನು ಚೀಣೀ ಭಾಷೆಗೆ ಪರವರ್ತಿಸಿದುದು ನಿತಾಂತ ಅಭಿನಂದನೀಯ. ಅವನಿಂದಾಗಿ ಬುದ್ಧವಚನಮಧು ಯಥೇಚ್ಛವಾಗಿ ಹರಡಿತು ; ಪಂಡಿತರ ಕಣ್ಣು ತೆರೆದು ಕೈಕೆಲಸದಲ್ಲಿ ಹೊರಟಿತು. ತಾನೇ ಸುಮಾರು ಎಪ್ಪತ್ತುನಾಲ್ಕು ಗ್ರಂಥಗಳನ್ನು ಪರಿಷ್ಕರಿಸಿ ಪರಿವರ್ತಿಸಿದ್ದ ; ಇತರ ಪಂಡಿತರನ್ನು ಉಳಿದ ಗ್ರಂಥಗಳಲ್ಲಿ ನಿಯೋಜಿಸಿದ. ಸ್ಥಿತಪ್ರಜ್ಞನಾಗಿ

ಲೋಕಕಲ್ಯಾಣಕ್ಕೆ ತವಕಪಟ್ಟು ತನ್ನ ಬಾಳನ್ನು ಧರ್ಮೋದಯಕ್ಕಾಗಿ ಮುಡಿಪಿಟ್ಟ ಮಹಾತ್ಮ ಜಗತ್ತಿನಲ್ಲಿ ಎಂದೂ ಸನ್ಮಾನ್ಯನಾಗಿರನೆ ? ಅವನ ಬೆಳಕು ನಮ್ಮ ಕಗ್ಗತ್ತಲೆಯ ನಿಮಿಷಗಳನ್ನು ಬೆಳಗದೆ ? ''ಯದ್ಯದಾಚರತಿ ಶ್ರೇಷ್ಠಃ ತತ್ತ ದೇವೇತರೋ ಜನಃ.''

◈ ◈ ◈

ವೈಶಾಖೀ ಸ್ಮರಣೆ

ಈ ವರ್ಷದ ವೈಶಾಖ ಪೂರ್ಣಿಮೆ ಮೇ ತಿಂಗಳು ೨೭ ರಂದು ಬೀಳುತ್ತದೆ. ಅದು 'ವೈಶಾಖಿ'ಯೆಂದು ಬೌದ್ಧರಿಗೆಲ್ಲ ಪವಿತ್ರದಿನ ; ಭಗವಂತನಾದ ಬುದ್ಧ ಜನಿಸಿದ್ದು, ಬೋಧಿ ಕಂಡದ್ದು, ನಿರ್ವಾಣ ಸೇರಿದ್ದು ಮೂರೂ ವೈಶಾಖಿಯ ಪುಣ್ಯ ತಿಥಿಯಲ್ಲೇ ಆಯಿತು. ಬರ್ಮಾ, ಸಿಂಹಳ, ಸಯಾಂ ಮುಂತಾದ ಬೌದ್ಧ ರಾಷ್ಟ್ರಗಳಲ್ಲಿ ಅತಿ ಉತ್ಸಾಹದಿಂದ, ಸಂಭ್ರಮದಿಂದ, ವೈಭವದಿಂದ ದೇಶದಾದ್ಯಂತ ಅಂದು 'ಬುದ್ಧ ದಿನ'ವೆಂದು ಆಚರಿಸುತ್ತಾರೆ. ಬುದ್ಧನ ಧರ್ಮದಲ್ಲಿ ಶರಣು ಹೊಕ್ಕವರು ಈ 'ಪಂಚಶೀಲ'ಗಳನ್ನು ನಡೆಸುವ ಪ್ರಣಿಧಿ ಮಾಡುತ್ತಾರೆ ; ೧.ಕೊಲ್ಲು ವುದಿಲ್ಲ; ೨. ಕಳುವುದಿಲ್ಲ; ೩. ಅತ್ಯಾಚಾರ ಮಾಡುವುದಿಲ್ಲ; ೪. ಸುಳ್ಳು ಹೇಳುವುದಿಲ್ಲ; ೫. ಮದ್ಯ ಕುಡಿಯುವುದಿಲ್ಲ.

ಸಂಜೆಯಂದು ಮುಳುಗುವ ಸೂರ್ಯನ ತಪ್ತತಾಮ್ರಪ್ರಭೆಯಲ್ಲಿ ವಿಶಾಲವಾದ ಶಾಲ್ಮಲೀ ವೃಕ್ಷದ ಅಡಿಯಲ್ಲಿ ಹತ್ತು ಹದಿನೈದು ಬೌದ್ಧ ಸಂನ್ಯಾಸಿಗಳ ತಂಡವೊಂದು ಧರ್ಮದ ಚರ್ಚೆಮಾಡುತ್ತ ಕುಳಿತಿತ್ತು. ಚರ್ಚೆ ಒಂದು ಘಟ್ಟ ಮುಟ್ಟಿ ನೀರವತೆ ಮೂಡಿದಾಗ ಆರ್ಯಸ್ಥವಿರ ಅನುರುದ್ಧ — ಆ ತಂಡದಲ್ಲಿ ಹಿರಿಯನಾದ ಭಿಕ್ಷು — ತನ್ನ ಕಾಷಾಯ ವಸ್ತ್ರವನ್ನು ಬಲಭುಜದ ಕೆಳಗೆ ಹೊದೆದು ಶಾಂತವಾದ ಮುಖ ಮುದ್ರೆಯಲ್ಲಿ ಹೀಗೆಂದ —

''ಒಡನಾಡಿಗಳೇ, ಇಂದು ವೈಶಾಖ ಪೂರ್ಣಿಮೆ. ನಮಗೆಲ್ಲ ಮಹಾಪುಣ್ಯದಿನ ಏಕೆಂಬಿರೋ ? ನಮ್ಮ ಸ್ವಾಮಿಯಾದ, ಸಂಘ ನಾಯಕನಾದ, ಗಣಾಚಾರ್ಯನಾದ, ಭಗವಂತನಾದ, ಸಂಬುದ್ಧನಾದ, ಶಾಕ್ಯಮುನಿಯ ಜೀವಮಾನದಲ್ಲಿ ಮೂರು ವಿಶಿಷ್ಟ ಘಟನೆಗಳೂ ನಡೆದದ್ದು ಇಂದೇ.''

''ಏನವು, ಭಂತೆ ?'' ತಂಡದಲ್ಲಿ ಒಬ್ಬ ತರುಣ ಭಿಕ್ಷು ಕೇಳಿದ. ಆ ಸಂನ್ಯಾಸಿಗಳಲ್ಲಿ ಹಲವರು ಹೊಸಬರು. ಅವರಿಗೆ ಬುದ್ಧನ ಧರ್ಮಾದೇಶದ ವಿನಾ ಅವನ ಜೀವಿತದ ಪರಿಚಯ ಅಷ್ಟಾಗಿ ಇರಲಿಲ್ಲ. ಭಗವಂತನೇ ಹೇಳಿರಲಿಲ್ಲವೆ ?— 'ಧರ್ಮ ಮುಖ್ಯ, ಉಳಿದೆಲ್ಲ ಮಾತೇಕೆ ?'.... ಎಂದು ? ಆದರೂ ಇಂತ ಸುದಿವಸದಲ್ಲಿ ನೊಂದಿ ಹೋದ ಮಹಾದೀಪದ ಸ್ಮರಣೆಯಿಂದ ಚೇತನಕ್ಕೆ ಹಿತವಾದೀತೆಂದು ಬಗೆದು ಸ್ಥವಿರ ಅನುರುದ್ಧ ಮುಂದುವರೆಸಿದ :......

''ನಮ್ಮ ಜಂಬೂದ್ವೀಪದ ವೈಶಿಷ್ಟ್ಯದ ವೈಜಯಂತಿಮಾಲೆ ಉತ್ತುಂಗವಾದ ಹಿಮಾಲಯ ಪರ್ವತ. ನೇಪಾಳದೇಶ ಅದರ ತಪ್ಪಲಿನಲ್ಲಿದೆ. ಈ ದೇಶದ ಪರಿಸರದಲ್ಲಿ ಶಾಕ್ಯರೆಂಬ ಕ್ಷತ್ರಿಯ ಜನದ ಅನೇಕ ಜಾನಪದಗಳುಂಟು. ಇಂಥವುಗಳಲ್ಲಿ ಕಪಿಲವಸ್ತು ಎಂಬುದೊಂದು ಎಂಭತ್ತು ಸಾವಿರ ಸಂಸಾರಗಳಿರುವ ಮಹಾಜಾನಪದ. ಇದರ ಜನನಾಯಕ ಗೌತಮ ಗೋತ್ರದ ಶುದ್ಧೋದನ ರಾಜ. ಇವನ ಮೂಲ ಪುರುಷ ಇಕ್ಷ್ವಾಕುವೆಂದು ಪ್ರತೀತಿ. ಇವನ ಮಡದಿ ಮಹಾಮಾಯೆ ದೇವದಹ ಜಾನಪದದ ಒಡೆಯ ಸುಪ್ರಬುದ್ಧ ರಾಜನ ಮಗಳು. ಬಲು ಶೀಲವಂತೆ. ಹೀಗಿರಲು ಒಮ್ಮೆ ಈಕೆ ಗರ್ಭವತಿಯಾದಂದು ದಿನ ಕಳೆದು ಪ್ರಸವದ ಸಮಯ ಸಮೀಪಿಸಿದಂದು ತನ್ನ ತೌರುಮನೆಗೆ ಹೋಗುವ ಬಯಕೆಯಾಯಿತು. ಅಂತೆಯೇ ಶುದ್ಧೋದನ ರಾಜ ತನ್ನ

ಶ್ರೀಮಂತಿನಿಯನ್ನು ವಿವಿಧ ಸೌಕರ್ಯಗಳಿಂದ ಸಜ್ಜುಗೊಳಿಸಿ ಪರಿವಾರ ಸಮೇತ ನೆರೆಯೂರಾದ ದೇವದಹಕ್ಕೆ ಕಳುಹಿಸಿ ಕೊಟ್ಟ. ದಾರಿಯಲ್ಲಿ ಲುಂಬಿಣೀ ಎಂಬ ರಮಣೀಯವಾದ, ಪ್ರಕೃತಿಯ ಚೆಲುವು ಬೀಡುಬಿಟ್ಟ ಗ್ರಾಮವುಂಟು. ಅಲ್ಲಿಗೆ ಬಂದು ಮಹಾಮಾಯೆ ಸ್ಥಳದ ಸೌಂದರ್ಯದಲ್ಲಿ ಮೈಮರೆತಿದ್ದಾಗ ಪ್ರಸವ ವೇದನೆ ಹೆಚ್ಚಿತು. ಒಂದು ಶಾಲವೃಕ್ಷದ ರೆಂಬೆ ಹಿಡಿದು ನಿಂತಿದ್ದವಳು ಹಾಗೆಯೇ ಮಗುವನ್ನು ಹೆತ್ತಳು. ಆ ಮಗುವೇ ಮುಂದೆ ಲೋಕತಾರಕನಾದ ಸಂಬುದ್ಧ. ಈ ಸಂತಸದ ಸಂಗತಿ ನಡೆದದ್ದು ವೈಶಾಖ ಪೂರ್ಣಿಮೆಯಂದು.* ಆ ಸಮಯದಲ್ಲೇ ಶ್ರಾವಸ್ತಿಯ ಬ್ರಹ್ಮದತ್ತ ರಾಜನಿಗೆ ಪ್ರಸೇನಜಿತ, ರಾಜಗೃಹದ ಮಹಾಪದ್ಮರಾಜನಿಗೆ ಬಿಂಬಿಸಾರ, ಕೌಶಾಂಬಿಯ ಕೌತನಿಕರಾಜನಿಗೆ ಉದಯನ, ಉಜ್ಜಯಿನಿಯ ಅನಂತನೇಮಿ ರಾಜನಿಗೆ ಪ್ರದ್ಯೋತ ಎಂಬ ಮಕ್ಕಳು ಹುಟ್ಟಿದರು— ಇವರೆಲ್ಲ ಮುಂದೆ ಸಾಮ್ರಾಟರಾದರು. ಸುದ್ದಿ ಶುದ್ಧೋದನನ ಕಿವಿಗೆ ಮುಟ್ಟಿತು. ನಗರದಲ್ಲಿ ಅಪರಿಮಿತ ಅನ್ನದಾನ ನಡೆಯಿತು, ಊರಲ್ಲೆಲ್ಲ ಅಮಿತವಾದ ಆನಂದ ಮೇರೆ ಮೀರಿ ಹರಿಯಿತು. ಮಗುವಿಗೆ 'ಸರ್ವಾರ್ಥಸಿದ್ಧ' ('ಸಿದ್ಧಾರ್ಥ') ಎಂದು ನಾಮಕರಣ ಮಾಡಿದರು. ಮಗುವನ್ನು ನೋಡಿಕೊಂಡು ಹೋಗಲು ಸರ್ವಧಾರ ಪರ್ವತದ ಋಷಿ ಅಸಿತ ಬಂದಿದ್ದ.[1] ಸಿದ್ಧಾರ್ಥ ಹುಟ್ಟಿದ ಏಳು ದಿನಗಳಲ್ಲೇ ತಾಯಿ ಮಹಾಮಾಯೆ ತೀರಿಕೊಂಡಳು. ಅವನ ಮಲತಾಯಿ ಮಹಾ ಪ್ರಜಾಪತಿ ಗೌತಮಿ ಅವನ ಲಾಲನೆ ಪಾಲನೆ ಮಾಡಿದವಳು.

---

* ಸಿಂಹಳದವರ ಗಣನೆಯಂತೆ ಕ್ರಿಸ್ತಪೂರ್ವ ೬೨೩ರಲ್ಲಿ ಎಂದರೆ ಈಗ್ಗೆ ೨೬೭೬ ವರ್ಷಗಳ ಹಿಂದೆ. ಆದರೆ ಶ್ರೀರಾಧಾಕುಮುದ ಮುಖ್ಯೋಪಾಧ್ಯಾಯ ಮುಂತಾದ ವಿದ್ವಾಂಸರ ಪ್ರಕಾರ ಬುದ್ಧಜನ್ಮ ಕ್ರಿ.ಪೂ. ೫೬೬ರಲ್ಲಿ.

1. 'ನಾಳಕಸುತ್ತ'ದ "ವತ್ಥುಗಾಥಾ."

''ಸಿದ್ಧಾರ್ಥ ಬೆಳೆದು, ವಿದ್ಯೆಗಳಿಸಿ, ಹರೆಯದ ತೀರ ಮುಟ್ಟಿದಂದು ಅವನಿಗೆ ಕೋಲಿಯಪುತ್ರಿ ಯಶೋಧರೆಯೊಂದಿಗೆ ವಿವಾಹ ಮಂಗಳ ನಡೆಯಿತು. ಆಗ ಸಿದ್ಧಾರ್ಥನಿಗೆ ೧೬ ವರ್ಷದ ಪ್ರಾಯ ; ಅಶ್ವಾರೋಹಣ, ಗಜದಮನ, ಧನುರ್ವಿದ್ಯೆ, ಮಲ್ಲಯುದ್ಧ, ರಾಜತಂತ್ರ ಮುಂತಾದ ಕ್ಷತ್ರಿಯ ಯೋಗ್ಯವಾದ ಎಲ್ಲ ಶಾಖೆಗಳಲ್ಲೂ ಪಾಂಡಿತ್ಯ ಹಸ್ತಗತವಾಗಿತ್ತು. ಯಶೋಧರೆ ಮಹಾಮಾಯೆಯ ಸೋದರ ಸೊಸೆಯೇ ; ರೂಪದಲ್ಲಿ ರತಿ, ಗುಣದಲ್ಲಿ ಮಣಿ, ಶೀಲದಲ್ಲಿ ಅವಳಿಗೆ ಸಾಟಿಯೇ ಇರಲಿಲ್ಲ. ವಿಧಿ ವಿಹಿತವಾದ ವಿವಾಹ ಸರ್ವವಿಧದಲ್ಲೂ ಪ್ರಶಸ್ತವಾಗಿದ್ದು ಕ್ರಮೇಣ ಅವಳಲ್ಲಿ ರಾಹುಲಭದ್ರ ಎಂಬ ಸುಂದರ ಶಿಶು ಹುಟ್ಟಿತು. ಈ ಶಿಶು ಹುಟ್ಟುವವೇಳೆಗೆ ಆಗಲೇ ಸಿದ್ಧಾರ್ಥನಿಗೆ ಪ್ರಪಂಚದ ದುಃಖದರ್ಶನ ಆಗಿ, ಸಾಮಾನ್ಯಜನರ ವೇದನೆಯ ಪರಿಚಯ ಆಗಿತ್ತು ; ಶ್ರೀಮಂತನಾದ ಕುಶಲನಾದ ತಾನು ಸುಖಿಯಾಗಿದ್ದರೂ ಜನರ ದುಃಖ ಅವನ ಸುಖವನ್ನು ಹಿಂಗಿಸಿ, ಹೃದಯದಲ್ಲಿ ಚಿಂತನೆಯ ಮಹಾಕಳಶ ಕಟ್ಟುತ್ತಿತ್ತು. ಒಣಗುತ್ತಿರುವ ಕೊಳದಲ್ಲಿ ಒದ್ದಾಡುವ ಮೀನುಗಳಂತೆ ಈ ಜನ ಬಳಲುತ್ತಿರುವುದು, ಎಲ್ಲೆಲ್ಲೂ ನಿಸ್ಸಾರವಾದ ಬಾಳು, ಇದು ನೋಡಿ ಸಿದ್ಧಾರ್ಥನಿಗೆ ಭಯ ಆಯಿತಂತೆ — ನಮಗೆಲ್ಲ ಅವನ ಆ ಕಾಲದ ಸಂವೇಗವನ್ನು ಭಗವಂತ ವರ್ಣಿಸುತ್ತಿದ್ದ.[2] ''ಮನೆಯಲ್ಲಿರುವಿಕೆಯೇ ಅಡಚಣೆ, ಮನೆಯೆಂಬುದು ಕೊಳೆಯ ಬೀಡು ; ಎಲ್ಲವನ್ನೂ ಬಿಟ್ಟು ಪರಿವ್ರಾಜಕನಾಗುವುದೇ ಬಿಡುಗಡೆ'' ಎಂದು ಸಿದ್ಧಾರ್ಥ ನಿರ್ಧರಿಸಿ,[3] ಇನ್ನೂ ಹರೆಯದವನಿದ್ದಾಗಲೇ, ತಂದೆ ಶುದ್ಧೋದನ ತಾಯಿ ಗೌತಮೀ ಇವನ ನಿರ್ಧಾರ ಕೇಳಿ ಅಳುತ್ತಿರಲು, ತನ್ನ ಗಡ್ಡ-ಮೀಸೆಗಳನ್ನು ಬೋಳಿಸಿ, ಗೃಹಸ್ಥಾಶ್ರಮದ ಪೋಷಾಕು ಬಿಟ್ಟು

2. 'ಸುತ್ತನಿಪಾತ'ದಲ್ಲಿ 'ಅತ್ತದಣ್ಡ ಸುತ್ತ'

3. ''ಪಬ್ಬಜ್ಜಾಸುತ್ತ''

ಕಾಷಾಯವಸ್ತ್ರ ಹೊದ್ದು ಮನೆಯಿಂದ ಹೊರಗಾಗಿ ಮನೆಯಿಲ್ಲದವನಾದ.[4] ಇದನ್ನೇ ನಾವು ಮಹಾಭಿನಿಷ್ಕ್ರಮಣ ಎನ್ನುವುದು.

''ಹೀಗೆ ಸಿದ್ಧಾರ್ಥ ಮನೆ ಬಿಟ್ಟವನು ರಾಜಗೃಹಕ್ಕೆ ಬಂದು ಅಲ್ಲಿ ಉದ್ದಾಮ ತಪಸ್ವಿಗಳೆಂದು ಯಶಸ್ವಿಗಳಾದ ಆರಾಢ ಕಾಲಾಮ, ಉದ್ರಕ ರಾಮ ಪುತ್ರ ಇವರ ಬಳಿ ಕೆಲ ಕಾಲ ನಿಂತು ಅನೇಕ ಸಾಧನೆಗಳನ್ನು ಅಭ್ಯಸಿಸಿ, ಆದರೂ ಮನಶ್ಶಾಂತಿ ಕಾಣದೆ, ಮುಂದೆ ಹೊರಟು ಮಗಧ ರಾಜ್ಯದಲ್ಲಿರುವ ಉರುವಿಲ್ವನಕ್ಕೆ ಬಂದು ಅಲ್ಲಿ ಸರಯೂನದಿಯ ದಂಡೆಯ ಪಲಾಶನ ಗರಿಯಲ್ಲಿ ಪಿಹಿತಾಶ್ರವನೆಂಬ ಜೈನಯತಿಯ ಬಳಿ ನಿಂತು ಸಾಧನೆ ಮಾಡಿದ.[5] ಆದರಿಂದಲೂ ಮನಸ್ಸಿಗೆ ಸಮಾಧಾನ ಸಿಗದೆ ಕಾಡಿನ ಜಠರ ಪ್ರಾಂತವನ್ನು ಪ್ರವೇಶಮಾಡಿ ಅಲ್ಲಿ ಅತ್ಯುಗ್ರವಾದ ಹಠಯೋಗ ಸಾಧನೆಗಳನ್ನು ಆರಂಭ ಮಾಡಿದ. ಆ ಕಾಲದಲ್ಲಿ ಅವನನ್ನು ಕಂಡವರು ನಮ್ಮ ಭದ್ರಿಕ, ಮಹಾನಾಮ, ಮೊನ್ನೆ ತೀರಿಕೊಂಡ ವಾಷ್ಪ ಭಗವಂತ ಇದ್ದಾಗಲೇ ಪರಿನಿರ್ವಾಣ ಸಂದ ಕೌಂಡಿನ್ಯ ಹಾಗೂ ಅಶ್ವಜಿತ ಇವರು. ಇವರು ಅಲ್ಲಿಗೆ ಗೌತಮ ಬರುವ ಮೊದಲೇ ಇಲ್ಲಿ ಸಾಧನೆಗಳನ್ನು ಮಾಡುತ್ತಿದ್ದರು ; ಗೌತಮ ಅಲ್ಲಿಗೆ ಬಂದು ತನ್ನ ಅತಿ ತೀಕ್ಷ್ಣವಾದ, ದುಸ್ಸಾಧ್ಯವಾದ ಸಾಧನೆಗಳನ್ನು ಮಾಡಲಾರಂಭಿಸಿದಾಗ ಅವರು ಇವನನ್ನು ಮೆಚ್ಚಿಕೊಂಡು ಇವನ ಬಳಿ ಸೇರಿದರು. ಅವರನ್ನು 'ಪಂಚವರ್ಗೀಯ ಭಿಕ್ಷುಗಳು' ಎಂದು ವ್ಯವಹರಿಸುವ ವಾಡಿಕೆ.

''ಈ ಉಗ್ರಸಾಧನೆಗಳಿಂದ ಗೌತಮನಿಗೆ ಶಾಂತಿ ಸಿಗಲಿಲ್ಲ. ದೇಹದ ತಾಪ ಹೆಚ್ಚಿದಂತೆ ಕ್ಷೋಭೆಯೂ ಹೆಚ್ಚಿತು. 'ಗೌತಮ ಇಂದು ಬುದ್ಧ

---

4. ''ಮಜ್ಝಿಮನಿಕಾಯ.''

5. ದೇವಸೇನಾಚಾರ್ಯರ ''ದರ್ಶನಸಾರ.''

ಆದಾನು, 'ನಾಳೆ ಆದಾನು' ಅಂದು ಈ ಪಂಚಪ್ರವ್ರಜಿತರು ತವಕದಿಂದ ಇದಿರುನೋಡುತ್ತಿರುವಲ್ಲಿ, ಗೌತಮನಿಗೇ ಅನಿಸಿತು — ಇದರಿಂದ ಬೋಧಿ ಸಿಗದು, ದುಃಖದ ಕೊನೆ ಕಾಣದು ; ಗಾಳಿಯಲ್ಲಿ ಗಂಟುಹಾಕಿ ಕಾಲಹರಣ ಮಾಡುತ್ತಿರುವಂತಿದೆ, ಅಷ್ಟೆ — ಎಂದು. ಹೀಗೆಂದು ಕಂಡ ಗೌತಮ ಮತ್ತೆ ಸಾಮಾನ್ಯವಾದ ಸಾಧನೆ ವ್ರತಗಳಿಗೆ ಹಿಂದಿರುಗಿದ ; ಮೊದಲಿನ ಕಠೋರ ತಪಸ್ಯೆ ಮರೆತ. ಇದು ನೋಡಿ ಬೇಸತ್ತು ಅವನ ಸಂಗಾತಿಗಳು, ''ಶ್ರಮಣ ಗೌತಮ ಬಾಹುಳ್ಯಕ್ಕೆ ಹಿಂದಿರುಗಿದ'' ಎಂದು ಜರಿದು ಕಾಶಿಯ ಬಳಿಯ ಮೃಗದಾವ ವನಕ್ಕೆ ಹೊರಟುಬಿಟ್ಟರು.[6]

''ಆಗ ಒಂಟಿಯಾಗಿ ಗೌತಮ ಮನಶ್ಶಾಂತಿಗಾಗಿ ಅರಸುತ್ತ ಅಲೆದಾಡುತ್ತ ಗಯಾಕ್ಷೇತ್ರದ ಬಳಿ — ಇಂದು ನಮಗೆಲ್ಲ ಪೂಜ್ಯವೆನಿಸಿ ರುವ — ಬೋಧಿವೃಕ್ಷದಡಿಯಲ್ಲಿ ಕೂತು, 'ಇಲ್ಲಿ ನನಗೆ ಸಿದ್ಧಿಯಾಗದೆ ಇಲ್ಲಿಂದ ನಾನು ಏಳೆ. ರಕ್ತವೆಲ್ಲ ಒಣಗಿ ನಿಂತು, ಮೂಳೆಯೆಲ್ಲ ಪುಡಿಪುಡಿ ಯಾಗಿ ಬಿದ್ದರೂ ಚಿಂತೆಯಿಲ್ಲ, ನನ್ನ ಸಾಧನೆಯ ಗುರಿ ಕಾಣದೆ ಇಲ್ಲಿಂದ ಚಲಿಸೆನು' ಎಂದು ನಿಶ್ಚಯಿಸಿದ. ಅನ್ನ— ನಿದ್ರೆ ಬಿಟ್ಟು ದೃಢವ್ರತನಾಗಿ ಬದ್ಧ ಪದ್ಮಾಸನನಾಗಿ ಗೌತಮ ಹೀಗೆ ಕೂತಿರಲು, ಸಂಸಾರದ ಕೊಳೆ ಮೈವೆತ್ತು ಬಂದಂಥ ಮಾರ ಬಂದು — 'ಎಲೆ ಗೌತಮ, ನಿನಗೆ ಸಿದ್ಧಿ ಆಗದು, ಸಾಯುವೆ ನಿಜ. ಬರಿದೆ ಬಳಲಲೇನು ಸುಖ ? ಬದುಕಿರಲು ಪುಣ್ಯ ಮಾಡುವೆ ಏಳು ! ಭೋಗದ ದಾರಿ ಹಿಡಿದು ಬಾಳು, ಸುಖಪಡು !' ಎಂದ. ಅದಕ್ಕೆ ಗೌತಮ, 'ನಿನ್ನ ರೂಪ ನನಗೆ ತಿಳಿದಿದೆ, ಪಾಪಿಯಾದವನೆ ! ಹಗರಣದಲ್ಲಿ ಸೋಲಿಗಿಂತ ಸಾವು ಲೇಸು !' ಎಂದು ಅವನನ್ನು ಮೂದಲಿಸಿದ.[7] ಆಗ ಭಗವಂತನಿಗೂ ಕಾಮ, ಅರತಿ, ತೃಷ್ಣೆ ಹಸಿವು,

6. ''ಜಾತಕನಿದಾನಕಥಾ.''

7. ''ಪಧಾನಸುತ್ತ''

ನೀರಡಿಕೆ, ಭಯ, ದಂಭ, ಹರ್ಷ, ದರ್ಪ, ರಾಗ, ಸಂಶಯ ಮುಂತಾದ ಮನೋವಿಕಾರಗಳಿಗೂ ಘೋರವಾದ ಸಮರವೇ ನಡೆಯಿತು. ಮಾರನ ರಥ ಮುರಿದು ಬಿತ್ತು ; ಮಾರ ಮುಖ ಮುಚ್ಚಿಕೊಂಡು ಓಡಿಹೋದ. ಹೀಗೆ ನಮ್ಮ ಸ್ವಾಮಿ ಮಾರನನ್ನು ಗೆದ್ದು 'ಜಿನ'ನೆನಿಸಿದ. ಆಗ ನಮ್ಮ ಸ್ವಾಮಿಗೆ ಸಂಬೋಧಿ ಕಂಡಿತು, ಅಮೃತ ಅಧಿಗತವಾಯಿತು. ಬ್ರಹ್ಮಚರ್ಯದ ಪರ್ಯವಸಾನವಾಯಿತು ; ಹಿಂದೆ ಅಡಗಿದ್ದ ಧರ್ಮಗಳನ್ನು ಈಗ ಕಾಣುವಂಥ ಚಕ್ಷು ಹುಟ್ಟಿತು, ಜ್ಞಾನ ಹುಟ್ಟಿತು, ಆಲೋಕ ಹುಟ್ಟಿತು ! ಭಗವಂತನಾದವಗೆ ಅನಿಸಿತು— 'ಇದು ನನ್ನ ಚೇತೋವಿಮುಕ್ತಿ ಇದೇ ನನ್ನ ಕಡೆಯ ಜನ್ಮ ಇನ್ನು ನನಗೆ ಪುನರ್ಭವ ಇಲ್ಲ'— ಎಂದು.[8] ಅನುತ್ತರವಾದ ಸಮ್ಯಕ್ ಸಂಬೋಧಿ ಲಬ್ಧವಾಗಿ ಅಂದು ಗೌತಮ ಸಂಬುದ್ಧನಾದ. ಇದು ನಡೆದ ರಾತ್ರಿ ವೈಶಾಖ ಪೂರ್ಣಿಮೆ. ಆಗ ನಮ್ಮ ಸ್ವಾಮಿಗೆ ಮೂವತ್ತೈದು ವರ್ಷ ಪ್ರಾಯ.

''ಸಿದ್ಧಾರ್ಥ ಹೀಗೆ ಸಂಬುದ್ಧನಾಗಿ ಬಹು ಜನರ ಹಿತಕ್ಕಾಗಿ, ಸುಖಕ್ಕಾಗಿ, ಸಂಸಾರದ ಕೊಳೆಯಿಂದ ಪೂರಾ ಮುಚ್ಚಿಮುಳುಗುತ್ತಿರುವ ಆರ್ತರ ಹಿತಸಾಧನೆ ಗಾಗಿ, ಲೋಕಾನುಕಂಪನೆಮೂಡಿ, ಬ್ರಹ್ಮಾಸಹಂಪತಿ ದೇವತೆಯಿಂದ ಪ್ರೇರಿತನಾಗಿ ತನ್ನ ಧರ್ಮವನ್ನು ಜಗತ್ತಿನಲ್ಲಿ ಪ್ರಚಾರ ಮಾಡಲು ಬದ್ಧಕಂಕಣನಾದ.[9] ಉರುವಿಲ್ವದಲ್ಲಿ ತನ್ನ ಸಹತಾಪಸಿಗಳಾಗಿದ್ದ ತನಗೆ ಬಹೂಪಕರರಾದ, ಪಂಚ ಪ್ರವ್ರಜಿತರನ್ನು ಅರಸಿಕೊಂಡು ವಾರಣಾಸಿಯ ಮೃಗದಾವಕ್ಕೆ ಬಂದು, ಅಲ್ಲಿ ಅವರಿಗೆ ತನ್ನ ಸಂಬೋಧಿ, ಮಧ್ಯಮ ಪ್ರತಿಪಾದದ ವಿಚಾರ ಬೋಧೆ ಮಾಡಿದ : 'ಕಾಮಸುಖ, ಆತ್ಮಕ್ಲೇಶ ಎರಡೂ ಸಲ್ಲದು. ಅವು ಅನಾರ್ಯ, ಹೀನ, ಗ್ರಾಮ್ಯ,

8. ''ಧಮ್ಮಚಕ್ಕಪ್ಪವತ್ತನಸುತ್ತ.''

9. ಮಹಾವಗ್ಗ.''

ಅನರ್ಥಕಾರಿ. ಎರಡಕ್ಕೂ ಮಧ್ಯಮವಾದ ದಾರಿ ಹಿಡಿದು ನಡೆದರೆ ಅದರಿಂದ ಹಿತ, ಜ್ಞಾನ, ಉಪಶಮ, ಅಭಿಜ್ಞೆ, ಸಂಬೋಧಿ, ನಿರ್ವಾಣ ಇವು ಲಭ್ಯ. ಹುಟ್ಟು ದುಃಖ, ಜರೆ ದುಃಖ, ಮರಣ ದುಃಖ, ಬೇಡದುದು ಬಂದರೆ ದುಃಖ, ಬೇಡಿದುದು ಬಾರದಿದ್ದರೆ ದುಃಖ— ಒಟ್ಟಿನಲ್ಲಿ ಪಂಚ— ಉಪಾದಾನಸ್ಕಂಧವೆನಿಸಿದ ಈ ಎಲ್ಲ ದುಃಖವೇ. ದುಃಖ ಆರ್ಯಸತ್ಯ ; ದುಃಖಸಮುದಯ ಎನ್ನುವುದು ಆರ್ಯ ಸತ್ಯ ; ದುಃಖನಿರೋಧ ಎನ್ನುವುದು ಆರ್ಯಸತ್ಯ ; ದುಃಖ ನಿರೋಧಗಾಮಿನೀ ಪ್ರತಿಪದಾ ಎನ್ನುವುದು ಆರ್ಯಸತ್ಯ.' ಹೀಗೆ ವಾರಣಾಸಿಯ ಋಷಿಪತನದ ಮೃಗದಾವದಲ್ಲಿ ಭಗವಂತ ಕೌಂಡಿನ್ಯನೇ ಮೊದಲಾದ ಐದು ಭಿಕ್ಷುಗಳಿಗೆ ಬೋಧಿಸಿದಂದು ಜಗತ್ತಿನಲ್ಲಿ ಅನುತ್ತರವಾದ ಧರ್ಮಚಕ್ರ ಪ್ರವರ್ತಿತವಾಯಿತು.[10] ದುಃಖದ ಶಮನೆಗಾಗಿ ಧರ್ಮ ಹಿಡಿದು ಬ್ರಹ್ಮಚರ್ಯೆ ನಡೆಸಿರಿ ! ಎಂದು ಭಗವಂತ ಕರೆದಂದು ಆ ಐದು ಮಂದಿ ಓಗೊಟ್ಟು ಅವನನ್ನು ಸೇರಿದರು. ಅವರೆಲ್ಲ ಸಾಧನೆ ಮಾಡಿ ನಿರ್ವಾಣ ಕಂಡರು. ಆಗ ಜಗತ್ತಿನಲ್ಲಿದ್ದುದು ಆರೇಮಂದಿ ಅರ್ಹತರು ; ಅದೇ ನಮ್ಮ ಪ್ರಥಮ ಸಂಘ.

''ಮುಂದೆ ಕಾಶಿಯ ಯಶೋಭದ್ರ ಹಾಗೂ ಅವನ ಸಂಗಾತಿಗಳು, ಉರುವಿಲ್ವದ ಜಟಿಲ ತಪಸ್ವಿಗಳಾದ ಉರುವಿಲ್ವ ಕಾಶ್ಯಪ, ನದೀ ಕಾಶ್ಯಪ, ಗಯಾ ಕಾಶ್ಯಪ ಹಾಗೂ ಅವರ ಸಾವಿರ ಮಂದಿ ಅನುಚರರು ಸಂಘ ಸೇರಿದರು. ಭಗವಂತ ಭಿಕ್ಷುಗಳನ್ನು ಊರೂರಿಗೆ ಕಳುಹಿಸಿದ. ಬಹು ಜನರ ಹಿತಕ್ಕೆ, ಸುಖಕ್ಕೆ, ಲೋಕಾನುಕಂಪನೆಗೆ, ದೇವ ಮನುಷ್ಯರ ಅರ್ಥ, ಹಿತ, ಸುಖಕ್ಕೆ ಶ್ರಮಿಸಲು ತಾನು ಅಲ್ಲಿಂದ ರಾಜಗೃಹಕ್ಕೆ ಹೊರಟು ಅಲ್ಲಿ ರಾಜನಾದ ಸೈನ್ಯ ಬಿಂಬಿಸಾರನಿಗೆ ಧರ್ಮಬೋಧೆ ಮಾಡಿದ ; ರಾಜ

---

10. ''ಧರ್ಮಚಕ್ಕಪ್ಪವತ್ತನಸುತ್ತ''

ಸಂಘಕ್ಕೆಂದು ವೇಣುವನ ಆರಾಮವನ್ನು ದಾನಮಾಡಿದ. ಸಂಜಯನ ಶಿಷ್ಯರಾಗಿದ್ದ, ಮುಂದೆ ನಮ್ಮ ಸಂಘದ ಕಣ್ಣುಗಳಾಗಿ, ಪ್ರತಿ ಶಾಕ್ಯಮುನಿ ಗಳಂತೆ ಮೆರೆದ, ಶೀಲ—ನಿಷ್ಠೆ ವಿದ್ಯೆಗಳಲ್ಲಿ ಕುಸಲರಾದ, ಆರ್ಯಸ್ಥವಿರ ರಾದ ಶಾರಿಪುತ್ರ—ಮೌದ್ಗಲ್ಯಾಯನರು ಸೇರಿದರು. ಭಗವಂತ ಹೋದೆಡೆ ಯೆಲ್ಲ ಬಹು ಸಂಖ್ಯೆಯ ಜನಸಂಘ ಸೇರುತ್ತಿದ್ದರು—ಮಗಧದ ಜನ ಅನ್ನುತ್ತಿದ್ದರು, 'ಈ ಶ್ರಮಣ ಗೌತಮ ಬಂದು ಮನೆ ಮುರಿಯುತ್ತಿದ್ದಾನೆ, ಸಂಸಾರಗಳನ್ನು ಹಾಳುಮಾಡುತ್ತಿದ್ದಾನೆ ! ಮಕ್ಕಳನ್ನು ಒಯ್ಯುತ್ತಿದ್ದಾನೆ. ಸುಮಂಗಲಿಯರನ್ನು ವಿಧವೆಯರನ್ನಾಗಿ ಮಾಡುತ್ತಿದ್ದಾನೆ !' ಎಂದು ! ಅಲ್ಲಿಂದ ಭಗವಂತ ಕಪಿಲವಸ್ತುವಿಗೆ ಬಂದ ; ಅಲ್ಲಿ ಅವನ ಮಲತಮ್ಮ ನಂದ ಹಾಗೂ ಮಗ ಆಯುಷ್ಮಂತನಾದ ರಾಹುಲ ಸೇರಿದರು. ಮುಂದೆ ರಾಜ ಗೃಹಕ್ಕೆ ಹಿಂದಿರುಗುವ ದಾರಿಯಲ್ಲಿ ಅನುಪ್ರಿಯಾದಲ್ಲಿ ಆಯುಷ್ಮಂತನಾದ ಆನಂದ, ಸ್ಥವಿರ ಉಪಾಲಿ, ದೇವದತ್ತ ಭದ್ರಿಕ ಹಾಗೂ ನಾನು ಸಂಘ ಸೇರಿದೆವು. ರಾಜಗೃಹದಲ್ಲಿ ಅನಾಥಪಿಂಡಿಕನೆಂದು ಪ್ರಖ್ಯಾತನಾದ ಶ್ರೇಷ್ಠಿ ಸುದತ್ತನ ಪರಿಚಯ ಆಯಿತು ; ಜೇತವನಾರಾಮ ಅವನು ಸಂಘಕ್ಕೆ ಕೊಟ್ಟಿದ್ದಾನೆ. ಶ್ರಾವಸ್ತಿಯಲ್ಲಿ ವಿಶಾಖೆ ಪೂರ್ವಾರಾಮ ದಾನಮಾಡಿದಳು. ವೈಶಾಲಿಯಲ್ಲಿ ಆಮ್ರಪಾಲಿ ಒಂದು ಆರಾಮ ದಾನಮಾಡಿದಳು. ವತ್ಸರಾಜ ನಾದ ಉದಯನ ಕೌಶಾಂಬಿಯಲ್ಲಿ ಸಂಘಕ್ಕೆಂದು ಘೋಷಿತಾರಾಮ ಕೊಟ್ಟ ನಂತರ ಕೆಲಕಾಲ ಸಂಘದಲ್ಲಿ ಶಾಂತಿ ತಪ್ಪಿ ಭಗವಂತನಿಗೆ ಬೇಸರ ಬಂದು ಪಾರಿಲೇಯ್ಯಕದ ಕಾಡಿನಲ್ಲಿ ವಾಸಿಸುತ್ತಿದ್ದ.

''ಮುಂದೆ ದೇವದತ್ತನಿಂದಾಗಿ ಸಂಘದಲ್ಲಿ ಒಡಕು ಬಂತು. ಸಂಬುದ್ಧ ವೃದ್ಧನಾಗುತ್ತಿರುವಲ್ಲಿ ದೇವದತ್ತ ತಾನು ಸಂಘಾಚಾರ್ಯನಾಗು ವೆನೆಂದು ಹವಣಿಸುತ್ತಿದ್ದ. ಭಗವಂತ ಇದಕ್ಕೆ ಸಮ್ಮತಿಸದಿರಲು ಕ್ರುದ್ಧನಾಗಿ ದೇವದತ್ತ ತಾನೇ ಒಂದು ಸಂಘವನ್ನು ಸೇರಿಸಿಕೊಂಡು, ಮಗಧದ ದೊರೆ

ಅಜಾತಶತ್ರುವಿನ ಸ್ನೇಹ ಸಂಪಾದಿಸಿ, ಅವನನ್ನು ಅವನ ತಂದೆ ಬಿಂಬಿಸಾರನ ಮೇಲೆತ್ತಿ ಕಟ್ಟಿ ತಾನು ಅವನ ಸಹಾಯದಿಂದ ಭಗವಂತನನ್ನು ಕೊಲ್ಲಲು ಅನೇಕ ಪ್ರಯತ್ನಗಳನ್ನು ಮಾಡಿದ. ಅದೊಂದೂ ಸಫಲವಾಗದೆ ಕಡೆಗೆ ತಾನೇ ನಿರ್ಗತಿಕವಾಗಿ, ತನ್ನ ಪಾಪದ ಫಲ ಮೈವೆತ್ತು, ಬಳಲುತ್ತ ತೊಳಲುತ್ತ ಸತ್ತ. ಕಬ್ಬಿಣದಲ್ಲಿ ಕೊಳೆ ಅಲ್ಲೇ ಎದ್ದು ಅದನ್ನೇ ತಿನ್ನುವಂತೆ ಪಾಪ ಮಾಡುವಾಗ ಅದು ಜೇನುತುಪ್ಪದಂತೆ ಸಿಹಿ; ಅದರ ಫಲ ಅನುಭವಿಸುವಾಗ ಕಣ್ಣೀರಿನ ಹೊಳೆ ಹರಿಯುತ್ತದೆ !

''ಶ್ರಾವಸ್ತಿಯಲ್ಲಿದ್ದಾಗ ಸಂಬುದ್ಧನ ಪರಿಚರ್ಯೆಗೆಂದು ಆಯುಷ್ಮಂತನಾದ ಆನಂದ ಅಂತೇವಾಸಿಯಾಗಿ ನಿಯಮಿತನಾದ. ಸಂಬುದ್ಧನಿಗೆ ಆಗ ಐವತ್ತು ವರ್ಷದ ಸುಮಾರಾಗಿತ್ತು ; ಸತತ ಪರ್ಯಟನೆಯ ಫಲವಾಗಿ ದೇಹ ಬಳಲಿ ವೃದ್ಧಾಪ್ಯ ಅಂಕುರಿಸಿತ್ತು.

''ಮುಂದೆ, ಧರ್ಮ ಸೇನಾಪತಿಯೆಂದು ಖ್ಯಾತ ಕೀರ್ತಿಯಾಗಿದ್ದ ಆಯುಷ್ಮಂತನಾದ ಸ್ಥವಿರ ಶಾರಿಪುತ್ರ, ಅವನ ನೆಚ್ಚಿನ ಗೆಳೆಯ ಸ್ಥವಿರ ಮೌದ್ಗಲ್ಯಾಯನ ಇಬ್ಬರೂ ತೀರಿಕೊಂಡರು. ಕೋಸಲದ ಪ್ರಸೇನಜಿದ್ರಾಜ ಅಜಾತಶತ್ರುವಿನ ರಾಜ್ಯದಲ್ಲಿ ಮಡಿದ ; ಅವನ ಮಗ ವಿಡೂಡಭ ಕೋಸಲದ ರಾಜನಾಗಿ, ಅವನ ಮಂತ್ರಿ ಅಂಬರೀಷನ ಪ್ರೇರಣೆಯಂತೆ, ಶಾಕ್ಯರ ವಂಶವನ್ನೆಲ್ಲ ನಿರ್ಮೂಲಮಾಡುವ ಪಣತೊಟ್ಟ, ಆಗ ಅಗಾಧವಾದ ಹತ್ಯೆ ನಡೆಯಿತು. ಮುಂದೆ ಅಜಾತಶತ್ರು ವೃಜಿಜನರ ಮೇಲೆ ಹಗರಣ ಶುರುಮಾಡುವ ಮುನ್ನ ಅವನ ಮಂತ್ರಿ ವರ್ಷಾಕರ ರಾಜಗೃಹದ ಗೃಧ್ರಕೂಟ ಪರ್ವತಕ್ಕೆ ಬಂದು ಅಲ್ಲಿ ಭಗವಂತನನ್ನು ಭೆಟ್ಟಿ ಮಾಡಿ ಸಮಾಲೋಚನೆ ನಡೆಸಿದ.

''ಭಗವಂತ ಮುಂದೆ ಪಾಟಲಿಗ್ರಾಮ ಹೊಕ್ಕು ಅಲ್ಲಿಂದ ಕೋಟಿ ಗ್ರಾಮಕ್ಕೆ ಬಂದ. ಅಲ್ಲಿ ಆಯುಷ್ಮಂತರಾದ ಭದ್ರಕ, ಸುಭದ್ರ ಹಾಗೂ

ಯಶೋಭದ್ರ ತೀರಿ ಕೊಂಡರು. ಮುಂದೆ ವೃಜಿದೇಶದಲ್ಲಿ ಭಗವಂತ ಇದ್ದಾಗ ಮಹಾಕ್ಷಾಮ ಇತ್ತು. ಆಗ ಭಗವಂತ ಅಲ್ಲಿಯ ಬೆಲುವಗ್ರಾಮದಲ್ಲಿ ತಾನು ಮತ್ತು ಆಯುಷ್ಮಂತನಾದ ಆನಂದ ಇಬ್ಬರಿದ್ದುಕೊಂಡು, ಉಳಿದ ಪರಿವಾರವನ್ನೆಲ್ಲ ಸುತ್ತಮುತ್ತಲ ದೇಶಕ್ಕೆ ಕಳುಹಿಸಿಬಿಟ್ಟ. ಬೆಲುವದಿಂದ ಆಮ್ರಗ್ರಾಮ, ಜಂಬುಗ್ರಾಮ, ಭಂಡಗ್ರಾಮ, ಹಸ್ತಿಗ್ರಾಮ, ಭೋಗ ನಗರ ಇವನ್ನು ದಾಟಿ ಮಲ್ಲರ ದೇಶಕ್ಕೆ ಬಂದು, ಅಲ್ಲಿ ಪಾವನಗರಿಯಲ್ಲಿ ಚುಂದನೆಂಬ ಕಮ್ಮಾರನ ಮನೆಯಲ್ಲಿ ಸೂಕರಮದ್ದರ್ವ ತಿಂದುದೇ ನೆವವಾಗಿ ಭಗವಂತನಿಗೆ ತೀವ್ರವಾದ ಉದರವೇದನೆ, ಆಮಶಂಕೆ ತಲೆಯಿಟ್ಟಿತು. ಆದರೂ ಅಲ್ಲಿಂದ ಆನಂದನೊಂದಿಗೆ ಕುಶೀನಗರದೆಡೆ ಹೊರಟು ದಾರಿಯಲ್ಲಿ ಬಳಲಿ, ತುಸುಹೊತ್ತು ವಿಶ್ರಮಿಸಿಕೊಂಡು, ಮುಂದೆ ಮಲ್ಲರ ಸಾಲ ವನವನ್ನು ಸೇರಿ ಹಿರಣ್ಯವತೀ ನದಿಯ ತೀರದಲ್ಲಿರುವ ಕುಶೀನಗರದ ಉಪವರ್ತನವನ್ನು ಮುಟ್ಟಿದ.

''ಅಲ್ಲಿ ಭಗವಂತನಿಗೆ ತೀರ ಆಯಾಸವಾಗಿ, 'ಆನಂದ, ಬಲು ಬಳಲಿಕೆ, ಇಲ್ಲಿ ಮಲಗುತ್ತೇನೆ ; ಜಾಗ ಸರಿಮಾಡು' ಎಂದ. ಆನಂದ ಎರಡು ಸಾಲವೃಕ್ಷಗಳ ನಡುವೆ ಉತ್ತರಕ್ಕೆ ತಲೆಮಾಡಿ ಒಂದು ಹಾಸಿಗೆ ಸಿದ್ಧ ಮಾಡಿದ. ಭಗವಂತನ ಆಯುಷ್ಯ ಅವಸಾನ ಮುಟ್ಟುತ್ತಿದೆಯೆಂಬ ಅರಿವು ಆನಂದನಿಗಾಯಿತು ; ಸುಕುಮಾರನಾದ ಅವನು ತೀರ ಹೆಂಗರುಳಿನವನು — ತನ್ನ ಜೀವನದ ಏಕೈಕ ಶರಣವಾಗಿದ್ದ ಸಂಬುದ್ಧ ಮರೆಯಾಗಿ ಹೋಗುವುದು ಅವನಿಂದ ಸಹಿಸಲಾಗದ ಯಾತನೆಯಾಯಿತು. ದೂರದಲ್ಲಿ ಹೋಗಿ ಬಿಕ್ಕಿಬಿಕ್ಕಿ ಅಳುತ್ತ ನಿಂತ. ಮಲಗಿದ್ದ ಸಂಬುದ್ಧ ಆಗ ಆನಂದನನ್ನು ಕರೆದು ಅವನಿಗೆ ಸಮಾಧಾನ ಹೇಳಿದ— 'ಅಳದಿರು, ಆನಂದ ! ನಿನಗೆಷ್ಟು ಬಾರಿ ಹೇಳಿಲ್ಲ ಪ್ರಿಯವಾದ ವಸ್ತುಗಳಿಂದ ವಿಪ್ರಯೋಗ ತಪ್ಪಿದ್ದಲ್ಲ, ಅದು ವಸ್ತುಗಳ ಸ್ವಭಾವ — ಎಂದು ? ಹುಟ್ಟಿ ಸಾಯದಿರುವುದು ಹೇಗೆ, ಆನಂದ? ನೀನು ನನ್ನನ್ನು ಬಹುಕಾಲ, ಬಹುವಾಗಿ, ಶ್ರದ್ಧೆಯಿಂದ ನೋಡಿ

ಕೊಂಡಿದ್ದೀ. ಆದರಿಂದ ನಿನಗೆ ಎಷ್ಟೋ ಪುಣ್ಯ ! ಇನ್ನೂ ಸಾಧನೆಮಾಡು, ಬೇಗ ಆಸ್ರವಗಳಿಂದ ಮುಕ್ತನಾಗಿ ಅರ್ಹತನಾಗುವೆ, ಆನಂದ !'

''ಭಗವಂತ ಮರಣೋನ್ಮುಖನಾಗಿ ಮಲಗಿರುವ ಸುದ್ದಿ ಹರಡಿತು. ಮಲ್ಲವಂಶದವರು ಅಧಿಕ ಸಂಖ್ಯೆಯಲ್ಲಿ ಬರತೊಡಗಿದರು. ಸುತ್ತಮುತ್ತಲಿದ್ದ ಭಿಕ್ಷುಗಳೆಲ್ಲ ಬಂದು ನೆರೆದರು. ದೂರದಿಂದ ಸುಭದ್ರನೆಂಬ ಪರಿವ್ರಾಜಕ ಸಂನ್ಯಾಸಿ ಬಂದು ಭಗವಂತನೊಂದಿಗೆ ಧರ್ಮಜಿಜ್ಞಾಸೆ ಮಾಡಿದ ; ಅದೇ ಭಗವಂತ ಮಾಡಿದ ಕಡೆಯ ಧರ್ಮಬೋಧೆ. ಭಗವಂತ ಆನಂದನ ಕಡೆ ತಿರುಗಿ — ''ಆನಂದ ! ನಿಮ್ಮ ಮನಸ್ಸಿನಲ್ಲಿ ಹೀಗೆ ಭಾವನೆ ಬಂದೀತು — ''ಗುರುವಿನ ವಚನ ಲುಪ್ತವಾಯಿತು ; ಇನ್ನು ನಮ್ಮ ಗುರು ಇಲ್ಲ—'' ಎಂದು, ಆದರೆ ಅದು ಸರಿಯಲ್ಲ, ನನ್ನಿಂದ ದೇಶಿತವಾದ ಧರ್ಮವೇ ನಾನು ಅಳಿದ ಮೇಲೆ ನಿಮ್ಮ ಗುರು.'' ಎಂದ. ನಂತರ ಮತ್ತೆ ''ಭಿಕ್ಷುಗಳೇ, ಮನಸ್ಸಿನಲ್ಲಿ ಶಂಕೆಯಿದ್ದರೆ ಪ್ರಶ್ನೆ ಕೇಳಿರಿ. 'ಭಗವಂತ ಬದುಕಿದ್ದಾಗ ಇದನ್ನು ಕೇಳಲಿಲ್ಲ !' ಎಂದು ಆಮೇಲೆ ಅಂದುಕೊಂಡೀರಿ'' ಎಂದ. ಸಂಘ ಮೌನವಾಗಿತ್ತು. ಮೂರು ಬಾರಿ ಪ್ರಶ್ನೆ ಮಾಡಿದಾಗಲೂ ಸಂಘ ಮೌನವಾಗಿತ್ತು. ಆನಂದ, ''ಈ ಮಹಾಭಿಕ್ಷು ಸಂಘದಲ್ಲಿ ಒಬ್ಬನಿಗಾದರೂ ಬುದ್ಧನಲ್ಲಾಗಲಿ, ಧರ್ಮದಲ್ಲಾಗಲಿ ಸಂಶಯ ಇರದು !'' ಎಂದ. ಆಗ ನಮ್ಮ ಸ್ವಾಮಿ ನಮ್ಮ ಕಡೆ ತಿರುಗಿ ನೀರವವಾದ ಧ್ವನಿಯಲ್ಲಿ—

''ವಯಧಮ್ಮಾ ಸಂಖಾರಾ
ಅಪ್ಪಮಾದೇನ ಸಂಪಾದೇಥ !''

''ಈ ಎಲ್ಲ ಅಳಿಯುವ ಸ್ವಭಾವದವು ; ಎಚ್ಚೆತ್ತಿದ್ದು ಸಾಧನೆ ಮಾಡಿರಿ !''[11] ಎಂದಷ್ಟು ಅಂದು ಕಣ್ಣುಮುಚ್ಚಿ ಧ್ಯಾನಮಗ್ನನಾದ. ಆ

---

11. ''ಮಹಾಪರಿನಿಬ್ಬಾಣಸುತ್ತಂತ.''

ದಿಗ್ದರ್ಶನದ ಧ್ವನಿ ಇನ್ನೂ ನನ್ನ ಕಿವಿಯಲ್ಲಿ ಮಿಡಿಯುತ್ತಿದೆ. ಆ ಮಾತು ಗಳನ್ನು ಅನ್ನುವಾಗ ಭಗವಂತನ ಮುಖದಲ್ಲಿದ್ದ ಅಪೂರ್ವ ವರ್ಚಸ್ಸು ಧ್ವನಿಯಲ್ಲಿದ್ದ ಮಾರ್ದವತೆ, ಕಣ್ಣುಗಳಲ್ಲಿದ್ದ ಕಾರುಣ್ಯದ ಲಾವಣ್ಯ ನನ್ನ ಚೇತೋದೃಷ್ಟಿಯಲ್ಲಿ ಇನ್ನೂ ಕಟ್ಟಿವೆ. ಅದೇ ಭಗವಂತನ ಕಡೆಯ ವಚನ. ಅಂದೇ ರಾತ್ರಿ ದೂರ ಸಂದುವಲ್ಲಿ ದೇವಮನುಷ್ಯರಿಗೆ ಶಾಸ್ತಾರನಾದ, ಪುರುಷದಮ್ಯ ಸಾರಥಿಯಾದ, ವಿದ್ಯಾಚರಣ ಸಂಪನ್ನನಾದ, ಲೋಕಜ್ಯೇಷ್ಠ ನಾದ, ಲೋಕವಿದನುತ್ತರನಾದ, ಗುಣಸಾಗರನಾದ, ತಥಾಗತನಾದ, ಅರ್ಹತನಾದ, ಸಮ್ಯಕ್ಸಂಬುದ್ಧನಾದ ಶಾಕ್ಯಮುನಿ ಪರಿನಿರ್ವಾಣ ಸೇರಿದ ! ಜ್ಞಾನದ ದೀಪವನ್ನು ಅನಿತ್ಯತೆಯ ಬಿರುಗಾಳಿ ಆರಿಸಿತು ! ಅಂದು ವೈಶಾಖ ಪೂರ್ಣಿಮೆ.*

''ಒಡನಾಡಿಗಳೇ, ಭಗವಂತನ ಉದಯ-ಸಂಬೋಧಿ—ನಿರ್ವಾಣಗಳು ವೈಶಾಖ ಪೂರ್ಣಿಮೆಯಂದೇ** ನಡೆದುದು ಪ್ರಕೃತಿ ವೈಚಿತ್ರ್ಯ. ಅದು ಆಕಸ್ಮಿಕ ಇದ್ದರೂ ಇದ್ದೀತು. ಆದರೆ ಭವಚಕ್ರದಲ್ಲಿ ಧರ್ಮ ಚಕ್ರವನ್ನು ಈ ವೈಶಾಖಿಯ ಮಾಹಾತ್ಮ್ಯೆ ನಿರೂಪಿಸಲಾರದೆ ?''

''ಎಂದು ಆರ್ಯನಾದ ಸ್ಥವಿರ ಅನಿರುದ್ಧ ತನ್ನ ನಿರೂಪಣೆಯ ಸಮಾಪ್ತಿ ಮಾಡಿದೆ. ಭಿಕ್ಷುಗಳು ತಮ್ಮ ಸ್ವಾಮಿಯ ಜೀವಿತ ಪ್ರಸಂಗವನ್ನು ಕೇಳಿ ಪ್ರಮುದಿತ ಹೃದಯರಾದರು. ಆಕಾಶದಲ್ಲಿ ವೈಶಾಖದ ಪೂರ್ಣ ಚಂದ್ರಮನ ಸ್ವಾದು ಪ್ರಸನ್ನತೆ ಬಿಂಬಿಸಿರಲು ಅನಾಗರಿಕರೆನಿಸಿದ ಆ ಭಿಕ್ಷುಗಳು ಈ ಮಂಗಳ ಪ್ರವಚನದಿಂದ ಸಂತುಷ್ಟರಾದರು.

---

*. ಕ್ರಿಸ್ತಪೂರ್ವ೫೪೩ರಲ್ಲಿ; ಸಿಂಹಳ, ಬರ್ಮಾ ಮುಂತಾದ ಬೌದ್ಧ ದೇಶಗಳಲ್ಲಿ ವರ್ಷಗಣನೆ ಈ ಪ್ರಸಂಗದಿಂದ ; ಅಂದರೆ ಇಂದು, ಅವರ ಪ್ರಕಾರ, ಬುದ್ಧೋತ್ತರ ೨, ೪೯೭ ವರ್ಷಗಳು.

**. ಈ ವರ್ಷ ೧೯೫೩, ಈ ದಿನ ಮೇ ೨೭ನೇ ದಿನಾಂಕ ಬೀಳುತ್ತವೆ.

◈ ◈ ◈

ಬೌದ್ಧ ಸಂಗೀತಿಗಳು

ಜಗತ್ತಿನ ಅತಿಮಾನವರಲ್ಲಿ ಅಗ್ರಗಣ್ಯನೆಂದು ದಿಗಂತ ವಿಶ್ರುತ ಕೀರ್ತಿಯಾದ ಗೌತಮ ಬುದ್ಧ ತೀರಿಕೊಂಡು ಇಂದಿಗೆ ೨,೫೦೧ ವರ್ಷಗಳು ಸಂದವು. ಆದರೂ ಈ ಅದ್ಭುತ ವ್ಯಕ್ತಿ ಅಂದು ಪ್ರಕಾಶಿಸಿದ ಧರ್ಮ ಇಂದಿಗೂ ಓಜಸ್ವಿಯಾಗಿ ಉಳಿದಿದೆ. ತನ್ನ ಜೀವಿತ ಕಾಲದಲ್ಲಿ ಮಗಧ ಮಾತ್ರ ವಿಸ್ತೃತವಾಗಿದ್ದ ಧರ್ಮ ಮುಂದೆ ಇಡೀ ಭಾರತ ವರ್ಷದಲ್ಲಿ ಪಸರಿಸಿ ಸಿಂಹಳ, ಬರ್ಮ, ಸಯಾಂ, ಕಂಬೋಡಿಯ, ಚೀಣ, ಜಪಾನು, ಕೊರಿಯ, ನೇಪಾಳ, ಟಿಬೆಟ್ಟುಗಳಿಗೆ ಜಂಬೂದ್ವೀಪದ ಯಶಸ್ಸನ್ನು ಹರಡಿತು. ಪ್ರಾಪಂಚಿಕ ಸುಖದ ಶಯ್ಯೆಯಲ್ಲಿ ಪವಡಿಸಿ ಮತ್ತನಾಗಿರಲು ಬೇಸರಿಸಿದ ಕ್ಷತ್ರಿಯ ಯುವಕನೊಬ್ಬ ಪರಮಸುಖವಾದ ನಿರ್ವಾಣವನ್ನರಸಿ ಶ್ರಮ ಸಂತತಿಯನ್ನು ಅನುಭವಿಸಿ ಧೃತಿಯಿಂದ, ನಿಷ್ಠೆಯಿಂದ, ತಪಸ್ಸಿನಿಂದ ನಿಃಶ್ರೇಯಸವನ್ನು ಸಾಧಿಸಿದ ಕಥೆ ಇಂದು ವಿಶ್ವವಿದಿತವಾಗಿದೆ. ಅವನು ತೋರಿಸಿದ ಮಾರ್ಗವನ್ನು ಹಿಡಿದು ಅವನ ವಿನಯವನ್ನು ಅನುಸರಿಸಿ, ಅವನಂತೆ ಮುಕ್ತರಾದ ಮಂದಿ ಬಹಳ ಇದ್ದಾರೆ. ಇವರೆಲ್ಲರ ತಪಸ್ಸಿನ ಫಲವಾಗಿ, ಇವರ ಪುಣ್ಯದ ಪ್ರಭಾವವಾಗಿ ಮಾನವ ಕೋಟಿಯ ಸಂಸ್ಕೃತಿ ಹಿಗ್ಗಿದೆ. ಈ ಅಭ್ಯುದಯದ ಮೂಲ ಹೇತುವಾದ ಮಹಾ ಪುರುಷನಿಗೆ ನೆಂಟನೆನಿಸಿದ ಮಂಗಲ ದಿವಸ — ವೈಶಾಖ ಪೂರ್ಣಿಮೆ — ಸ್ಮರಣೀಯ, ಆದರಣೀಯ.

ತನ್ನ ಅನುಯಾಯಿಗಳ ವ್ಯವಹಾರದಲ್ಲಿ ದೇವಮನುಷ್ಯರಿಗೆ ಶಾಸ್ತ್ರನೆಂದು, ಲೋಕವಿದನುತ್ತರನೆಂದು, ಪುರುಷದಮ್ಯ ಸಾರಥಿಯೆಂದು, ಸರ್ವಜ್ಞನೆಂದು, ತಥಾಗತನೆಂದು ಅರ್ಹತನೆಂದು, ಧರ್ಮಸ್ವಾಮಿಯೆಂದು, ಸಮ್ಯಕ್ ಸಂಬುದ್ಧನೆಂದು ಪ್ರಸಿದ್ಧನಾದ ಗೌತಮವಂಶದ ಸಂನ್ಯಾಸಿ ವೈಶಾಖ ಪೂರ್ಣಿಮೆಯಂದು ಶಾಕ್ಯರ ಜನಪದದಲ್ಲಿ, ಕಪಿಲವಸ್ತುನಗರಿಯಲ್ಲಿ ಮಾಯಾ-ಶುದ್ಧೋದನರ ಮಗನಾಗಿ ಅವತರಿಸಿದ ; ಇಪ್ಪತ್ತೊಂಬತ್ತನೆಯ ವರ್ಷದ ಪ್ರಾಯದಲ್ಲಿ ಭೋಗಸಮೃದ್ಧಿಯ ಮಧ್ಯದಲ್ಲಿದ್ದೂ ಜಗತ್ತಿನ ದುಃಖಕ್ಕೆ ಬೇಸತ್ತು ಭವದ ಹಂಗನ್ನು ಇಂಗಿಸಲು ಮದ್ದನ್ನು ಅರಸುತ್ತ ಮನೆಯನ್ನು ಬಿಟ್ಟು ಹೊರಟು ಏಳುವರ್ಷ ಪರ್ಯಂತ ನಿರಂತರವಾದ ಅನ್ವೇಷಣೆ, ಚಿಂತನೆ, ತತ್ತ್ವವಿನಿಶ್ಚಯ, ವಿಚಾರ, ತಪಶ್ಚರ್ಯಗಳಲ್ಲಿ ಮಗ್ನನಾಗಿ ಕಡೆಗೆ ಗಯಾಶೀರ್ಷದ ಬೋಧಿವೃಕ್ಷದ ಬುಡದಲ್ಲಿ ಕೂತು ವೈಶಾಖ ಪೂರ್ಣಿಮೆಯ ಸರಿರಾತ್ರಿಯೊಂದರಲ್ಲಿ ಸಮ್ಯಕ್ ಸಂಬೋಧಿಯನ್ನು ಕಂಡು ಬುದ್ಧನಾದ ; ತನ್ನ ದರ್ಶನವನ್ನು ಬಹುಜನರಿಗೆ ಅವರ ಹಿತಕ್ಕಾಗಿ ಸುಖಕ್ಕಾಗಿ, ಆದಿಮಧ್ಯಾಂತ ಕಲ್ಯಾಣಗಳಿಗಾಗಿ ತಿಳಿಯ ಹೇಳುತ್ತ ಸಕಲ ಲೋಕಸಂಭಾವಿತನಾಗಿ ತನ್ನ ಎಂಬತ್ತನೆಯ ವಯಸ್ಸಿನಲ್ಲಿ ಕುಶೀನಗರದ ಉಪವನದಲ್ಲಿ ಎರಡು ಸಾಲಮರಗಳ ನಡುವೆ ಮಲಗಿ ವೈಶಾಖದ ಪೂರ್ಣಿಮೆಯಂದೇ ತೀರಿಕೊಂಡ. ಹೀಗೆ ಬುದ್ಧನ ಜನನ, ಬೋಧಿದರ್ಶನ, ಮಹಾಪರಿನಿರ್ವಾಣ ಈ ಮೂರು ವಿಶೇಷ ಘಟನೆಗಳೂ ವೈಶಾಖಮಾಸದ ಪೂರ್ಣಿಮೆಯಂದೇ ಸಂದುದರಿಂದ ಈ ದಿನ ಜಗತ್ತಿನ ಬೌದ್ಧರಿಗೆಲ್ಲ ಮಂಗಲ ದಿವಸ.

ಭಗವಂತನಾದ ಬುದ್ಧ ಬಿದ್ದುದನ್ನು ಮೇಲೆತ್ತಿ, ಹುದುಗಿದ್ದುದನ್ನು ತೆರೆದು, ದಾರಿತಪ್ಪಿದವನಿಗೆ ದಾರಿ ತೋರಿಸಿ, ಕತ್ತಲೆಯಲ್ಲಿ ದೀಪ ಇಟ್ಟು ಕಣ್ಣಿದ್ದವನು ನೋಡುವಂತೆ ಮಾಡಿ ಅನೇಕ ಪರ್ಯಾಯಗಳಿಂದ

ಧರ್ಮವನ್ನು ಪ್ರಕಾಶಪಡಿಸಿದ. ಜನರನ್ನು ಋಜುಪಥದಲ್ಲಿ ನಡೆಯಲು ಪ್ರವರ್ತಿಸಿ ಧರ್ಮದೇಶನೆಗೆಂದು ಭಿಕ್ಷು ಸಂಘವನ್ನು ಕಟ್ಟಿದ. ಲೋಕದ ಬೆಳಕಾಗಿದ್ದ ಬುದ್ಧ ಅಂತರ್ಹಿತನಾದ ಮೂರು ತಿಂಗಳನಂತರ ಅವನ ಬಳಿ ಪ್ರವ್ರಜಿತರಾಗಿ ಅರ್ಹತರಾಗಿದ್ದ ೫೦೦ ಮಂದಿ ಭಿಕ್ಷುಗಳು ರಾಜಗೃಹದ 'ಸತ್ತಪನ್ನಿ' ಗುಹೆಯಲ್ಲಿ ಸಭೆಸೇರಿ ಬುದ್ಧವಚನವನ್ನು ನಿರ್ದಿಷ್ಟವಾಗಿ ಸಂಗ್ರಹಿಸಿದರು. ಉಪಾಲಿಯೆಂಬ ಹಿರಿಯ ಭಿಕ್ಷು ಇಂದು ವಿನಯಪಿಟಿಕ ವೆಂದು ಪ್ರಸಿದ್ಧವಾಗಿರುವ ಬುದ್ಧವಚನವನ್ನು ತಾನು ಭಗವಂತನ ಬಾಯಿಂದಲೇ ಕೇಳಿದ್ದಂತೆ ಸಭೆಯ ಮುಂದೆ ಪಾಠಮಾಡಿದ : ಉಳಿದ ಭಿಕ್ಷುಗಳೂ ತಂತಮ್ಮ ಅನುಭವವನ್ನು ನೆನೆದು ಅನುಮೋದಿಸಿದರು. ಬುದ್ಧನ ಪ್ರೀತಿಯ ಅಂತೇವಾಸಿಯಾದ ಆನಂದ ಸುತ್ತಪಿಟಕ ಹಾಗೂ ಅಭಿಧಮ್ಮ ಪಿಟಿಕಗಳನ್ನು ಸಂಗ್ರಹಿಸಿದ. ಆ ಸಭೆ— ಮೊದಲ ಸಂಗೀತಿ — ಏಳು ತಿಂಗಳುಗಳ ಪರ್ಯಂತ ನಡೆಯಿತು. ಸಭೆಗೆ ಅಧ್ಯಕ್ಷಪೀಠದಲ್ಲಿದ್ದವನು ವಯೋವೃದ್ಧನಾದ, ಜ್ಞಾನಜ್ಯೇಷ್ಠನಾದ, ಅರ್ಹತನಾದ, ಪ್ರತಿಬುದ್ಧನೆಂದು ಖ್ಯಾತ ಕೀರ್ತಿಯಾದ ಮಹಾಕಶ್ಯಪ. ಈ ಸಂಗೀತಿಗೆ ದಾತೃ ನಾಡಿಗೆ ಒಡೆಯನಾದ ಮಗಧೇಶ್ವರ ಅಜಾತಶತ್ರು.

ಬುದ್ಧನ ಮಹಾ ಪರಿನಿರ್ವಾಣವಾದ ನೂರು ವರ್ಷಗಳನಂತರ (ಅಂದರೆ ಕ್ರಿಸ್ತಾಬ್ಧ ೪೪೮ರಲ್ಲಿ) ವೈಶಾಲಿ ಪ್ರಾಂತ್ಯದ ವೃಜೀಪುತ್ರಕ ಭಿಕ್ಷುಗಳು ಭಗವಂತನ ತತ್ವಗಳೆಂದು ಹತ್ತು ನವ್ಯನಿಯಮಗಳನ್ನು ಬೋಧಿಸುತ್ತಿದ್ದರು ; ಇವೆಲ್ಲ ಮೊದಲ ಸಂಗೀತಿಯಲ್ಲಿ ನಿರ್ದಿಷ್ಟವಾದ ಸಿದ್ಧಾಂತಕ್ಕೆ ವಿರುದ್ಧವಾಗಿದ್ದುವು. ಈ ಪ್ರಚಾರವನ್ನು ಯಶನೆಂಬ ಅರ್ಹತ ಕೇಳಿ ಉಳಿದ ಹಿರಿಯ ಅರ್ಹತರನ್ನೆಲ್ಲ ಆಹ್ವಾನಿಸಿ ವೈಶಾಲಿಯಲ್ಲೂ ಎರಡನೆಯ ಮಹಾ ಸಂಗೀತಿಯನ್ನು ಸೇರಿಸಿದ. ಈ ಸಭೆಯಲ್ಲಿ ಏಳು ನೂರು ಮಂದಿ ಅರ್ಹತರು ಸೇರಿದ್ದರು ; ೧೨೦ ವರ್ಷ ವಯಸ್ಸಿನ ಸರ್ವಕಾಮಿಯೆಂಬ

ಭಿಕ್ಷು ಈ ಸಭೆಯಲ್ಲಿದ್ದ. ಸಭಾಧ್ಯಕ್ಷ ರೇವತನೆಂಬ ಮಹಾಧೀಶ. ಈ ಸಭೆ ಎಂಟು ತಿಂಗಳುಗಳ ಕಾಲ ನಡೆದು ಕಡೆಯಲ್ಲಿ ವೃಜೀಪುತ್ರಕ ಭಿಕ್ಷುಗಳು ಮಹಾ ಸಂಘದಿಂದ ಒಡೆದು ಬೇರೆಯಾಗಿ 'ಮಹಾ ಸಂಗೀತಿಪಂಥ' ವೆಂಬ ಹೊಸ ಶಾಖೆಯನ್ನು ಆರಂಭಿಸಿದರು. ಈ ಸಂಗೀತಿಗೆ ಕಾಲಾಶೋಕನೆಂಬ ರಾಜ ದಾತ್ರ.

ಮೊದಲನೆಯ ಸಂಗೀತಿಯಲ್ಲಿ ಉಂಟಾದ ಬುದ್ಧಧರ್ಮ 'ಸ್ಥವಿರ ವಾದ' ಎಂದು. 'ಸ್ಥವಿರ' ಎಂದರೆ 'ಹಿರಿಯ' ಎಂದರ್ಥ. ಇದು ಪಾಳಿಯಲ್ಲಿ 'ಥೇರ' ಎಂದಾಗುತ್ತದೆ. ಇದೇ ಬುದ್ಧ ಧರ್ಮದ ಮೊದಲ ಪಾಠ ; ಈ ಪಾಠವೇ ಇಂದು ಬರ್ಮಾ, ಸಿಂಹಳ, ಸಯ್ಯಾಂ, ಕಂಬೋಡಿಯ ಮುಂತಾದ ದೇಶಗಳಲ್ಲಿ ಪ್ರಚುರವಾಗಿರುವುದು. ಎರಡನೆಯ ಸಂಗೀತಿ ಮುಗಿಯುವ ವೇಳೆಗೆ ಬುದ್ಧಶಾಸನದ ಪಾಠದಲ್ಲಿ ಒಡಕುಬಂದು ಎರಡು ವಾದಗಳು ಎದ್ದಿದ್ದವು. ಹೀಗೆ ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿ ಹದಿನೆಂಟು ಪಾದಗಳು ಹಬ್ಬಿದ್ದು ಸರ್ವಾಸ್ತಿವಾದವೆಂಬುದು ಪ್ರಮುಖ ವಾಗಿತ್ತು. ಈ ಸ್ಥಿತಿಯನ್ನು ಸರಿಪಡಿಸಲೆಂದು ಬುದ್ಧನ ನಿರ್ವಾಣವಾದ ೨೩೫ನೆಯ ವರ್ಷದಲ್ಲಿ ಪಾಟಲಿಪುತ್ರದಲ್ಲಿ ಮೂರನೆಯ ಮಹಾ ಸಂಗೀತಿ ನೆರೆಯಿತು. ಸಂಗೀತಿಯಲ್ಲಿ ಒಂದು ಸಾವಿರ ಭಿಕ್ಷುಗಳಿದ್ದರು ; ಮೌದ್ಗಲ್ಯ ಪುತ್ರ ಶಿಷ್ಯನೆಂಬುವನು ಅಧ್ಯಕ್ಷ. ಅವರೆಗೆ ಸಂಪ್ರದಾಯದಲ್ಲಿದ್ದ ೫೦೪ ಗ್ರಂಥಗಳಿಗೆ ಮತ್ತೆ ೫೦೦ ಗ್ರಂಥಗಳನ್ನು ಸೇರಿಸಲು ಸಂಗೀತಿ ನಿರ್ಧರಿಸಿತು. ಇಂದು ತ್ರಿಪಿಟಕದಲ್ಲಿ ಸೇರಿರುವ 'ಕಥಾವಸ್ತು' ಈ ಸಮಯದಲ್ಲಿ ಉಂಟಾದದ್ದು.

ಕಾಲಕ್ರಮದಲ್ಲಿ ಜನರ ನಡುವೆ ಬುದ್ಧ ವಚನದ ಪ್ರಭೆ ಮಂಕಾಗುತ್ತ ಬಂದುದರಿಂದ, ಜನ ಸಾಮಾನ್ಯರಲ್ಲಿ ಶೀಲ ಕಳೆಗುಂದಿ ಅನಾಚಾರ ಬೆಳೆಯುತ್ತ ಬಂದುದರಿಂದ, ಬುದ್ಧಾಬ್ಧ ೫೧೪-೫೩೦ರಲ್ಲಿ ಬೌದ್ಧ

ಭಿಕ್ಷುಗಳು ನಾಲ್ಕನೆಯ ಮಹಾ ಸಂಗೀತಿಯನು ನೆರವೇರಿಸಿದರು. ಈ ವೇಳೆಗಾಗಲೇ ಬುದ್ಧವಚನ ಮಧು ಸಿಂಹಳ ದ್ವೀಪವನ್ನೆಲ್ಲ ಆವರಿಸಿತ್ತು; ನಾಲ್ಕನೆಯ ಸಂಗೀತಿ ನೆರೆದದ್ದು ಸಿಂಹಳದಲ್ಲಿ ಮಲಯವೆಂಬ ಹಳ್ಳಿಯ ಬಳಿ ಇದ್ದ ಅಶೋಕ ಗುಹೆಯಲ್ಲಿ, ರಕ್ಷಿಕ ಮಹಾಥೇರನೆಂಬ ಹಿರಿಯ ಅಧ್ಯಕ್ಷನಾಗಿದ್ದ. ಈ ಸಭೆಯಲ್ಲಿ ೫೦೦ ಜನ ಭಿಕ್ಷುಗಳಿದ್ದರು. ಸಿಂಹಳದ ಚಕ್ರವರ್ತಿ ವಟ್ಟಗಾಮನಿ ಅಭಯ ಈ ಸಂಗೀತಿಗೆ ದಾತೃ. ಈ ಸಂಗೀತಿಯ ವೈಶಿಷ್ಟ್ಯವೆಂದರೆ— ಮೊಟ್ಟ ಮೊದಲನೆಯ ಬಾರಿಗೆ ಬುದ್ಧವಚನಗಳನ್ನು ತಾಮ್ರ ಫಲಕಗಳ ಮೇಲೆ ಬರೆಸಿದುದು. ಇಲ್ಲಿಯವರೆಗೆ ಬುದ್ಧವಚನ ನುಡಿಯಲ್ಲಿ ಮಾತ್ರ ಇತ್ತು; ಶಿಷ್ಯ ಗುರುವಿನಿಂದ ಕೇಳಿ ಅದನ್ನು ಕಂಠಪಾಠ ಮಾಡಿ, ಮನನ ಮಾಡಿ, ಅಭ್ಯಸಿಸುತ್ತಿದ್ದ. ಆದರೆ ಈಗ ಬುದ್ಧವಚನ ಲಿಪಿಯಲ್ಲಿ ಬಂದುದರಿಂದ ಬುದ್ಧ ಧರ್ಮಕ್ಕೆ ಒಂದು ನಿರ್ದಿಷ್ಟರೂಪ ದೊರೆತಂತಾಯಿತು. ಹೀಗೆ ಈ ಸಂಗೀತಿಯಲ್ಲಿ ಲಿಖಿತವಾಗಿ ಬುದ್ಧ ವಚನವನ್ನು ಸೇರಿದ್ದ ಭಿಕ್ಷುಗಳು ೧೦೦ ಮಂದಿ ಪರೀಕ್ಷಿಸಿದರು.

ತಾಮ್ರಫಲಕಗಳು ಅಷ್ಟು ಚಿರಸ್ಥಾಯಿಯಲ್ಲ; ಭೌತಿಕ ವಾತಾವರಣದ ಪರಿಣಾಮವಾಗಿ ಅಕ್ಷರಗಳು ಮಾಸಿಹೋಗಿ ಅರ್ಥದಲ್ಲಿ ಸ್ಖಾಲಿತ್ಯ ಉಂಟಾಗು ವುದು ಸಹಜ. ಹೀಗಾಗಿ ಲಿಖಿತವಾದ ಬುದ್ಧವಚನದಲ್ಲಿಯೂ ಪಾಠಾಂತರ ಗಳು ತಲೆದೋರಲಾರಂಭಿಸಿದುವು. ಈ ದೋಷ ನಿವಾರಣೆಗೆಂದು ೧೮೭೧ರಲ್ಲಿ ಮಹಾ ಸಂಗೀತಿ ಸೇರಿತು. ಈ ಕಾಲಕ್ಕೆ ಬುದ್ಧ ಧರ್ಮ ಸಿಂಹಳದಿಂದ ಬರ್ಮಾ ದೇಶಕ್ಕೂ ಪಸರಿಸಿತ್ತು. ಐದನೆಯ ಸಂಗೀತಿ ಬರ್ಮಾ ದೇಶದ ಮ್ಯಾಂಡಲೆಯಲ್ಲಿ ಅರಮನೆಯಲ್ಲೇ ನೆರೆಯಿತು. ಬರ್ಮಾದ ರಾಜ ಮಿಂಡಾನ್ ಬೌದ್ಧಶ್ರದ್ಧಾಳುಗಳಲ್ಲಿ ಅತಿಶ್ರೇಷ್ಠ ಈ ಸಭೆಗೆ ಜಗರಾಭಿವಂಶ ಮಹಾಥೇರನೆಂಬುವನು ಅಧ್ಯಕ್ಷ ; ಉಳಿದ ೨೪೦೦ ಭಿಕ್ಷುಗಳಲ್ಲಿ ನರೇಂದ್ರಾಭಿಧ್ವಜ, ಸುಮಂಗಲಸ್ವಾಮಿ ಎಂಬುವರು ಪ್ರಮುಖರು.

ಸಭೆಯಲ್ಲಿ ಭಿಕ್ಷುಗಳಲ್ಲದೆ ಗೃಹಸ್ಥರಾದ ಉಪಾಸಕರೂ ಇದ್ದರು. ಸಭೆ ಐದು ತಿಂಗಳುಗಳು ಅವಿಚ್ಛಿನ್ನವಾಗಿ ನಡೆದು ಬುದ್ಧ ವಚನವನ್ನು ಕ್ರೋಢೀಕರಿಸಿತು. ಹೀಗೆ ಸಮ್ಮತವಾದ ವಚನ ಸಮುದಾಯವನ್ನು ೭೨೯ ಅಮೃತ ಶಿಲಾಫಲಕ ಗಳ ಮೇಲೆ ಕೆತ್ತಿಸಲಾಯಿತು ; ೧೧೧ ಶಿಲಾ ಫಲಕಗಳ ಮೇಲೆ ವಿನಯ ಪಿಟಕವನ್ನೂ, ೪೧೦ ಶಿಲಾಫಲಕಗಳ ಮೇಲೆ ಸೂತ್ರ ಪಿಟಕವನ್ನೂ, ೨೦೮ ಶಿಲಾಫಲಕಗಳ ಮೇಲೆ ಅಭಿಧರ್ಮ ಪಿಟಕವನ್ನೂ ಕೆತ್ತಿಸಿದರು.

ಬರ್ಮದಲ್ಲಿ ಬುದ್ಧ ಧರ್ಮ ದಿನಂಪ್ರತಿ ಬೇರೂರುತ್ತಿದೆ ; ಜನ ಸಾಮಾನ್ಯರಿಗೆ ಚೆನ್ನಾಗಿ ಮನದಟ್ಟಾಗಿ, ನಾಡಿನ ನೇತೃಗಳಿಂದ ಉದ್ದೀಪ್ತ ವಾಗಿ ಇಂದು ಅದು ದೇಶಧರ್ಮವಾಗಿ ಪರಿಣಮಿಸಿದೆ. ರಾಷ್ಟ್ರದ ಮಹಾಧಿ ಕಾರಿಗಳೂ, ರಾಷ್ಟ್ರಪತಿ ಉ ಬಾ, ಪ್ರಧಾನಿ ಥಾಕಿನ್ ನು ಮುಂತಾದವರೆಲ್ಲ ನಿಷ್ಠಾವಂತರಾದ ಉಪಾಸಕರು ; ಇವರಿಗೆ ಬುದ್ಧ ಧರ್ಮವೆಂದರೆ ಅತೀವವಾದ ಭಕ್ತಿ. ಆ ಸರಕಾರದವರು ಹಿಂದೆಯೇ ನಾಡಿನ ಶಾಸನ ಸಭೆಯಲ್ಲಿ ಒಂದು ಮಸೂದೆಯನ್ನು ತಂದು 'ಬುದ್ಧ ಶಾಸನ ಸಮಿತಿ' ಯೊಂದನ್ನು ನಿಯಮಿಸಿದರು. ಮಸೂದೆಯ ಒಂದು ಖಂಡ ಹೀಗಿದೆ —

"That not being satisfied with the measures usually undertaken hitherto by the peoples and governments of the World for the solution of the problems confronting mankind by promoting the material well-being of man in his present existence in the form of ameliorating his living conditions and standard of life and also by being fully aware of the fact that such measures would result only in a partial solution of the problems, this parliament declares its firm belief that it is

necessary to devise and undertake these problems and help man to overcome Greed (Lobha), Hatred (Dwesa) and Delusion (Moha) which are at the root of all the violence, destruction and conflagration consuming the world."

ಈ ಸಮಿತಿಯ ನೇತೃತ್ವದಲ್ಲಿ ೧೯೫೩ರ ಫೆಬ್ರುವರಿ ೧೧ ರಂದು ಬರ್ಮದ ಹಿರಿಯ ಭಿಕ್ಷುಗಳ (ಓವಾದ ಚರಿಯ ನಾಯಕರ) ಸಭೆಯೊಂದು ಸೇರಿ ಬುದ್ಧ ವಚನವನ್ನು ಬರೆದಿಡುವಲ್ಲಿ ಲಿಪಿಕಾರರು ಅನೇಕ ತಪ್ಪು ಮಾಡಿ ಪಾಠದಲ್ಲಿ ಸ್ಖಾಲಿತ್ಯಗಳು ಬಂದಿರುವುದರಿಂದಲೂ, ದೀರ್ಘಕಾಲವಾದುದರಿಂದ ಮತ್ತೊಮ್ಮೆ ಹಿರಿಯರೆಲ್ಲ ಸೇರಿ ಗ್ರಂಥಗಳನ್ನು ಪರಿಶೀಲಿಸಲೂ, ಹೀಗೆ ನಿರ್ದುಷ್ಟವೆಂದು ನಿರ್ದಿಷ್ಟವಾದ ಬುದ್ಧ ವಚನವನ್ನು ಪುಸ್ತಕಗಳಲ್ಲಿ ಅಚ್ಚು ಹಾಕಿಸಿ ವಿವಿಧ ದೇಶಗಳಿಗೆ ಬುದ್ಧ ಧರ್ಮದ ಪ್ರಭೆಯನ್ನು ಪ್ರಸರಿಸಲೂ, ಪ್ರಪಂಚದಾದ್ಯಂತ 'ಥೇರವಾದ' ಬುದ್ಧ ಶಾಸನವನ್ನು ಹರಡಲೂ ಆರನೆಯ ಮಹಾಸಂಗೀತಿಯನ್ನು ಕರೆಯಲು ನಿರ್ಧರಿಸಿದರು. ಈ ನಿರ್ಧಾರಕ್ಕೆ ಬರ್ಮಾದ ಸರಕಾರ ತಮ್ಮ ಪೂರ್ಣ ಸಮ್ಮತಿಯನ್ನು ಕೊಟ್ಟು ಸಂಗೀತಿಗೆ ಸರ್ವವಿಧದಲ್ಲೂ ಸಹಕಾರ ಮಾಡಲು ನಿಶ್ಚಯಿಸಿದರು. ರಾಜಧಾನಿಯಾದ ರಂಗೂನಿಗೆ ಎರಡು ಮೈಲಿ ದೂರದಲ್ಲಿ 'ಕಬಾ ಅಯೆ' ಮಂದಿರದ ಬಳಿಯಿರುವ ಶ್ರೀಮಂಗಳ ಪರ್ವತದಲ್ಲಿ 'ಮಹಾ ಪಾಷಾಣ ಗುಹೆ'ಯೆಂಬ ಕೃತಕ ಗುಹಾಮಂದಿರವನ್ನು ಸರಕಾರದವರು ಕಟ್ಟಿಸಿದರು ; ಈ ಮಂದಿರವನ್ನು ಕಟ್ಟಲು ತಗುಲಿದ ವೆಚ್ಚ ೯೧ ಲಕ್ಷ ರೂಪಾಯಿಗಳು. ಹಿಡಿದ ಕಾಲ ಹದಿನಾಲ್ಕು ತಿಂಗಳುಗಳು. ಸಭಾಭವನ ಒಟ್ಟಿಗೆ ೧೦,೦೦೦ ಜನರು ಕೂಡುವಷ್ಟು ವಿಶಾಲವಾದದ್ದು. ೧೯೫೪ನೆಯ ಮೇ ತಿಂಗಳು ೧೭ನೆಯ ದಿನ (ವೈಶಾಖ ಪೂರ್ಣಿಮೆ; ಬುದ್ಧನ ನಿರ್ವಾಣದ ನಂತರ ೨೫೦೦ ವರ್ಷಗಳು). ಆರನೆಯ ಮಹಾ

ಸಂಗೀತಿ ಈ ಗುಹೆಯಲ್ಲಿ ಸೇರಿತು. ಇದಕ್ಕೆ ಪಾಳೀಭಾಷೆಯಲ್ಲಿ 'ಚಟ್ಠ ಸಂಗಾಯನಾ' ಎನ್ನುತ್ತಾರೆ. ಇದು ಎರಡು ವರ್ಷಗಳ ಪರ್ಯಂತ ನಡೆದು ೧೯೫೬ನೆಯ ಮೇ ತಿಂಗಳು ಮುಕ್ತಾಯವಾಗುತ್ತದೆ.೧೯೫೪ನೆಯ ಮೇ ೧೭ ಬೌದ್ಧರ ಇತಿಹಾಸದ ಸುವರ್ಣದಿನ. ಅಂದು ಮಹಾ ಪಾಷಾಣ ಗುಹೆಯ ದಿವ್ಯ ಸಭಾಭವನದಲ್ಲಿ ದೇಶದೇಶಗಳಿಂದ ಬೌದ್ಧ ಶ್ರದ್ಧಾಳುಗಳು ನೆರೆದಿದ್ದರು ; ಸಭಾಮಂದಿರದಲ್ಲೇ ೬,೫೦೦ ಮಂದಿ ಕುಳಿತಿದ್ದರು, ಅವರಲ್ಲಿ ೨,೫೦೦ ಮಂದಿ ಭಿಕ್ಷುಗಳು. ಸಂಗೀತಿಯ ಮಹಾನಾಯಕ ಬರ್ಮ ರಾಷ್ಟ್ರಪತಿ ಉ ಬಾ, ಪ್ರಧಾನಿ ಥಾಕಿನ್ ನು, ಕೇಂದ್ರ ಮಂತ್ರಿಗಳು ಶ್ರೇಷ್ಠ ನ್ಯಾಯಮೂರ್ತಿ ಮುಂತಾದವರೆಲ್ಲ ಉಪಾಸಕರ ಗುಂಪಿನಲ್ಲಿ ಕುಳಿತಿದ್ದರು. ಸಭೆಯ ಉದ್ದೇಶವನ್ನು ಭದಂತ ನಾಗವಂಶನೆಂಬ ಪ್ರಗಲ್ಭಭಿಕ್ಷು ಪಾಳಿ ಯಲ್ಲೂ ಬರ್ಮಿ ಭಾಷೆಯಲ್ಲೂ ವಿವರಿಸಿದರು ; ಅವರೇ ಕಾರ್ಯ ನಿರ್ವಾಹಕರು. ನಂತರ ತೊಂಭತ್ತು ವರ್ಷ ವಯಸ್ಸಿನ ಭದಂತ ವರ್ಣಮಹಾಥೇರ ಎಂಬ ವೃದ್ಧ ಭಿಕ್ಷು ಅಧ್ಯಕ್ಷಸ್ಥಾನಕ್ಕೆ 'ಅಭಿಧ್ವಜ ಮಹಾರಾಷ್ಟ್ರಗುರು,' 'ಅಗ್ರಮಹಾ ಪಂಡಿತ' ರೇವತ ಮಹಾಥೇರನೆಂಬ ಎಂಭತ್ತು ವರ್ಷ ವಯಸ್ಸಿನ ಪ್ರಖ್ಯಾತ ಭಿಕ್ಷುವಿನ ಹೆಸರನ್ನು ಸೂಚಿಸಿದರು. ಸಂಪ್ರದಾಯದಂತೆ ನೆರೆದ ಭಿಕ್ಷುಗಳು ಮೌನವಾಗಿದ್ದು ಸೂಚನೆಯನ್ನು ಅನುಮೋದಿಸಲು, ರೇವತರು ಸಭಾಪತಿಗಳಾಗಿ 'ಸ್ಥವಿರಾಸನ'ದಲ್ಲಿ ಕೂತರು. ಸಭೆಯ ಕಾರ್ಯಕಲಾಪಗಳನ್ನು ನಡೆಸಲು 'ಭಾರನಿಟ್ಠಾರಕ ಸಮಿತಿ'ಯೊಂದು ನಿಯಮಿತವಾಯಿತು ; ಇದರಲ್ಲಿ ರೇವತರಲ್ಲದೆ ಎಂಟು 'ಅಗ್ರಮಹಾ ಪಂಡಿತ'ರು ಇದ್ದಾರೆ ; ದಿಗ್ದಂತಿಯೆಂದು ಶ್ರುತಕೀರ್ತಿಯಾದ ವಿದ್ಯಾಲಂಕಾರ ಕಾರ್ಯದರ್ಶಿ. ಇವರಲ್ಲದೆ 'ಓವಾದ ಚರಿಯ ನಾಯಕ' ರೆನಿಸಿಕೊಳ್ಳುವ ಇಂದ್ರಿಯಾಭಿವಂಶ, ಉತ್ತಮ, ಜ್ಞಾನೋತ್ತರ, ನಂದಿಸೇನ ಮುಂತಾದ ವಿಖ್ಯಾತರಾದ ಏಳು ಭಿಕ್ಷುಗಳಿದ್ದಾರೆ. ಇದಲ್ಲದೆ ೫೦೦ ಬರ್ಮಿ ಭಿಕ್ಷುಗಳು ಹತ್ತು ತಂಡಗಳಾಗಿ, ಒಂದೊಂದು, ತಂಡವೂ

ತ್ರಿಪಿಟಕದ ಒಂದೊಂದು ಖಂಡವನ್ನು ಪಾರಾಯಣ, ಪರಿಶೀಲನ ಮಾಡುವ ಕಾರ್ಯದಲ್ಲಿ ಉದ್ಯುಕ್ತರಾಗಿದ್ದಾರೆ. ಸಂಗೀತಿಯಲ್ಲಿ ಸಂಪ್ರದಾಯಾನುಸಾರ ಪ್ರಶ್ನೆಗಳನ್ನು ಹಾಕುವವರೊಬ್ಬರು (ಪುಚ್ಛಕ), ಆ ಪ್ರಶ್ನೆಗಳಿಗೆ ಉತ್ತರಿಸುವವರೊಬ್ಬರು (ವಿಸ್ಸಜ್ಜಕ) ಇರುತ್ತಾರೆ. ಇಬ್ಬರೂ ಅಶೇಷ ತ್ರಿಪಿಟಿಕವನ್ನೂ ದೀರ್ಘಕಾಲ ಅಧ್ಯಯನ ಮಾಡಿ ಪಂಡಿತೋತ್ತಮ ರಾಗಿರಬೇಕು. ಮೊದಲನೆಯ ಸಂಗೀತಿಯಲ್ಲಿ ಮಹಾಕಾಶ್ಯಪ ಪುಚ್ಛಕ ; ಆನಂದ, ಉಪಾಲಿ ಇಬ್ಬರೂ ವಿಸ್ಸಜ್ಜಕರು. ಈಗ ನಡೆಯುತ್ತಿರುವ ಸಂಗೀತಿಯಲ್ಲಿ ಭದಂತ ಜವನ ಎಂಬ ಭಿಕ್ಷು ಪುಚ್ಛಕ. ವಿಸಜ್ಜಕ ಸ್ಥಾನದ 'ತ್ರಿಪಿಟಕಧರ'— 'ಧರ್ಮ ಭಾಂಡಾಗಾರಿಕ' 'ಮಹಾಪಂಡಿತ' ಎಂದು ಮುಂತಾಗಿ ಹೆಸರಾಂತ ವಿಚಿತ್ರಸಾರ ಎಂಬ ಭಿಕ್ಷು. ಈ ಭಿಕ್ಷುವಿನ ಸ್ಮೃತಿ ಅದ್ಭುತವಾದದ್ದು. ಇಡೀ ಬೈಬಲ್ಲಿಗೆ ಹನ್ನೊಂದು ಬಾರಿಯಷ್ಟು ದೀರ್ಘವಾದ ಪಾಳಿ ತ್ರಿಪಿಟಿಕ ಗ್ರಂಥ ಸಮುದಾಯವನ್ನು ಈ ಭಿಕ್ಷು ಮೊದಲಿಂದ ಕೊನೆಯವರೆಗೆ ಚ ತು ತಪ್ಪದೆ, ಗ್ರಂಥ ಸಹಾಯವಿಲ್ಲದೆ ಹೇಳಬಲ್ಲರು. ಅಷ್ಟೇ ಅಲ್ಲ, ಅದರಲ್ಲಿ ಯಾವ ಭಾಗವನ್ನು ಬೇಕೆಂದರೂ ಉಳಿದ ಯಾವ ಭಾಗದೊಂದಿಗಾದರೂ ಸಮನ್ವಯ ಮಾಡುವ ಪ್ರತಿಭೆ ಅವರಿಗಿದೆ ; ಪ್ರತಿ ಪದದ ನಿರ್ದಿಷ್ಟ ಅರ್ಥ, ಇಡೀ ಗ್ರಂಥದ ತಾತ್ಪರ್ಯ, ಇಂಗಿತ ಇವುಗಳು ಅವರಿಗೆ ಕರತಲಾಮಲಕ. ಸಭಾಪತಿಯಾದ ರೇವತರು ವಯೋವೃದ್ಧರು, ಜ್ಞಾನದಲ್ಲಿ ಅಸದೃಶರು, ದೀರ್ಘಕಾಲ ತಪಶ್ಚರ್ಯೆ ಯಲ್ಲಿ ನಿರತರಾಗಿ ಧ್ಯಾನಯೋಗದಲ್ಲಿ ಸಿದ್ಧರು ; ರಾಷ್ಟ್ರದಲ್ಲೇ ಪರಮ ಪೂಜ್ಯರಾದ ವ್ಯಕ್ತಿ, ಸಭೆಯನ್ನು ಅನ್ಯಾದೃಶವಾಗಿ ತಿಂಗಳುಗಳ ಕಾಲ ನಡೆಸಿ ಮೊನ್ನೆ ತೀರಿಕೊಂಡರು. ಸಂಗೀತಿ ಮುಗಿಯುವವರೆಗೂ ಇವರ ಕಳೇಬರವನ್ನು ಕೆಡದಂತೆ ಇರಿಸಿಕೊಂಡು ೧೯೫೬ರಲ್ಲಿ ಸಮಾಧಿ ಮಾಡುವರು. ನಂತರ ಇವರ ಶಿಲಾಮೂರ್ತಿಯೊಂದನ್ನು ಮಾಡಿಸಿ

ಮಹಾಪಾಷಾಣ ಗುಹೆಯಲ್ಲಿ ಇಡುವ ಸನ್ನಾಹ ಬರ್ಮಾ ಸರಕಾರ ಮಾಡುತ್ತಿದೆ.

ಈ ಸಂಗೀತಿಯಲ್ಲಿ ಬರ್ಮ ರಾಷ್ಟ್ರ ಮಾತ್ರವಲ್ಲದೆ ಉಳಿದ ಬೌದ್ಧ ರಾಷ್ಟ್ರಗಳೂ ಸಹಕರಿಸಿವೆ. ಸಂಗೀತಿಯ ಪರಿಶೀಲನಾ ಕಾರ್ಯಕ್ಕೆ ಸಿಂಹಳ ಲಿಪಿಯ ತ್ರಿಪಿಟಕ, ಥಾಯ್‌ಲ್ಯಾಂಡ್‌ನ ಸಯ್ಯಾಮಿಸ್ ಭಾಷೆಯ ಸೊಸೈಟಿ'ಯವರು ಆಂಗ್ಲ ಲಿಪಿಯಲ್ಲಿ ಪ್ರಕಟಸಿರುವ ತ್ರಿಪಿಟಕ ಗ್ರಂಥಗಳು, ಕಳೆದ ಸಂಗೀತಿಯಲ್ಲಿ ಮೃತ ಶಿಲಾಫಲಕಗಳ ಮೇಲೆ ಕೆತ್ತಿಸಿರುವ ಬರ್ಮಿ ಭಾಷೆಯ ತ್ರಿಪಿಟಿಕ - ಈ ಎಲ್ಲವನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಸಂಗೀತಿಯಲ್ಲಿ ಸರ್ವಮಾನ್ಯವಾದ, ಸುಸಂಗತ ವಾದ, ಸಂಪ್ರದಾಯ ಶುದ್ಧವಾದ ತ್ರಿಪಿಟಕವನ್ನು ಪರಿಷ್ಕರಿಸಿ ಪ್ರಪಂಚದ ನಾನಾ ಭಾಷೆಗಳಿಗೆ ಪರಿವರ್ತಿಸಿ ಬುದ್ಧ ಶಾಸನವನ್ನು ಪ್ರಕಟಿಸುವರು.

ಚಿರಂ ತಿಷ್ಠತು ಸದ್ಧರ್ಮಃ.

◈ ◈ ◈

ಸಿಂಗಾಲ ಸೂತ್ರ

ಹಿಂದೆ ರಾಜಗೃಹದಲ್ಲಿ ಮಹಾಧನಾಢ್ಯನಾದ ಒಬ್ಬ ಸೆಟ್ಟಿ ಇದ್ದ ; ಅವನ ಆಸ್ತಿ ನಾಲ್ಕು ಕೋಟಿ ಮೀರಿತ್ತು. ಹೀಗಿದ್ದರೂ ಅವನು ಭಗವಂತನಾದ ಬುದ್ಧನಲ್ಲಿ ವಿಶೇಷವಾದ ಭಕ್ತಿಯನ್ನಿಟ್ಟು ಅವನ ಉಪದೇಶಗಳನ್ನು ಅನುಸರಿಸುತ್ತಿದ್ದ.

ಅವನ ಹೆಂಡತಿಯೂ ಹಗೆಯೇ ಸದಾಚಾರನಿಷ್ಠಳಾಗಿ, ಸಾಧು ಜನಗಳ ಪೂಜೆಯಲ್ಲಿರುತ್ತಿದ್ದಳು. ಆದರೆ ಅವರ ಮಗ ಸಿಂಗಾಲನೆಂಬುವನು ಮಾತ್ರ ಬರೀ ವಿಷಯ ಸುಖಗಳಲ್ಲೇ ನಿರತನಾಗಿರುತ್ತಿದ್ದ. ತಂದೆ — 'ಅಪ್ಪಾ ಸಿಂಗಾಲ, ಗುರುವಿನ ಬಳಿ ಹೋಗಿ ನಮಸ್ಕಾರ ಮಾಡು, ಧರ್ಮ ಸೇನಾಪತಿಯಾದ ಶಾರಿಪುತ್ರನ ಬಳಿ ಹೋಗು, ಮಹಾಮೌದ್ಗಲ್ಯಾಯನನನ್ನು ನೋಡಿ ಬಾ, ಮಹಾ ಕಾಶ್ಯಪನನ್ನು ಸಂದರ್ಶಿಸು' ಎಂದು ಹೇಳಿದರೆ ಮಗ — 'ಹೋಗಪ್ಪ, ನಿನ್ನ ಶ್ರಮಣನನ್ನು ನೋಡಿ ನಾನೇನು ಮಾಡಲಿ ? ಅವರ ಬಳಿ ಹೋದರೆ ನಮಸ್ಕಾರ ಮಾಡಬೇಕಾಗುತ್ತದೆ, ನಮಸ್ಕಾರ ಮಾಡಲು ಸೊಂಟ ಬಗ್ಗಿಸಬೇಕು, ಮೈ ನೋಯುತ್ತದೆ. ಆ ಮೇಲೆ ನೆಲದಮೇಲೆ ಕೂಡಬೇಕು— ಅದೊಂದು ಕಷ್ಟ — ಬಟ್ಟೆ ಮಾಸುತ್ತದೆ. ಅಲ್ಲಿ ಕೂತಮೇಲೆ ಅವರು ಮಾತನಾಡುವುದನ್ನು ಕೇಳಬೇಕು ; ಕೇಳಿದರೆ ಅಕಸ್ಮಾತ್ ಶ್ರದ್ಧೆ ಹುಟ್ಟಿಬಿಡಬಹುದು. ಅವರನ್ನು ಮನೆಗೆ ಕರೆದು ಭಿಕ್ಷ — ಚೀವರಗಳನ್ನು ದಾನ ಮಾಡೋಣ ಎಂದೆನ್ನಿಸಬಹುದು. ಹಾಗೆಲ್ಲ

ಮಾಡುತ್ತ ಹೋದರೆ ಎಷ್ಟು ವ್ಯರ್ಥವಾಗಿ ಧನವ್ಯಯ !'— ಎಂದು ಮರು ಹೇಳುವನು.

ಹೀಗೆ ತಂದೆ ತಾಯಿ ಎಷ್ಟು ಹೇಳಿದರೂ ಮಗನಿಗೆ ಬುದ್ಧನ ಧರ್ಮದಲ್ಲಿ ಶ್ರದ್ಧೆ ಹುಟ್ಟಲಿಲ್ಲ. ವರ್ಷಗಳ ನಂತರ ತಂದೆ ರೋಗಗ್ರಸ್ತನಾಗಿ ಹಾಸಿಗೆ ಹಿಡಿದು ಮರಣ ಸನ್ನಿಹಿತವಾದಾಗ ಮಗನನ್ನು ಕರೆದು — 'ಅಪ್ಪಾ ಸಿಂಗಾಲ ದಿನಾ, ಬೆಳಿಗ್ಗೆ ಎದ್ದು ದಿಕ್ಕುಗಳಿಗೆ ನಮಸ್ಕಾರ ಮಾಡು, ಮರೆಯ ಬೇಡ' ಎಂದು ಹೇಳಿದ. ಅವನ ಮನಸ್ಸಿನಲ್ಲಿ — 'ಇವನು ಹೀಗೆಯೇ ಮಾಡುತ್ತಿದ್ದರೆ ಎಂದಾದರೊಂದು ದಿನ ಬುದ್ಧನೋ ಅವನ ಶಿಷ್ಯರೋ ಸರಿಯಾದ ಅರ್ಥ ಹೇಳುವರು' ಎಂದಿತ್ತು. ಮರಣೋನ್ಮುಖರಾದವರ ಮಾತು ಮನ್ನಿಸಬೇಕೆಂಬ ಶ್ರದ್ಧೆ ಉಂಟಷ್ಟೆ ಅಂತೆಯೇ ಸಿಂಗಾಲ ತಂದೆ ಸತ್ತಮೇಲೆ ದಿನವೂ ಮುಂಜಾವ ಎದ್ದು ದಿಕ್ಕುಗಳಿಗೆ ನಮಸ್ಕರ ಮಾಡುತ್ತಿದ್ದ.

ಸೂತ್ರಮುಖ :

ಒಂದು ಬಾರಿ ಭಗವಾನನು (ಅಂದರೆ ಬುದ್ಧನು) ರಾಜಗೃಹನಗರದ ವೇಳುವನದಲ್ಲಿ ಕಲಂದಕ ನಿವಾಸ (ಅಂದರೆ 'ಅಳಿಲುಗಳ ಬೀಡು') ಎಂಬಲ್ಲಿ ತಂಗಿದ್ದ. ಅದೇ ಸಮಯದಲ್ಲಿ ಅಲ್ಲಿ ಸಿಂಗಾಲ ಗೃಹಪತಿಯೂ ಇದ್ದ. ಅವನು ಬೆಳಗು ಮುಂಜಾನೆಯೇ ಎದ್ದು ಊರ ಹೊರಗೆ ಹೋಗಿ ನದಿಯಲ್ಲಿ ಮಿಂದು ತಲೆಗೂದಲು— ಮೈಬಟ್ಟೆ ಒದ್ದೆಯಾಗಿರುವಂತೆಯೇ ಅಂಜಲಿ ಬದ್ಧನಾಗಿ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ಮೇಲೆ ಕೆಳಗೆ — ಹೀಗೆ ನಾನಾ ದಿಕ್ಕುಗಳಿಗೆ ನಮಸ್ಕಾರ ಮಾಡುವ ಪದ್ಧತಿಯಿಟ್ಟುಕೊಂಡಿದ್ದ.

ಒಂದು ದಿನ ಭಗವಾನನು ಪೂರ್ವಾಹ್ನದಲ್ಲಿ ಚೀವರ ಧರಿಸಿ ಭಿಕ್ಷೆಗಾಗಿ ರಾಜಗೃಹವನ್ನು ಪ್ರವೇಶಿಸಿದಾಗ, ಹೀಗೆ ನಾನಾ ದಿಕ್ಕುಗಳಿಗೆ

ನಮಸ್ಕಾರ ಮಾಡುತ್ತಿದ್ದ ಸಿಂಗಾಲನನ್ನು ಕಂಡ. ಅವನನ್ನು ಕುರಿತು — 'ಅಯ್ಯಾ ಗೃಹಪತಿಯೇ, ಹೀಗೇಕೆ ದಿಕ್ಕುಗಳಿಗೆ ನಮಸ್ಕಾರ ಮಾಡುತ್ತಿರುವೆ ?' ಎಂದು ಕೇಳಿದ. ಸಿಂಗಾಲ — 'ಭನ್ತೇ, (ಇದು ಭಿಕ್ಷುಗಳನ್ನು ಸಂಬೋಧಿಸುವಾಗ ಉಪಯೋಗಿಸುವ ಗೌರವಾರ್ಥದ ಪದ) ನನ್ನ ತಂದೆ ಸಾಯುವಾಗ— 'ಅಪ್ಪಾ ಮಗು, ದಿಕ್ಕುಗಳಿಗೆ ನಮಸ್ಕಾರ ಮಾಡು' ಎಂದು ಹೇಳಿದ. ತಂದೆಯ ಮಾತನ್ನು ಶಿರಸಾವಹಿಸಿ ಹೀಗೆ ದಿಕ್ಕುಗಲಿಗೆ ನಮಸ್ಕಾರ ಮಾಡುತ್ತಿದ್ದೇನೆ—' ಎಂದು ಉತ್ತರವಿತ್ತ.

ಅದಕ್ಕೆ ಭಗವಾನನು — 'ಅಯ್ಯಾ ಗೃಹಪತಿ, ಆರ್ಯನ ವಿನಯದಲ್ಲಿ ಹೀಗಲ್ಲ, ಆರು ದಿಕ್ಕುಗಳನ್ನು ನಮಸ್ಕರಿಸುವುದು'— ಎಂದ.

ಸಿಂಗಾಲ — 'ಭನ್ತೇ, ಹಾಗಾದರೆ ಆರ್ಯನ ವಿನಯದಲ್ಲಿ ಹೇಗೆ ಆರು ದಿಕ್ಕುಗಳನ್ನು ನಮಸ್ಕರಿಸುವುದು ? ಭಗವಾನನು ನನಗೆ ತಿಳಿಯಹೇಳಲಿ —' ಎಂದು ಕೇಳಲು ಭಗವಾನನು — 'ಹೇಳುವೆ ಕೇಳು, ಗೃಹಪತಿ'— ಎಂದು ಈ ಪ್ರವಚನ ಆರಂಭಿಸಿದ.

''ಅಯ್ಯಾ ಗೃಹಪತಿಯೇ, ಆರ್ಯನಾದ ಶ್ರಾವಕನ ನಾಲ್ಕೂ ಕರ್ಮ ಕ್ಲೇಶಗಳೂ ಕಡಿದು ಬೀಳುತ್ತವೆ ; ಅವನು ನಾಲ್ಕು ಸ್ಥಾನಗಳಲ್ಲೂ (ಅಂದರೆ ಬಗೆಗಳಲ್ಲೂ, ಪಾಪ ಕರ್ಮವನ್ನು ಮಾಡುವುದಿಲ್ಲ; ಸಂಪತ್ತನ್ನು ಇಂಗಿಸುವ ಆರು ಅಪಾಯ ಮುಖಗಳನ್ನು ಸೇರುವುದಿಲ್ಲ, ಹೀಗೆ ಹದಿನಾಲ್ಕು ಕೆಡುಕುಗಳಿಂದ ದೂರಾಗಿ, ಆರು ದಿಕ್ಕುಗಳಿಂದ ರಕ್ಷಿತನಾಗಿ ಎರಡೂ ಲೋಕಗಳನ್ನೂ ಗೆಲ್ಲಲು ಸಿದ್ಧವಾಗುತ್ತಾನೆ. ಅವನಿಗೆ ಈ ಲೋಕವೂ ಸಿಗುತ್ತದೆ. ಪರಲೋಕವೂ ಸಿಗುತ್ತದೆ. ದೇಹ ಬಿದ್ದು ಅವನು ಸತ್ತಂದು ಸುಗತಿಯಾದ ಸ್ವರ್ಗಲೋಕವನ್ನು ಮುಟ್ಟುತ್ತಾನೆ.

ಕರ್ಮಕ್ಲೇಶ :

"ಅವನಿಂದ ಕಡಿದು ಬೀಳುವ ನಾಲ್ಕು ಕರ್ಮ ಕ್ಲೇಶಗಳು ಯಾವುವೆಂದರೆ—

(೧) ಪ್ರಾಣವನ್ನು ಕೊಲ್ಲುವುದು (ಅಥವಾ ಹಿಂಸೆ) ;

(೨) ಕೊಡದುದನ್ನು ಕೊಳ್ಳುವುದು (ಅಥವಾ ಕಳ್ಳತನ) ;

(೩) ಕಾಮಗಳಲ್ಲಿ ಮಿಥ್ಯಾಚಾರ (ಅಥವಾ ವ್ಯಭಿಚಾರ) ;

(೪) ಸುಳ್ಳು ಮಾತಾಡುವುದು.

— ಇವೇ ಅವನಿಂದ ಕಡಿದು ಬೀಳುವ ನಾಲ್ಕು ಕರ್ಮಕ್ಲೇಶಗಳು.

"ಯಾವ ನಾಲ್ಕು ಸ್ಥಾನಗಳಲ್ಲೂ (ಅಂದರೆ ಬಗೆಗಳಲ್ಲೂ) ಅವನು ಪಾಪಕರ್ಮವನ್ನು ಮಾಡುವುದಿಲ್ಲ, (೧) ಸ್ವೇಚ್ಛಾಪ್ರವೃತ್ತಿಯಿಂದ ಅವನು ಪಾಪಕರ್ಮವನ್ನು ಮಾಡುವುದಿಲ್ಲ; (೨) ದ್ವೇಷದಿಂದಾಗಿ ಅವನು ಪಾಪ ಕರ್ಮವನ್ನು ಮಾಡುವುದಿಲ್ಲ ; (೩) ಅಜ್ಞಾನದಿಂದಾಗಿ ಅವನು ಪಾಪ ಕರ್ಮ ಮಾಡುವುದಿಲ್ಲ; (೪) ಭಯದಿಂದಾಗಿ ಅವನು ಪಾಪಕರ್ಮವನ್ನು ಮಾಡುವುದಿಲ್ಲ. ಏಕೆಂದರೆ ಆರ್ಯ ಶ್ರಾವಕನಾದವನು ಸ್ವೇಚ್ಛಾ ಪ್ರವೃತ್ತಿಯ ದಾರಿ ಹಿಡಿಯುವುದಿಲ್ಲ, ದ್ವೇಷದ ದಾರಿ ಹಿಡಿಯುವುದಿಲ್ಲ, ಅಜ್ಞಾನದ ದಾರಿ ಹಿಡಿಯುವುದಿಲ್ಲ, ಭಯದ ದಾರಿ ಹಿಡಿಯುವುದಿಲ್ಲ, ಹೀಗೆ ನಾಲ್ಕು ಸ್ಥಾನಗಳಲ್ಲೂ ಅವನು ಪಾಪ ಕರ್ಮವನ್ನು ಮಾಡುವುದಿಲ್ಲ.

"ಸ್ವೇಚ್ಛಾ ಪ್ರವೃತ್ತಿಯಿಂದಾಗಲೀ, ದ್ವೇಷದಿಂದಾಗಲೀ, ಭಯದಿಂದಾಗಲೀ, ಅಜ್ಞಾನದಿಂದಾಗಲೀ, ಯಾವನು ಧರ್ಮವನ್ನು ಮೀರುವನೋ ಅವನ ಯಶಸ್ಸು ಕೃಷ್ಣಪಕ್ಷದ ಚಂದ್ರನಂತೆ ಕ್ಷಯಿಸುವುದು, ಸ್ವೇಚ್ಛಾಪ್ರವೃತ್ತಿಯಿಂದಾಗಲೀ, ದ್ವೇಷದಿಂದಾಗಲೀ, ಭಯದಿಂದಾಗಲೀ. ಅಜ್ಞಾನ

ದಿಂದಾಗಲೀ ಯಾವನು ಧರ್ಮವನ್ನು ಮೀರುವುದಿಲ್ಲವೋ ಅವನ ಯಶಸ್ಸು ಶುಕ್ಲ ಪಕ್ಷದ ಚಂದ್ರನಂತೆ ಹೆಚ್ಚುವುದು.

ಆರು ಅಪಾಯಗಳು :

''ಸಂಪತ್ತನ್ನು ಇಂಗಿಸುವ ಆರು ಅಪಾಯ ಮುಖಗಳು ಯಾವುವು?

(೧) ಸುರಾ, ಮೈರೇಯ, ಮದ್ಯ ಮುಂತಾದ ಮತ್ತು ಹಿಡಿಸುವ ಪದಾರ್ಥಗಳ ಸೇವನೆ ;

(೨) ಅನುಚಿತವಾದ ವೇಳೆಯಲ್ಲಿ ರಾಜಮಾರ್ಗಗಳಲ್ಲಿ ತಿರುಗಾಡುವುದು ;

(೩) ನರ್ತನ—ಸಂಗೀತ ನಡೆಯುವ ಸ್ಥಳಗಳಿಗೆ ಬಹುವಾಗಿ ಹೋಗುವುದು ;

(೪) ಕಾರ್ಯತತ್ಪರತೆಯನ್ನು ಮರೆಸುವ ಜೂಜಾಟದಲ್ಲಿ ಉತ್ಸುಕತೆ ;

(೫) ಕೆಟ್ಟ ಸಂಗಾತಿಗಳನ್ನು ಸೇರುವುದು ;

(೬) ಆಲಸಿಕೆ (ಸೋಮಾರಿತನ)

ಕಡಿತ :

''ಅಯ್ಯಾ ಗೃಹಪತಿ, ಸುರಾ, ಮೈರೇಯ, ಮದ್ಯ ಮುಂತಾದ ಮಾದಕ ದ್ರವ್ಯಗಳನ್ನು ಸೇವಿಸುವುದರಿಂದ ಆರು ಕೆಡಕುಗಳುಂಟು —

(೧) ಧನ ನಾಶವಾಗುತ್ತದೆ ;

(೨) ಜಗಳ ಹೆಚ್ಚುತ್ತದೆ ;

(೩) ರೋಗಗಳು ಸೇರುತ್ತವೆ ;

(೪) ಅಪಕೀರ್ತಿ ಬರುತ್ತದೆ ;

(೫) ಮಾನ—ಮರ್ಯಾದೆ ಹೋಗುತ್ತದೆ ;

(೬) ಪ್ರಜ್ಞೆ ದುರ್ಬಲವಾಗುತ್ತದೆ.

ಅಯ್ಯಾ, ಗೃಹಪತಿ, ಅನುಚಿತವಾದ ವೇಳೆಯಲ್ಲಿ ರಾಜಮಾರ್ಗಗಳಲ್ಲಿ ತಿರುಗುವುದರಿಂದ ಆರು ಕೆಡುಕುಗಳುಂಟು.

(೧) ತಾನೇ ಅಗುಪ್ತನಾಗಿ, ಅರಕ್ಷಿತನಾಗುತ್ತಾನೆ (ತೊಂದರೆ ಸಂಭವಿಸಬಹುದು) ;

(೨) ಅವನ ಹೆಂಡತಿ-ಮಕ್ಕಳು ರಕ್ಷಣೆಯಿಲ್ಲದೆ ಇರುತ್ತಾರೆ ;

(೩) ಅವನ ಆಸ್ತಿ-ಪಾಸ್ತಿಗಳು ರಕ್ಷಣೆಯಿಲ್ಲದೆ ಇರುತ್ತವೆ ;

(೪) ಅವನ ಚಾರಿತ್ರ್ಯದ ವಿಚಾರವಾಗಿ ಜನರಿಗೆ ಸಂದೇಹ ಉಂಟಾಗುತ್ತದೆ;

(೫) ಜನ ಅವನನ್ನು ನಿಂದಿಸುತ್ತಾರೆ ;

(೬) ದುಃಖ ತರುವಂಥ ಅನೇಕ ಕೆಲಸಗಳಿಗೆ ದಾರಿಯಾಗುತ್ತದೆ.

''ಅಯ್ಯಾ, ಗೃಹಪತಿ, ನರ್ತನ-ಸಂಗೀತ ನಡೆಯುವ ಸ್ಥಳಗಳಿಗೆ ಬಹುವಾಗಿ ಹೋಗುವುದರಿಂದ ಆರು ಕೆಡಕುಗಳುಂಟು—

(೧) ಇಂದು ಎಲ್ಲಿ ನರ್ತನ ಇದೆ ? ಎಂಬ ಗೀಳು ;

(೨) ಇಂದು ಎಲ್ಲಿ ಸಂಗೀತ ? ಎಂಬ ಗೀಳು ;

(೩) ಇಂದು ಎಲ್ಲಿ ವಾದ್ಯ ನುಡಿಸುವರು ? ಎಂಬ ಗೀಳು ;

(೪) ಇಂದು ಎಲ್ಲಿ ಕಥೆ ಹೇಳುವರು ? ಎಂಬ ಗೀಳು ;

(೫) ಇಂದು ಎಲ್ಲಿ ಬಯಲಾಟ ? ಎಂಬ ಗೀಳು ;

(೬) ಇಂದು ಎಲ್ಲಿ ದೊಂಬರಾಟ ? ಎಂಬ ಗೀಳು.

ಜೂಜಾಟ :

''ಅಯ್ಯಾ, ಗೃಹಪತಿ, ಜೂಜಾಟದಿಂದ ಆರು ಕೆಡಕುಗಳುಂಟು—

(೧) ಗೆಲುವುದರಿಂದ ವೈರ ಉಂಟಾಗುತ್ತದೆ ;

(೨) ಸೋತವನು ನಷ್ಟವಾದ ಧನಕ್ಕಾಗಿ ಮರುಗುತ್ತಾನೆ ;

(೩) ಕಷ್ಟಪಟ್ಟು ಸಂಪಾದಿಸಿದ ಧನ ನಷ್ಟವಾಗುತ್ತದೆ ;

(೪) ಸಭೆಯಲ್ಲಿ ಜೂಜುಕೋರನ ಮಾತಿಗೆ ಮನ್ನಣೆಯಿಲ್ಲ;

(೫) ಮಿತ್ರರು — ಇಷ್ಟರು ದೂರ ಹೋಗುತ್ತಾರೆ ;

(೬) ಮದುವೆಯಂಥ ಪ್ರಸಂಗ ಬಂದಾಗ —'ಅವನು ಜೂಜು ಕೋರ ; ಹೆಂಡತಿ ಮಕ್ಕಳನ್ನೇನು ಸಾಕಿಯಾನು ?'— ಎಂದು ಜನ ಮೂದಲಿಸುತ್ತಾರೆ.

ಕೆಟ್ಟ ಸಂಗತಿಗಳು :

''ಅಯ್ಯಾ, ಗೃಹಪತಿ, ಕೆಟ್ಟ ಸಂಗಾತಿಗಳನ್ನು ಸೇರುವುದರಿಂದ ಈ ಆರು ತೆರನಾದ ಜನ ಹತ್ತಿರ ಬರುತ್ತಾರೆ — (೧) ಧೂರ್ತರು ; (೨) ಲಜ್ಜೆ ಗೆಟ್ಟ ಭಂಡರು (೩) ಕುಡುಕರು ; (೪) ಕೃತಘ್ನರು ; (೫) ವಂಚಕರು ; (೬) ಗೂಂಡಾಗಳು.

''ಅಯ್ಯಾ, ಗೃಹಪತಿ, ಆಲಸಿಕೆಯಿಂದ ಈ ಆರು ಕೆಡಕುಗಳು—

(೧) 'ಈಗ ಬಹಳ ಛಳಿ' ಎಂದು ಕೆಲಸಮಾಡುವುದಿಲ್ಲ;

(೨) 'ಈಗ ಬಹಳ ಶೆಖೆ' ಎಂದು ಕೆಲಸ ಮಾಡುವುದಿಲ್ಲ;

(೩) 'ಈಗ ಬಹಳ ಹೊತ್ತಾಗಿ ಹೋಯಿತು' ಎಂದು ಕೆಲಸ ಮಾಡುವುದಿಲ್ಲ

(೪) 'ಇನ್ನೂ ಬಹಳ ಹೊತ್ತಿದೆ' ಎಂದು ಕೆಲಸ ಮಾಡುವುದಿಲ್ಲ;

(೫) 'ಈಗ ಬಹಳ ಹಸಿವು' ಎಂದು ಕೆಲಸ ಮಾಡುವುದಿಲ್ಲ;

(೬) 'ಈಗ ನಿದ್ದೆ ಬರುತ್ತಿದೆ' ಎಂದು ಕೆಲಸ ಮಾಡುವುದಿಲ್ಲ.

''ಹೀಗೆ ಒಂದೊಂದು ನೆಪದಿಂದ ಮಾಡಬೇಕಾದ ಕೆಲಸ ಮಾಡದಿದ್ದರೆ ಬರಬೇಕಾದ ಸಂಪತ್ತು ಬರುವುದಿಲ್ಲ ; ಬಂದ ಸಂಪತ್ತು ಹಾಳಾಗುತ್ತದೆ. ಆಲಸಿಕೆಯಿಂದ ಇವು ಕೆಡಕುಗಳು.

''ಕುಡಿಯುವಾಗ ಸೇರುವ ಮಿತ್ರ, ಮಿತ್ರನಲ್ಲ. ಕಷ್ಟ ಬಂದಾಗ ನೆರವಾಗುವವನೇ ಮಿತ್ರ. ಸೂರ್ಯ ಹುಟ್ಟಿದ ಮೇಲೂ ಮಲಗಿರುವುದು, ಪರಸ್ತ್ರೀಯನ್ನು ಆಶಿಸುವುದು, ದ್ವೇಷವನ್ನು ಹಚ್ಚುವುದು, ಅನರ್ಥಗಳನ್ನು ಮಾಡುವುದು, ಕೆಟ್ಟಸಂಗಾತಿಗಳು, ಜಿಪುಣತನ— ಇವು ಮನುಷ್ಯನನ್ನು ಹಾಳು ಮಾಡುತ್ತವೆ. ಕೆಟ್ಟ ಸಂಗಾತಿಗಳನ್ನು ಸೇರುವುದು ಮತ್ತು ಕೆಟ್ಟ ಕೆಲಸ ಗಳಲ್ಲಿ ಅನುರಕ್ತಿ— ಇವೆರಡರಿಂದ ಮನುಷ್ಯ ಈ ಲೋಕ-ಪರಲೋಕ ಗಳೆರಡರಿಂದಲೂ ಭ್ರಷ್ಟನಾಗುತ್ತಾನೆ. ಜೂಜಾಟ, ಹೆಂಗಸರು, ಕುಡಿತ, ನೃತ್ಯ—ಗೀತಗಳು, ಹಗಲಲ್ಲಿ ಮಲಗುವುದು, ರಾತ್ರಿ ಊರೆಲ್ಲ ತಿರುಗಾಡುವದು, ಕೆಟ್ಟ ಸಂಗಾತಿಗಳು, ಜಿಪುಣತನ— ಇವು ಮನುಷ್ಯನನ್ನು ಹಾಳು ಮಾಡುತ್ತವೆ.

ಮಿತ್ರ ರೂಪದ ಶತ್ರು :

"ಅಯ್ಯಾ ಗೃಹಪತಿ, ಈ ನಾಲ್ಕು ಜನರನ್ನು ಮಿತ್ರರೂಪದಲ್ಲಿ ಬಂದ ಶತ್ರುಗಳೆಂದು ತಿಳಿಯಬೇಕು. ಯಾವ ನಾಲ್ಕು ?—

(೧) ಬೇರೆಯವನ ಧನವನ್ನು ಹಾರಿಸುವನು ;

(೨) ಬರಿದೇ ಮಾತಾಡುವವನು ;

(೩) ಯಾವಾಗಲೂ ಪ್ರಿಯವನ್ನೇ ಆಡುತ್ತಿರುವವನು ;

(೪) ಕೆಟ್ಟ ಕೆಲಸಗಳಲ್ಲಿ ಸಹಾಯಕನಾಗುವವನು.

"ಪರಧನಹಾರಕನನ್ನು ಈ ನಾಲ್ಕು ಸ್ಥಾನಗಳಿಂದ ತಿಳಿಯಬೇಕು— ಬೇರೆ ಯವನ ಧನವನ್ನು ಅಪಹರಿಸುವವನು, ಕೊಂಚ ಕೊಟ್ಟು ಬಹಳಕ್ಕೆ ಆಶೆಪಡುವ ವನು, ಭಯದಿಂದ ಕೆಲಸಮಾಡುವವನು, ಸ್ವಪ್ರಯೋಜನ ಕ್ಕಾಗಿ ಸ್ನೇಹಿತನಾಗು ವವನು— ಈ ನಾಲ್ಕು ಬಗೆಯಾಗಿ ಪರಧನಹಾರಕರು ಶತ್ರುಗಳಾದರೂ ಮಿತ್ರರಂತೆ ಬರುವರು.

"ಬರಿದೇ ಮಾತಾಡುವವನನ್ನು ಈ ನಾಲ್ಕು ಸ್ಥಾನಗಳಿಂದ ತಿಳಿಯಬೇಕು— ಹಿಂದಿನದನ್ನೇ ಹೊಗಳುವವನು, ಮುಂದೆ ಬರುವುದನ್ನೇ ಚರ್ಚಿಸುವವನು, ಉಪಯೋಗವಿಲ್ಲದ ಮಾತಾಡುವವನು, ಈಗಿನ ಕೆಲಸಗಳಲ್ಲಿ ಅಮಂಗಳ ಸೂಚಿಸುವವನು. ಈ ನಾಲ್ಕು ಬಗೆಯಾಗಿ ಬರಿದೆ ಮಾತಾಡುವವರು ಶತ್ರುಗಳಾದರೂ ಮಿತ್ರರಂತೆ ತೋರಿಸಿಕೊಳ್ಳುವರು.

"ಯಾವಾಗಲೂ ಪ್ರಿಯವನ್ನೇ ಆಡುವವನನ್ನು ಈ ನಾಲ್ಕು ಸ್ಥಾನಗಳಿಂದ ತಿಳಿಯಬೇಕು— ಕೆಟ್ಟ ಕೆಲಸಗಳನ್ನು ಮಾಡಲು ಸಹಾಯ ಮಾಡುವವನು, ಒಳ್ಳೆಯ ಕೆಲಸಗಳಲ್ಲಿ ಸಹಾಯಕನಾಗದವನು, ಮುಂದೆ ಹೊಗಳುವವನು, ಹಿಂದೆ ಹೋಗಿ ಹಳಿಯುವವನು. ಕೆಟ್ಟ ಕೆಲಸಗಳಲ್ಲಿ

ಸಹಾಯಕನಾಗುವವನನ್ನು ಈ ನಾಲ್ಕು ಬಗೆಯಿಂದ ತಿಳಿಯಬೇಕು–ಸುರಾ, ಮೈರೇಯ ಮದ್ಯ ಮುಂತಾದ ಮಾದಕ ದ್ರವ್ಯಗಳನ್ನು ಕುಡಿಯಲು ಸಹಾಯಕನಾಗುವವನು, ಅವೇಳೆಯಲ್ಲಿ ಊರು ಬೀದಿಗಳಲ್ಲಿ ತಿರುಗಾಡಲು ಸಹಾಯಕನಾಗುವವನು, ನೃತ್ಯ-ತಮಾಷೆಗಳಿಗೆ ಹೋಗಲು ಸಹಾಯಕ ನಾಗುವವನು, ಜೂಜಾಡಲು ಸಹಾಯಕನಾಗುವವನು.

—ಹೀಗೆ ನಾಲ್ಕು ಬಗೆಯಾಗಿರುವವರು ಅಮಿತ್ರರು ಎಂದು ಪಂಡಿತನಾದವನು ಅರಿತು, ಕಳ್ಳಕಾಕರಿಂದ ಕೂಡಿದ ರಸ್ತೆಯನ್ನು ದೂರ ಬಿಡುವಂತೆ ಬಿಡುತ್ತಾನೆ.

ಸುಹೃದ ಮಿತ್ರ :

''ಮಿತ್ರರನ್ನು ಸಹೃದಯರು ಎಂದು ತಿಳಿಯಲು ಈ ನಾಲ್ಕು ಸ್ಥಾನಗಳಿಂದ ವಿಮರ್ಶಿಸಬೇಕು—

(೧) ಉಪಕಾರ ಮಾಡುವವನು ; (೨) ಸುಖದುಃಖಗಳಲ್ಲಿ ಸಮಾನವಾಗಿರುವವನು ; (೩) ಸಂಪತ್ತನ್ನು ಹೆಚ್ಚಿಸಲು ಇಚ್ಛೆಯುಳ್ಳವನು (೪) ಅನುಕಂಪ ವುಳ್ಳವನು.

''ಉಪಕಾರ ಮಾಡುವ ಮಿತ್ರನನ್ನು ನಾಲ್ಕು ಬಗೆಗಳಿಂದ ಅರಿಯಬೇಕು— ಪ್ರಮತ್ತತೆಯಿಂದ ರಕ್ಷಿಸುತ್ತಾನೆ, ಪ್ರಮತ್ತನಾದ ಮಿತ್ರನ ಸಂಪತ್ತನ್ನು ರಕ್ಷಿಸುತ್ತಾನೆ, ಭಯಗೊಂಡಿರುವವನಿಗೆ ಧೈರ್ಯ ಕೊಡುತ್ತಾನೆ, ಕಾರ್ಯ ಆರಂಭವಾಗಿರುವಲ್ಲಿ ಅದರಿಂದ ದ್ವಿಗುಣವಾದ ಲಾಭ ಬರಲು ಅನುಕೂಲ ಮಾಡುತ್ತಾನೆ.

''ಸುಖದುಃಖಗಳಲ್ಲಿ ಸಮಾನವಾಗಿರುವ ಮಿತ್ರನನ್ನು ನಾಲ್ಕು ಬಗೆ ಗಳಿಂದ ಅರಿಯಬೇಕು— ಗುಟ್ಟನ್ನು ಹೇಳುತ್ತಾನೆ, ಗುಟ್ಟನ್ನು ಕೇಳಿ ಅದನ್ನು

ಗುಪ್ತವಾಗಿಡುತ್ತಾನೆ, ಕಷ್ಟಬಂದಾಗ ಮಿತ್ರನನ್ನು ಬಿಟ್ಟು ಓಡುವುದಿಲ್ಲ, ಮಿತ್ರನಿಗೆ ವಿಪತ್ತು ಬಂದರೆ ತನ್ನ ಪ್ರಾಣವನ್ನಾದರೂ ಕೊಟ್ಟು ಅವನನ್ನುಳಿಸಲು ಸಿದ್ಧನಾಗಿರುತ್ತಾನೆ

''ಸಂಪತ್ತನ್ನು ಹೆಚ್ಚಿಸಲು ಇಚ್ಛೆಯುಳ್ಳ ಮಿತ್ರನನ್ನು ಈ ಬಗೆಗಳಿಂದ ಅರಿಯಬೇಕು — ಪಾಪದಿಂದ ತಪ್ಪಿಸುತ್ತಾನೆ, ಒಳ್ಳೆಯ ಕೆಲಸದಲ್ಲಿ ಒಯ್ಯುತ್ತಾನೆ, ಹಿಂದೆ ಕೇಳದ ಸದ್ಧರ್ಮವನ್ನು ಕೇಳಿಸುತ್ತಾನೆ.

''ಅನುಕಂಪವುಳ್ಳ ಮಿತ್ರನನ್ನು ನಾಲ್ಕು ಬಗೆಗಳಿಂದ ತಿಳಿಯ ಬೇಕು— (ತನ್ನ ಮಿತ್ರನಿಗೆ) ವಿಪತ್ತು ಬಂದಾಗ ಇವನು ದುಃಖಪಡು ವುದಿಲ್ಲ ; (ತನ್ನ ಮಿತ್ರನಿಗೆ) ಸಂಪತ್ತು ಬಂದಾಗ ಇವನು ದುಃಖಪಡು ವುದಿಲ್ಲ ; (ತನ್ನ ಮಿತ್ರನನ್ನು) ನಿಂದಿಸುವ ವನನ್ನು ಇವರು ತಡೆಯುತ್ತಾನೆ, (ತನ್ನ ಮಿತ್ರನನ್ನು) ಹೊಗಳುವವನನ್ನು ಇವನು ಪ್ರೋತ್ಸಾಹಿಸುತ್ತಾನೆ.

''ಹೀಗೆ ನಾಲ್ಕು ತೆರನಾದ ಮಿತ್ರರನ್ನು ಪಂಡಿತನಾದವನು ಅರಿತು ತಾಯಿ ತನ್ನ ಮಕ್ಕಳನ್ನು ಆದರಿಸುವಂತೆ ಆದರಿಸುತ್ತಾನೆ. ತಿಳಿದವನಾಗಿ, ಸದಾಚಾರಿಯಾಗಿ ಇವನು ಸಂಪತ್ತಿಯನ್ನು ದುಂಬಿ ಮಧುವನ್ನು ಸಂಗ್ರಹಿಸುವಂತೆ ಸಂಗ್ರಹಿಸುತ್ತಾನೆ.

ಆರು ದಿಕ್ಕುಗಳು :

''ಅಯ್ಯಾ, ಗೃಹಪತಿ, ಆರ್ಯ ಶ್ರಾವಕನಾದವನು ಆರು ದಿಕ್ಕುಗಳಿಂದ ರಕ್ಷಿತನಾಗುವುದು ಹೇಗೆ ? ಇವೇ ಆರು ದಿಕ್ಕುಗಳು ; ತಾಯಿತಂದೆಗಳು ಪೂರ್ವದಿಕ್ಕು, ಆಚಾರ್ಯನು ದಕ್ಷಿಣದಿಕ್ಕು, ಹೆಂಡತಿಮಕ್ಕಳು ಪಶ್ಚಿಮ ದಿಕ್ಕು, ಮಿತ್ರರು — ಇಷ್ಟರು ಉತ್ತರ ದಿಕ್ಕು, ಊಳಿಗದ ಜನ ಕೆಳದಿಕ್ಕು, ಶ್ರವಣ ಬ್ರಾಹ್ಮಣರು ಮೇಲುದಿಕ್ಕು.

ಮಾತಾಪಿತೃ ಸೇವೆ :

"ಪೂರ್ವದಿಕ್ಕಾದ ತಂದೆತಾಯಿಗಳನ್ನು ಈ ಐದು ಬಗೆಗಳಿಂದ ಸೇವಿಸಬೇಕು— (೧) ಇವರು ನನ್ನನ್ನು ಧರಿಸಿ ಪೋಷಿಸಿದ್ದಾರೆ ; ನಾನು ಅವರನ್ನು ಪೋಷಿಸಬೇಕು ; (೨) ಇವರು ನನಗಾಗಿ ಕೆಲಸಮಾಡಿದ್ದಾರೆ ; ನಾನು ಇವರಿಗಾಗಿ ಕೆಲಸ ಮಾಡಬೇಕು ; (೩) ವಂಶದ ಹೆಸರನ್ನು ಉಳಿಸಬೇಕು ; (೪) ಅವರ ಆಸ್ತಿಯನ್ನು ಪಡೆಯಲು ಅರ್ಹನಾಗಬೇಕು ; (೫) ಸತ್ತ ತಂದೆ ತಾಯಿಗಳಿಗೆ ಶ್ರಾದ್ಧಾದಿಕರ್ಮಗಳನ್ನು ಮಾಡುತ್ತೇನೆ.

"ಪೂರ್ವದಿಕ್ಕಾದ ತಂದೆತಾಯಿಗಳು ಮಗನನ್ನು ಈ ಐದು ಬಗೆಗಳಿಂದ ಸಲಹುವರು- (೧) ಕೆಟ್ಟದರಿಂದ ತಪ್ಪಿಸುತ್ತಾರೆ ; (೨) ಒಳ್ಳೆಯದರಲ್ಲಿ ಇಡುತ್ತಾರೆ ; (೩) ವಿದ್ಯೆ ಕಲಿಸುತ್ತಾರೆ ; (೪) ಅನುರೂಪಳಾದ ಹೆಂಡತಿಯನ್ನು ತರುತ್ತಾರೆ ; (೫) ಕಾಲದಲ್ಲಿ ಆಸ್ತಿಯನ್ನು ಕೊಡುತ್ತಾರೆ.

"ಹೀಗೆ ಪೂರ್ವದಿಕ್ಕು ರಕ್ಷಿತವಾಗುತ್ತದೆ, ಕ್ಷೇಮಕರವಾಗುತ್ತದೆ, ಭಯರಹಿತವಾಗುತ್ತದೆ.

ಗುರು ಸೇವೆ :

"ದಕ್ಷಿಣದಿಕ್ಕಾದ ಆಚಾರ್ಯರನ್ನು ಅಂತೇವಾಸಿಯಾದ ಶಿಷ್ಯ ಈ ಐದು ಬಗೆಗಳಿಂದ ಸೇವಿಸಬೇಕು—(೧) ಅವರು ಏಳುವ ಮುಂಚೆ ಇವನು ಏಳಬೇಕು (ಅಥವ, ಅವರು ಬಂದೊಡನೆ ಎದ್ದು ನಿಲ್ಲಬೇಕು) ; (೨) ಅವರಿಗೆ ಅವಶ್ಯವಾದು ದನ್ನು ತಂದೊದಗಿಸಬೇಕು ; (೩) ಸುಶ್ರೂಷೆ ಮಾಡಬೇಕು ; (೪) ಅವರ ಸಹವಾಸದಲ್ಲಿರಬೇಕು ; (೫) ಅವರಿಂದ ವಿದ್ಯೆ ಕಲಿಯಬೇಕು.

“ದಕ್ಷಿಣ ದಿಕ್ಕಾದ ಆಚಾರ್ಯರು ಅಂತೇವಾಸಿಯಾದ ಶಿಷ್ಯನನ್ನು ಈ ಐದು ಬಗೆಯಿಂದ ಸಲಹುವರು— (೧) ಒಳ್ಳೆಯ ನಡತೆಯನ್ನು ಕಲಿಸುವರು ; (೨) ಒಳ್ಳೆಯ ವಿದ್ಯೆಯನ್ನು ಚೆನ್ನಾಗಿ ಹೇಳಿಕೊಡುವರು. (೩) ತಮಗೆ ತಿಳಿದುದನ್ನೆಲ್ಲ ಶಿಷ್ಯನಿಗೆ ತಿಳಿಸುವರು ; (೪) ಒಳ್ಳೆಯ ಸಂಗಾತಿಗಳನ್ನು ಹುಡುಕಿಕೊಡುವರು ; (೫) ದಿಕ್ಕುಗಳಲ್ಲಿ ಸಂರಕ್ಷಣೆ ಮಾಡುವರು.

“ಹೀಗೆ ದಕ್ಷಿಣ ದಿಕ್ಕು ರಕ್ಷಿತವಾಗುತ್ತದೆ. ಕ್ಷೇಮಕರವಾಗುತ್ತದೆ, ಭಯರಹಿತವಾಗುತ್ತದೆ.

ಕುಟುಂಬ ರಕ್ಷಣೆ :

“ಪಶ್ಚಿಮ ದಿಕ್ಕಾದ ಹೆಂಡತಿಯನು ಗಂಡನಾದವನು ಈ ಐದು ಬಗೆಗಳಿಂದ ಸಲಹಬೇಕು. (೧) ಸನ್ಮಾನಿಸುವುದು ; (೨) ಅವಮಾನ ಮಾಡದೆ ಇರುವುದು ; (೩) ಅತಿಚಾರ ಮಾಡದೆ ಅವಳಲ್ಲೇ ಅನುರಕ್ತನಾಗಿರುವುದು ; (೪) ತನ್ನ ಐಶ್ವರ್ಯವನ್ನೆಲ್ಲ ಅವಳ ಅಧೀನದಲ್ಲಿ ಬಿಟ್ಟಿರುವುದು ; (೫) ಅವಳ ಅಲಂಕಾರಗಳನ್ನು ಒದಗಿಸುವುದು.

“ಪಶ್ಚಿಮದಿಕ್ಕಾದ ಹೆಂಡತಿ ಗಂಡನನ್ನು ಈ ಐದು ವಿಧವಾಗಿ ಸೇವಿಸುವಳು — (೧) ಮನೆಗೆಲಸಗಳು ಸುಸೂತ್ರವಾಗಿ ನಡೆಯುತ್ತವೆ ; (೩) ನಂಟರಿಷ್ಟರು ಹತ್ತಿರ ಸೇರುತ್ತಾರೆ ; (೩) ಅತಿಚಾರ ಮಾಡದೆ ತನ್ನಲ್ಲೇ ಅನುರಕ್ತಳಾಗಿರುತ್ತಾಳೆ ; (೪) ಸಂಪತ್ತನ್ನು ರಕ್ಷಿಸುತ್ತಾಳೆ ; (೫) ದಕ್ಷಳಾಗಿ ರುತ್ತಾಳೆ.

ಹೀಗೆ ಪಶ್ಚಿಮ ದಿಕ್ಕು ರಕ್ಷಿತವಾಗುತ್ತದೆ, ಕ್ಷೇಮಕರವಾಗುತ್ತದೆ, ಭಯರಹಿತವಾಗುತ್ತದೆ.

ಬಂಧು ಮಿತ್ರರ ಸೇವೆ :

"ಉತ್ತರ ದಿಕ್ಕಾದ ನಂಟರಿಷ್ಟರನ್ನು ಕುಲಪುತ್ರನಾದವನು ಈ ಐದು ಬಗೆಗಳಿಂದ ಸೇವಿಸಬೇಕು — (೧) ದಾನದಿಂದ ; (೨) ಪ್ರಿಯ ವಚನ ದಿಂದ ; (೩) ಅವರ ಕೆಲಸಗಳಲ್ಲಿ ತಾನೂ ಆಸಕ್ತಿ ತೋರುವುದರಿಂದ ; (೪) ಅವರಿಗೆ ಸರಿಸಮಾನನಾಗಿ ಇರುವುದರಿಂದ ; (೫) ಅವರಲ್ಲಿ ವಿಶ್ವಾಸವಿಡುವುದರಿಂದ.

"ಉತ್ತರದಿಕ್ಕಾದ ನಂಟರಿಷ್ಟರು ಕುಲಪುತ್ರನಾದವನನ್ನು ಈ ಐದು ಬಗೆ ಗಳಿಂದ ಸೇವಿಸುವರು — (೧) ಪ್ರಮತ್ತತೆಯಿಂದ ರಕ್ಷಿಸುತ್ತಾರೆ ; (೨) ಪ್ರಮತ್ತನಾಗಿರುವವನ ಸಂಪತ್ತನ್ನು ರಕ್ಷಿಸುತ್ತಾರೆ ; (೩) ಭಯ ಗೊಂಡಿದ್ದರೆ ಧೈರ್ಯ ಹೇಳುತ್ತಾರೆ ; (೪) ವಿಪತ್ತಿನಲ್ಲಿಯೂ ಕೈಬಿಡು ವುದಿಲ್ಲ ; (೫) ಅವನ ಮಕ್ಕಳು ಮರಿಯ ಅಭಿವೃದ್ಧಿಗೆ ಸಹಾಯಕ ರಾಗಿರುತ್ತಾರೆ.

"ಹೀಗೆ ಉತ್ತರ ದಿಕ್ಕು ರಕ್ಷಿತವಾಗುತ್ತದೆ. ಕ್ಷೇಮಕರವಾಗಿರುತ್ತದೆ. ಭಯ ರಹಿತವಾಗುತ್ತದೆ.

ಆಶ್ರಿತ ರಕ್ಷಣೆ :

"ಕೆಳದಿಕ್ಕಾದ ಊಳಿಗದವರನ್ನು ಯಜಮಾನನಾದವನು ಈ ಐದು ಬಗೆಗಳಿಂದ ನೋಡಿಕೊಳ್ಳಬೇಕು— (೧) ಅವರ ಶಕ್ತಿಗೆ ಅನುಗುಣವಾಗಿ ಕೆಲಸಗಳನ್ನು ಕೊಡಬೇಕು ; (೨) ಅವರಿಗೆ ಊಟ, ಸಂಬಳಗಳನ್ನು ಕೊಡಬೇಕು ; (೩) ಅವರಿಗೆ ಔಷಧೋಪಚಾರ ಮಾಡಬೇಕು ; (೪) ರುಚಿರುಚಿಯಾದ ಪದಾರ್ಥಮಾಡಿದಾಗ ಅವರಿಗೂ ಕೊಡಬೇಕು ; (೫) ಕಾಲ ಕಾಲಕ್ಕೆ ಅವರಿಗೆ ವಿಶ್ರಾಂತಿ ಕೊಡಬೇಕು.

"ಕೆಳದಿಕ್ಕಾದ ಊಳಿಗದವರು ಯಜಮಾನನನ್ನು ಈ ಐದು ಬಗೆಗಳಿಂದ ಸೇವಿಸುವರು — (೧) ಅವನು ಏಳುವ ಮುಂಚೆ ಇವರು ಏಳುವರು ; (೨) ಅವನು ಮಲಗಿದ ಮೇಲೆ ಮಲಗುವರು ; (೩) ಅವನು ಕೊಟ್ಟಿದ್ದನ್ನು ಮಾತ್ರ ಸ್ವೀಕರಿಸುವರು ; (೪) ಕೆಲಸವನ್ನು ಚೆನ್ನಾಗಿ ಮಾಡುವರು ; (೫) ಅವನ ಗುಣಗಳನ್ನು ಪ್ರಶಂಸೆ ಮಾಡುವರು.

"ಹೀಗೆ ಕೆಳದಿಕ್ಕು ರಕ್ಷಿತವಾಗುತ್ತದೆ. ಕ್ಷೇಮಕರವಾಗುತ್ತದೆ, ಭಯ ರಹಿತವಾಗುತ್ತದೆ.

ಗೋ-ಬ್ರಾಹ್ಮಣ ಸೇವೆ :

"ಮೇಲುದಿಕ್ಕಾದ ಶ್ರಮಣ ಬ್ರಾಹ್ಮಣರನ್ನು ಕುಲಪುತ್ರನಾದವನು ಈ ಐದು ಬಗೆಗಳಿಂದ ಸನ್ಮಾನಿಸಬೇಕು —(೧) ಮೈತ್ರಿಯಿಂದ ಅವರಿಗಾಗಿ ಕೆಲಸಮಾಡ ಬೇಕು ; (೨) ಮೈತ್ರಿಯಿಂದ ಒಳ್ಳೆಯ ಮಾತನಾಡಬೇಕು ; (೩) ಮೈತ್ರಿಯಿಂದ ಅವರ ವಿಚಾರವಾಗಿ ಸದ್ಭಾವನೆ ಇಡಬೇಕು ; (೪) ಅವರಿಗೆ ಔದಾರ್ಯದಿಂದ ದಾನಾದಿಗಳನ್ನು ಮಾಡಬೇಕು ; (೫) ಅವರಿಗೆ ಊಟ ಒದಗಿಸಬೇಕು.

"ಮೇಲು ದಿಕ್ಕಾದ ಶ್ರಮಣ ಬ್ರಾಹ್ಮಣರು ಕುಲಪುತ್ರನನ್ನು ಈ ಆರು ಬಗೆಗಳಿಂದ ಸಲಹುತ್ತಾರೆ — (೧) ಪಾಪದಿಂದ ತಪ್ಪಿಸುವರು ; (೨) ಒಳ್ಳೆಯದರಲ್ಲಿ ನಿಯೋಜಿಸುವರು ; (೩) ಒಳ್ಳೆಯ ಮನಸ್ಸಿನಿಂದ ಅವನ ವಿಚಾರವಾಗಿ ಅನುಕಂಪ ಮಾಡುವರು ; (೪) ಕೇಳದ ಸದ್ಧರ್ಮವನ್ನು ಕೇಳಿಸುತ್ತಾರೆ ; (೫) ಕೇಳಿದ್ದನ್ನು ದೃಢಪಡಿಸುತ್ತಾರೆ ; (೬) ಸ್ವರ್ಗದ ಮಾರ್ಗವನ್ನು ಹೇಳುತ್ತಾರೆ.

"ಹೀಗೆ ಮೇಲುದಿಕ್ಕು ರಕ್ಷಿತವಾಗುತ್ತದೆ, ಕ್ಷೇಮಕರವಾಗುತ್ತದೆ, ಭಯರಹಿತವಾಗುತ್ತದೆ.

''ಹೀಗೆ ಗೃಹಸ್ಥನಾದವನು ಲೋಕದಲ್ಲಿ ನಡೆದುಕೊಳ್ಳಬೇಕು. ಹಾಗಾದರೆ ಮಾತ್ರ ಅವನಿಗೆ ದೊಡ್ಡತನ ಬರುತ್ತದೆ, ಕೀರ್ತಿ ಬರುತ್ತದೆ, ಜನ ಹತ್ತಿರ ಸೇರುತ್ತಾರೆ.''

— ಭಗವಾನನು ಹೀಗೆ ಹೇಳಲು ಸಿಂಗಾಲನಿಗೆ ಬಹುವಾಗಿ ಆನಂದವಾಯಿತು.

◈ ◈ ◈

ಮರಣಾನುಸ್ಮೃತಿ *

ಸಂಸಾರದ ಗೊಂದಲವನ್ನು ಹರಿದು ಜೀವನದಲ್ಲಿ ವಿಶುದ್ಧಿಯನ್ನು ಪಡೆಯಲು ಬುದ್ಧನು ತೋರಿಸಿದ ದಾರಿಯಲ್ಲಿ ಮೂರು ಹೆಜ್ಜೆಗಳು— ಶೀಲ, ಸಮಾಧಿ, ಪ್ರಜ್ಞೆ. ಶೀಲ ನಡೆನುಡಿಗೆ ಸಂಬಂಧಿಸಿದ್ದು, ಸಮಾಧಿ ಮನಸ್ಸಿಗೆ ಸಂಬಂಧಿಸಿದ್ದು, ಪ್ರಜ್ಞೆ ಮುಕ್ತಿದಾಯಕವಾದ ಜ್ಞಾನ. ಇವುಗಳಲ್ಲಿ ಸಮಾಧಿ ಬೌದ್ಧರಿಗೆ ಬಹು ಅಗತ್ಯವಾದದ್ದು. ಇದೇ ಬೌದ್ಧರ ಧ್ಯಾನ. ಏಳು ಬಗೆಯ ಇಂಥ ಧ್ಯಾನಗಳಲ್ಲಿ ಅನುಸ್ಮೃತಿಯೆಂಬುದು ಮುಖ್ಯ. ಯಾವುದಾದರೊಂದು ವಿಶಿಷ್ಟವಾದ ಸಂಗತಿಯನ್ನು ಮನಸ್ಸಿನಲ್ಲಿಟ್ಟು ಅದೇ ವಿಚಾರವಾಗಿ ಕೂಲಂಕಷವಾಗಿ, ಪರಿಷ್ಕಾರವಾಗಿ ಮನನ ಮಾಡುವುದೇ ಅನುಸ್ಮೃತಿಯೆನಿಸಿಕೊಳ್ಳುವುದು. ಹೀಗೆ ಮಾಡುವುದರಿಂದ ಯಥಾರ್ಥ ಜ್ಞಾನವಾಗುತ್ತದೆ. ಅನುಸ್ಮೃತಿಯ ವಸ್ತುಗಳು ಹತ್ತು ; ಇವುಗಳಲ್ಲಿ ಮರಣ ಒಂದು. ಮರಣವೆಂಬುದು ಸರ್ವವ್ಯಾಪಿ, ಸಾರ್ವತ್ರಿಕ ; ಮರಣವೆಂದರೆ ಮನುಷ್ಯ ಬೆಚ್ಚಿ ಬೀಳುತ್ತಾನೆ. ಸಾವಿಗೆ ಅಂಜಿ ಅದರ ಬಲವನ್ನರಿಯದೆ ಬದುಕಿನ ಮೇಲೆ ನಂಬಿ ನಿಂತಿದ್ದೇವೆ. ಈ ಗಾಬರಿ ತೊಲಗಿದ ವಿನಾ ಜೀವನದಲ್ಲಿ ಶಾಂತಿಯಿರದು, ಸಮಾಧಾನ ಇರದು. ಹೀಗೆ ಭಯಾನಕವಾದ ಮರಣದ ನಿಜಸ್ವರೂಪ ಅರಿಯಲೆಂದೇ ಈ ಅನುಸ್ಮೃತಿ.

---

*. ಬುದ್ಧಘೋಷಾಚಾರ್ಯನ 'ವಿಶುದ್ಧಿಮಾರ್ಗ' ಎಂಬ ಗ್ರಂಥದ ಒಂದು ಅಧ್ಯಾಯದ ಭಾವಾನುವಾದ.

ಒಂದು ಜೀವಿಯ ಬಾಳುವೆಗೆ ಗೊತ್ತಾದ ಪ್ರಾಣ ಕಡಿದು ಬೀಳುವುದೇ ಮರಣ ಎನಿಸಿಕೊಳ್ಳುವುದು. ಮರಣದಲ್ಲಿ ಕಾಲ ಮರಣ, ಅಕಾಲ ಮರಣ ಎಂದೆರಡು ವಿಧ. ಪುಣ್ಯ ಮುಗಿದೋ, ಆಯುಸ್ಸು ಮುಗಿದೋ ಅಥವಾ ಎರಡೂ ಮುಗಿದೋ ಸಾಯುವುದು ಕಾಲಮರಣ ; ಆಯುಸ್ಸು ಮುಗಿಯುವ ಮುನ್ನವೇ ಬದುಕನ್ನು ಕತ್ತರಿಸುವ ಕರ್ಮ ದಿಂದಾದ ಸಾವು ಅಕಾಲಮರಣ.

ಸಾಮಾನ್ಯವಾಗಿ ಜನ ಇಷ್ಟರಾದವರು ಸತ್ತರೆ ಶೋಕಪಡುತ್ತಾರೆ ; ಬೇಡದವರು ಸತ್ತರೆ ಸಮಾಧಾನ ಪಡೆಯುತ್ತಾರೆ ; ಎರಡೂ ಅಲ್ಲದವರು ಸತ್ತರೆ ಯಾವ ಪ್ರತಿಕ್ರಿಯೆಯೂ ಇಲ್ಲದೆ ಇರುತ್ತಾರೆ. ತಮ್ಮ ಸಾವನ್ನೇ ಯೋಚಿಸುಕೊಂಡು ಹೆದರುತ್ತಾರೆ. ಆದರೆ ಈ ಭಾವನೆಗಳಲ್ಲಿ ಸ್ಮೃತಿಯಾಗಲೀ, ಸಂವೇಗವಾಗಲೀ, ಜ್ಞಾನವಾಗಲೀ ಇರದು. ಇದು ದಡ್ಡರ ಪ್ರವೃತ್ತಿ. ಬುದ್ಧಿವಂತನಾದವನು ಯಾವುದಾದರೊಂದು ಪ್ರಾಣಿ ಸತ್ತರೆ ಅಥವಾ ಹತವಾದರೆ ಅದನ್ನು ನೋಡಿ 'ಮುಂಚೆ ಜೀವದಿಂದ ತುಂಬಿ ಓಡಿಯಾಡುತ್ತಿದ್ದುದು ಹೀಗಾಯಿತಲ್ಲಾ' ಎಂದು ಆಲೋಚನೆ ಮಾಡಿ 'ಸಾವು ಅನಿವಾರ್ಯ' ಎಂದು ಪ್ರವರ್ತಿಸಬೇಕು. ಹೀಗೆ ಮರಣವನ್ನೇ ವಸ್ತುವಾಗಿಟ್ಟುಕೊಂಡು ಧ್ಯಾನಮಾಡಿದರೆ ಜೀವನದಲ್ಲಿ ಅತಿಯಾಸೆ, ದ್ವೇಷ, ನಿರರ್ಥಕಚಿಂತೆ, ಅಲಸಿಕೆ, ಅಧ್ಯಾತ್ಮ ವಿಚಾರದಲ್ಲಿ ಅನಾಸಕ್ತಿ ಇವುಗಳು ಮರೆಯಾಗಿ ಸಾಂತಿ ಲಬ್ಧವಾಗುತ್ತದೆ.

೧. ಈ ರೀತಿಯಾಗಿ ಧ್ಯಾನಮಾಡುವವನು ಮುಂದೆ ಬಂದ ವಧಕನ ಚಿಂತೆ ಮಾಡಬೇಕು. ಅದು ಹೇಗೆಂದರೆ — 'ನಿನ್ನ ತಲೆಯನ್ನು ಕತ್ತರಿಸುತ್ತೇನೆ' ಎಂದು ಕತ್ತಿಯನ್ನು ಝಳಪಿಸುತ್ತ ಯಾವನಾದರೊಬ್ಬ ವಧಕ ನಮ್ಮ ಮುಂದೆ ಬಂದು ನಿಂತಂತೆ ಮರಣವೂ ಎಂದು ಆಲೋಚಿಸಬೇಕು. ಅವನ ಹಿಡಿತದಿಂದ ತಪ್ಪಿಸಿಕೊಳ್ಳುವುದು ಹೇಗೆ ಅಸಾಧ್ಯವೋ ಹಾಗೆಯೇ

ಸಾವಿನ ಹಿಡಿತದಿಂದ ಯಾವ ಜೀವಿಯೂ ತಪ್ಪಿಸಿಕೊಳ್ಳಲಾರದು. ಮನುಷ್ಯ ಹುಟ್ಟಿದನಂತರ ಮುಪ್ಪನ್ನು ಹೊಂದಿ ಪರ್ವತ ಶಿಖರದಿಂದ ಕೆಳಗೆ ಬಿದ್ದ ಬಂಡೆ ಒಡೆದು ಚೂರಾಗುವಂತೆ ಸಾವಿನಿಂದ ಒಡೆದು ಪುಡಿಯಾಗುತ್ತಾನೆ. ಹೀಗೆ ಸಾವೆಂಬುದು ಹುಟ್ಟಿನ ಸಂಗಡವೇ ಬಂದದ್ದು. ಹುಟ್ಟಿದವನಿಗೆ ಸಾವೆಂದೂ ತಪ್ಪದು.

ಬೆಳಗು ಉದಯಿಸಿದ ಸೂರ್ಯ ಅವಶ್ಯವಾಗಿ ಅಸ್ತಾಭಿಮುಖವಾಗಿ ಹೋಗುತ್ತಾ ಇಟ್ಟ ಹೆಜ್ಜೆಯನ್ನು ಎಂದೂ ಹಿಂದೆಗೆಯುವುದಿಲ್ಲ ; ಪರ್ವತದಿಂದ ಇಳಿದ ನದಿ ಸಮುದ್ರದ ಕಡೆ ವೇಗದಿಂದ ಹರಿಯುತ್ತ ಕೊಂಚವೂ ಹಿಂದೆ ಹರಿಯದು — ಅದರ ಗಮನ ಮುಂದೆ ಮಾತ್ರ. ಹಾಗೆಯೇ ಹುಟ್ಟಿದ ಜೀವಿಯೂ ನೇರವಾಗಿ ಸಾವಿಗೇ ನಡೆಯುತ್ತಾನೆ.

ಹೀಗೆ ಹೋಗುವ ಮನುಷ್ಯ ಹೇಗೆ ಅವಸಾನ ಹೊಂದುತ್ತಾನೆ ? ಬಿಸಿಲಿನ ಬೇಗೆಯಲ್ಲಿ ಸಣ್ಣನದಿ ಬತ್ತಿಹೋಗುವಂತೆ, ಪಕ್ವವಾಗಿ ಕೊಳೆತ ಹಣ್ಣು ಮರದಿಂದ ಕೆಳಕ್ಕೆ ಬೀಳುವಂತೆ, ದೊಣ್ಣೆಯಿಂದ ಬಡಿದರೆ ಮಡಕೆಗಳು ಒಡೆಯುವಂತೆ ; ಸೂರ್ಯರಶ್ಮಿಯಿಂದ ಮುಂಜಾನೆಯ ಮಂಜುಹನಿ ಇಂಗುವಂತೆ— ಹೀಗೆಯೇ ಮನುಷ್ಯನ ಬದುಕೂ. ಈರೀತಿಯಾಗಿ ಯೋಚನೆ ಮಾಡುವುದು ಮೊದಲ ಸ್ಥಾನ.

೨. ಅಲ್ಲದೆ ಸಂಪತ್ತಿ ವಿಪತ್ತಿಗಳ ವಿಚಾರವಾಗಿ ಆಲೋಚಿಸಬೇಕು. ನಮಗೆ ಸಂಪತ್ತು ಇದ್ದರೇ ಶೋಭಿಸುತ್ತದೆ, ವಿಪತ್ತು ಬಂದರೆ ಕಳೆಗುಂದುವೆವು. ಆದರೆ ವಿಪತ್ತನ್ನು ಎಂದೂ ಕೆಳಗೆ ತಳ್ಳಿ ತಾನು ಭೂಮಿಯ ಮೇಲಿರುವ ಎಲ್ಲ ಸುಖಗಳನ್ನೂ ಪಡೆದು, 'ಇನ್ನೇನು, ದೇವರಿಗೂ ನನಗೂ ಒಂದು ನೆಲ್ಲಿಕಾಯಿಯಷ್ಟು ಮಾತ್ರ ವ್ಯತ್ಯಾಸ' ಎಂದುಕೊಳ್ಳುವವನೂ ಪುಣ್ಯ ಕ್ಷಯವಾದೊಡನೆ ದೇಹದಲ್ಲಿ ಆಯ ತಪ್ಪಿ ಮರಣದ ದಾರಿ ಹಿಡಿದು ದುಃಖಪಡುತ್ತಾನೆ. ಎಲ್ಲ ಆರೋಗ್ಯವೂ ರೋಗದಲ್ಲಿ ಮುಗಿಯುತ್ತದೆ.

ಯೌವನ ಮುಪ್ಪಿನಲ್ಲಿ ಮುಗಿಯುತ್ತದೆ. ಎಲ್ಲ ಬದುಕೂ ಸಾವಿನಲ್ಲಿ ಮುಗಿಯುತ್ತದೆ. ಹುಟ್ಟಿದ ಎಲ್ಲರೂ ಮುಪ್ಪಿನಿಂದ ಬಳಲುವರು. ವ್ಯಾಧಿಯಿಂದ ನಡುಗುವರು, ಮರಣದಲ್ಲಿ ಮರೆಯಾಗುವರು. ಜೀವಿತವೆಂಬ ಸಂಪತ್ತು ಮರಣವೆಂಬ ವಿಪತ್ತಿನಲ್ಲಿ ಪರ್ಯವಸಾನವಾಗುವುದು. ಈ ವಿಪತ್ತು ಯಾರಿಗೂ ತಪ್ಪಿದ್ದಲ್ಲ; ಎಲ್ಲ ಜಾತಿಯವರಿಗೂ ಎಲ್ಲೆಲ್ಲೂ ಶತಸ್ಸಿದ್ಧ. ಸಾವನ್ನು ಜಯಿಸಬಲ್ಲ ಯಾವ ಸೇನೆಯೂ ಇಲ್ಲ, ಯಾವ ಮಂತ್ರಯುದ್ಧವೂ ಇಲ್ಲ, ಯಾವ ಸಂಪತ್ತೂ ಇಲ್ಲ— ಹೀಗೆ ಯೋಚಿಸುವುದು ಎರಡನೆಯದು.

೩. ಮೂರನೆಯದಾಗಿ ಎಲ್ಲರೊಡನೆ ತನ್ನ ಬಾಳೂ ಉಪಸಂಹಾರವಾಗಬೇಕೆಂದು ಯೋಚಿಸಬೇಕು. ಈ ಸಾವೆಂಬುದು ಮಹಾ ಯಶಸ್ಸುಗಳಿಸಿ, ಪರಿವಾರದೊಂದಿಗೆ ವಿಜೃಂಭಿಸುತ್ತ ಧನವಾಹನಾದಿ ಐಶ್ವರ್ಯದಿಂದ ಸಮೃದ್ಧರಾಗಿದ್ದ ಮಹಾಸಮ್ಮತ, ಮಾಂಧಾತ, ಸುದರ್ಶನ, ದೃಢನೇಮಿ, ನಿಮಿ ಮುಂತಾದ ಚಕ್ರವರ್ತಿಗಳನ್ನೇ ಆತಂಕವಿಲ್ಲದೆ ನುಂಗಿತು, ಇನ್ನು ನಮ್ಮಂಥವರ ಪಾಡೇನು ? ಪುಣ್ಯವಂತರೆಂದು ಯಾರನ್ನಾದರೂ ಬಿಡುತ್ತದೆಯೆ ? ಜ್ಯೋತಿಕ, ಜಟಿಲ, ಉಗ್ರ, ಮೇಂಡಕ, ಪುಣ್ಯಕ ಮುಂತಾದ ಲೋಕದಲ್ಲೇ ಮಹಾ ಪುಣ್ಯಜೀವಿಗಳೆಂದು ವಿಶ್ರುತರಾದವರೆಲ್ಲ ಸತ್ತರು. ಇನ್ನು ನಮ್ಮ ಸಾವಿಗೆ ಅಳುವುದೇಕೆ ? ಇಲ್ಲ, ಬಲವಂತರೆಂದು ಯಾರಾದರೂ ಸಾವನ್ನು ಹೆದರಿಸಿ ಚಿರಂಜೀವಿಗಳಾಗಿದ್ದಾರೆಯೆ ? ವಾಸುದೇವ, ಬಲಭದ್ರ, ಭೀಮಸೇನ, ಯುಧಿಷ್ಠಿರ, ಮಹಾಮಲ್ಲನಾದ ಚಾಣೂರ ಇವರೆಲ್ಲ ಏನಾದರೂ ? ಅಂತಕನು ಎಲ್ಲರನ್ನೂ ನುಂಗಿದ. ಅಥವಾ ಮಂತ್ರ ಶಕ್ತಿ ಇಂದ್ರಜಾಲ ವಿದ್ಯೆಯಿಂದ ಯಾರಿಗಾದರೂ ಸಾವು ಸೋತಿದೆಯೆ ? ಬುದ್ಧನ ಅಗ್ರಶ್ರಾವಕರಲ್ಲಿ ದ್ವಿತೀಯನೆಂದು ಪ್ರಸಿದ್ಧನಾದ ಮಹಾ ಮೌದ್ಗಲ್ಯಾಯನ ಇಂದ್ರಜಾಲ ವಿದ್ಯೆಯಲ್ಲಿ ಅದ್ವಿತೀಯನಾಗಿದ್ದ ; ಪಾದಾಂಗುಷ್ಠದಿಂದ ಇಂದ್ರನನ್ನೇ

ನಡುಗಿಸಿದ. ಆದರೆ ಸಿಂಹದ ದವಡೆಯಲ್ಲಿ ಜಿಂಕೆ ಹೋಗುವಂತೆ ಸಾವಿಗೆ ತುತ್ತಾದ— ಅವನ ಇಂದ್ರಜಾಲ ವಿದ್ಯೆ ಅವನ ಜೊತೆಯಲ್ಲೇ ಹೋಯಿತು ! ಸಾವು ಮಾತ್ರ ಬಿಡಲಿಲ್ಲ. ಅಥವಾ ಜ್ಞಾನಿಗಳ ವಿಚಾರದಲ್ಲಿ ಸಾವು ಅನುಕಂಪ ತೋರಿಸಿ ಅವರನ್ನು ಮುಟ್ಟದೆ ಉಳಿಸುತ್ತದೆಯೆ ? ಶಾರಿಪುತ್ರನಿಗಿಂತ ಮತ್ತೊಬ್ಬ ಜ್ಞಾನಿಯೆ ? ಬುದ್ಧನ ಅಗ್ರಶ್ರಾವಕರಲ್ಲಿ ಪ್ರಥಮ ಆತ ; ಬುದ್ಧನನ್ನು ಬಿಟ್ಟರೆ ಪ್ರಜ್ಞೆಯಲ್ಲಿ ಅವನ ಷೋಡಶಾಂಶಕ್ಕೆ ಸರಿದೂಗಬಲ್ಲ ಪಂಡಿತ ಮತ್ತೊಬ್ಬ ಜಗತ್ತಿನಲ್ಲೇ ಇರಲಿಲ್ಲ. ಆದರೆ ಅವನ ಪಾಂಡಿತ್ಯ ಸಾವನ್ನು ಓಡಿಸಿತೆ ? ಅಷ್ಟೇಕೆ, ಮೂವತ್ತೆರಡು ಮಹಾ ಪುರುಷ ಲಕ್ಷಣಗಳಿಂದ ಸಮನ್ವಿತನಾಗಿ, ಸರ್ವತೋಮುಖವಾಗಿ ಶೀಲ ಸಂಪನ್ನ ನಾಗಿ, ಪುಣ್ಯ ಬಲ — ಪ್ರಜ್ಞಾದಿಗಳಲ್ಲೆಲ್ಲ ಮಹತ್ವ ಪಡೆದು, ಯುಕ್ತಿಯನ್ನು ಮುಟ್ಟಿ ಭೂತಲದಲ್ಲೇ ಅಸಮನಾಗಿ ಭಗವಂತನೆನಿಸಿ ಮೆರೆದು ಸಮ್ಯಕ್ ಸಂಬುದ್ಧನೇನಾದರೂ ಸಾಯದೆ ಉಳಿದಿದ್ದಾನೆಯೆ ? ಇಂಥ ಮಹಾನುಭಾವ ವನ್ನು ನುಂಗಬೇಕಲ್ಲಾ ಎಂದು ಸಾವು ನಾಚಿಕೆಪಟ್ಟಿತೆ ? ಅಂಜಿತೆ ? ಮಹಾಬೆಂಕಿಯನ್ನೂ ದೊಡ್ಡ ಮಳೆ ಆರಿಸುವಂತೆ ಸಾವಿನಿಂದ ಸಂಬುದ್ಧ ಉಪಶಾಂತನಾದ. ಇನ್ನು ನಮ್ಮಂಥವರ ಪಾಡೇನು ? ಹೀಗೆ ಯೋಚಿಸ ಬೇಕು.

೪. ನಾಲ್ಕನೆಯದಾಗಿ, ನಮ್ಮ ಜೀವವೇನು ವಿಶಿಷ್ಟವಾದದ್ದೆ ? ಲೆಕ್ಕವಿಲ್ಲದಷ್ಟು ಕ್ರಿಮಿಗಳನ್ನು ನಾವು ನೋಡುವುದಿಲ್ಲವೆ ? ಅವುಗಳಿಗೆ ಜೀವ ಇಲ್ಲವೆ ? ನಮ್ಮ ದೇಹದೊಳಗೇ ಎಷ್ಟು ಪ್ರಾಣಿಗಳಿಲ್ಲ ? ನಮ್ಮ ಚರ್ಮದಲ್ಲಿ, ಮಾಂಸದಲ್ಲಿ, ಮೂಳಯಲ್ಲಿ, ಮಜ್ಜದಲ್ಲಿ, ಅನೇಕಾನೇಕ ಪ್ರಾಣಿಗಳು ಹುಟ್ಟಿ ಅಲ್ಲೇ ಬೆಳೆದು ಅಲ್ಲೇ ಸಾಯುತ್ತವೆ. ನಮ್ಮ ದೇಹವೇ ಅವುಗಳಿಗೆ ಪ್ರಸೂತಿಗೃಹ, ವೈದ್ಯಶಾಲೆ, ಸ್ಮಶಾನ. ನಮ್ಮ ಬದುಕಿನಲ್ಲೇ ಅವುಗಳ ಬದುಕು. ನಾಲ್ಕು ದಾರಿಗಳು ಸೇರುವೆಡೆ ಇಟ್ಟ ಲಕ್ಷ್ಯಕ್ಕೆ

ಸಾವಿರಾರು ಬಾಣ-ಬಿರುಸು-ಕವಣೆಗಳು ಬೀಳುವಂತೆ ನಮ್ಮ ದೇಹಕ್ಕೆ ಸಾವಿರಾರು ಉಪದ್ರವಗಳು ಬಂದೊದಗುವುವು. ಹಗಲು ಕಳೆದು ರಾತ್ರಿ ಬರುವುದರೊಳಗಾಗಿ ಸಾವು ತರುವ ಪ್ರಸಂಗಗಳು ಎಷ್ಟೋ ಬರುವುವು. ಹಾವೇ ಕಚ್ಚಬಹುದು, ಚೇಳು ಕುಟುಕಬಹುದು, ಉಂಡ ಅನ್ನವೇ ವಿಷಮಿಸಬಹುದು, ಪಿತ್ತವೋ ವಾತವೋ ಪ್ರಕೋಪಿಸಬಹುದು, ಅದರಿಂದ ಅವಸಾನವಾದೀತು. ಈ ರೀತಿಯಾಗಿ ಆಲೋಚಿಸಬೇಕು.

೫. ಇನ್ನು ಈ ಆಯುಸ್ಸೆಂಬುದು ಎಷ್ಟು ದುರ್ಬಲ ! ನಮ್ಮ ಬದುಕು ಉಸಿರಾಡುವುದರ ಮೇಲೆ ನಿಂತಿದೆ. ದೇಹಕ್ರಿಯೆಯ ಮೇಲೆ ನಿಂತಿದೆ, ಹೊರಗಿನ ವಾತಾವರಣದ ಶೀತ, ಉಷ್ಣ ಮುಂತಾದವುಗಳ ಮೇಲೆ ನಿಂತಿದೆ, ಆಹಾರದ ಮೇಲೆ ನಿಂತಿದೆ, ನಮ್ಮ ಭೌತಿಕ ದೇಹಕ್ಕೆ ಮೂಲವಾದ ಮಹಾಭೂತಗಳ ಮೇಲೆ ನಿಂತಿದೆ. ಈಗ ಆಶ್ವಾಸ ಪ್ರಶ್ವಾಸಗಳು ಸಮವಾಗಿದ್ದರೇ ಬದುಕು ; ಒಂದು ವೇಳೆ ಹೊರಗೆ ಹೋದ ಪ್ರಶ್ವಾಸ ಮೂಗಿನೊಳಗೆ ಮತ್ತೆ ಬರದಿದ್ದರೆ, ಅಥವಾ ಒಳಗೆ ಹೋದ ಆಶ್ವಾಸ ಹೊರಗೆ ಬರದಿದ್ದರೆ ಗತಿಯೇನು ? ಜೀವಿತಕ್ಷಯಕ್ಕೆ ಅಷ್ಟೇ ಸಾಕು. ಕಾಲ ಕಾಲಕ್ಕೆ ಆಹಾರ ಬೀಳುತ್ತಿದ್ದರೇ ಬದುಕು ; ಆಹಾರ ಇಲ್ಲದಿದ್ದರೆ ? ಹೀಗೆಯೆ ಉಳಿದೆಲ್ಲವು. ಇವೆಲ್ಲ ಆಯುಸ್ಸಿನ ದುರ್ಬಲತೆಯನ್ನು ತೋರಿಸುತ್ತವೆ. ಇದು ಐದನೆಯ ಸಮಾಲೋಚನೆ.

೬. ಹೋಗಲಿ, ಎಲ್ಲಿ, ಯಾವಾಗ ಹೇಗೆ ಸಾವು ಬರುತ್ತದೆಂಬುದನ್ನು ಮೊದಲೇ ತಿಳಿಯಲು ಸಾಧ್ಯವೇ ? ಜೀವಿತ, ವ್ಯಾಧಿ, ಕಾಲ, ದೇಹ ನಿಕ್ಷೇಪಣ, ಮರಣಾನಂತರದ ಗತಿ - ಈ ಐದೂ ಅನಿಮಿತ್ತಗಳೆಂದು ಪ್ರಸಿದ್ಧ. ಇವನ್ನು ಹೀಗೆಂದು ನಿರ್ಧರಿಸುವುದು ಅಸಾಧ್ಯ. ಒಬ್ಬ ಇಷ್ಟೇ ದಿನ ಬದುಕಬೇಕು, ಇನ್ನು ಮುಂದೆ ಇಲ್ಲ - ಎಂದು ಹೇಳಲು ಹೇಗೆ ಸಾಧ್ಯ ? ಹೊಟ್ಟೆಯೊಳಗೇ ಸಾಯುವ ಜೀವಿಗಳಿಲ್ಲವೆ ? ಹುಟ್ಟದೊಡನೆ

ಸಾಯುವುದಿಲ್ಲವೆ ? ಎರಡು ತಿಂಗಳು, ಮೂರು ತಿಂಗಳು, ಒಂದು ವರ್ಷ, ಎರಡು ವರ್ಷ ಇದ್ದು ಸಾಯುವ ಮಕ್ಕಳಿಲ್ಲವೆ ? ನೂರು ವರ್ಷ ಕಳೆದೂ ಸಾಯದೆ ಇರುವ ಜನ ಇಲ್ಲವೆ ?

ಅಥವಾ ವ್ಯಾಧಿ ಬಂದೊದಗಿದಾಗ, ಈ ರೋಗದಿಂದ ಇವನು ಸಾಯು ತ್ತಾನೆ ಅಥವಾ ಇಲ್ಲ ಎಂದು ಹೇಳಲು ಬರುತ್ತದೆಯೆ ? ಕಣ್ಣಿನ ಕಾಹಿಲೆಯಿಂದಲೇ ಸಾಯುವ ಜನರನ್ನು ನಾವು ನೋಡಿಲ್ಲವೆ ? ಯಾವ ರೋಗ ಹೇಗೆ ತಿರುಗುವುದೋ ಹೇಳಲಾಗುವುದಿಲ್ಲ. ಇನ್ನು ಕಾಲ ; ಸಾಯುವವನು ಬೆಳಿಗ್ಗೆಯೇ ಸಾಯುತ್ತಾನೆ ಮಧ್ಯಾಹ್ನವೇ ಸಾಯುತ್ತಾನೆ, ಇಷ್ಟು ಹೊತ್ತಿಗೇ ಸಾಯುತ್ತಾನೆ ಎಂದು ನಿರ್ಧರಿಸಲೂ ಯಾರಿಂದಲೂ ಶಕ್ಯವಿಲ್ಲ. ದೇಹ ನಿಕ್ಷೇಪಣ ಎಂದರೆ ದೇಹ ಬಿಡುವ ಸ್ಥಳ. ಇಲ್ಲಿಯೇ ಸಾಯಬೇಕೆಂಬ ನಿಯಮ ಇಲ್ಲ. ಕೆಲವರು ಊರಿನೊಳಗೆ ಸಾಯುತ್ತಾರೆ, ಕೆಲವರು ಕಾಡಿನಲ್ಲಿ ಸಾಯುತ್ತಾರೆ ; ಕೆಲವರಿಗೆ ನೀರಿನಲ್ಲಿ ಸಾವು, ಕೆಲವರಿಗೆ ಬೆಂಕಿಯಲ್ಲಿ ; ಇದನ್ನು ಹೀಗೇ ಎಂದು ನಿರ್ಧರಿಸುವುದು ಸಾಧ್ಯವಿಲ್ಲ. ಇನ್ನು ಸತ್ತವನ ಗತಿಯೇನೋ ಯಾರಿಗೆ ಗೊತ್ತು ? ದೇವಲೋಕಕ್ಕೇ ಹೋಗುತ್ತಾನೆಯೊ, ಮನುಷ್ಯ ಲೋಕಕ್ಕೇ ತಿರುಗಿ ಬರುತ್ತಾನೆಯೋ, ಯಾರಿಗೂ ತಿಳಿಯುವುದಿಲ್ಲ. ಹೀಗೆ ಆಲೋಚಿಸುವುದು ಆರಮನೆಯ ರೀತಿ.

೭. ಬಾಳೆಂಬುದು ಅತಿ ಬೇಗ ಮುಗಿಯುತ್ತದೆ. ಮನುಷ್ಯ ನೂರು ವರ್ಷ ಬದುಕಿದ್ದರೂ ಅದು ಅಲ್ಪ ಜೀವಿತವೇ. ಆಲದ ಮರದಂತೆ ದೀರ್ಘ ಜೀವಿಯಾಗಿ ಬದುಕಿದವನು ಕೂಡ ಸಾವು ಬಂದಾಗ 'ಅಯ್ಯೋ ಇಷ್ಟು ಬೇಗ ಸಾವು ಬಂದಿತೆ ?' ಎಂದು ನೊಂದುಕೊಳ್ಳುತ್ತಾನೆ. ಬದುಕಿಗೆ ದೀರ್ಘವೆಂಬುದೇ ಇಲ್ಲ, ಸಾವಿಗೆ ನಿಧಾನವೆಂಬುದೇ ಇಲ್ಲ. ಇದು ಏಳನೆಯ ಧ್ಯಾನ.

೮. ಕಡೆಯದಾಗಿ, ಬದುಕಿಗೆ ಮೇರೆಯಿದೆಯೆಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಅದನ್ನು ಮೀರಿ ಅದು ಎಂದೂ ಇರದು. ವಿಚಾರಮಾಡಿ ನೋಡಿದರೆ, ಮನುಷ್ಯನ ಜೀವಿತ ತುಂಬ ಕ್ಷಣಿಕ ; ಒಂದು ಯೋಚನೆ ಇರುವಷ್ಟು ಮಾತ್ರ ಅದರ ಅವಧಿ ರಥದ ಚಕ್ರ ತಿರುಗುವಾಗ ಅದು ಅದರ ಪಟ್ಟೆಯ ಒಂದು ಸ್ಥಳದಲ್ಲಿ ಮಾತ್ರ ಭೂಮಿಯನ್ನು ಮುಟ್ಟಿ ತಿರುಗುತ್ತದೆ, ಚಕ್ರ ನಿಂತಿರುವಾಗಲೂ ಅಷ್ಟೆ ಗಾಲಿಯ ಒಂದೇ ಒಂದು ಸ್ಥಳದಲ್ಲಿ ಮಾತ್ರ ನಿಂತಿರುತ್ತದೆ. ಹೀಗೆಯೇ ಮನುಷ್ಯನ ಬದುಕೆಂಬುದೂ ಒಂದೇ ಒಂದು ಮನೋವ್ಯಾಪಾರಾವಧಿ ; ಆ ಯೋಚನೆ ಹೋಗಿ ಮತ್ತೊಂದು ಯೋಚನೆ ಬಂದರೆ ಮನುಷ್ಯ ಸತ್ತು ಹುಟ್ಟಿದಂತೆ. ಕಳೆದು ಹೋದ ಚಿತ್ತಕ್ಷಣದಲ್ಲಿ ಜೀವಸಿದ್ಧಿ, ಆದರೆ ಅಲ್ಲಿ ಈಗ ಜೀವಿಸುತ್ತಿಲ್ಲ, ಮುಂದೆ ಅಲ್ಲಿ ಜೀವಿಸುವುದಿಲ್ಲ ; ಮುಂದೆ ಬರುವ ಚಿತ್ತಕ್ಷಣದಲ್ಲಿ ಜೀವಿಸುವೆ ಅಷ್ಟೇ, ಈಗ ಅಲ್ಲಿ ಜೀವಿಸುತ್ತಿಲ್ಲ, ಅಥವಾ ಹಿಂದೆ ಜೀವಿಸಿರಲಿಲ್ಲ ; ಈಗಿರುವ ಚಿತ್ತಕ್ಷಣದಲ್ಲಿ ಜೀವಿಸುತ್ತಿರುವೆ, ಇಲ್ಲಿ ಮುಂದೆ ಜೀವಿಸುವುದಿಲ್ಲ, ಅಥವಾ ಹಿಂದೆ ಜೀವಿಸಿಲ್ಲ. ಆಯಾಯ ಚಿತ್ತಕ್ಷಣದಲ್ಲಿ ಆಗಾಗ ಜೀವನ. ಚಿತ್ತದ ಭಂಗವಾಯಿತೆಂದರೆ ಬದುಕು ಮುಗಿಯುವುದು ; ಮತ್ತೊಂದು ಚಿತ್ತಕ್ಷಣ ಉತ್ಪನ್ನವಾಯಿತೆಂದರೆ ಬದುಕಿಗೆ ಹೊಸಹುಟ್ಟು. ಹೀಗೆ ಧ್ಯಾನಮಾಡಬೇಕು.

ಈ ರೀತಿಯಾಗಿ ಚಿಂತನೆಗಳನ್ನು ಮಾಡುವುದೇ ಮರಣಾನುಸ್ಮೃತಿ ಯೆನಿಸಿಕೊಳ್ಳುವುದು. ಹಾಗೆ ಮಾಡುವುದರಿಂದ ಸ್ಮೃತಿ (ಜಾಗರೂಕತೆ) ಹುಟ್ಟುತ್ತದೆ, ನೀವರಣಗಳು ಕಳಚಿ ಬೀಳುತ್ತವೆ, ಜೀವನದಲ್ಲಿ ಸುಖ, ಸಮಾಧಾನ, ಪ್ರಮೋದ, ಉಪೇಕ್ಷಾ ಬುದ್ಧಿಗಳು ಏಳುತ್ತವೆ. ಅವನು ಆಗ ಪಾಪವನ್ನು ಮಾಡಲು ಹೇಸುತ್ತಾನೆ. ಅತಿಯಾಸೆಯನ್ನು ಬಿಡುತ್ತಾನೆ, ಎಲ್ಲವೂ ಅನಿತ್ಯವೆಂದರಿತು ಮೋಹ ಮಾತ್ಸರ್ಯಗಳನ್ನು ದೂರ

ಮಾಡುತ್ತಾನೆ. ಸಾವು ಬಂದಾಗ ಸಾಮಾನ್ಯ ಜನರಂತೆ ಹೆದರಿ ಹಾರಾಡುವುದಿಲ್ಲ. ಸಾವಿನ ನಿಜಸ್ವರೂಪವನ್ನರಿತು ಶಾಂತಿಯಿಂದ ಸಮಾಧಾನದಿಂದ ಸಾಯುತ್ತಾನೆ. ಸತ್ತು ಸದ್ಗತಿ ಪಡೆಯುತ್ತಾನೆ.

◈ ◈ ◈

ಬುದ್ಧನ ನೆರಳಿನಲ್ಲಿ ನಡೆದವರು

ಬುದ್ಧ ತೋರಿಸಿದ ದಾರಿಯಲ್ಲಿ ನಡೆದ ಸಂತರ ವ್ಯಕ್ತಿತ್ವ ಬೌದ್ಧ ಧರ್ಮದ ಇತಿಹಾಸದಲ್ಲಿ ಅಷ್ಟು ಸ್ಪಷ್ಟವಾಗಿಲ್ಲ, ವಿಶ್ರುತವಾಗಿಲ್ಲ. ಕಾರಣ ೨೫೦೦ ವರ್ಷಗಳಾದರೂ ದೃಢವಾಗಿ ನಿಂತಿರುವ ಬುದ್ಧನ ಅಪ್ರತಿಮ ವಾದ ವ್ಯಕ್ತಿತ್ವದ ಪ್ರಭೆಯಲ್ಲಿ ಉಳಿದ ಹಣತೆಗಳ ಪ್ರಯೋಜನ ಇಲ್ಲದಿರುವುದು.

ಆದರೆ ಬುದ್ಧನ ದಾರಿಯಲ್ಲಿ ಬುದ್ಧನೊಬ್ಬನೇ ನಡೆದವನಲ್ಲ ; ಹಲವು ಪ್ರತಿ ಬುದ್ಧರು, ಅರ್ಹತರು ನಡೆದ ದಾರಿ ಅದು. ಇಂಥ ಜೀವನ್ಮುಕ್ತರು ಸಾಮಾನ್ಯವಾಗಿ ಜನಜಂಗುಳಿಯಲ್ಲಿ ಬೆರೆಯದೆ ಖಡ್ಗಮೃಗ ಗಳಂತೆ ಒಂಟಿಯಾಗಿ ವಿಹರಿಸುತ್ತ ಮರೆಯಾಗುತ್ತಾರೆ ; ಆದರೆ ಅವರ ಪ್ರಭಾವ ಹರಿದ ಕಡೆ ಮಂಗಳದ ಬೀಜ ಮರವಾಗದಿಲ್ಲ. ಬರ್ಮಾ ದೇಶದಲ್ಲಿ, ಸಿಂಹಳ ದ್ವೀಪದಲ್ಲಿ, ಭಾರತದಲ್ಲಿ ನಮ್ಮ ಪುಣ್ಯವಶದಿಂದ ಜನದ ದೃಷ್ಟಿಗೆ ಬಿದ್ದ ಹಲವು ಅರ್ಹತ ಭಿಕ್ಷುಗಳ ಉದಂತಗಳು ಪ್ರಚುರವಾಗಿವೆ. ಇಂಥವರಿಂದಲೇ ಒಂದು ಧರ್ಮ ನಿಲ್ಲುವುದು, ಮುಂದೆ ಸಾಗುವುದು, ಮಾರ್ಗದರ್ಶಿಯಾಗುವುದು. ಸಿಂಹಳದಲ್ಲಿ ಹೀಗೆ ಬುದ್ಧನ ದಾರಿಯಲ್ಲಿ ನಡೆದ ಸಂತರ ಕಥೆಗಳು, ವಿಶುದ್ಧಿಮಗ್ಗ, ನಿಕಾಯಟ್ಠ ಕಥೆಗಳು, ಸಹಸ್ಸತ್ಥ ಪ್ರಕರಣ, ರಸವಾಹಿನಿ ಮುಂತಾದ ಪಾಳೀಗ್ರಂಥಗಳಲ್ಲಿ ಪ್ರಾಸಂಗಿಕವಾಗಿ, ಪ್ರಮುಖವಾಗಿ ಬರುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಸಿಂಹಳದ ದಕ್ಷಿಣ ಪ್ರದೇಶಕ್ಕೆ ಮುಂಚೆ 'ರೋಹಣ' ಎಂದು ಹೆಸರಿತ್ತು. ಅಲ್ಲಿ ಕರಂಡಕ ಎಂಬ ಹೆಸರಿನ ಗುಹೆಯೊಂದರಲ್ಲಿ ಚಿತ್ರಗುಪ್ತನೆಂಬ ಸ್ಥವಿರ ಭಿಕ್ಷು ವಾಸ ಮಾಡುತ್ತಿದ್ದ. ಆ ಗುಹೆಯ ಗೋಡೆಗಳ ಮೇಲ್ಭಾಗದಲ್ಲಿ ಹಿಂದಿನ ಏಳು ಬುದ್ಧರ ಮಹಾಭಿನಿಷ್ಕ್ರಮಣವನ್ನು ಮನೋರಮವಾಗಿ ಚಿತ್ರಣ ಮಾಡಿದ್ದರು. ಒಂದು ದಿನ ಯಾತ್ರಿಕರಾದ ಹಲವು ಭಿಕ್ಷುಗಳು ಮಾರ್ಗವಶದಿಂದ ಅಲ್ಲಿಗೆ ಬಂದು ಅದೇ ಗುಹೆಯಲ್ಲಿ ಚಿತ್ರಗುಪ್ತಸ್ಥವಿರನ ಅತಿಥಿಗಳಾಗಿ ತಂಗಿದ್ದರು. ಅವರು ಗುಹಾಂತರ್ಭಿತ್ತಿ ಚಿತ್ರಗಳನ್ನು ನೋಡಿ ತುಂಬ ಸಂತೋಷಪಟ್ಟು ಹೊರಡುವಾಗ ಚಿತ್ರಗುಪ್ತನನ್ನು ಕುರಿತು— 'ಭಂತೇ, ಎಷ್ಟು ಸುಂದರವಾದ ಚಿತ್ರಗಳು !' ಎಂದರು. ಚಿತ್ರಗುಪ್ತ 'ಎಲ್ಲಿ ?' ಎಂದು ಕೇಳಿದ ; ಅವರು ಆ ಚಿತ್ರಗಳನ್ನು ತೋರಿಸಲು ಚಿತ್ರಗುಪ್ತಸ್ಥವಿರ— 'ನೀವು ಕಣ್ಣಿರುವವರು ನಿಮ್ಮಿಂದ ನಾನು ಈ ಸುಂದರ ಚಿತ್ರಗಳನ್ನು ನೋಡಿದೆ. ನಾನು ಇದೇ ಗುಹೆಯಲ್ಲಿ ಅರವತ್ತು ವರ್ಷಗಳಿಂದ ವಾಸಮಾಡುತ್ತಿದ್ದೇನೆ ; ಈ ಚಿತ್ರಗಳಿದ್ದುದೇ ನನಗೆ ಗೊತ್ತಿರಲಿಲ್ಲ !' ಎಂದ. ಅವನ ಗುಹೆಯ ಮುಂದೆ ಮಹಾನಾಗವೃಕ್ಷವೊಂದಿತ್ತು ; ಅದನ್ನು ಕತ್ತೆತ್ತಿ ಒಮ್ಮೆಯೂ ನೋಡಿದವನಲ್ಲ ಚಿತ್ರಗುಪ್ತ ; ವರ್ಷಂಪ್ರತಿ ಹೂಗಳು ಕೆಳಗೆ ಬೀಳುತ್ತಿದ್ದುದನ್ನು ಮಾತ್ರ ಕಂಡಿದ್ದ ! ಹೀಗೆ ಅನವರತ ಧ್ಯಾನದಲ್ಲೇ ನಿರತನಾಗಿ ಬಾಹ್ಯ ವಿಚಾರಗಳಿಂದ ವಿಮುಖನಾಗಿರುತ್ತಿದ್ದವನು.

ಈ ಸ್ಥವಿರನ ಗುಣಸಂಪತ್ತಿಯನ್ನು ಕೇಳಿ ಮಹಾಗಾಮನಗರದ ದೊರೆ ಕಾಕವರ್ಣತಿಷ್ಯ ತನ್ನ ಅರಮನೆಗೆ ದಯಮಾಡುವಂತೆ ಅವನಿಗೆ ನಿಮಂತ್ರಣ ಕಳಿಸಿದ. ಸ್ಥವಿರ ಉತ್ತರವನ್ನು ಕೊಡಲಿಲ್ಲ, ಬರಲೂ ಇಲ್ಲ. ತನ್ನ ಪ್ರಯತ್ನಗಳೆಲ್ಲ ವಿಫಲವಾಗಲು ದೊರೆ ಊರಿನ ಮಕ್ಕಳ ತಾಯಿಯರ ಸ್ತನಗಳನ್ನೆಲ್ಲ ಕಟ್ಟಿಸಿ 'ಚಿತ್ರಗುಪ್ತಥೇರ ಬರುವವರೆಗೂ ಮಕ್ಕಳಿಗೆ ಹಾಲು

ಉಣಿಸಬಾರದು' ಎಂದು ಡಂಗುರ ಹೊಡೆಸಿದ. ಈ ಸುದ್ದಿ ಚಿತ್ರಗುಪ್ತನ ಕಿವಿಗೆ ಬಿದ್ದು ಮಕ್ಕಳ ಮೇಲಿನ ಅನುಕಂಪದಿಂದ ಅವನು ತನ್ನ ಗುಹೆಬಿಟ್ಟು ಅರಮನೆಗೆ ಬಂದ. ಸರಿ, ಬಂದೊಡನೆ ರಾಜೋಪಚಾರ ನಡೆಯಲಾರಂಭ ವಾಯಿತು. ರಾಜ ಬಂದು ನಮಸ್ಕರಿಸಿದ, ರಾಣಿ ಬಂದು ನಮಸ್ಕರಿಸಿದಳು, ಅಮಾತ್ಯರು ಬಂದು ನಮಸ್ಕರಿಸಿದರು, ಪುರಜನರು ಬಂದರು — ಎಲ್ಲರಿಗೂ ಸ್ಥವಿರನ ಆಶೀರ್ವಾದ 'ಸುಖವಾಗಿರು, ಮಹಾರಾಜ!' ಎಂದೇ. ಅವನಿಗೆ ಇವನು ರಾಜ ಇವಳು ರಾಣಿ ಇವರು ಮಂತ್ರಿಗಳು — ಹೀಗೆಲ್ಲ ಪರಿಜ್ಞಾನವೇ ಇರಲಿಲ್ಲ ! ಅವನ ಅನಾಸಕ್ತಿಗೆ ಬೇಸರಗೊಂಡು ದೊರೆ ಅವನನ್ನು ತಿರುಗಿ ಗುಹೆಗೆ ಕಳುಹಿಸಬೇಕಾಯಿತು.

ಬೌದ್ಧರ ಭಾವನೆಗಳಲ್ಲಿ 'ಅಟ್ಠಿಕಾಸಂಜ್ಞಾ' ಎಂಬುದೊಂದುಂಟು. ಇದರಂತೆ ಭಿಕ್ಷುಗಳು ಮನುಷ್ಯರನ್ನು ಸ್ತ್ರೀ ಪುರುಷಭೇದವಿಲ್ಲದೆ ಅಸ್ಥಿಪಂಜರ ಗಳಂತೆ ಮಾತ್ರ ಕಾಣುವ ಮನೋವೃತ್ತಿಯನ್ನು ಬೆಳೆಸಿಕೊಳ್ಳುವರು. ಈ ಭಾವನೆಯನ್ನು ಮಾಡುತ್ತಿದ್ದ ಮಹಾತಿಸ್ಸನೆಂಬ ಚೈತ್ಯ ಪರ್ವತದ ಭಿಕ್ಷುವಿನ ಕಥೆ 'ವಿಶುದ್ಧಿಮಾರ್ಗ'ದಲ್ಲಿ ಬರುತ್ತದೆ. ಒಂದು ದಿನ ಬೆಳಿಗ್ಗೆ ಈ ಸ್ಥವಿರ ಪಿಂಡಪಾತಕ್ಕೆಂದು ಬೀದಿಯಲ್ಲಿ ಹೋಗುತ್ತಿದ್ದಾಗ, ತನ್ನ ಗಂಡನೊಂದಿಗೆ ಜಗಳವಾಡಿ ಮನೆಬಿಟ್ಟು ತೌರೂರಿಗೆ ಹೊರಟಿದ್ದ ಭೂಷಿತಳಾದ ಸುಂದರ ಸ್ತ್ರೀಯೊಬ್ಬಳು ಎದುರಾಗಿ ಬಂದಳು. ಭಿಕ್ಷುವನ್ನು ಕಂಡು ಏನು ಕಾರಣವೋ ನಕ್ಕಳು ; ನಕ್ಕಾಗ ಅವಳ ಶುದ್ಧ ದಂತಪಂಕ್ತಿ ಹೊಳೆಯಿತು. ಅದನ್ನು ಕಂಡೊಡನೆ ಭಿಕ್ಷುವಿಗೆ 'ಅಟ್ಠಿಕಸಂಜ್ಞೆ' ಮೊದಲಾಯಿತು. ದಾರಿಯಲ್ಲಿ ಮುಂದೆ ಹೋಗುವಲ್ಲಿ ಆ ಹೆಂಗಸಿನ ಗಂಡ ಅವಳನ್ನು ಹುಡುಕಾಡುತ್ತಾ ಭಿಕ್ಷು ವನ್ನು ಕಂಡು 'ಭಂತೇ ಈ ದಾರಿಯಲ್ಲಿ ಸ್ತ್ರೀಯೊಬ್ಬಳನ್ನು ಕಂಡಿರಾ ?'— ಎಂದು ಕೇಳಿದ. ಅದಕ್ಕೆ ಭಿಕ್ಷು 'ಅಯ್ಯಾ, ಉಪಾಸಕ ! ಅದು ಸ್ತ್ರೀಯೋ ಪುರುಷನೋ ನನಗೆ ತಿಳಿಯದು, ಅಂತೂ ಒಂದು ಅಸ್ಥಿಪಂಜರ ಈ ದಿಕ್ಕಿನಲ್ಲಿ ಹೋದುದನ್ನು ಕಂಡೆ' ಎಂದ !

ಮಗನ ಗುರುತು ಹತ್ತಲಿಲ್ಲ:

'ವಿಶುದ್ಧಿಮಾರ್ಗ'ದಲ್ಲೇ ಇನ್ನೊಂದು ಸೊಗಸಾದ ಕಥೆಯಿದೆ. ಕೊರಂಡಕ ಎಂಬ ಗ್ರಾಮದ ವಿಹಾರದಲ್ಲಿ ಸಣ್ಣವಯಸ್ಸಿನ ಹುಡುಗನೊಬ್ಬ ಭಿಕ್ಷುವಾಗಿದ್ದ. ತನ್ನ ಸೋದರಮಾವನ ಬಳಿಯೇ ಭಿಕ್ಷುವಾಗಿ, ಅಧ್ಯಯನಕ್ಕೆಂದು ರೋಹಣದೇಶಕ್ಕೆ ಹೋಗಿಬಿಟ್ಟ. ಹುಡುಗನ ತಾಯಿ ತನ್ನ ತಮ್ಮನಾದ ಭಿಕ್ಷುವನ್ನು ಪದೇ ಪದೇ ತನ್ನ ಮಗನ ಯೋಗಕ್ಷೇಮದ ವಿಚಾರ ಕೇಳುತ್ತಿದ್ದಳು. ಒಂದು ದಿನ ಇವನು ಹುಡುಗನನ್ನು ಕೊರಂಡಕ ಗ್ರಾಮಕ್ಕೆ ಕರೆತಂದು ಅವನ ತಾಯಿ ತಂದೆಗಳಿಗೆ ಭೇಟಿ ಮಾಡಿಸುತ್ತೇನೆಂದು ಹೇಳಿ ರೋಹಣದ ದಿಕ್ಕಿಗೆ ಹೊರಟ. ಆ ಕಡೆ ಆ ಹುಡುಗನೂ 'ನನ್ನ ಗುರುವನ್ನು ನೋಡಿ' ತುಂಬ ದಿನ ಆಯಿತು ; ಕೊರಂಡಕಕ್ಕೆ ಹೋಗಿ ಬರುತ್ತೇನೆ' ಎಂದುಕೊಂಡು ಕೊರಂಡಕದ ದಿಕ್ಕಿನಲ್ಲಿ ಹೊರಟ. ಇಬ್ಬರೂ ಮಹಾವ್ಯಾಳಿ ಗಂಗಾನದಿಯ ದಡದಲ್ಲಿ ಸಂಧಿಸಿದರು. ತಂತಮ್ಮ ಪ್ರವಾಸದ ಉದ್ದೇಶಗಳನ್ನು ವಿನಿಮಯ ಮಾಡಿಕೊಂಡ ಮೇಲೆ ಸೋದರಮಾವ ಭಿಕ್ಷು ಹುಡುಗನನ್ನು ಕುರಿತು — 'ಒಳ್ಳೆಯದು, ನೀನು ಊರಿಗೆ ಹೋಗಿ ತಂದೆ ತಾಯಿಗಳನ್ನು ನೋಡು. ಈ ಜಾಗ ಸೊಗಸಾಗಿದೆ ; ನಾನಿಲ್ಲೇ ವರ್ಷಾವಾಸ (ಚಾತುರ್ಮಾಸ್ಯ)ದ ಮೂರು ತಿಂಗಳು ಕಳೆದು ಊರಿಗೆ ಬರುತ್ತೇನೆ'— ಎಂದ. ಹುಡುಗ ಕೊರಂಡಕ ಗ್ರಾಮದ ಕಡೆ ಹೊರಟು ವರ್ಷಾವಾಸಕ್ಕೆ ಭಿಕ್ಷುಗಳು ಕೂಡುವ ದಿನವೇ ತನ್ನ ಗ್ರಾಮಕ್ಕೆ ಬಂದು ಅಲ್ಲಿನ ವಿಹಾರದಲ್ಲಿ ಬೀಡುಬಿಟ್ಟ. ಆಗ ಅಲ್ಲಿಗೆ ಬಂದಿದ್ದ ಅವನ ತಂದೆ ತರುಣ ಭಿಕ್ಷುವನ್ನು ನೋಡಿ 'ಭಂತೇ, ಇಲ್ಲಿಗೆ ಬಂದ ಭಿಕ್ಷುಗಳು ಮೂರು ತಿಂಗಳು ನನ್ನ ಮನೆಯಲ್ಲೇ ದಾನವನ್ನು ಸ್ವೀಕರಿಸಬೇಕು, ಇದು ಸಂಪ್ರದಾಯ'— ಎಂದು ಬಿನ್ನವಿಸಿಕೊಂಡ. ಅವನಿಗೆ ತನ್ನ ಮಗನ ಗುರುತು ಸಿಗಲಿಲ್ಲ ; ಸಣ್ಣವನಿದ್ದಾಗಲೇ ಹೊರಟು ಹೋದವನು ತುಂಬ ಬದಲಾಯಿಸಿ ಬಿಟ್ಟಿದ್ದ.

ಆಗಲೆಂದು ಭಿಕ್ಷು ಒಪ್ಪಿಕೊಂಡು ಮನೆಗೆ ಹೋಗಿ ತನ್ನ ತಾಯಿತಂದೆಯರ ಆತಿಥ್ಯವನ್ನು ಮೂರು ತಿಂಗಳೂ ಸ್ವೀಕರಿಸಿದ ; ಅವರಿಗೆ ಇವನು ತಮ್ಮ ಮಗನೆಂಬ ಅರಿವಿಲ್ಲ; ಇವನಿಗೆ ತನ್ನ ಪರಿಚಯ ಹೇಳುವುದರ ಅವಶ್ಯಕತೆ ಕಾಣಲಿಲ್ಲ.

ಮೂರು ತಿಂಗಳು ಕಳೆದು ಭಿಕ್ಷು ಹೊರಡುವೆನೆಂದಾಗ ಅವರು ಅವನಿಗೆ ಒಂದು ನಾಳಿಯಲ್ಲಿ ಎಣ್ಣೆಯನ್ನೂ, ಒಂದು ಹೊಸಬಟ್ಟೆಯನ್ನೂ, ಒಂದು ಸಕ್ಕರೆಯ ಹೆಂಟೆಯನ್ನೂ ಕೊಟ್ಟು ಕಳುಹಿಸಿದರು. (ಇದು ಭಿಕ್ಷುಗಳನ್ನು ಬೀಳ್ಕೊಡುವ ಸಂಪ್ರದಾಯ.) ಸರಿ, ಭಿಕ್ಷು ರೋಹಣದ ಕಡೆ ಹೊರಟವನು ದಾರಿಯಲ್ಲಿ ಇದಿರಾಗಿ ಬರುತ್ತಿದ್ದ ತನ್ನ ಉಪಾಧ್ಯಾಯ ಸೋದರಮಾವ ಭಿಕ್ಷುವನ್ನು ಪುನಃ ಸಂಧಿಸಿದ. ಊರವಾರ್ತೆಯನ್ನು ಕೇಳಿ, ತಾಯಿ ತಂದೆಗಳಿಂದ ಆತಿಥ್ಯ ಸ್ವೀಕರಿಸಿದ ಸುದ್ದಿಯನ್ನು ಕೇಳಿ ಹಿರಿಯ ಭಿಕ್ಷುವಿಗೆ ಸಂತೋಷವಾಯಿತು ; ಆದರೆ ತಾಯಿ ತಂದೆಗಳು ಮಗನನ್ನು ಗುರುತಿಸಲಿಲ್ಲವೆಂಬುದು ಅವನಿಗೆ ಗೊತ್ತಾಗಲಿಲ್ಲ. ತರುಣ ಭಿಕ್ಷು ತನ್ನ ತಾಯಿ ತಂದೆ ಕೊಟ್ಟಿದ್ದ ಎಣ್ಣೆಯನ್ನು ಉಪಾಧ್ಯಾಯನ ಕಾಲಿಗೆ ತಿಕ್ಕಿ, ಸಕ್ಕರೆಯ ಹೆಂಟೆಯ ನೀರನ್ನು ಕುಡಿಯಲು ಕೊಟ್ಟು, ಹೊಸಬಟ್ಟೆಯನ್ನು ಅವನಿಗೆ ಸಮರ್ಪಿಸಿ, ಅವನಿಂದ ಅನುಜ್ಞಾತವಾಗಿ ತನ್ನ ಪ್ರಯಾಣ ಮುಂದುವರಿಸಿದ. ಹಿರಿಯ ಭಿಕ್ಷು ಕೊರಂಡಕಕ್ಕೆ ಬಂದು ತನ್ನ ಅಕ್ಕನ ಮನೆಗೆ ಬರಲು, ಅವನು ಒಬ್ಬನೇ ಬಂದುದನ್ನು ನೋಡಿ ಆಕೆ 'ಓಹೋ, ನನ್ನ ಮಗ ಸತ್ತಿರಬೇಕು' ಎಂದು ಬಗೆದು ಅಳಲು ಮೊದಲಿಟ್ಟಳು ; ತನ್ನ ಮಗನನ್ನು ಕಾಣುವ ಕುತೂಹಲದಲ್ಲೇ ಇದ್ದಳು ಆಕೆ. ನಂತರ ಭಿಕ್ಷುವಿಗೆ ಅರಿವಾಯಿತು — ತನ್ನ ಸೋದರಳಿಯ ತನ್ನ ಪರಿಚಯವನ್ನು ಹೇಳದೆಯೇ ಹೋಗಿರುವೆನೆಂದು. ಭಿಕ್ಷು ತನ್ನ ಅಕ್ಕ ಭಾವಂದಿರಿಗೆ ನಡೆದ ಸಮಾಚಾರವನ್ನೆಲ್ಲ ಹೇಳಿ, ಬಂದು ಮೂರು ತಿಂಗಳು ಮನೆಯಲ್ಲಿ ದಾನ ಸ್ವೀಕರಿಸಿದವನು ಅವರ

ಮಗನೇ ಎಂದು ತಿಳಿಸಿ, ಗುರುತಿಗೆ ಅವರೇ ಅವನಿಗೆ ಕೊಟ್ಟ, ಅವನು ತನಗೆ ಸಮರ್ಪಿಸಿದ ಹೊಸಬಟ್ಟೆಯನ್ನು ತೋರಿಸಿದ. ತಾಯಿ ತನ್ನ ಮಗನ ವೈರಾಗ್ಯ ಗುಣಸಂಪತ್ತುಗಳನ್ನು ಹೊಗಳಿ 'ಇಂಥವರಿಗಾಗಿಯೇ ಸಂಬುದ್ಧ ಧರ್ಮವನ್ನು ಹೇಳಿದುದು'— ಎಂದು ಸಮಾಧಾನ ತಂದು ಕೊಂಡಳು.

ಪ್ರಾಚೀನ ಖಂಡ ರಾಜಿ :

ಅನುರಾಧಪುರದ ಸ್ತೂಪಾರಾಮದಲ್ಲಿ ಇಬ್ಬರು ಸ್ನೇಹಿತರು ಭಿಕ್ಷುಗಳಾದರು. ಇಬ್ಬರೂ ಒಟ್ಟಿಗೆ ಐದು ವರ್ಷಗಳವರೆಗೆ ಅಧ್ಯಯನ ಮಾಡುತ್ತಿದ್ದು ನಂತರ ಅವರಲ್ಲಿ ಒಬ್ಬ ನಗರದ ಪೂರ್ವದಲ್ಲಿದ್ದ ಪ್ರಾಚೀನ ಖಂಡರಾಜಿ ಎಂಬ ಹೆಸರಿನ ಹಳ್ಳಿಗೆ ಹೊರಟ, ಇನ್ನೊಬ್ಬ ಅಲ್ಲಿಯೇ ಉಳಿದುಕೊಂಡ. ಪ್ರಾಚೀನಖಂಡ ರಾಜಿಯಲ್ಲಿ ಕೆಲವು ವರ್ಷಗಳನ್ನು ಕಳೆದ ಮೇಲೆ ಅಲ್ಲಿದ್ದ ಭಿಕ್ಷು— 'ಈ ಜಾಗ ತುಂಬ ಚೆನ್ನಾಗಿದೆ, ಅನುಕೂಲ ವಾಗಿದೆ, ನನ್ನ ಮಿತ್ರನಿಗೂ ಹೇಳಿ ಇಲ್ಲಿಗೇ ಬರಮಾಡಿಕೊಳ್ಳುತ್ತೇನೆ' ಎಂದುಕೊಂಡು ಸ್ತೂಪಾರಾಮಕ್ಕೆ ಬಂದ. ಅಲ್ಲಿದ್ದ ಭಿಕ್ಷು ಬಂದ ಸ್ನೇಹಿತನನ್ನು ಆದರದಿಂದ ಬರಮಾಡಿಕೊಂಡು ಸತ್ಕರಿಸಿದ. ಬಹುದೂರ ನಡೆದು ಬಂದು ಆಯಾಸಗೊಂಡಿದ್ದ ಪ್ರಾಚೀನಖಂಡ ರಾಜಿಯ ಭಿಕ್ಷು 'ನನಗೆ ಕುಡಿಯಲು ಪಾನಕವನ್ನು ನನ್ನ ಮಿತ್ರ ಕಳಿಸಿಯಾನು. ನಗರದಲ್ಲಿ ಇಷ್ಟು ವರ್ಷ ಇದ್ದಾನೆ, ತುಂಬ ಅನುಕೂಲವಾಗಿಯೇ ಇರಬೇಕು' ಎಂದು ಮನಸ್ಸಿನಲ್ಲಿಯೇ ಅಂದುಕೊಂಡ. ಆದರೆ ಆ ಮಧ್ಯಾಹ್ನ, ರಾತ್ರಿ ಏನು ಪಾನೀಯವೂ ಬರಲೇ ಇಲ್ಲ. ನಿರಾಶೆಗೊಂಡ ಭಿಕ್ಷು ನಿದ್ದೆಮಾಡಿದ. ಎದ್ದವನೇ 'ಹೋಗಲಿ, ಈಗಲಾದರೂ ಪಾರಣೆಗೆ ಗಂಜಿ ಕಳುಹಿಸಿ ಯಾನು'- ಎಂದುಕೊಂಡು ಅದರ ದಾರಿ ನೋಡುತ್ತಿದ್ದ. ಬರದಿದ್ದಾಗ 'ಓಹೋ ವಿಹಾರಕ್ಕೆ ಜನ ಏನೂ ಕಳುಹಿಸುವ ಪದ್ಧತಿ ಇಲ್ಲಿ ಇದ್ದ ಹಾಗಿಲ್ಲ. ನಾವೇ ಹೊರಗೆ ಹೋದಾಗ ಕರದು ಕೊಟ್ಟಾರು.' ಎಂದುಕೊಂಡ ಸ್ವಲ್ಪ

ಹೊತ್ತಿಗೆ ಅವನ ಸ್ನೇಹಿತ, ಸ್ತೂಪಾರಾಮದ ಭಿಕ್ಷು ಬಂದು, 'ಬಾ, ಪಿಂಡಪಾತಕ್ಕೆ ಹೋಗುವ' ಎಂದು ಕರೆದ. ಪ್ರಾಚೀನಖಂಡ ರಾಜಿಯ ಭಿಕ್ಷುವಿಗೆ ಪಿಂಡಪಾತದ ಸಂಪ್ರದಾಯವೇ ಮರೆತುಹೋಗಿತ್ತು ; ವಿಹಾರದಲ್ಲೇ ರುಚಿರುಚಿಯಾಗಿ ಬಿಸಿಯಾದ ಆಡುಗೆಯಾಗುತ್ತಿತ್ತು. ಪಾಪ, ವಿಧಿಯಿಲ್ಲದೆ ತನ್ನ ಸ್ನೇಹಿತನೊಂದಿಗೆ ಪಾತ್ರೆ ಹಿಡಿದು ಹೊರಟ. ನಾಲ್ಕು ಬೀದಿ ಸುತ್ತಿದರೂ ದೊರೆತ ದಾನ ಸಾಲದಷ್ಟು ಮಾತ್ರ ! ಸ್ತೂಪಾರಾಮದ ಭಿಕ್ಷುವೇನೋ ನೆಮ್ಮದಿಯಿಂದಲೇ ಇದ್ದ ; ಆದರೆ ಪ್ರಾಚೀನ ಖಂಡರಾಜಿ ಯವನು 'ಅಯ್ಯಾ ಇದೇನಿದು ? ಇಲ್ಲಿ ದಿನವೂ ಹೀಗೆಯೆ ?' ಎಂದು ಕೇಳಿದ. ಸ್ನೇಹಿತ ಹೌದೆಂದಾಗ 'ಪ್ರಾಚೀನಖಂಡರಾಜಿ ಸೊಗಸಾದ ಜಾಗ, ಅನುಕೂಲವೆಲ್ಲ ಇದೆ, ಅಲ್ಲಿ ನಿರಾಳವಾಗಿ ಇರಬಹುದು. ಬಾ ಹೋಗೋಣ' ಎಂದ. ತುಸು ಹೊತ್ತಿಗೆ ಸ್ತೂಪಾರಾಮದ ಭಿಕ್ಷು ಆರಾಮವನ್ನು ಬಿಟ್ಟು ದಾರಿಗೆ ಇಳಿದ. ಅವನ ಸ್ನೇಹಿತ ಎಲ್ಲಿಗೆ ಹೋಗುತ್ತೀಯೆಂದು ಕೇಳಲು 'ಈಗ ತಾನೇ ನೀನು ಪ್ರಾಚೀನಖಂಡರಾಜಿಗೆ ಹೋಗೋಣವೆನ್ನಲಿಲ್ಲವೆ ?' ಎಂದು ಮರುತ್ತರವಿತ್ತ.

ಆದಕ್ಕವನು 'ಹೌದು. ಆದರೆ ಇಲ್ಲಿ ಇಷ್ಟು ವರ್ಷಗಳಿಂದ ಇದ್ದೀಯೆ ; ಸಾಮಾನುಗಳನ್ನೇನನ್ನೂ ಬಿಟ್ಟಿಲ್ಲವೆ ?' ಎಂದ ಸ್ತೂಪಾರಾಮದ ಭಿಕ್ಷು - 'ಇದ್ದುದೆರಡು ಸಣ್ಣ ಮಂಚ, ಒಂದು ಕಾಲುಮಣೆ, ಎರಡೂ ಸಂಘಕ್ಕೆ ಸೇರಿದ್ದು. ಅದನ್ನು ಅದರ ಜಾಗದಲ್ಲಿ ಇಟ್ಟಾಗಿದೆ. ಉಳಿದುದೇನೂ ಇಲ್ಲ' ಎನ್ನಲು ಆಶ್ಚರ್ಯಗೊಂಡ ಅವನ ಸ್ನೇಹಿತ - 'ಹಾಗಾದರೆ ತಾಳು, ನನ್ನ ಕೈ ಗೋಲು, ಎಣ್ಣೆಯನಾಳಿ, ಜೋಡು ಇವನ್ನು ತಂದುಬಿಡುತ್ತೇನೆ' ಎಂದ. ಸ್ತೂಪಾರಾಮದ ಭಿಕ್ಷುವಿಗಂತೂ ಅತಿ ಆಶ್ಚರ್ಯವಾಯಿತು. 'ಅಯ್ಯಾ ಇದ್ದ ಒಂದು ದಿನದಲ್ಲಿ ಇಷ್ಟು ಸಾಮಾನುಗಳನ್ನು ಬಿಟ್ಟಿದ್ದೀಯಾ ?' ಎಂದು. ಆಗ ಪ್ರಾಚೀನಖಂಡರಾಜಿಯ ಭಿಕ್ಷು ಅವನಿಗೆ ನಮಸ್ಕರಿಸಿ— 'ನಿಜವಾಗಿ

ಉಪಾಧಿಯಿಲ್ಲದ ಭಿಕ್ಷುವೆಂದರೆ ನೀನು ! ನಿನ್ನಂಥವನಿಗೆ ಗ್ರಾಮ ಅರಣ್ಯ ಎರಡೂ ಸಮ. ಪವಿತ್ರವಾದ ಸ್ತೂಪಾರಾಮದಲ್ಲೇ ಇರು. ನಾನಿದ್ದ ಜಾಗ ಲೌಕಿಕರಿಗೆ, ನಿನಗಲ್ಲ' ಎಂದು ಹೇಳಿದ.

◈ ◈ ◈

ಬದುಕು ಬುದ್ಧ ಕಂಡಂತೆ

ಗೌತಮ ಬುದ್ಧನ ವಿಚಾರವಾಗಿ ಗೌರವಬುದ್ಧಿಯಿರುವ ಎಲ್ಲರಿಗೂ ವೈಶಾಖಮಾಸದ ಹುಣ್ಣಿಮೆ ದೊಡ್ಡ ದಿನ. ಸುಮಾರು ಎರಡು ಸಾವಿರದ ಆರು ನೂರು ವರ್ಷಗಳ ಹಿಂದೆ ನೇಪಾಳ ತೆರೆಯ ಕಪಿಲವಸ್ತುವಿನಲ್ಲಿ ಶುದ್ಧೋಧನರಾಜನ ಮಗನಾಗಿ ಮಾಯಾದೇವಿಯ ಒಡಲಿಂದ ಗೌತಮನಾಗಿ ಹೊರಬಿದ್ದು ಕಾಣಿಸಿಕೊಂಡುದು ಒಂದು ವೈಶಾಖ ಪೂರ್ಣಿಮೆಯಂದು. ತನ್ನ ಮೂವತ್ತೈದನೆಯ ವಯಸ್ಸಿನಲ್ಲಿ ಗಯೆಯ ಉರುವಿಲ್ವವೆಂಬ ವನದಲ್ಲಿ ನೇರಂಜಾ ನದಿಯ ದಂಡೆಯ ಮೇಲೆ, ಅರಳೀಮರವೊಂದರ ಅಡಿಯಲ್ಲಿ ಕುಳಿತು ಸಂಬೋಧಿಯನ್ನು ಪಡೆದುಕೊಂಡು ಬುದ್ಧನಾದದ್ದೂ ವೈಶಾಖ ಪೂರ್ಣಿಮೆಯಂದೇ. ಮುಂದೆ ನಲವತ್ತೈದು ವರ್ಷಗಳ ನಂತರ ಕುಶೀನಗರದ ಕಾಡಿನಲ್ಲಿ ಎರಡು ಸಾಲುಮರಗಳ ನಡುವೆ ಮಲಗಿ ತೀರಿಕೊಂಡಾಗಲೂ ವೈಶಾಖಪೂರ್ಣಿಮೆಯೇ.

ಹೀಗೆ ಗೌತಮಬುದ್ಧನ ಬದುಕಿನ ಮೂರು ಮುಖ್ಯ ಘಟ್ಟಗಳು — ಜನನ, ಸಂಬೋಧಿ ಮತ್ತು ಪರಿನಿರ್ವಾಣ— ಜರುಗಿದ್ದು ವೈಶಾಖಮಾಸದ ಹುಣ್ಣಿಮೆಗಳಲ್ಲೇ. ವಿಶಾಖಾ ನಕ್ಷತ್ರದಿಂದ ಕೂಡಿದ ಹುಣ್ಣಿಮೆಗೆ ವೈಶಾಖಿಯೆಂದು ಹೆಸರು ; ಇದು ಬರುವುದು ವೈಶಾಖಮಾಸದಲ್ಲೇ. ನಮ್ಮ ಹನ್ನೆರಡು ಮಾಸಗಳ ಎಣಿಕೆಯಲ್ಲಿ ಮೊದಲಿಗೆ ವೈಶಾಖವೇ ಮೊದಲ

* ಸುಧಾ, ೧೩ ಮೇ ೧೯೯೦

ಮಾಸವೆಂಬುದಿದ್ದಿತು. ಈಗಲೂ ನಮ್ಮ ದೇಶದ ಹಲವೆಡೆ ಇದೇ ಎಣಿಕೆಯಿದೆ. ಯುಗಗಳ ಕಲ್ಪನೆಯಲ್ಲಿ ಮೊದಲನೆಯದಾದ ಕೃತಯುಗ ಮೊದಲಾದದ್ದು ವೈಶಾಖ ಮಾಸದ ಮೊದಲ ದಿನದಿಂದಲೇ. ಹೀಗೆ ವೈಶಾಖದಲ್ಲಿಯೇ ಯುಗಾದಿ.

ಬುದ್ಧನ ಬಾಳಬೆಳಕೂ ವೈಶಾಖಿಯೊಂದಿಗೆ ಬೆರೆತು ಅದರ ಹಿರಿಮೆ ಹೆಚ್ಚಿದೆ. 'ಕೇಷ್ಠೀ ಪ್ರದೀಪ'ವೆಂಬ ಹಳೆಯ ಜ್ಯೋತಿಷ ಗ್ರಂಥವೊಂದರಲ್ಲಿ

'ಗುಣಾಭಿರಾಮೋಽಥ ಜಗತ್‌ಪ್ರಿಯಃ
ಸ್ಯಾತ್‌ವೈಶಾಖಮಾಸೇ ಖಲು ಯಸ್ಯ ಜನ್ಮ'

ಎಂಬ ಮಾತಿದೆ. ವೈಶಾಖಮಾಸದಲ್ಲಿ ಹುಟ್ಟಿದವನು ಗುಣ ಗಳಿಂದ ಲೋಕಕ್ಕೆ ಹೆಚ್ಚು ಪ್ರಿಯನಾದವನು ಎಂಬ ಒಕ್ಕಣೆ ಗೌತಮಬುದ್ಧನ ವಿಚಾರವಾಗಿಯಂತೂ ದಿಟವಾಗಿದೆ. ಅವನು ಗುಣಾಭಿರಾಮನೂ ಹೌದು. ಜಗತ್ತಿಗೆ ಪ್ರಿಯನೂ ಹೌದು.

ಧರ್ಮದ ಪ್ರತೀಕ :

ಬುದ್ಧನ ಬಾಳಕತೆ ಎಲ್ಲರಿಗೂ ತಿಳಿದದ್ದೇ. ಇದರಲ್ಲಿ ಕಾವ್ಯದ ಅಂಶವೂ, ಭಾವುಕತೆಯೂ, ಕಲ್ಪನೆಗಳೂ ಸೇರಿಕೊಂಡು, ದಿಟವಾಗಿ ಐತಿಹಾಸಿಕ ವಿವರಗಳೇನು ಎಂಬುದು ಈ ಕಾಲಕ್ಕೆ ತಿಳಿಯಬರುವುದು ಕಷ್ಟ ಬೌದ್ಧಸಂಪ್ರದಾಯದ ಪ್ರಕಾರ, ಇಪ್ಪತ್ತುನಾಲ್ಕು ಬುದ್ಧರಲ್ಲಿ ಗೌತಮಬುದ್ಧ ಒಬ್ಬ ; ನಮ್ಮ ಕಾಲದವನು. ಮುಂದೆ ಬರುವ ಬುದ್ಧ ಮೈತ್ರೇಯ. ಗೌತಮಬುದ್ಧನನ್ನು ಮಾನುಷೀಬುದ್ಧನೆಂದು ನಿರ್ದೇಶಿಸುವಾಗ, ಅನಾದಿಸಿದ್ಧವಾದಧರ್ಮದ ಮಾನುಷರೂಪ ಈ ಬುದ್ಧ ಎಂದೇ ಅರ್ಥ. ಧರ್ಮದ ಒಡಲಿಂದಲೇ ಮೂಡಿಕೊಂಡು ಬಂದವನು ಬುದ್ಧ; ಧರ್ಮದ ಪ್ರತೀಕ.

ಪ್ರಚಲಿತವಾದ ನಿರೂಪಣೆಯಂತೆ, ಅರಸುಗುವರನಾಗಿ ಗೌತಮನು ಹುಟ್ಟಿದನಾದರೂ ಹರೆಯದಲ್ಲಿ ಬಾಳಿನ ಬಗ್ಗೆ ಬೇಸರ ತಳೆದು, ಮನೆಯಿಂದ ಹೊರಗಾಗಿ, ಕಾಡಿನಲ್ಲಿ ತಪಸ್ಸು ಮಾಡಿ, ಧ್ಯಾನ ಮಾಡಿ ಸಂಬೋಧಿಯನ್ನು ಪಡೆದುಕೊಂಡು ಬುದ್ಧನೆನಿಸಿಕೊಂಡ. ತಾನು ಕಂಡುಕೊಂಡ ಕಾಣ್ಕೆಯ ಪ್ರಯೋಜನವನ್ನು ಇತರರೂ ಪಡೆಯಲೆಂದು ತನ್ನ ಊರ ಸುತ್ತಮುತ್ತ ತಿರುಗಾಡಿ ಜನರೊಡನೆ ಬೆರತು, ಶಿಷ್ಯಸಂಗ್ರಹ ಮಾಡಿ ಸಾಧನೆಯನ್ನೂ ಸಂಘವನ್ನೂ ಸಿದ್ಧಪಡಿಸಿದ. ಭಿಕ್ಷುವಾಗಿಯೆ ಬುದ್ಧನ ಬಾಳನ್ನು ಕಳೆದು ಎಂಬತ್ತರ ಮುಪ್ಪಿನಲ್ಲಿ ತೀರಿಕೊಂಡ.

ಬುದ್ಧನಾದದ್ದು ಸಂಬೋಧಿಯನ್ನು ಪಡೆದುಕೊಂಡು, ಸಂಬೋಧಿಯ ಅಗತ್ಯ ಎಲ್ಲರಿಗೂ ಉಂಟೆಂದೂ, ಅದರ ಸಾಧ್ಯತೆಯೂ ಇದೆಯೆಂದೂ ಬಗೆದು ಸಂಘವನ್ನು ಕಟ್ಟಿದ. ಸಂಘವೆಂಬುದು ಬುದ್ಧ ಬದುಕಿದ್ದಾಗಲೆ ಸಿದ್ಧವಾಯಿತೋ. ಅವನು ತೀರಿಕೊಂಡಮೇಲೆ ಮೂಡಿಕೊಂಡಿತೋ ಹೇಳುವುದು ಕಷ್ಟ. ಅಂತೂ ಸನಾತನವಾದ ಧರ್ಮ. ಅದರ ಪ್ರತೀಕವಾಗಿ, ಸಂಕೇತವಾಗಿ, ವಿಗ್ರಹವಾಗಿ ಬುದ್ಧ ; ಬುದ್ಧನ ಆದರ್ಶವನ್ನು ಹಿಡಿದು ಧರ್ಮವನ್ನು ಸಾಧಿಸಿಕೊಳ್ಳಲು ನೆರವಾಗಿ ಸಂಘ-ಹೀಗೆ ಮೂರು ರತ್ನಗಳೆನಿಸಿಕೊಂಡವು.

ಸಂಬೋಧಿಯನ್ನು ಪಡೆದುಕೊಂಡ ವ್ಯಕ್ತಿ ಬುದ್ಧ. ಸಂಬೋಧಿಯ ಸಾಧನೆ ಧರ್ಮ. ಸಾಧನೆಯ ಅನುಕೂಲ್ಯ ಸಂಘ. ಸಿದ್ಧಾರ್ಥನಾಗಿದ್ದವನು, ಸಾಮಾನ್ಯನಾಗಿದ್ದವನು, ಪೃಥಗ್‌ಜನನೆನಿಸಿಕೊಂಡವನು ಸಮ್ಯಕ್ ಸಂಬುದ್ಧನಾಗಿ ಅರ್ಹತನೆನಿಸಿಕೊಂಡು ಲೋಕಪೂಜ್ಯನಾದದ್ದು ಸಂಬೋಧಿಯಿಂದಲೇ. ಅವನ ಬಾಳುವೆಯನ್ನು ಮಾರ್ಪಡಿಸಿದ್ದು ಅದೇ. ಲೋಕದ ಜಾತಕಗಲ್ಲಿ ಹೊಸದೊಂದು ದೆಶೆಯನ್ನು ಕಾಣಿಸಿದ್ದೂ ಅದೇ.

ಬೇಸರ :

ಸಂಬೋಧಿಯ ಸ್ವಾರಸ್ಯವೇನೆಂಬ ವಿಚಾರ ಬೌದ್ಧಸಂಪ್ರದಾಯದಲ್ಲಿ ಹಿಂದಿನಿಂದಲೂ ನಡೆಯುತ್ತ ಬಂದಿದೆ. ಗೌತಮಗೋತ್ರದ ಸಿದ್ಧಾರ್ಥನಿಗೆ ೨೯ನೆಯ ವರ್ಷ ನಡೆಯುತ್ತಿದ್ದಾಗ, ಆಷಾಢ ಮಾಸದ ಹುಣ್ಣಿಮೆಯಂದು ಬದುಕಿನಲ್ಲಿ ಬೇಸರವಾಯಿತು. ಜನರ ಬವಣೆಗಳು. ರೋಗ-ರುಜಿನಗಳು, ಮುಪ್ಪು-ಸಾವುಗಳು, ಅಡ್ಡಿ-ಆತಂಕಗಳು ಇವೆಲ್ಲ ತನ್ನ ಅನುಭವದಲ್ಲೇ ಬರದಿದ್ದರೂ ಅವನನ್ನು ಆಲೋಚನೆಗೆ ಈಡುಮಾಡಿದುವು. ಮನೆಯಲ್ಲಿರುವುದು ಅಡ್ಡಿ ಆತಂಕ : ಕೊಳೆಯ ಬೀಡು ಮನೆ ; ಹೊರಗಾಗುವುದು ಬಿಡುಗಡೆ- ಹೀಗೆಂದು ಬಗೆದು ಮನೆಯಿಂದ ಹೊರಗಾಗಿ ಮನೆಯಿಲ್ಲದವನಾದ. ಅವನ ಮಾತಿನಲ್ಲೇ 'ಅಗರಸ್ಮಾ ಅನಗಾರಿಯಂ ಪಬ್ಬಜಿ'

ಹೀಗೆ ಹೊರಟವನು ಆರಾಡ ಕಾಲಾಮನ ಬಳಿ ಸಾಂಖ್ಯ ಶಾಸ್ತ್ರವನ್ನೂ, ರುದ್ರಕ ರಾಮಪುತ್ರನ ಬಳಿ ಯೋಗವಿದ್ಯೆಯನ್ನೂ ಕಲಿತು. ನೆಮ್ಮದಿಕಾಣದೆ, ಉರುವೇಲವೆಂಬ ಕಾಡಿನಲ್ಲಿ ಒಂಟಿಯಾಗಿ ಆರುವರ್ಷ ಕಾಲ ಕಠಿಣವಾದ ತಪಶ್ಚರ್ಯೆ ಮಾಡಿದ. ಇದೂ ದಾರಿಯನ್ನು ಕಾಣಿಸಲಿಲ್ಲ, ಕಡೆಗೆ ಸ್ವಪ್ರೇರಣೆ ಯಿಂದಲೆ ಧ್ಯಾನಮಾರ್ಗವನ್ನು ಹಿಡಿದ ; ಸ್ಮೃತಿಪ್ರಸ್ಥಾನವೆಂಬ ವಿಶಿಷ್ಟ ಮಾರ್ಗದ ಸ್ವಾರಸ್ಯವನ್ನೂ ಸಾರ್ಥಕತೆಯನ್ನೂ ಮನವರಿಕೆ ಮಾಡಿಕೊಂಡ.

ಅರಳಿಮರವೊಂದರ ಕೆಳಗೆ ಕುಳಿತು 'ಸಂಬೋಧಿಯನ್ನು ಪಡೆಯದೆ, ಈ ಜಾಗದಿಂದ ಮೇಲೇಳುವುದಿಲ್ಲ, ನನ್ನ ಮಾಂಸವೆಲ್ಲ ಕರಗಿ, ಮೂಳೆಗಳು ಕೆಳಗುರುಳಿ, ನರಗಳು ಸೊರಗಿ, ಚರ್ಮ ಒಣಸಿಪ್ಪೆಯಂತೆ ಮುದುಡಿಕೊಂಡರೂ ಚಿಂತೆಯಿಲ್ಲ, ನನ್ನ ಪ್ರಯತ್ನವನ್ನು ಬಿಡುವುದಿಲ್ಲ' ಎಂದು ದೃಢಸಂಕಲ್ಪ ಮಾಡಿದ.

ಸಂಕಲ್ಪದ ದಾರ್ಢ್ಯ ಮತ್ತು ಧ್ಯಾನದ ಸಾಮರ್ಥ್ಯ ಎರಡೂ ಕೂಡಿಕೊಂಡು ಅಂತಃಕರಣದ ಗೋಜುಗಳೆಲ್ಲ ಹರಿದು ಒಡಲಿನ ಬೇಗೆ ಆರಿ, ಮನಸ್ಸಿನ ಗೊಂದಲವೆಲ್ಲ ಮರೆಯಾಗಿ, ಕಾಣ್ಕೆ ತಿಳಿಯಾಗಿ ಸಂಬೋಧಿ ಎಂಬುದು ಒದಗಿತು. ಸಿದ್ಧಾರ್ಥನಾಗಿದ್ದವನು ಬುದ್ಧನಾದ. ಲೋಕದ ನೆಲೆಯಲ್ಲೆ ಇದ್ದವನು ಈಗ ಲೋಕೋತ್ತರನಾದ. ಇದ್ದರೂ ಇಲ್ಲದವನಾದ. ಆಗ ಅವನಿಗೆ ಮೂವತ್ತೈದರ ಪ್ರಾಯ.

ತಾನು ಪಡೆದುಕೊಂಡ ಸಂಬೋಧಿಯನ್ನು ಕುರಿತು ಬುದ್ಧನೆ ತನ್ನ ಶಿಷ್ಯರಿಗೆ ಹಲವಾರು ಬಾರಿ ಹೇಳಿದುದು ಬೌದ್ಧ ಗ್ರಂಥಗಳಲ್ಲಿ ಸೇರಿಬಂದಿವೆ. ಸಂಬೋಧಿ ಒದಗಿದನಂತರ ಗಯೆಯಿಂದ ವಾರಣಾಸಿಗೆ ಬಂದು ಅಲ್ಲಿ ಐವರು ಮುನಿಗಳೆದುರು ಮಾಡಿದ ಪ್ರವಚನ (ಧರ್ಮಚಕ್ರಪ್ರವರ್ತನ ಸೂತ್ರ) ಅವನ ಮೊಟ್ಟಮೊದಲನೆಯದು. ಅದರಲ್ಲೇ ಸಂಬೋಧಿಯ ವಿವರಗಳಿವೆ. ತಾನು ಕಂಡುಕೊಂಡ ಸಂಬೋಧಿಗೆ ಮಿಗಿಲಾದುದು ಯಾವುದೂ ಇರದು (ಅನುತ್ತರ) ; ಎಲ್ಲ ಭಾಗಗಳಲ್ಲಿಯೂ ಸರಿಯಾದ ನೇರವಾದ ಅರಿವು (ಸಮ್ಯಕ್ ಸಂಬೋಧಿ) ಅದನ್ನು ಕಂಡುಕೊಂಡೊಡನೆ ತಿಳಿವಳಿಕೆ ಒಡಮೂಡಿತು ; ಕಾಣ್ಕೆ ಬೇರೂರಿತು ; ಮನಸ್ಸನ್ನು ಕಟ್ಟಿಹಾಕುವ, ಅಡ್ಡಗಟ್ಟುವ, ಬೇಸರಗೊಳಿಸುವ, ಬೆದರಿಸುವ ಯಾವೊಂದು ವಿವರವೂ ಇರದಾಯಿತು ; ಬದುಕಿನ ಬೇರುಗಳೆಲ್ಲ ಕಿತ್ತುಕೊಂಡು ಹೊರಬಿದ್ದವು ; ಮತ್ತೆ ಬದುಕಿನಲ್ಲಿ ತೊಡಗಿಸುವ ಸಾಮಗ್ರಿ ಸಂಪೂರ್ಣವಾಗಿ ತೊಲಗಿಹೋಯಿತು. ಹೀಗೆಂದು ಬುದ್ಧನ ಮಾತೇ ಇದೆ.

ಮುಂದೆ ಸೇಲನೆಂಬ ಬ್ರಾಹ್ಮಣನೊಂದಿಗೆ ಮಾತನಾಡುತ್ತ ಸಂಬೋಧಿಯ ಸಾರ್ಥಕತೆಯನ್ನು ತಿಳಿಯಹೇಳುತ್ತಾನೆ (ಸುತ್ತನಿಪಾತ). ''ಮನುಷ್ಯನಾದವನು ಏನೆಲ್ಲವನ್ನೂ ತಿಳಿದುಕೊಳ್ಳಬೇಕೆಂದಿದೆಯೋ ಅದೆಲ್ಲವನ್ನೂ ತಿಳಿದುಕೊಂಡಂತಾಯಿತು. ಪಡೆದುಕೊಳ್ಳಬೇಕಾದುದು

ಏನೇನು ಇದೆಯೋ ಅದೆಲ್ಲವನ್ನೂ ಪಡೆದುಕೊಂಡಾಯಿತು. ಕಳೆದುಕೊಳ್ಳ ಬೇಕಾದುದು ಏನೇನೋ ಇದೆಯೋ ಅದೆಲ್ಲವನ್ನೂ ಕಳೆದುಕೊಂಡಾ ಯಿತು. ಹೀಗೆ ನಾನು ಬುದ್ಧನಾದದ್ದು'' ಕಂಡುಕೊಳ್ಳುವುದು. ಪಡೆದು ಕೊಳ್ಳುವುದು. ತೊಲಗಿಸಿಕೊಳ್ಳುವುದು ಬೋಧಿಯ ಪ್ರಕಾರಗಳು.

ಪ್ರಸಿದ್ಧ ಉದಾನ :

ಸಂಬೋಧಿಯ ಪ್ರಸಂಗವನ್ನೆ ಉಲ್ಲೇಖಿಸುವ ಇನ್ನೊಂದು ಮಾತು 'ಉದಾನ'ರೂಪದಲ್ಲಿದೆ. ಅರಳಿಮರದ ಕೆಳಗೆ ಕುಳಿತು ಸಂಬೋಧಿಯನ್ನು ಪಡೆದುಕೊಂಡ ಒಡನೆಯೆ ಅವನ ಬಾಯಿಂದ ತಾನೇತಾನಾಗಿ ಹೊರಬಿದ್ದ ಮಾತುಗಳೆಂದು ಈ ಉದಾನ ಪ್ರಸಿದ್ಧವಾಗಿದೆ. 'ಮನೆಯನ್ನು ಕಟ್ಟುತ್ತಿರುವ ವನನ್ನು ಕಂಡೆ ; ಇನ್ನು ಮುಂದೆ ಅವನಿಂದ ಮನೆಯನ್ನು ಕಟ್ಟಗೊಡಿಸು ವುದಿಲ್ಲ, ಮನೆಯ ಕಟ್ಟುಗಳೆಲ್ಲ ಕಳಚಿಬಿದ್ದುವು. ಮನೆಯ ದೂಲವೇ ಬಿದ್ದುಹೋಯಿತು ! ಇನ್ನು ಮನೆ ಕಟ್ಟುವ ಬಗೆ ಹೇಗೆ ?''

ಈ ಮಾತು ತುಂಬ ಮಾರ್ಮಿಕವಾಗಿದೆ. ಬದುಕೆನ್ನುವುದೇ ಒಂದು ಮನೆ. ನಮ್ಮ ಶರೀರ ಇಂದ್ರಿಯ, ಮನಸ್ಸು, ಬುದ್ಧಿ, ಲೌಕಿಕ, ವ್ಯವಹಾರ ಎಲ್ಲವೂ ಈ ಮನೆಯೆ. ಇದನ್ನು ಕಟ್ಟುವವನು ಬಯಕೆ. ಅಭಿಮಾನಗಳ ಆಸರೆಯಾದ ಕಾಮ. ಮನೆಯೆನ್ನುವುದು ದುಃಖವಾದರೆ, ಮನೆ ಕಟ್ಟುವವನು ದುಃಖಸಮುದಯ. ಮೊದಲನೆಯದನ್ನು ಬುದ್ಧ ಕಂಡುಕೊಂಡ. ಎರಡನೆಯದನ್ನು ದೂರ ಅಟ್ಟಿದ. ತೊಲಗಿಸಿಕೊಂಡ. ಮೊದಲನೆಯದು ತಿಳಿದುಕೊಳ್ಳಬೇಕಾದುದು. ಎರಡನೆಯದು ಕಳೆದುಕೊಳ್ಳಬೇಕಾದುದು.

ಬಾಳುವೆಗೆ ಆಸರೆಯಾಗಿ ನಿಂತಿರುವ ತೃಷ್ಣೆ(ಬಯಕೆ)ಯೇ ಮನೆಯ ದೂಲ. ಇದನ್ನೆ ಹೊರಗಟ್ಟಿದ ಮೇಲೆ ಉಳಿದ ಕಟ್ಟುಗಳು ಉಳಿದುಕೊಳ್ಳುವುದು ಹೇಗೆ ? ಇದೇ ಗಾಹೆಯಲ್ಲೆ ಮುಂದಿನ ಮಾತು

'ಇದರಿಂದಾಗಿ ಮನಸ್ಸು ನೆಮ್ಮದಿಯಾಯಿತು. ಆಸೆ ನೊಂದಿಹೋಯಿತು' ಎಂಬುದು ಇದು ಪಡೆದುಕೊಳ್ಳಬೇಕಾದುದು.

ಧರ್ಮಚಕ್ರ ಪ್ರವರ್ತನ ಸೂತ್ರದಲ್ಲಿ ತನಗೆ ಒದಗಿದ ಅನುಭವವನ್ನು ವಿವರಿಸುತ್ತ ಬುದ್ಧ- ''ಮೊದಲು ತನಗೆ ತಿಳಿಯದಿದ್ದುದು ಈಗ ತಿಳಿಯಿತು. ಹೊಸಕಾಣ್ಕೆ ಮೂಡಿಬಂದಿತು. ತಿಳಿವಳಿಕೆ ಒದಗಿತು. ಬೆಳಕುಕಂಡಿತು'' ಎಂದಿದ್ದಾನೆ. ಇಲ್ಲಿ ನಾವು ಗಮನಿಸಬೇಕಾದುದು ಬುದ್ಧನಿಗೆ ಹೊಸದೃಷ್ಟಿಯೊಂದು ಮೂಡಿಕೊಂಡು ಬಂದಿತೆನ್ನುವುದನ್ನು ಹೊರಗಿನ ಜಗತ್ತು ಮಾರ್ಪಡಲಿಲ್ಲ, ಶರೀರದ ಧರ್ಮವೇನು ಬದಲಾಗಲಿಲ್ಲ, ನಮ್ಮ ನೋಟದಲ್ಲಿರುವಂತೆ ಸಿದ್ಧಾರ್ಥನ ನೋಟದಲ್ಲೂ ಬಿಕ್ಕಟ್ಟು, ಇಕ್ಕಟ್ಟು ಇದ್ದುವು ; ಕಣ್ಣೆದುರು ತೆರೆಯಿದ್ದಿತು ; ದೃಷ್ಟಿಯಲ್ಲಿ ದೋಷವೂ ದೌರ್ಬಲ್ಯವೂ ಇದ್ದುವು. ಈಗ ಇವೆಲ್ಲ ಹಿರಿದುವು. ಇದ್ದುದನ್ನು ಇದ್ದಂತೆಯೆ ಕಾಣುವುದು ಸಾಧ್ಯವಾಯಿತು. ಹೊರಗಿನ ಅಥವಾ ಒಳಗಿನ ಯಾವ ಆತಂಕವೂ ಇರದೆ ನೋಟ ಹಸನಾಯಿತು. ಹದವರಿಯಿತು. ಮನಸ್ಸಿನ ಭಾರವಿಳಿದು ಹಗುರಾಯಿತು. ಒಡಲ ಬೇಗೆ ಅಡಗಿ ನೆಮ್ಮದಿಯಾಯಿತು.

ಸಂಬೋಧಿಯಲ್ಲಿ ಮುಖ್ಯವಾದ ವಿವರಗಳು ಧ್ಯಾನ ಮತ್ತು ಪ್ರಜ್ಞೆ. ಇವೆರಡರಿಂದಲೇ ಸಿದ್ಧಾರ್ಥ ಬುದ್ಧನಾದದ್ದು. ಎರಡನ್ನೂ ಕೂಡಿಸಿಕೊಂಡ ಸಮಾಧಿಯೇ ಬುದ್ಧನ ಪ್ರತೀಕ. ಸಂಬೋಧಿಯನ್ನು ಪಡೆಯಲು ಅವನು ಅನುಸರಿಸಿದ ದಾರಿ ಧ್ಯಾನದ್ದು. ವಿಷಯ ಸುಖಗಳನ್ನೇ ಅರಸುತ್ತ ಅವುಗಳ ಆಸರೆಯಿಂದಲೆ ಬದುಕುವುದು ಒಂದು ಕೊನೆ. ದೇಹದಂಡನೆ ಮಾಡಿ ತಪಸ್ಸಿನಲ್ಲಿ ತೊಡಗುವುದು ಇನ್ನೊಂದು ಕೊನೆ. ಎರಡೂ ಸಲ್ಲದ ಸಾಧನೆಗಳು. ಅನರ್ಥಕ್ಕೆ ಎಡೆಮಾಡಿಕೊಡುವಂಥವು. ಸಿದ್ಧಾರ್ಥನು

ಎರಡನ್ನೂ ಬಿಟ್ಟು ನಡುವಣ ದಾರಿಯನ್ನು ಹಿಡಿದದ್ದರಿಂದ ಅದು ಫಲಕಾರಿಯಾಯಿತು. ಇದೇ ಧ್ಯಾನದ ದಾರಿ.

ಸಾರಸರ್ವಸ್ವ:

ಬೌದ್ಧರ ಮಹಾಯಾನ, ಥೇರವಾದ, ವಜ್ರಯಾನ, ಶ್ರಾವಕಯಾನ ಮೊದಲಾದ ಯಾವುದೇ ಸಂಪ್ರದಾಯವಾಗಲಿ, ಧ್ಯಾನಮಾರ್ಗವೇ ಬೌದ್ಧ ಧರ್ಮದ ಸಾರಸರ್ವಸ್ವವೆಂದು ಎಲ್ಲರೂ ಒಪ್ಪುತ್ತಾರೆ. ಚೀಣಕ್ಕೆ ಬೌದ್ಧ ಧರ್ಮ ಕ್ರಿಸ್ತಾಬ್ದ ಐದಾರನೆಯ ಶತಮಾನಗಳಲ್ಲಿ ಸಂದಂದು. ಧ್ಯಾನ ಪದ್ಧತಿಯೇ. 'ಚಹನ್' ಎನಿಸಿಕೊಂಡಿತು. ಸಂಸ್ಕೃತದ ಧ್ಯಾನ. ಪಾಳಿಯಲ್ಲಿ ಝಾನವೆಂದಾಗಿ. ಅದು ಚೀಣೀ ಭಾಷೆಯಲ್ಲಿ ಚಹನ್ ಎಂದಾಯಿತು. ಇದರ ಜಪಾನೀ ರೂಪಾಂತರವೇ ಜೆನ್. ಈ ಹೆಸರಿನಿಂದಲೇ ಬುದ್ಧನ ಧ್ಯಾನಮಾರ್ಗ ಇಂದು ಪ್ರಪಂಚದಲ್ಲೆಲ್ಲ ಪ್ರಸಿದ್ಧವಾಗಿದೆ.

ಈ ದಾರಿಗೆ ನೆರವಾಗಲೆಂದು ಬದುಕಿನಲ್ಲಿ ಆಚಾರಸಂಹಿತೆ (ವಿನಯ) ಮತ್ತ ಶಾಸ್ತ್ರ ವಿಚಾರ (ಅಭಿಧರ್ಮ) ಎರಡನ್ನೂ ಬುದ್ಧನು ಅಳವಡಿಸಿದ. ಶೀಲಶುದ್ಧಿಯಿರದೆ ಮನಸ್ಸು ತಿಳಿಯಾಗದು. ಮನಸ್ಸು ತಿಳಿಯಾಗದೆ ಅದಕ್ಕೂ ಪ್ರಪಂಚಕ್ಕೂ ಬೇರೂರಿರುವ ನಂಟು ಸಡಿಲವಾಗದು. ಈ ಕಗ್ಗಂಟು ಸಡಿಲವಾಗದೆ ನೆಮ್ಮದಿಯೆನ್ನುವುದು ಬರಿಯ ಹಗಲುಗನಸು. ಬುದ್ಧನು ಹೇಳಿದ ವಿನಯ ಮುಖ್ಯವಾಗಿ ಮನಸ್ಸಿಗೆ ಸಂಬಂಧಪಟ್ಟದ್ದು, ರಾಗ, ದ್ವೇಷ, ಮೋಹಗಳೆಂಬ ಮೂರು ಬೆಂಕಿಗಳನ್ನು ಆರಿಸುವ ಬಗೆ ಹೇಗೆಂದು ವಿನಯ ತೋರಿಸಿಕೊಡುತ್ತದೆ.

ಬೌದ್ಧಸಂಪ್ರದಾಯದಲ್ಲಿ ಗೌತಮಬುದ್ಧನೇ ಪಂಥಪ್ರವರ್ತಕನೆಂಬ ಕಲ್ಪನೆ ರೂಢಮೂಲವಾದುದಲ್ಲ. ಅವನಿಗೆ ಹಿಂದೆ ಲೆಕ್ಕವಿರದಷ್ಟು ಬುದ್ಧರಿದ್ದರು ; ಅವನು ಬದುಕಿದ್ದಾಗಲೂ ಹಲವರು ಬುದ್ಧರಿದ್ದರು ;

ಅವನು ತೀರಿಕೊಂಡ ಮೇಲೂ ಬುದ್ಧರಾಗುವವರಿದ್ದರು. ಮುಂದೆಯೂ ಹಲವರು ಬುದ್ಧರು ಕಾಣಿಸಿಕೊಳ್ಳುತ್ತಾರೆ. ಹೀಗೆಂದು ಎಲ್ಲ ಬೌದ್ಧರೂ ಎಲ್ಲ ಬುದ್ಧರಿಗೆ ನಮನ ಮಾಡುವ ವಾಡಿಕೆಯಿದೆ. ಎಂದರೆ ಗೌತಮ ಬುದ್ಧನೇ ಬುದ್ಧನಲ್ಲ. ಗೌತಮನಂತೆ ಯಾರಾಗಲಿ ಅವನ ದಾರಿಯನ್ನು ಹಿಡಿದು ಬುದ್ಧ ರಾಗುವುದು ಸಾಧ್ಯ. ಪ್ರತಿಮನುಷ್ಯನಿಗೂ ಸಂಬೋಧಿಯ ಸಾಧ್ಯತೆಯಿದೆ.

ಎಂದಮೇಲೆ ಗೌತಮಬುದ್ಧನಾಗಲಿ ಮತ್ತೊಬ್ಬ ಪ್ರಸಿದ್ಧನಾದ ಬುದ್ಧನಾಗಲಿ ಪ್ರಸ್ತುತವಾಗುವುದು ಹೇಗೆ ? ಬುದ್ಧನೇ ತನ್ನ ಶಿಷ್ಯರಿಗೆ ಹೇಳಿದ ಮಾತೊಂದಿದೆ — ''ತಥಾಗತರು ನಿಮ್ಮ ನಡುವೆ ಕಾಣಿಸಿಕೊಳ್ಳುವುದು ದಾರಿಯನ್ನು ತೋರಿಸಲೆಂದು ಅಷ್ಟೆ (ಅಕ್ಖಾತಾರೋ ತಥಾಗತಾ). ಆದರೆ ಆ 'ದಾರಿಯಲ್ಲಿ ನಡೆಯಬೇಕಾದವರು ನೀವೆ ; ಕೆಲಸವೇನೋ ನಿಮ್ಮಿಂದಲೆ ನಡೆಯಬೇಕು (ತುಮ್ಹೇ ಹಿ ಕಿಚ್ಚಂ ಆತಪ್ಪಂ)' ಸಾಧಕರಿಗೆ ಬುದ್ಧನ ನೆರವು ಸೀಮಿತವಾದುವು ; ಅವನು ಮಾರ್ಗದರ್ಶಿ, ಸಾಧಕರಿಗೆ ಒಂದು ಆದರ್ಶ. ಅವನ ಸಂಬೋಧಿ ಅವನದ್ದಾಯಿತು. ನಮ್ಮ ಸಂಬೋಧಿಯನ್ನು ನಾವು ಒಬ್ಬೊಬ್ಬರೂ ಸಾಧಿಸಿಕೊಳ್ಳಬೇಕು.

ಅದಕ್ಕೇ ಇದನ್ನು 'ಏಕಾಯನ' ಎಂದು ಗುರುತಿಸುತ್ತಾರೆ. ಎಂದರೆ ಒಬ್ಬನು ಮಾತ್ರ ನಡೆದುಹೋಗಬಲ್ಲ ಇಕ್ಕಟ್ಟಾದ ದಾರಿ. ನಮ್ಮೊಂದಿಗೆ ಬುದ್ಧನೂ ಅದರಲ್ಲಿ ಹೋಗಲಾರ. ಬುದ್ಧನಲ್ಲಿ ಭಕ್ತಿ ಮಾಡಿದರೆ ಅವನು ನಮ್ಮ ಕೈಹಿಡಿದು ಸಂಬೋಧಿಗೆ ಮುಟ್ಟಿಸುತ್ತಾನೆಂದು ನಂಬಿಕೆ ಸಲ್ಲದು. ಬುದ್ಧ ನಮ್ಮಂತೆ ಬದುಕಿ, ನಾವು ಮಾಡಲಾರದಂಥ ಸಾಹಸದಿಂದ ಸಂಬೋಧಿಯನ್ನು ಪಡೆದುಕೊಂಡು. ಕೊನೆಗೆ ಎಲ್ಲ ಮನುಷ್ಯರಂತೆ ಉಸಿರೆಳೆದು ಇನ್ನಿಲ್ಲವಾದ.

ನಮ್ಮ ನೆರವಿಗೆ ಬರಲು ಗೌತಮಬುದ್ಧನೇನು ಈಗಿಲ್ಲ. ಆದರೆ ಅವನು ತಿಳಿಯಹೇಳಿರುವ ಧರ್ಮ ಸನಾತನವಾದುದು. ಎಲ್ಲ ಕಾಲಕ್ಕೂ

ಎಲ್ಲ ಜನರಿಗೂ ಅಗತ್ಯವಾದುದು. ಕುಶೀನಾರದ ಕಾಡಿನಲ್ಲಿ ಬುದ್ಧ ಸಾಯಲು ಸಿದ್ಧನಾಗುತ್ತಿದ್ದಾಗ, ಅವನ ಪ್ರೀತಿಯ ಶಿಷ್ಯ ಆನಂದ ಬಿಕ್ಕಿ ಬಿಕ್ಕಿ ಅಳುತ್ತ ''ಇನ್ನು ಭಗವಂತನು ಇಲ್ಲವಾಗುತ್ತಾನೆ. ಮುಂದೆ ನಮ್ಮ ಗತಿಯೇನು ? ನಮಗೆ ಯಾರು ?'' ಎಂದು ಕೇಳುತ್ತಾನೆ. ಅದಕ್ಕೆ ಬುದ್ಧನ ಉತ್ತರ- ''ಧರ್ಮ, ಎಲ್ಲರಿಗೂ ಎಲ್ಲ ಕಾಲಕ್ಕೂ ಅದೇ ಗತಿ. ಅದೇ ಗುರು. ನಾನು ಹಿಡಿದದ್ದೂ ಅದನ್ನೆ ನೀವು ಹಿಡಿಯಬೇಕಾದುದೂ ಅದನ್ನೆ''

ಮಹಾಪರಿನಿರ್ವಾಣಸೂತ್ರದಲ್ಲಿ ಈ ಸಂದರ್ಭ ಬಂದಿದೆ. ಬುದ್ಧನ ಕಡೆಗಾಲದ ವಿವರಗಳನ್ನು ನಿರೂಪಿಸುವ ಗ್ರಂಥ ಇದು. ಇದರಲ್ಲಿ ಗೌತಮ ಬುದ್ಧನು ಕೊನೆಯುಸಿರು ಎಳೆಯುವ ಮೊದಲು ತನ್ನ ಸುತ್ತ ನೆರೆದಿದ್ದ ಶಿಷ್ಯರಿಗೆ ಹೇಳಿದ ಕೊನೆಯ ಮಾತು ಉಳಿದುಕೊಂಡು ಬಂದಿದೆ. ''ಶಿಷ್ಯರೇ. ಬನ್ನಿ ನಾನು ಹೇಳುವುದನ್ನು ಗಮನವಿರಿಸಿ ಕೇಳಿ. ಹುಟ್ಟಿದುದೆಲ್ಲ ಯಾವುದಾದರೊಂದು ಕಾಲಕ್ಕೆ ಸಾಯಲೇಬೇಕು ; ಒಟ್ಟಿಗೆ ಕೂಡಿಕೊಂಡುದು ಒಮ್ಮೆಯಲ್ಲ ಒಮ್ಮೆ ಒಡೆಯಲೇಬೇಕು (ವಯುಧಮ್ಮಾ ಸಂಖಾರಾ). ಇದನ್ನು ಅರಿತು ಕೊಂಡು. ಆಲಸಿಕೆಯಿಲ್ಲದೆ ನಿಮ್ಮ ಪರಮಾರ್ಥವನ್ನು ಪಡೆದುಕೊಳ್ಳಿ (ಅಪ್ಪಮಾದೇನ ಸಂಪಾದೇಥ).''

ಆಲಸಿಕೆಯಿಲ್ಲದೆ, ಎಚ್ಚರದಿಂದ ಸಾಧನೆಯನ್ನು ನಡೆಸಲು ಕೊಟ್ಟ ಕರೆಯಿದು ; ಬುದ್ಧನು ತೋರಿಸಿದ ದಾರಿಯೇ 'ಅಪ್ರಮಾದ'ವೆಂದು ಹೇಳುವುದೂ ಉಂಟು. ಒಂದೊಂದು ಘಳಿಗೆಯಲ್ಲೂ ಮಾತು, ಮನಸ್ಸು, ಮೈ ಮೂರರಲ್ಲಿ ನಡೆಯುವ ಕೆಲಸಗಳನ್ನು ಎಚ್ಚರದಿಂದ ಅರಿತು ಕೊಳ್ಳುವುದು. ಅವುಗಳ ಮೇಲೆ ಹಿಡಿತವನ್ನಿರಿಸಿಕೊಳ್ಳುವುದು ಅಪ್ರಮಾದ. ನಮ್ಮ ಅರಿವಿನಿಂದ ಜಾರಿ ಯಾವೊಂದು ಕೆಲಸವೂ ನಡೆಯದಿದ್ದರೆ ಅದೇ ಧ್ಯಾನಮಾರ್ಗ. ಧ್ಯಾನಕ್ಕೆ ಅಪ್ರಮಾದವೇ ಆಸರೆ ; ಸಂಬೋಧಿಯೇ ಫಲ. ಮೂರೂ ಒಡಮೂಡಿ ಬಂದಾಗ ಅದೇ ಧರ್ಮವೆನಿಸಿಕೊಳ್ಳುವುದು.

ಗೌತಮನು ತನ್ನ ಬದುಕಿನಲ್ಲಿ ಕಂಡುಕೊಂಡದು ಧರ್ಮದ ಸ್ವಾರಸ್ಯವನ್ನು ; ಅವನು ತನ್ನ ಬಳಿ ಬಂದವರಿಗೆ ತಿಳಿಯಹೇಳಿದುದೂ ಇದನ್ನೆ. ಧರ್ಮದ ಅಗತ್ಯವನ್ನು ಮನವರಿಕೆ ಮಾಡಿಕೊಂಡು ತಂತಮ್ಮ ಬಾಳುವೆಯಲ್ಲಿ ಅದನ್ನು ಸಾಧಿಸಿಕೊಳ್ಳಲು ಹೆಣಗಾಡುವವರೇ ಶ್ರಮಣರು. ಶ್ರಮಣರ ಒಕ್ಕೂಟವೇ ಸಂಘ. ಬುದ್ಧನು ಸಂಘವನ್ನು 'ಚಾತುದ್ದಿಸಿಕ' ಎಂದು ಕರೆದಿದ್ದಾನೆ. ಎಂದರೆ ನಾಲ್ಕೂ ದಿಕ್ಕುಗಳಲ್ಲಿ ಹರಡಿರುವುದು. ಇದಕ್ಕೆ ಪ್ರಾದೇಶಿಕವಾದ ಸಂಸ್ಥೆಯೆಂಬ ರೂಪ ಒದಗಿಬಂದದ್ದು ಬುದ್ಧ ತೀರಿಕೊಂಡ ಕೆಲವು ಶತಮಾನಗಳ ಮೇಲೇ. ಬುದ್ಧನ ದೃಷ್ಟಿಯಲ್ಲಿ ಎಲ್ಲೆಲ್ಲಿ ಯಾರು ಯಾರು ಧರ್ಮವನ್ನು ನಂಬಿ ಅದನ್ನು ತಮ್ಮ ಬದುಕಿನಲ್ಲಿ ಮೂಡಿಸಿಕೊಳ್ಳಲು ತೊಡಗುವರೋ ಅವರೆಲ್ಲ ಸಂಘಕ್ಕೆ ಸೇರಿದವರೇ.

ಬುದ್ಧನಾಗಲಿ, ಧರ್ಮವಾಗಲಿ, ಸಂಘವಾಗಲಿ ಯಾವೊಂದು ಪಂಥದ ಚೌಕಟ್ಟಿಗೆ ಸೀಮಿತವಾದುದಲ್ಲ. ಅದರ ವ್ಯಾಪ್ತಿ ವಿಶ್ವವಿಶಾಲವಾದುದು. ಸಾರ್ವಕಾಲಿಕವಾದುದು. ಅದರ ಸಾರ್ಥಕತೆ ಸನಾತನವಾದುದು. ಬುದ್ಧನೇ ಹೇಳಿದ- ತಾನು ತಿಳಿಸಿದ ಧರ್ಮ ಸನಾತನವಾದುದು ಎಂದು (ಏಸ ಧಮ್ಮೋ ಸನಂತನೋ).

◈ ◈ ◈

ಆಲೋಕನಾಮೃತ *

ಈಗೇನೋ ಅಜಂಟಾ ಗುಹಾ ದೇಗುಲಗಳು ಜಗತ್ಪ್ರಸಿದ್ಧವಾಗಿದೆ. ಆದರೆ ನೂರ ಐವತ್ತು ವರ್ಷಗಳ ಹಿಂದೆ ಅಜಂಟಾದ ಹೆಸರನ್ನೇ ಯಾರೂ ಕೇಳಿರಲಿಲ್ಲ. ಕ್ರಿಸ್ತಪೂರ್ವ ಎರಡು ನೂರು ವರ್ಷಗಳಿಂದ ಕ್ರಿಸ್ತಾಬ್ಧ ಐದಾರನೆಯ ಶತಮಾನಗಳವರೆಗೆ ನಾಡಿನ ಕಲಾ ಪರಿಣತರು ತಮ್ಮ ತಪಸ್ಸಿನ ಫಲವನ್ನೆಲ್ಲ ಇಲ್ಲಿ ಧಾರೆಯೆರೆದು ಅದ್ಭುತವಾದ ಕಲಾ ಸಂಸಾರವೊಂದನ್ನೇ ಸೃಷ್ಟಿ ಮಾಡಿದ್ದರು. ಯಾವ ದುರ್ದೈವದಿಂದಲೋ ಜನರ ಆಸಕ್ತಿಯನ್ನು ಕಳೆದುಕೊಂಡು ಇದು ಕಾಡುಪಾಲಾಯಿತು. ಸಾವಿರಾರು ವರ್ಷಕಾಲ, ಈ ಕಲಾಕೃತಿಗಳು ಇದ್ದುದೂ ಜನರ ನೆನಪಿನಲ್ಲಿ ಉಳಿಯಲಿಲ್ಲ.

ಈಗ್ಗೆ ೧೪೭ ವರ್ಷಗಳ ಹಿಂದೆ, ೧೮೧೯ರಲ್ಲಿ, ಆಂಗ್ಲ ಸೈನಿಕರ ತುಣುಕೊಂದು ಹೈದರಾಬಾದು ಪ್ರಾಂತ್ಯದಲ್ಲಿ ಕಾಲ್ನಡಿಗೆಯ ಪ್ರವಾಸದಲ್ಲಿದ್ದಿತು. ಮಾರ್ಗ ಮಧ್ಯದಲ್ಲಿ ಔರಂಗಾಬಾದಿಗೆ ನಲವತ್ತು ಮೈಲಿ ದೂರದ ಕಾಡಿನಲ್ಲೊಂದೆಡೆ ಅವರು ಬೀಡು ಬಿಟ್ಟಿದ್ದಾಗ ಕೆಲವರು ಸಾಹಸಿ ಸೈನಿಕರು ನದಿಯನ್ನು ದಾಟಿ ದುರ್ಗಮವಾದ ಬೆಟ್ಟವನ್ನು ಹತ್ತಿ ಮೇಲೆ ಓಡಾಡತೊಡಗಿದರು. ಹಬ್ಬಿ ಹಂದರವಾಗಿ ಬೆಳೆದಿದ್ದ ಮುಳ್ಳುಪೊದೆಗಳ ನಡುವೆ ಇಣುಕಿ ನೋಡಿದಾಗ ಅವರ ಮೈ ಜುಮ್ಮೆಂದಿತು. ಬೆಟ್ಟದ ಮುಖದಲ್ಲಿ ಅದ್ಭುತವಾದ ಶಿಲ್ಪಕೃತಿಗಳು ಕಾಣಿಸಿಕೊಂಡವು. ಸೊಗಸಾಗಿ

---

* ಸುಧಾ, ನವೆಂಬರ್ ೬, ೧೯೬೬

ಕಡೆದ ಕಂಬಗಳು, ನಯವಾಗಿ ಕಂಡರಿಸಿದ ಗವಾಕ್ಷಿಗಳು, ನಿಪುಣನಾದ ಶಿಲ್ಪಿಯು ಸಿದ್ಧಪಡಿಸಿದ ಗುಹಾದ್ವಾರಗಳು ಅವರನ್ನು ಬೆಚ್ಚುಗೊಳಿಸಿದುವು.

ತಮಗಿಂತ ಮುಂಚೆ ಯಾವ ಮನುಷ್ಯನಾಗಲಿ ಇಲ್ಲಿ ಬಂದಿರಬಹುದೆಂಬ ಕಲ್ಪನೆ ಅವರಿಗಿರಲಿಲ್ಲ. ಕಾಡು ಅಷ್ಟು ದಟ್ಟವಾಗಿದ್ದಿತು. ಆದರೆ ಈ ಗೊಂಡಾರಣ್ಯದ ನಟ್ಟನಡುವೆ ಇಂಥ ಅದ್ಭುತ ಶಿಲ್ಪಕೃತಿಗಳಿರುವುದನ್ನು ಕಂಡು ತಮ್ಮನ್ನೇ ತಾವು ನಂಬದಾದರು. ಅವರು ಆಕಸ್ಮಿಕವಾಗಿ ಕಂಡ ದೃಶ್ಯದ ವಾರ್ತೆಯು ಕಾಲ ಕ್ರಮೇಣ ಇಂಗ್ಲೆಂಡ್ ದೇಶವನ್ನು ಮುಟ್ಟಿತು. ೧೮೨೯ರಲ್ಲಿ ಲಂಡನ್ನಿನ ರಾಯಲ್ ಏಷಿಯಾಟಿಕ್ ಸೊಸೈಟಿಯ ಪತ್ರಿಕೆಯು ಇದನ್ನು ವರದಿಮಾಡಿತು, ೧೮೪೩ರಲ್ಲಿ ಫರ್ಗುಸನ್ ಎಂಬ ಕಲಾಭಿಜ್ಞನು ಸೈನಿಕರು ನಿರ್ದೇಶಿದ ಸ್ಥಳಕ್ಕೆ, ಎಂದರೆ ಅಜಂಟಾಕ್ಕೆ ಬಂದು ಅಲ್ಲಿನ ವಾಸ್ತುಶಿಲ್ಪಗಳನ್ನು ಪರಿಶೀಲಿಸಿದನು. ಗುಹೆಗಳ ಒಳಗೆ ಗೋಡೆಗಳ ಮೇಲೆ ಬಿಡಿಸಿದ್ದ ಚಿತ್ರಗಳ ಸೊಬಗನ್ನು ಲೋಕಕ್ಕೆ ತಿಳಿಸಿದನು.

ಮರುವರ್ಷ ಮೇಜರ್ ಗಿಲ್ ಎಂಬ ಉತ್ಸಾಹಿಯು ಅಜಂಟಾಕ್ಕೆ ಬಂದು ಅಲ್ಲಿನ ವರ್ಣಚಿತ್ರಗಳ ಪ್ರತಿಕೃತಿಗಳನ್ನು ತುಂಬ ಪ್ರಯಾಸದಿಂದ ಸಿದ್ಧಗೊಳಿಸಲು ಆರಂಭಿಸಿದನು. ಒಟ್ಟು ಇಪ್ಪತ್ತು ವರ್ಷಗಳ ಕಾಲ ಅವನು ಪಟ್ಟ ಶ್ರಮದ ಫಲವಾಗಿ ನೂರಾರು ಅದ್ಭುತ ಕಲಾಕೃತಿಗಳು ಮೈದಳೆದುವು. ಇವೆಲ್ಲವನ್ನೂ ಲಂಡನ್ನಿಗೆ ಸಾಗಿಸಿ ಅಲ್ಲಿ ಸಂಗ್ರಹಾಲಯದಲ್ಲಿ ಇರಿಸಿದ್ದರು. ಆದರೆ ಈ ಅವಧಿಯಲ್ಲಿ ನಡೆದ ಲಂಡನ್ ನಗರದ ಅಗ್ನಿ ಅನಾಹುತದಲ್ಲಿ ಇವೆಲ್ಲವೂ ಸುಟ್ಟು ಬೂದಿಯಾದುವು ; ಐದಾರು ಮಾತ್ರ ಉಳಿದುಕೊಂಡವು. ೧೮೭೫ರಲ್ಲಿ ಗ್ರಿಫಿತ್ ಎಂಬಾತನು ಮುಂಬಯಿಯ ಕಲಾಶಾಲೆಯ ಪಂಡಿತರ ನೆರವಿನಿಂದ ಅಜಂಟಾ ಗುಹಾ ಚಿತ್ರಗಳ ಪ್ರತಿಕೃತಿಗಳನ್ನು ಮತ್ತೆ ಸಿದ್ಧಪಡಿಸಿದರು. ೧೯೦೬ರಲ್ಲಿ ಆಗಿನ ಭಾರತ

ಸರ್ಕಾರವು ಆಸಕ್ತಿ ವಹಿಸಿ ಈ ಪ್ರತಿಕೃತಿಗಳನ್ನು ಪ್ರಚುರಪಡಿಸಿಸಿದರು. ೧೯೧೫ರಲ್ಲಿ ಶ್ರೀಮತಿ ಹೆರಿಂಗ್ ಹ್ಯಾಮ್ ಎಂಬಾಕೆ ಮತ್ತೊಂದು ಬಾರಿ ಪ್ರತಿಕೃತಿಗಳನ್ನು ಸಿದ್ಧಪಡಿಸಿದಳು. ಈಕೆ ಅಜಂಟಾಕ್ಕೆ ತನ್ನೊಂದಿಗೆ ಕರೆದು ಕೊಂಡುಹೋದ ಕಲಾವಿದರಲ್ಲಿ ಮೈಸೂರಿನ ಕೆ. ವೆಂಕಟಪ್ಪನವರೂ ಇದ್ದರು.

ಹೀಗೆ ಅಜಂಟಾದ ಚಿತ್ರಗಳು, ಶಿಲ್ಪಗಳೂ ಜಗತ್ತಿನ ಗಮನವನ್ನು ಸೆಳೆದುವು. ಯಾತ್ರಿಕರು, ಉತ್ಸುಕರು, ರಸಿಕರು ಅಜಂಟಾ ಯಾತ್ರೆಯನ್ನು ಕೈಗೊಳ್ಳಲಾರಂಭಿಸಿದರು. ಈ ಪ್ರದೇಶದ ಆಗಿನ ಒಡೆಯರಾಗಿದ್ದ ನಿಜಾಂ ಸರ್ಕಾರದವರು ಅಜಂಟಾ ಗುಹೆಗಳನ್ನು ನಿರ್ಮಲಗೊಳಿಸಿ ಮಾರ್ಗವನ್ನು ಸರಿಪಡಿಸಿ ಯಾತ್ರಿಕರಿಗೆ ಸೌಲಭ್ಯಗಳನ್ನು ಒದಗಿಸಿಕೊಟ್ಟರು. ತಮ್ಮ ಪ್ರಾಕ್ತನ ಕರ್ಮಶಾಖೆಯ ಮುಖ್ಯಾಧಿಕಾರಿ ಯಾಗಿದ್ದ ಗುಲಾಂ ಯಾಜ್ದಾನಿಯನ್ನು ವಾಟಿಕಾನ್‌ನ ಪುರಾತನ ವರ್ಣಚಿತ್ರಗಳನ್ನು ಸಂರಕ್ಷಣ ಮಾಡುವ ಕಲೆಯಲ್ಲಿ ಪರಿಣತರಾದವರ ಸಲಹೆಯನ್ನು ಪಡೆದುಬರಲು ರೋಮ್ ನಗರಕ್ಕೆ ಕಳುಹಿಸಿದರು. ಇವರ ನೆರವಿನಿಂದ ಅಜಂಟಾದ ಚಿತ್ರಗಳು ಉಳಿದುಕೊಂಡವು. ಯಾಜ್ದಾನಿ ೧೯೩೦-೧೯೪೬ರಲ್ಲಿ ಅಜಂಟಾದ ಚಿತ್ರ ಕೃತಿಗಳನ್ನು ಆರು ಸಂಪುಟಗಳಲ್ಲಿ ಸಂಗ್ರಹಿಸಿ ಪ್ರಕಟಿಸಿದರು. ಇವು ಅಚ್ಚಾದದ್ದು ಪ್ರಕಟವಾದದ್ದು ಆಕ್ಸ್‌ಫರ್ಡ್‌ನಲ್ಲಿ.

ಗುಹಾಂತರ್ದೇವಾಲಯಗಳು :

ಅಜಂಟಾ ಬೆಟ್ಟಸಾಲಿನ ಎತ್ತರ ಇನ್ನೂರ ಐವತ್ತು ಅಡಿಗಳು. ಬೆಟ್ಟವು ಅರ್ಧ ವರ್ತುಲಾಕಾರವಾಗಿದ್ದು ಮುಂದೆ ಕೈಚಾಚಿದ ಬಂಡೆಗಳನ್ನು ಕಂಡರಿಸಿ ಗುಹೆಗಳನ್ನು ಕೊರೆದಿದ್ದಾರೆ. ಅಜಂಟಾದಲ್ಲಿ ಇಂಥ ಇಪ್ಪತ್ತೊಂಬತ್ತು ಗುಹೆಗಳಿವೆ. ನಮ್ಮ ದೇಶದಲ್ಲಿ ಒಟ್ಟು ಸಾವಿರದ ಇನ್ನೂರಕ್ಕೂ ಮೀರಿ ಗುಹಾಂತರ್ದೇವಾಲಯಗಳಿವೆ. ಇವು ಬಹುಮಟ್ಟಿಗೆ

ದಕ್ಷಿಣ ಘಟ್ಟದಲ್ಲಿಯೇ ಭಾಜಾ, ಕೊಂಡನೆ, ಬೇದಾ, ನಾಸಿಕ, ಕಾರ್ಲಿ ಮುಂತಾದವು ಇವೆ. ಅಜಂಟಾ ಈ ಗುಂಪಿಗೇ ಸೇರಿದುದು. ಅದಕ್ಕೆ ಎಪ್ಪತ್ತು ಮೈಲಿ ಉತ್ತರಕ್ಕೆ ಇರುವ ಎಲೂರ (ಎಲ್ಲೋರ) ಗುಹಾಂತರ್ದೇವಾಲಯಗಳು ಕೂಡ ತುಂಬ ಪ್ರಸಿದ್ಧವಾದುವು. ಮುಂಬಯಿಯ ಸಾಲ್‌ಸೆಟ್ ದ್ವೀಪದಲ್ಲಿರುವ ಕನ್ನೇರಿಯಲ್ಲಿ ನೂರ ಒಂಬತ್ತು ಗುಹಾದೇಗುಲಗಳಿವೆ.

ಅಜಂಟಾ ಗುಹಾ ದೇವಾಲಯಗಳು ಮೊಟ್ಟ ಮೊದಲು ಮೈದಳೆದದ್ದು ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲಿ, ಆಂಧ್ರ ಶಾತವಾಹನ ರಾಜರು ದಕ್ಷಿಣಾಪಥಪತಿಗಳಾಗಿದ್ದಾಗ ಮೂಡಿದ ಕಲಾಕಲ್ಪನೆ ಇದು. ಅವರ ನೆರವಿನಿಂದಲೇ ಆರಂಭವಾದ ಶಿಲ್ಪಗಳೂ ಚಿತ್ರಗಳೂ ಮುಂದೆ ವಾಕಾಟಕ ರಾಜರ, ಬಾದಾಮಿ ಚಾಳುಕ್ಯ ಅರಸರು, ಗುಪ್ತ ಚಕ್ರವರ್ತಿಗಳ ಪ್ರೋತ್ಸಾಹದಿಂದ ಉಜ್ವಲವಾದುವು. ಬಾದಾಮಿ ಚಾಳುಕ್ಯ ರಾಜರಲ್ಲಿ ವಿಖ್ಯಾತನಾದ ಸತ್ಯಾಶ್ರಯ ಪರಮೇಶ್ವರ ಇಮ್ಮಡಿ ಪುಲಿಕೇಶಿ (ಕ್ರಿ. ೬೦೯-೬೪೨)ಯ ಚಿತ್ರ ಅಜಂಟಾದ ಮೊದಲನೆಯ ಗುಹೆಯಲ್ಲಿಯೇ ಇದೆ. ಪರ್ಶಿಯಾ ದೇಶದ ದೊರೆ ಖುಸ್ರು ತನ್ನ ರಾಯಭಾರಿಗಳನ್ನು ಪುಲಿಕೇಶಿಯ ಆಸ್ಥಾನಕ್ಕೆ ಕಳುಹಿಸಿದ ಚಿತ್ರ ಇದು. ಕನ್ನಡ-ಆಂಧ್ರ ಜನರಿಗೆ ಹೆಮ್ಮೆಯನ್ನು ತರುವ ವಿವರವಿದು. ಗಂಗರನ್ನೂ, ಕದಂಬರನ್ನೂ, ಪಲ್ಲವರನ್ನೂ, ಕೋಸಲ- ಕಳಿಂಗ ಮೌರ್ಯರನ್ನೂ ಸದೆಬಡೆದು, ಪುರಿಯನ್ನು ಮುತ್ತಿ ವೆಂಗಿಯನ್ನು ಗೆದ್ದು, ನರ್ಮದಾ ತೀರದಲ್ಲಿ ಹರ್ಷವರ್ಧನನನ್ನು ಸೋಲಿಸಿ, ಕನ್ನಡದ ಜನರಿಗೂ ತೆಲುಗರಿಗೂ ಕೀರ್ತಿಯನ್ನು ತಂದುಕೊಟ್ಟ ವೀರ ಇವನು.

ಕನ್ನಡಿಗರ ಕೊಡುಗೆ :

ಇವನು ಅಜಂಟಾ ಗುಹೆಗಳಲ್ಲಿ ಕೆಲಸ ಮಾಡಲು ಕನ್ನಡ ನಾಡಿನ ಕಲಾವಿದರನ್ನು ನಿಯಮಿಸಿದ್ದನೆಂದು ಹೇಳುತ್ತಾನೆ. ಇದು ಹೇಗಿದ್ದರೂ,

ಪುಲಿಕೇಶಿಯಿಂದಾಗಿ ಅಜಂಟಾದ ಕಲೆ ಮತ್ತಷ್ಟು ಹಿಗ್ಗಿತು. ರಾಷ್ಟ್ರಕೂಟ ರಾಜನಾದ ಕೃಷ್ಣ (ಕ್ರಿ. ೭೦೦ಕ್ಕೆ ಮುಂಚೆ) ಕೂಡ ಅಜಂಟಾ ಮತ್ತು ಎಲ್ಲೂರಾ ಗುಹಾಂತರ್ದೇವಾಲಯಗಳ ಕಲಾ ಪ್ರಪಂಚವನ್ನು ಬೆಳಗಿಸಿದನು. ಕವಿರಾಜ ಮಾರ್ಗವನ್ನು ಬರೆದ ನೃಪತುಂಗ ರಾಜನ ಮುತ್ತಜ್ಜ ಇವನು. ಅಂತೂ ಕನ್ನಡಿಗರಿಗೂ ಅಜಂಟಾಕ್ಕೂ ಪೂರ್ವದ ಸಂಬಂಧವಿರುವುದು ನಿರ್ವಿವಾದ.

ಸ್ವಾರಸ್ಯ ಶೈಲಿ :

ಅಜಂಟಾದ ಗುಹಾ ದೇಗುಲಗಳಲ್ಲಿ ಅಪೂರ್ಣವಾದುವೂ ಕೆಲವಿದೆ. ಇವನ್ನು ಪರಿಶೀಲಿಸಿದರೆ ಗುಹೆಗಳನ್ನು ಕಡೆದ ರೀತಿ ಸ್ಪಷ್ಟವಾಗುತ್ತದೆ. ದೊಡ್ಡ ಬಂಡೆಯ ಮುಖವನ್ನು ನೇರವಾಗಿ ಕಡೆದು ಮುಂಭಾಗದಲ್ಲಿ ಹಜಾರಕ್ಕೆ ಜಾಗ ಬಿಟ್ಟು, ಅನಂತರ ಮೇಲಿನಿಂದ ಅರ್ಧ ವರ್ತುಲಾಕಾರದ ಗವಾಕ್ಷಿಯ ಕೆಲಸವನ್ನು ಆರಭಿಸಿ, ಅದು ಮುಗಿದ ಮೇಲೆ ಆಧಾರ ಸ್ತಂಬಗಳನ್ನು ಸ್ಥೂಲವಾಗಿ ಕಂಡರಿಸಿ, ಒಳಗೆ ಭುವನಾಸಿ ಮುಂತಾದ ವಿವರಗಳನ್ನು ಮುಗಿಸಿ, ಅನಂತರ ಹಜಾರದ ಕಂಬಗಳಲ್ಲಿ ಶಿಲ್ಪ ವಿನ್ಯಾಸವನ್ನು ಬಿಡಿಸುತ್ತಿದ್ದರು. ಗವಾಕ್ಷಿಯಿಂದ ಗುಹೆಯ ಒಳಗೆ ಗಾಳಿ, ಬೆಳಕು ಬರುತ್ತಿದ್ದುದು ಮಾತ್ರವಲ್ಲದೆ ಒಳಗೆ ಕೆಲಸ ಮಾಡುತ್ತಿದ್ದಾಗ ಕಲ್ಲು ಚೂರುಗಳನ್ನೂ ಧೂಳನ್ನೂ ಹೊರಗೆ ಬಿಸಾಡುವ ಪ್ರಯೋಜನವೂ ಗವಾಕ್ಷಿಗಿದ್ದಿತು.

ಶಿಲ್ಪಿಯ ಕೆಲಸ ಪೂರೈಸಿದ ಮೇಲೆ ಗೋಡೆಗಳ ಮೇಲೂ, ಭುವನಾಸಿಯ ಮೇಲೂ, ಕಂಬಗಳ ಮೇಲೂ ವರ್ಣಚಿತ್ರಗಳನ್ನು ಮೂಡಿಸುತ್ತಿದ್ದರು. ಶಿಲ್ಪಿಯೇ ಚಿತ್ರಕಾರನೂ ಆಗಿ ಕೆಲಸ ಮಾಡುತ್ತಿದ್ದ ಕಾಲ ಅದು. ಟಿಬೆಟ್ ದೇಶದ ಇತಿಹಾಸಕಾರನಾದ ತಾರಾನಾಥನು ಆಗ ಶಿಲ್ಪಿಯೂ ವಿಗ್ರಹಕಾರನೂ ಚಿತ್ರಕಾರನೂ ಆಗಿದ್ದನೆಂದು ಬರೆದಿದ್ದಾನೆ.

ಅಜಂಟಾದ ಭಿತ್ತಿಚಿತ್ರಗಳನ್ನು ಸಿದ್ಧಪಡಿಸಿದ ಶೈಲಿಯೂ ಸ್ವಾರಸ್ಯವಾದುದು. ಗುಹೆಯ ಕಲ್ಲುಗೋಡೆಯ ಮೇಲೆ ಭತ್ತದ ಹೊಟ್ಟನ್ನೂ ಅಂಟನ್ನೂ ಕಲೆಸಿದ ಮಣ್ಣಿನಿಂದ ದಪ್ಪನೆಯ ಲೇಪವನ್ನು ಮಾಡಿ, ಅದರ ಮೇಲೆ ಸುಣ್ಣದ ಪದರವನ್ನು ಹರಡಿ, ಅದು ಒಣಗುವ ಮುನ್ನವೇ ಬಣ್ಣಗಳನ್ನು ಮೂಡಿಸಿಬಿಡುತ್ತಿದ್ದರಂತೆ ; ಅನಂತರ ಹೊರ ಮೈ ರೇಖೆಗಳನ್ನು ಸ್ಪಷ್ಟವಾಗಿ ಬರೆಯುತ್ತಿದ್ದರೆಂದೂ, ವಿವರಗಳನ್ನೂ ಗೆರೆಗಳಿಂದಲೂ ಚುಕ್ಕಿಗಳಿಂದಲೂ ರೂಪಿಸುತ್ತಿದ್ದರೆಂದೂ ಹೇಳುತ್ತಾರೆ. ಸಾವಿರಾರು ವರ್ಷಗಳಾದರೂ ಕಳಗುಂದದಿರುವ ಬಣ್ಣಗಳನ್ನು ಅವರು ಹೇಗೆ ಸಿದ್ಧಪಡಿಸಿದರೆಂಬುದು ಬಿಡಿಸಲಾರದ ಒಗಟು. ಅವರ ಚಿತ್ರನಿರ್ಮಾಣ ರೀತಿಯೂ ಬಹುಮಟ್ಟಿಗೆ ಸಮಸ್ಯೆಯಾಗಿಯೇ ಉಳಿದಿದೆಯೆಂದರೆ ಉತ್ಪ್ರೇಕ್ಷೆಯಲ್ಲ.

ಹೀಗೆ ಶಿಲ್ಪಗಳಿಂದಲೂ ಚಿತ್ರಗಳಿಂದಲೂ ಸರ್ವಾಂಗ ಸುಂದರವಾದ ಈ ಗುಹೆಗಳು ವಿರಕ್ತರಾದ ಬೌದ್ಧ ಭಿಕ್ಷುಗಳ ನಿವಾಸವಾಗಿದ್ದುವೆಂದರೆ ಆಶ್ಚರ್ಯವಾದೀತಲ್ಲವೆ ? ಈ ಗುಹೆಗಳಲ್ಲಿ ಕೆಲವು ಚೈತ್ಯಗಳು. ಹಲವು ವಿಹಾರಗಳು. ಚೈತ್ಯವೆಂದರೆ ಪೂಜಾಗೃಹ ; ಬುದ್ಧನ ಮೂರ್ತಿಗಳಿದ್ದು ಕಾಲಕಾಲಕ್ಕೆ ಆರಾಧನೆ, ಧ್ಯಾನ, ಉಪವಸಥ, ಪ್ರಾತಿಮೋಕ್ಷ ಪ್ರವಚನ ಮುಂತಾದ ಪ್ರಯೋಜನಗಳಿಗಾಗಿ ಮೀಸಲಾಗಿದ್ದ ಸ್ಥಳ. ೯, ೧೦, ೧೯ ಮತ್ತು ೨೬ನೆಯ ಗುಹೆಗಳು ಚೈತ್ಯಗಳು. ಇವುಗಳಲ್ಲಿ ೧೯ನೆಯದು ತುಂಬ ಪ್ರಾಚೀನವಾದುದು. ವಿಹಾರವೆಂದರೆ ಭಿಕ್ಷುಗಳು ವಾಸ ಮಾಡುತ್ತಿದ್ದ ಸ್ಥಳ. ಇವುಗಳಲ್ಲಿಯೂ ಸೊಗಸಾದ ಶಿಲ್ಪಗಳೂ ಭಿತ್ತಿಚಿತ್ರಗಳೂ ಇವೆ. ಮೊದಮೊದಲಿಗೆ ಹೀನಯಾನ ಪಂಥದವರೇ ಇಲ್ಲಿದ್ದ ಭಿಕ್ಷುಗಳು. ಈ ಪಂಥದ ಪಕ್ರಿಯೆಗಳನ್ನೇ ಅಧಿಕರಿಸಿ ಚಿತ್ರಗಳೂ ಸಿದ್ಧವಾದುವು. ಮುಂದೆ ಮಹಾಯಾನ ಪ್ರಧಾನವಾಯಿತು. ಚೈತ್ಯಗಳೂ ವಿಹಾರಗಳೂ ಈ ಪರಿವರ್ತನೆಯನ್ನು ವ್ಯಕ್ತಪಡಿಸುತ್ತದೆ.

ಪುರಾತನ ಗುಹೆ :

ಅಜಂಟಾದ ಗುಹೆಗಳಲ್ಲಿ ಹತ್ತನೆಯ ಗುಹೆಯೇ ತುಂಬ ಪುರಾತನವಾದುದು ; ಕ್ರಿಸ್ತಪೂರ್ವ ಎರಡನೆಯ ಶತಮಾನದ ಮಧ್ಯಭಾಗದಲ್ಲಿ ಇದು ರೂಪುಗೊಂಡಿತೆಂದು ಹೇಳುತ್ತಾರೆ. ಇದೇ ಗುಹೆಗಳಲ್ಲೆಲ್ಲ ದೊಡ್ಡದು, ಅತಿ ಸುಂದರವಾದುದು. ಇಲ್ಲಿರುವ ನಿರ್ವಿಕಲ್ಪ ಬುದ್ಧ ವಿಗ್ರಹವು ಜಗದ್ವಿಖ್ಯಾತವಾಗಿದೆ. ಅಜಂಟಾದ ನಿರ್ಮಾಣ ನೈಪುಣ್ಯವನ್ನು ನೋಡಬೇಕೆಂದರೆ ೧, ೨, ೯, ೧೦, ೧೨, ೧೬, ೧೭, ೧೯ ಮತ್ತು ೨೬ನೆಯ ಗುಹೆಗಳನ್ನು ನೋಡಬೇಕು. ಅಜಂಟಾದಲ್ಲಿ ಶಿಲ್ಪಕ್ಕಿಂತ ಚಿತ್ರಕ್ಕೆ ಹೆಚ್ಚು ಪ್ರಾಧಾನ್ಯ ಕೊಟ್ಟಿರುವುದು ಕಾಣುತ್ತದೆ. ದುರ್ದೈವದಿಂದ ಚಿತ್ರಗಳು ಬಹುಮಟ್ಟಿಗೆ ನಾಶವಾಗಿವೆ ; ಒಮ್ಮೆ ಇದ್ದ ನೂರಾರು ಚಿತ್ರಗಳಲ್ಲಿ ಇಂದಿಗೆ ಉಳಿದಿರುವುವು ಹದಿಮೂರೇ ಎನ್ನಬಹುದು. ೧, ೨, ೯, ೧೦, ೧೬ ಮತ್ತು ೧೮ನೆಯ ಗುಹೆಗಳಲ್ಲಿರುವ ಚಿತ್ರಗಳು ಪ್ರಖ್ಯಾತವಾಗಿವೆ.

ಒಂಬತ್ತನೆಯ ಮತ್ತು ಹತ್ತನೆಯ ಗುಹೆಗಳಲ್ಲಿ ಎಡಗಡೆ ಗೋಡೆಗಳ ಮೇಲೆ ಇರುವ ಚಿತ್ರಗಳು ತುಂಬ ಪುರಾತನವಾದುವು ಎಂದು ಹೇಳುತ್ತಾರೆ ; ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲಿಯೇ ಸಿದ್ಧವಾದುವಂತೆ ಇವು. ಇಲ್ಲಿ ಹೀನಯಾನ ಪದ್ಧತಿಯ ಗಾಹೆಗಳನ್ನು ಚಿತ್ರಿಸಿದ್ದಾರೆ ; ಷಡ್ದಂತ ಜಾತಕದ ಚಿತ್ರಣ ಸ್ವಾರಸ್ಯವಾದುದು. ರಾಜನೊಬ್ಬನು ತನ್ನ ಪರಿವಾರದೊಂದಿಗೆ ಬೋಧಿವೃಕ್ಷದ ಪೂಜೆ ಮಾಡುತ್ತಿರುವ ದೃಶ್ಯ ಇಲ್ಲಿದೆ ; ಇಲ್ಲಿಯೇ ಹದಿನೈದು ಜನ ರಸಿಕರ ನಾಟ್ಯ ಮೇಳವೂ ಚಿತ್ರಣಕ್ಕೆ ಬಂದಿದೆ. ಇಹ, ಪರಗಳೆರಡನ್ನೂ ಕಲೆಗಾರ ಕಾಣಿಸಿದ್ದಾನೆ.

ಚಿತ್ರಕಲೆಯ ವಿಕಾಸ :

ಹೀಗೆ ಆರಂಭವಾದ ಚಿತ್ರಕಲಾ ಶೈಲಿಯು ಕಾಲವುರುಳಿದಂತೆ

ಬೆಳೆದು ಆರನೆಯ ಶತಮಾನದ ಸುಮಾರಿಗೆ ಪ್ರೌಢವಾಯಿತು. ಆಗ ಮೈದಳೆದ ಪದ್ಮಪಾಣಿ ಅವಲೋಕಿತೇಶ್ವರನ ಚಿತ್ರವು ಪ್ರಪಂಚದ ಶ್ರೇಷ್ಠ ಕಲಾಕೃತಿಗಳಲ್ಲಿ ಒಂದೆಂದು ಪರಿಗಣಿತವಾಗಿದೆ. ಒಂದನೆಯ ಗುಹೆಯಲ್ಲಿರುವ ಈ ಮಹಾಯಾನ ದೇವತೆಯು ಅತಿ ಪ್ರಮಾಣದ್ದು, ಮಂಡಿಯಿಂದ ಕೆಳಗೆ ಚಿತ್ರ ಅಳಿಸಿಹೋಗಿದೆ. ಮಂಡಿಯಿಂದ ಕಿರೀಟದವರೆಗೆ ಐದು ಅಡಿ ಒಂಬತ್ತೂವರೆ ಅಂಗುಲಗಳಾಗುತ್ತವೆ, ಭುಜದಿಂದ ಭುಜಕ್ಕೆ ಎರಡು ಅಡಿ ಐದೂವರೆ ಅಂಗುಲಗಳು, ಇಷ್ಟು ಅತಿ ಪ್ರಮಾಣದ್ದಾದರೂ ಶಾಂತವಾದ, ಮನೋಹರವಾದ, ಭವ್ಯವಾದ ಭಂಗಿ, ಭೋದಿಸತ್ತ್ವನ ಮುಖದಲ್ಲಿ ದಿವ್ಯವಾದ ತೇಜಸ್ಸು ಕಾಣುತ್ತದೆ. ಭೂತದಯೆಯೇ ಮುಖ್ಯ ರಸವಾಗಿ ವ್ಯಕ್ತವಾಗುತ್ತದೆ. ನಿಲುವಿನಲ್ಲಿರುವ ಗಾಂಭೀರ್ಯವೂ, ರೂಪದಲ್ಲಿರುವ ಲಾವಣ್ಯವೂ ಬೋಧಿಸತ್ತ್ವನಾದವನ ಮಹಾಪ್ರಣಿಧಿ ಪ್ರತೀಕಗಳಾಗಿವೆ. ಬೋಧಿಸತ್ತ್ವನ ಸುತ್ತಮುತ್ತ ಜನರಿದ್ದಾರೆ, ಪ್ರಾಣಿಗಳಿವೆ, ಪಕ್ಷಿಗಳಿವೆ, ನಿಸರ್ಗವಿದೆ, ಎಲ್ಲವನ್ನೂ ಮೀರಿ ಬೋಧಿಸತ್ತ್ವನ ಮೂರ್ತಿ ನಿಲ್ಲುತ್ತದೆ, ಭಾರತೀಯ ಕಲೆಗಾರಿಕೆಯ ಅದ್ಭುತ ನಿದರ್ಶನ ಇದೆಂಬುದು ನಿರ್ವಿವಾದ.

ಬೋಧಿಸತ್ತ್ವನ ಎಡ ಪಕ್ಕದಲ್ಲಿರುವ ಶ್ಯಾಮಲೆಯ ಚಿತ್ರವೂ ಸೊಗಸಾದ ಕೃತಿ. ಬೋಧಿಸತ್ತ್ವನ ಶಕ್ತಿಸ್ವರೂಪಿಣಿಯೋ ಎನ್ನುವಂತೆ ಕಲೆಗಾರನು ಈಕೆಯನ್ನು ಬಿಡಿಸಿದ್ದಾನೆ. ಅಷ್ಟೇ ಶ್ರದ್ಧೆಯಿಂದ, ಅದೇ ವಿವರಗಳನ್ನು ಮೂಡಿಸಿದ್ದಾನೆ. ಆದರೆ ಪ್ರಮಾಣ ಸಣ್ಣದು ; ಎದ್ದುಕಾಣುವ ಲಕ್ಷಣವಿಲ್ಲ. ಬೋಧಿಸತ್ತ್ವನ ಬಲ ಪಕ್ಕದಲ್ಲಿ ಗಂಧರ್ವರು, ಕಿಂಪುರುಷರು, ಕಂಠಾಶ್ಲೇಷ ಪ್ರಣಯಿಗಳು ಮೈದಳೆದಿದ್ದಾರೆ. ಬೋಧಿಸತ್ತ್ವನ ವಿರಕ್ತಿ ಶಾಂತಿ, ಕರುಣೆಗಳ ಪಕ್ಕದಲ್ಲಿಯೇ ಮಧುಪಾನಾಸಕ್ತರಾದ ಪ್ರಣಯಿಗಳ ಸುಖಸಂರಂಭಗಳನ್ನೂ ಕಾಣಬಹುದು.

ಅದ್ಭುತ ಕೃತಿಗಳು :

ಎರಡನೆಯ ಗುಹೆಯಲ್ಲಿರುವ ಹಾರೀತಿ ದೇವತೆಯ ಶಿಲಾಮೂರ್ತಿಯು ಮನೋಜ್ಞವಾಗಿದೆ. ಗರ್ಭಗೃಹದಲ್ಲಿರುವ ಧರ್ಮ ಚಕ್ರಪ್ರವರ್ತನ ಮುದ್ರೆಯಲ್ಲಿ ಧೀರ ಗಂಭೀರನಾಗಿ ಕುಳಿತಿರುವ ಬುದ್ಧನ ಶಿಲ್ಪಕೃತಿಯು ಅದ್ಭುತವಾದುದು. ಗರ್ಭಾಂಕಣದ ಒಳಗೂ ಹೊರಗೂ ಗೋಡೆಗಳ ಮೇಲೆ ಅಸಂಖ್ಯಾತ ಬುದ್ಧರ ಚಿತ್ರಗಳನ್ನು ಬಿಡಿಸಿರುವುದು ಸ್ವಾರಸ್ಯವಾಗಿದೆ. ಕೋಟಿಕಲ್ಪಗಳಲ್ಲಿ ಬುದ್ಧರು ಮೈದಳೆದು ಸಂಸಾರದಿಂದ ಜೀವಿಗಳನ್ನು ಪಾರುಗಾಣಿಸುವರೆಂದು ಮಹಾಯಾನದವರ ಶ್ರದ್ಧೆ.

ಹದಿನಾರನೆಯ ಗುಹೆಯಲ್ಲಿ ಬುದ್ಧನ ಬಾಳುವೆಗೆ ಸಂಬಂಧಿಸಿದ ವಿವರಗಳನ್ನೂ ಪ್ರಸಂಗಗಳನ್ನೂ ಚಿತ್ರಿಸಿದ್ದಾರೆ. ಸಿದ್ಧಾರ್ಥನ ಜನನ, ಅಸಿತ ಋಷಿ ಬಂದು ಜಾತಕವನ್ನು ಪರಿಶೀಲಿಸಿ ಭವಿಷ್ಯ ನುಡಿಯುವುದು, ವಿದ್ಯಾರ್ಥಿ ದೆಶೆ, ಗೌತಮನು ಮನೆಬಿಟ್ಟು ಹೊರಟು ಧ್ಯಾನಮಗ್ನನಾಗಿ ರುವುದು. ರಾಜಗೃಹಕ್ಕೆ ಬರುವುದು ಮೊದಲಾದುವನ್ನೆಲ್ಲ ಇಲ್ಲಿ ಕಾಣಬಹುದು. ಎರಡನೆಯ ಗುಹೆಯಲ್ಲಿಯೂ ಮಾಯಾದೇವಿಯ ಸ್ವಪ್ನ, ಲುಂಬಿಣೀವನ ಸಂದರ್ಶನ, ಸಿದ್ಧಾರ್ಥನ ಜನನ, ಸಪ್ತಪದಿ, ತುಷಿತ ಸ್ವರ್ಗದಲ್ಲಿ ಬುದ್ಧನ ಅವತರಣಕ್ಕಾಗಿ ದೇಶ ನಿರ್ಣಯ ಮಾಡುವುದು ಮುಂತಾದ ಪ್ರಸಂಗಗಳು ರೂಪಿತವಾಗಿವೆ. ಹದಿನಾರನೆಯ ಗುಹೆಯ ಲ್ಲಿಯೇ ರಾಜಪುತ್ರಿಯೊಬ್ಬಳು ಮರಣೋನ್ಮುಖೆಯಾಗಿರುವ ಚಿತ್ರ ಕರುಣಾಮಯವಾಗಿದೆ. ದುರಂತ ಸನ್ನಿವೇಶದ ದುರ್ಭರತೆಯನ್ನು ಕಲೆಗಾರನು ಹೃದ್ಯವಾಗಿ ಹಿಡಿದಿದ್ದಾನೆ.

ಜಾತಕ ಕಥಾ ಚಿತ್ರಗಳು :

ಹದಿನೇಳನೆಯ ಗುಹೆ ಜಾತಕಗಳ ದೃಷ್ಟಿಯಿಂದ ಸ್ವಾರಸ್ಯವಾದುದು. ಷಡ್ದಂತ ಜಾತಕ, ಮಹಾಕಪಿ ಜಾತಕ, ವಿಶ್ವಂತರ ಜಾತಕ, ಶಿಬಿ ಜಾತಕ,

ಮಾತ್ರ ಪೋಷಕ ಜಾತಕ, ಶ್ಯಾಮ ಜಾತಕ, ಮತ್ಸ್ಯಜಾತಕ ಮೊದಲಾದ ಹತ್ತಾರು ಜಾತಕಗಳಿಂದ ವಿಶಿಷ್ಟವಾದ ವೃತ್ತಗಳನ್ನು ಆಯ್ದುಕೊಂಡು ಚಿತ್ರಗಳಲ್ಲಿ ಬಿಡಿಸಿದ್ದಾರೆ. ಸಿಂಹಳಾವದಾನದಿಂದಲೂ ಚಿತ್ರಗಳಿವೆ. ದ್ವಾರದ ಮೇಲ್ಭಾಗದಲ್ಲಿ ಏಳು ಮಂದಿ ಮಾನುಷೀಬುದ್ಧರ ಮತ್ತು ಮುಂಬರುವ ಬುದ್ಧನಾದ ಮೈತ್ರೇಯನ ಚಿತ್ರಗಳಿರುವುದು ಸೊಗಸಾಗಿದೆ. ಇಲ್ಲಿಯೇ ಒಂದು ಮಗ್ಗುಲಲ್ಲಿ ಅತಿ ಪ್ರಮಾಣದ ಬುದ್ಧನು ಭಿಕ್ಷೆ ಬೇಡುತ್ತಿರುವ ದೃಶ್ಯವಿದೆ ; ಆವನಿಗೆ ಭಿಕ್ಷೆ ಹಾಕಲು ಒಬ್ಬ ಹೆಂಗಸು ತನ್ನ ಮಗನನ್ನು ಮುಂದೆ ಮಾಡಿಕೊಂಡು ನಿಂತಿದ್ದಾಳೆ. ಭಕ್ತಿ ಭಾವದಲ್ಲಿ ನಿಂತಿರುವ ಇವರನ್ನು ಯಶೋಧರಾ-ರಾಹುಳರೆಂದು ನಿರ್ದೇಶಿಸುತ್ತಾನೆ. ಸಂದರ್ಭವಂತೂ ಸರಳ ಸುಂದರವಾಗಿದೆ.

ಹತ್ತೊಂಬತ್ತನೆಯ ಗುಹೆಯು ಆರನೆಯ ಶತಮಾನದ ಕೃತಿಯೆಂದು ಹೇಳುತ್ತಾರೆ. ಇಲ್ಲಿ ಹೊರ ಅಂಗಣದಲ್ಲಿ ಕುಳಿತಿರುವ ಮೈತ್ರೇಯಿ ಬುದ್ಧನ ಶಿಲ್ಪವು ಮಹಾಯಾನ ಬೋಧಿಸತ್ತ್ವ ಕಲ್ಪನೆಯ ಪರಿಪಾಕವೇ. ಇಲ್ಲಿಯೇ ಶಿಲೆಯಲ್ಲಿ ಕಡೆದಿರುವ ನಾಗರಾಜ, ರಾಣಿಯರ ಚಿತ್ರಗಳೂ ಭವ್ಯವಾಗಿವೆ.

ಅಂತೂ ಅಜಂಟಾ ಗುಹಾಂತರ್ದೇವಾಲಯಗಳ ವಾಸ್ತುಶಿಲ್ಪವೂ ಚಿತ್ರ ನಿರ್ಮಾಣ ವೈಶಿಷ್ಟ್ಯವೂ ಶ್ರೇಷ್ಠ ಮನೋಧರ್ಮವನ್ನು ಕಾಣಿಸುತ್ತದೆ. ಮಹಾಯಾನದ ಉದಾತ್ತ ಧ್ಯೇಯಗಳನ್ನೊಳಗೊಂಡ ಈ ಚೈತ್ಯಗಳೂ ವಿಹಾರಗಳೂ ಆಲೋಚನಾಮೃತನಾದರೆ ಅಲ್ಲಿನ ಚಿತ್ರಗಳೂ ಶಿಲ್ಪಗಳೂ ಆಲೋಕನಾಮೃತ.

◈ ◈ ◈

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ (ರಿ.)

ಸದಸ್ಯರು :

ಶ್ರೀಮತಿ ರಮಾ ರಾಮಚಂದ್ರ ರಾವ್

ಶ್ರೀಮತಿ (ಡಾ) ಉಮಾ ಅನಿಲ್ ಕುಮಾರ

ಡಾ || ಸಾ. ರಾ. ಸುದರ್ಶನ

ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳು :

1. ಶ್ರೀ ರಾಘವೇಂದ್ರ ಸ್ವಾಮಿಗಳು
2. ದಂಡಿಯ ಅವಂತಿ ಸುಂದರೀ
3. The Three Acharyas: Sankara, Ramanuja, Madhva
4. The Teachings of the Buddha
5. ಬೋಧಿಯ ಬೆಳಕಿನಲ್ಲಿ
6. The Temples : Icons & Rituals
7. Jainism in South India

ಪ್ರಕಟವಾಗಲಿರುವ ಪುಸ್ತಕಗಳು :

1. ವೇದದಲ್ಲಿನ ಕಥೆಗಳು
2. ತಿರುಮಲ ತಿರುಪತಿ ದೇವರು
3. ಪೂರ್ಣಪ್ರಜ್ಞ ಪ್ರಶಸ್ತಿ
4. Upanishads - an outline
5. Vyāsa Tattvajñas Mānasadhyāna Paddhati (Manual of Meditation)

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ

ಪ್ರೊ. ಸಾ. ಕೃ. ರಾಮಚಂದ್ರರಾಯರು ಕಾಲವಾದ ಕೆಲವು ತಿಂಗಳನಂತರ ಅವರ ಕುಟುಂಬದವರು ಅವರ ಹೆಸರಿನಲ್ಲಿ ಒಂದು ಸ್ಮಾರಕ ನಿಧಿಯನ್ನು ಸ್ಥಾಪಿಸಿದರು.

ಈ ನಿಧಿಯ ಉದ್ದೇಶಗಳು ಹೀಗಿವೆ :

★ ಪ್ರೊ. ರಾಮಚಂದ್ರರಾಯರು ಕನ್ನಡ ಮತ್ತು ಅಂಗ್ಲ ಭಾಷೆಗಳಲ್ಲಿ ಬರೆದ ಹಲವಾರು ಪುಸ್ತಕಗಳನ್ನು ಹಾಗೂ ಲೇಖನಗಳನ್ನು ಸಂಗ್ರಹಿಸುವುದು.

★ ಇವುಗಳಲ್ಲಿ ಪ್ರಸ್ತುತ ದೊರೆಯದ ಪುಸ್ತಕಗಳನ್ನು ಪುನರ್ಮುದ್ರಣ ಮಾಡುವುದು.

★ ಅವರು ವಿವಿಧ ವಿಷಯಗಳ ಬಗ್ಗೆ ದಿನಪತ್ರಿಕೆಗಳಲ್ಲಿ ಹಾಗೂ ಮಾಸಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದರು. ಇವುಗಳನ್ನು ಪುಸ್ತಕರೂಪದಲ್ಲಿ ತರುವುದು.

★ ಅವರು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮಾಡಿದ ಉಪನ್ಯಾಸಗಳನ್ನು ಧ್ವನಿಸುರುಳಿ ರೂಪದಲ್ಲಿ ಹೊರತರುವುದು. ಈಗಾಗಲೇ 25ಕ್ಕಿಂತ ಹೆಚ್ಚು ಧ್ವನಿಸುರುಳಿಗಳನ್ನು ಹೊರತರಲಾಗಿದೆ.

★ ರಾಯರು ಅವರ ಮನೆಯಲ್ಲಿ 3-4 ದಶಕಗಳಿಂದ ಭಗವದ್ಗೀತೆ, ಬ್ರಹ್ಮಸೂತ್ರಗಳು, ಉಪನಿಷತ್ತುಗಳು, ತ್ರಿಪುರಾ ರಹಸ್ಯ, ಶಿಲ್ಪಶಾಸ್ತ್ರಮುಂತಾದ ವಿಷಯಗಳನ್ನು ಕುರಿತು ಪ್ರವಚನಗಳನ್ನು ಮಾಡುತ್ತಿದ್ದರು. ಇದರ ಧ್ವನಿಸುರುಳಿಗಳನ್ನು ತಯಾರಿಸುವುದು. ಈಗಾಗಲೇ ಬ್ರಹ್ಮಸೂತ್ರ, ಗೀತಾ ವಿವೃತ್ತಿ, ಶಿವಸೂತ್ರ ಹಾಗೂ ಮಾಂಡೂಕ್ಯೋಪನಿಷತ್‌ಗಳ ಧ್ವನಿಸುರುಳಿಗಳು ತಯಾರಾಗಿವೆ.

★ ಅವರು ರಚಿಸಿದ ಕಲಾಕೃತಿಗಳ, ರೇಖಾ ಮತ್ತು ವರ್ಣಚಿತ್ರಗಳ ಸಂರಕ್ಷಣೆ ಮತ್ತು ಪ್ರದರ್ಶನ ಮಾಡುವುದು. 2007ರಲ್ಲಿ ಅವರ ಕಲಾವೈಭವದ ಪ್ರದರ್ಶನ ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಏರ್ಪಡಿಸಲಾಗಿತ್ತು.

ಪ್ರೊ. ರಾಮಚಂದ್ರರಾಯರ ಬರಹಗಳನ್ನು ಪ್ರಕಟಿಸುವ ಉದ್ದೇಶದಿಂದ ನಾವು 'ಸುರಮಾ' ಪ್ರಕಾಶನ ಎಂಬ ಹೆಸರಿನಲ್ಲಿ ಒಂದು ಪ್ರಕಟನಾ ವಿಭಾಗವನ್ನು ಸ್ಥಾಪಿಸಿ ರಾಯರ ನಾಲ್ಕು ಪುಸ್ತಕಗಳನ್ನು ಹೊರತಂದಿದ್ದೇವೆ. The Three Acharyas, The Teachings of The Buddha, Temples : Icons & Rituals, ಶ್ರೀ ರಾಘವೇಂದ್ರ ಸ್ವಾಮಿಗಳು, ಶ್ರೀ ಪುರಂದರ ದಾಸರು ಮತ್ತು ದಂಡಿಯ ಆವಂತಿಸುಂದರಿ.

ISBN 819067406-4

9788190674065

Price :
Rs. 100=00